ಸುತ್ತೂರು : ಒಂದು ಸಾಂಸ್ಕೃತಿಕ ಅಧ್ಯಯನ

ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.(ಚರಿತ್ರೆ) ಪದವಿಗಾಗಿ ಅರ್ಪಿಸಲಾಗಿದೆ

ಸಂಶೋಧಕ

ಕರುಣಾಕರ ಮೂರ್ತಿ.ಎಸ್.ಬಿ.

ನೋಂದಣಿ ಸಂಖ್ಯೆ KRSMH-00೩೭೩

ಮಾರ್ಗದರ್ಶಕರು

ಶ್ರೀ ಎನ್.ಮಹದೇವಸ್ವಾಮಿ, ಎಂ.ಎ.ಎಲ್‌ಎಲ್‌ಬಿ., ಪಿ.ಜಿ. ಡಿಪ್ ಇನ್ ಎಪಿಗ್ರಫಿ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ.ಯಿಂದ ಮಾನ್ಯತೆ ಪಡೆದಿದೆ)

ಮಂಡ್ಯ

೨೦೦೮-೦೯

ಸುತ್ತೂರು : ಒಂದು ಸಾಂಸ್ಕೃತಿಕ ಅಧ್ಯಯನ

ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್.(ಚರಿತ್ರೆ) ಪದವಿಗಾಗಿ ಅರ್ಪಿಸಲಾಗಿದೆ

ಸಂಶೋಧಕ

ಕರುಣಾಕರ ಮೂರ್ತಿ.ಎಸ್.ಜಿ.

ನೋಂದಣಿ ಸಂಖ್ಯೆ KRSMH-00೩೭೩

ಮಾರ್ಗದರ್ಶಕರು

ಶ್ರೀ ಎನ್.ಮಹದೇವಸ್ವಾಮಿ, ಎಂ.ಎ.,ಎಲ್.ಎಲ್.ಬಿ., ಪಿ.ಜಿ. ಡಿಪ್ ಇನ್ ಎಪಿಗ್ರಫಿ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ.ಯಿಂದ ಮಾನ್ಯತೆ ಪಡೆದಿದೆ)

ಮಂಡ್ಯ

೨೦೦೮-೦೯

ಪ್ರಮಾಣ ಪತ್ರ

"ಸುತ್ತೂರು: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯದ ಮೇಲೆ ಈ ನಿಬಂಧವನ್ನು ಶ್ರೀ **ಎನ್**.ಮಹದೇವಸ್ವಾಮಿಯವರ ಮಾರ್ಗದರ್ಶನದಲ್ಲಿ ನನ್ನ ಸಂಶೋಧನೆಯ ಫಲವಾಗಿ ರಚಿಸಲ್ಪಟ್ಟು ಕನ್ನಡ ವಿಶ್ವವಿದ್ಯಾನಿಲಯದ **ಎಂ.ಫಿಲ್. (ಚರಿತ್ರೆ)** ಪದವಿಗೆ ಅರ್ಪಿಸುತ್ತಿದ್ದೇನೆ.

ಈ ನಿಬಂಧವನ್ನು ಹಿಂದಿನ ವರ್ಷಗಳಲ್ಲಿ ಯಾರೂ ಇಲ್ಲಿಯವರೆಗೆ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿಲ್ಲವೆಂದು ನಾನು ಇಲ್ಲಿ ಪ್ರಮಾಣೀಕರಿಸುತ್ತಿದ್ದೇನೆ.

(ಕರುಣಾಕರ ಮೂರ್ತಿ.ಎಸ್.ಬಿ.)
ಎಂ.ಫಿಲ್. ವಿದ್ಯಾರ್ಥಿ
ನೋಂದಣಿ ಸಂಖ್ಯೆ: KRSMH-00೩೭೩

ದಿನಾಂಕ : 25-09-2009
ಸ್ಥಳ : ಮಂಡ್ಯ

ದೃಢೀಕರಣ ಪತ್ರ

"ಸುತ್ತೂರು : ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯದ ಮೇಲೆ ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ **ಎಂ.ಫಿಲ್**. **(ಚರಿತ್ರೆ)** ಪದವಿಗೆ ವಿದ್ಯಾರ್ಥಿಯಾದ **ಕರುಣಾಕರ ಮೂರ್ತಿ.ಎಸ್.ಬಿ**.ಯವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸುತ್ತಿದ್ದಾರೆಂದೂ ಹಾಗೂ ಈ ವಿಷಯದ ಬಗ್ಗೆ ಬೇರೆ ಯಾರಿಗೂ ನಾನು ಮಾರ್ಗದರ್ಶನ ಮಾಡಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರ ಸಹಿ.

(ಎನ್.ಮಹದೇವಸ್ವಾಮಿ)

ಪ್ರಾಧ್ಯಾಪಕರು, ಇತಿಹಾಸ ವಿಭಾಗ

ಜೆಎಸ್‌ಎಸ್ ಕಾಲೇಜು, ನಂಜನಗೂಡು

ದಿನಾಂಕ : 24-09-2009

ಸ್ಥಳ : ನಂಜನಗೂಡು


ಸುತ್ತೂರು : ಒಂದು ಸಾಂಸ್ಕೃತಿಕ ಅಧ್ಯಯನ

ಪರಿವಿಡಿ


ಸುತ್ತೂರು - ಭೌಗೋಳಿಕ ಸ್ಥಾನ




map not to scale



Map not to scale


ಸುತ್ತೂರು - ಭೌಗೋಳಿಕ ಸ್ಥಾನ (ನಂಜನಗೂಡು ತಾಲ್ಲೂಕು)
ಚಾಮರಾಜನಗರ ತಾಲ್ಲೂಕು
ಗುಂಡ್ಲುಪೇಟೆ ತಾಲ್ಲೂಕು
ಹೆಚ್.ಡಿ.ಕೋಟೆ ತಾಲ್ಲೂಕು
Map not to scale


ಸುತ್ತೂರಿನ ಇಂದಿನ ನೆಲೆಗಳು
N
ಕಬಿನಿ ನದಿ
ಹಳೆಯ ಮಠ
ಹೊಸ ಮಠ
ಅತಿಥಿ ಗೃಹ
ಅತಿಥಿ ಗೃಹ
Map not to scale

ಅಧ್ಯಾಯ ೧

ಪೀಠಿಕೆ

ಒಂದು ಸಾವಿರ ವರ್ಷಗಳಿಗೂ ಮಿಗಿಲಾದ ಭವ್ಯ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ಕಪಿಲ ನದಿಯ ಬಲದಂಡೆಯಲ್ಲಿರುವ ಸುತ್ತೂರು ಇಂದು ಅಲ್ಲಿನ ಜಗದ್ಗುರು ಶ್ರೀ ಶಿವರಾತ್ರೀಶ್ವರ ವೀರಸಿಂಹಾಸನ ಮಠದಿಂದಾಗಿ ಜಗತ್ಪ್ರಸಿದ್ಧವಾಗಿದೆ. ಈ ಮಠವು ಮಾಡುತ್ತಿರುವ ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿನ ಸೇವೆಯು ನಾಡಿನ ಜನತೆಯಿಂದ ಪ್ರಶಂಸಿಸಲ್ಪಟ್ಟಿದೆ. ಸಾವಿರಾರು ವರ್ಷಗಳ ತನ್ನ ಇತಿಹಾಸದಲ್ಲಿ ಈ ಊರು ಶೈಕ್ಷಣಿಕ, ಸಾಮಾಜಿಕ ಮತ್ತು ಧಾರ್ಮಿಕ ಬೆಳವಣಿಗೆಯಲ್ಲಿ ಪಾಲ್ಗೊಂಡು ತನ್ನದೇ ಆದ ವಿಶಿಷ್ಟ ಕೊಡುಗೆಗಳನ್ನು ಕೊಟ್ಟಿರುವುದು ಚಾರಿತ್ರಿಕ ಸತ್ಯ. ಈ ಊರಿನ ಜೊತೆ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ಹಾಗೂ ಸ್ಥಳೀಯ ಪಾಳೆಯಗಾರರು ಸಹ (ಉಮ್ಮತ್ತೂರು, ಹಾದಿನಾಡಿನ ಪಾಳೆಯಗಾರರು) ಅವಿನಾಭಾವವಾದ ಸಂಬಂಧವನ್ನು ಹೊಂದಿದ್ದರು. ಕಳೆದ ೧೦-೧೧ ಶತಮಾನಗಳ ಅವಧಿಯಲ್ಲಿ ಶ್ರೀಸಾಮಾನ್ಯನಿಂದ ಹಿಡಿದು ಮಹಾರಾಜರವರೆಗೂ ಸೇರಿದಂತೆ ಎಲ್ಲರೂ ಈ ಊರಿನ ಪ್ರಭಾವಕ್ಕೆ ಒಳಗಾಗಿರುವುದು ಆ ಸೂರ್ಯ ಚಂದ್ರರಷ್ಟೇ ಸತ್ಯವಾಗಿದೆ.

ಸುತ್ತೂರಿನ ಸಾಂಸ್ಕೃತಿಕತೆಯನ್ನು ಕುರಿತು ವಿವೇಚನೆಯನ್ನು ಮಾಡುವಾಗ ಸಾಕಷ್ಟು ಐತಿಹಾಸಿಕ ಆಧಾರಗಳು ನಮ್ಮ ನೆರವಿಗೆ ಬರುತ್ತವೆ. ಹಾಗೆ ಸಂಶೋಧನೆಗೆ ತೊಡಗಿದರೆ ನಮಗೆ ಇಂದು ಸುತ್ತೂರಿನ ಬಗ್ಗೆ ಸಾಕಷ್ಟು ಐತಿಹಾಸಿಕ ದಾಖಲೆಗಳ ಮತ್ತು ಪುರಾವೆಗಳು ಇವೆ. ಹೀಗೆ ದೊರೆತಿರುವ ಆಧಾರಗಳ ಸಹಾಯದಿಂದ ಸುತ್ತೂರಿನ ಸಾಂಸ್ಕೃತಿಕ ಇತಿಹಾಸವನ್ನು ಸಂಕ್ಷಿಪ್ತವಾಗಿ ಅಧ್ಯಯನ ಮಾಡಲು ಈ ಸಂಶೋಧನಾ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ. ಈ ಸಂಶೋಧನೆಗೆ ಬಳಸಿಕೊಂಡ ಆಕರಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

೧. ಶಿಲಾಶಾಸನಗಳು
೨. ತಾಮ್ರ ಶಾಸನಗಳು
೩. ಸುತ್ತೂರು ಹಾಗೂ ಸುತ್ತೂರು ಗುರುಪರಂಪರೆಯನ್ನು ಕುರಿತು ಪ್ರಕಟವಾಗಿರುವ ಪುಸ್ತಕ ಮತ್ತು ಲೇಖನಗಳು
೪. ಜಾನಪದ ಸಾಹಿತ್ಯ
೫. ಪ್ರಾಚ್ಯವಸ್ತು ಇಲಾಖೆಯ ವರದಿಗಳು
೬. ಸ್ಥಳನಾಮಗಳು
೭. ಸನ್ನದುಗಳು
೮. ಧಾರ್ಮಿಕ ಗ್ರಂಥಗಳು ಮತ್ತು ಕಾವ್ಯಗಳು
೯. ಶ್ರೀಮಠದಲ್ಲಿರುವ ಕಾಗದ ಪತ್ರಗಳು

ಇವುಗಳ ಜೊತೆಗೆ ವಿಷಯ ಸಂಗ್ರಹಣೆಯ ಮತ್ತೊಂದು ಪ್ರಮುಖ ಮೂಲವೆಂದರೆ ಕ್ಷೇತ್ರ ಕಾರ್ಯ ಕೈಗೊಂಡು ಜನರಿಂದ ಜನರು ಹೇಳಿ-ಕೇಳಿ ಉಳಿಸಿಕೊಂಡು ಬಂದಿರುವ ಸಂಪ್ರದಾಯಗಳು, ಆಚಾರ-ವಿಚಾರಗಳು, ಐತಿಹ್ಯಗಳು, ಅಖ್ಯಾಯಿಕೆಗಳು ಮತ್ತು ಮೌಖಿಕ ಆಧಾರಗಳು.

ಹೀಗೆ ಮೇಲಿನ ಆಕರಗಳ ಸಹಾಯದಿಂದ ಸುತ್ತೂರಿನ ಸಾಂಸ್ಕೃತಿಕ ಪರಂಪರೆಯನ್ನು ಸಂಶೋಧನೆಗೆ ಒಳಪಡಿಸಿ ಆ ಊರಿನ ಪ್ರಾಮುಖ್ಯತೆಯನ್ನು ಇತಿಹಾಸದ ಪುಟಗಳಲ್ಲಿ ದಾಖಲುಗೊಳಿಸುವುದು ಈ ಸಂಶೋಧನೆಯ ಧ್ಯೇಯವಾಗಿದೆ.

೧.೧. ಸಾಂಸ್ಕೃತಿಕ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ:

ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ, ಅಲ್ಲಿ ಬದುಕಿದ ಜನ, ಹೀಗೆ ಬದುಕಿದ ಜನರ ಒಂದು ಗಣನೀಯವಾದ ಭಾಗ. ಆ ನಾಡನ್ನಾಳಿದ ರಾಜಸಮೂಹ. ಒಂದು ದೇಶದ ಇತಿಹಾಸವೆಂದರೆ ಆ ಜನತೆಯ ಇತಿಹಾಸ, ಜನರು ಬದುಕಿದ ರೀತಿ, ಅನುಸರಿಸಿದ ಧರ್ಮ, ಬೆಳೆಸಿದ ಕಲೆ, ಅವರು ಎದುರಿಸಿದ ಸಮಸ್ಯೆಗಳು, ಅವರ ಜೀವನ ಮೌಲ್ಯಗಳು ಮುಂತಾದ ವಿಷಯಗಳ ಅಧ್ಯಯನಗಳನ್ನು "ಸಾಂಸ್ಕೃತಿಕ ಅಧ್ಯಯನ"ವೆನ್ನಬಹುದು[೧].

ಈ ನಿಬಂಧದ ಶಿರೋನಾಮೆಯಲ್ಲಿ ಬಂದಿರುವ 'ಸಾಂಸ್ಕೃತಿಕ' ಎಂಬ ವಿಶೇಷಣಕ್ಕೆ ಈ ಕೆಳಗಿನಂತೆ ವಿವರಣೆ ನೀಡಬಹುದು. 'ಸಂಸ್ಕೃತಿ' ಎಂಬ ಪದ ಇಂಗ್ಲಿಷಿನ 'CULTURE' ಎಂಬ ಪದಕ್ಕೆ ಸಮನಾದುದು. 'ಸಂಸ್ಕೃತಿ' ಎಂಬ ಪದದ ಬಗ್ಗೆ ಹಲವಾರು ವಿದ್ವಾಂಸರು ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವುಗಳನ್ನು ನಾವು ಸಂಕ್ಷಿಪ್ತವಾಗಿ ನಿರೂಪಿಸಿದರೆ ಅದರ ಅರ್ಥ ಈ ಕೆಳಗಿನಂತೆ ಬರುತ್ತದೆ.

ಪ್ರಾಣಿಗಳ ವರ್ಗಕ್ಕೆ ಮನುಷ್ಯ ಸೇರುತ್ತಾನೆ. ಆದರೆ ಅವನು ತನ್ನನ್ನು ಇತರ ಪ್ರಾಣಿಗಳಿಗಿಂತ ನಾನು ಭಿನ್ನ ಎಂದುಕೊಳ್ಳುತ್ತಾನೆ. ಇದಕ್ಕೆ ಕಾರಣ ಮಾನವರಿಗೆ ಭಾವನೆಗಳನ್ನು ವ್ಯಕ್ತಪಡಿಸುವ ಗುಣ ಹಾಗೂ ವಿವೇಚನೆ ಇರುವುದು. ಪ್ರಾಣಿಗಳಿಗೆ ಬುದ್ಧಿ ಇಲ್ಲ, ಮಾತನಾಡಲು ಬರುವುದಿಲ್ಲ, ಸಾಮಾಜಿಕ ಹೊಂದಾಣಿಕೆ ಇಲ್ಲ, ಆದುದರಿಂದ ನಾನು ಪ್ರಾಣಿಗಳಿಗಿಂತ ಭಿನ್ನ ಎಂಬುದಾಗಿ ಹೇಳಿಕೊಳ್ಳುತ್ತಾನೆ. ಇದನ್ನೇ ಒಂದೇ ಮಾತಿನಲ್ಲಿ ಹೇಳುವುದಾದರೆ ಅದೇ 'ಸಂಸ್ಕೃತಿ' ಅಂದರೆ ಮಾನವನಿಗೆ ಸಂಸ್ಕೃತಿ ಇದೆ[೨]. ಆದರೆ ಪ್ರಾಣಿಗಳಿಗೆ ಇಲ್ಲ.

ಭೂಮಿಯನ್ನು ಉತ್ತು, ಬಿತ್ತಿ ನೀರು, ಗೊಬ್ಬರ ಹಾಕಿ ಹಸನುಗೊಳಿಸುವಂತೆ, ಮನುಷ್ಯನಲ್ಲಿರುವ ವಿಶೇಷವಾದ ಶಕ್ತಿಗಳು ಮೊಳಕೆಯೊಡೆದು ಬೆಳೆಯುವುದಕ್ಕಾಗಿ ಮಾಡಬೇಕಾದ ಅಂತರಂಗ ವ್ಯವಸಾಯ ಸಂಸ್ಕೃತಿ[೨ಎ].

ವಿದ್ವಾಂಸರುಗಳು ಸಂಸ್ಕೃತಿ ಎಂದರೆ ಏನು ಎಂದು ಈ ರೀತಿ ವಿಶ್ಲೇಷಿಸಿದ್ದಾರೆ.

ಮ್ಯಾಥ್ಯೂ ಅರ್ನಾಲ್ಡ್ : ಪೂರ್ಣತೆಯ ಸಿದ್ಧತೆಗಾಗಿ ಮನುಷ್ಯನು ಮಾಡುತ್ತಿರುವ ಪ್ರಯತ್ನವೇ ಸಂಸ್ಕೃತಿ[೩].

ರವೀಂದ್ರನಾಥ ಟಾಗೋರ್ : ಸಂಸ್ಕೃತಿ ಎಂಬುದು ಒಂದು ಆಕಾರವನ್ನು ತಳೆದುನಿಂತ ಆಕಸ್ಮಿಕ ಘಟನೆಗಳ ಮೊತ್ತವಲ್ಲ. ನಮ್ಮ ಪೂರ್ಣತೆಗಾಗಿ ರೂಪಿಸಿಕೊಂಡ ಯಾವುದೋ ದಿವ್ಯಾದರ್ಶ ಅಭಿವ್ಯಕ್ತಿ[೪].

ಟಿ.ಎಸ್. ಎಲಿಯಟ್ : ಒಂದು ಜನಾಂಗದ ಸಮಸ್ತ ಕ್ರಿಯೆಗಳನ್ನು ಅಭಿರುಚಿಗಳನ್ನು ಒಳಗೊಳ್ಳುವುದೇ ಸಂಸ್ಕೃತಿ[೫].

ಮಾನವಶಾಸ್ತ್ರಜ್ಞರ ಪ್ರಕಾರ: ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಜೀವನ ವಿಧಾನವೇ ಸಂಸ್ಕೃತಿ[೬].

ಒಟ್ಟಾರೆ ಸಂಸ್ಕೃತಿ ಎಂಬುದು ಹುಟ್ಟಿದಾಗಿನಿಂದ ಬಾರದೆ ಮನುಷ್ಯನು ತನ್ನ ಸುತ್ತಮುತ್ತಲಿನ ಪರಿಸರದಿಂದ ಕಲಿಯುವ ಭಾಷೆ, ಕಲೆ, ವಿಜ್ಞಾನ, ಮೌಲ್ಯ, ನೀತಿ, ಧರ್ಮ, ದಿನನಿತ್ಯ ಬಳಸುವ ಉಪಕರಣಗಳ ತಯಾರಿಕೆ, ಕೈಗಾರಿಕೆ, ಕಾನೂನು ಮುಂತಾದುವುಗಳನ್ನೆಲ್ಲಾ ಒಳಗೊಳ್ಳುತ್ತದೆ. ಅಂದರೆ ಒಂದು ಸಮಾಜದ ಜೀವನ ವಿಧಾನ, ಆಚಾರ-ವಿಚಾರಗಳು, ಆಲೋಚನೆ, ರೀತಿ-ನೀತಿಗಳು, ಸಂಪ್ರದಾಯಗಳ ಪ್ರಭಾವಕ್ಕೆ ಒಳಗಾಗಿರುತ್ತಾನೆ[೭].

ಸುತ್ತೂರಿನ ಜನರು ಬದುಕಿದ ರೀತಿ, ಅವರ ಧಾರ್ಮಿಕ, ರಾಜಕೀಯ, ಆರ್ಥಿಕ ವ್ಯವಸ್ಥೆ, ಜಾತಿನೀತಿಗಳು, ಅವರ ಬಾಳನ್ನು ಬಂಗಾರವಾಗಿಸಿದ ಮೌಲ್ಯಗಳು, ಒಟ್ಟಾರೆ ಅವರ ಜೀವನ ವಿಧಾನ. ಇವುಗಳನ್ನು ನಿರೂಪಿಸುವುದು ಈ ಅಧ್ಯಯನದ ಗುರಿಯಾಗಿದೆ.

ಅಧ್ಯಯನದ ಉದ್ದೇಶ:

ಒಂದು ನಾಡಿನ ಇತಿಹಾಸವೆಂದರೆ ಈ ನಾಡನ್ನು ಕಾಲದಿಂದ ಕಾಲಕ್ಕೆ ಆಳ್ವಿಕೆ ಮಾಡಿದ ರಾಜ-ಮಹಾರಾಜರುಗಳು ಇತಿಹಾಸವೆಂಬುದು ಬಹುಪ್ರಧಾನವಾಗಿ ಕಂಡುಬರುತ್ತದೆ. ನಂಜನಗೂಡು ತಾಲ್ಲೂಕಿನ ಸುತ್ತೂರು ಗ್ರಾಮದಲ್ಲಿ ಬದುಕಿದ ಜನರ ಒಂದು ವಿಭಿನ್ನವಾದ ಸಾಂಸ್ಕೃತಿಕ ನೆಲೆಗಳು ಸಹ ಕಂಡುಬರುತ್ತವೆ. ಒಂದು ದೇಶದ, ರಾಜ್ಯದ ಅಥವಾ ಗ್ರಾಮದ ಇತಿಹಾಸವೆಂದರೆ ಆ ಜನತೆಯ ಇತಿಹಾಸವೆಂದೇ ಹೇಳಬಹುದು. ಜನತೆ ಬದುಕಿದ ರೀತಿ-ನೀತಿ, ಆಚರಣೆ, ನಂಬಿಕೆ, ಸಾಮಾಜಿಕ ಕಟ್ಟುಪಾಡುಗಳು, ಅನುಸರಿಸಿದ ಧರ್ಮ, ನಿರ್ಮಾಣ ಮಾಡಿದ ಕಟ್ಟಡಗಳು, ದೇವಾಲಯಗಳು, ವೀರಗಲ್ಲು, ಮಹಾಸತಿಗಲ್ಲುಗಳು, ಸಪ್ತಮಾತೃಕೆಯರ ಶಿಲ್ಪಗಳು, ಜೈನ, ವೈಷ್ಣವ ಶೈವಶಿಲ್ಪಗಳು, ರಾಕಸಮ್ಮನ ಶಿಲ್ಪ, ಕಲಾಕೃತಿಗಳು, ಆರ್ಥಿಕ ವಿಷಯಗಳು, ಜೀವನದ ಮೌಲ್ಯಗಳು, ಜಾನಪದೀಯವಾಗಿ ಹಬ್ಬ-ಆಚರಣೆಗಳು, ಕಲೆಯ ನೆಲೆಗಳು ಇತ್ಯಾದಿ ವಿಷಯಗಳ ಮೇಲೆ ವಿವರಗಳ ಮೂಲಕ ಹೊಸ-ಹೊಸ ವಿಷಯಗಳನ್ನು ಸುತ್ತೂರಿನ ವಿಷಯಕ್ಕೆ ಸೇರಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಸುತ್ತೂರಿನ ಇತಿಹಾಸವು ಪ್ರಾಗೈತಿಹಾಸಿಕ ಕಾಲದಿಂದಲೂ ಸಾಂಸ್ಕೃತಿಕ ಬೆಳವಣಿಗೆಯ ಎಲ್ಲಾ ಹಂತ ಅಥವಾ ಘಟ್ಟಗಳನ್ನು ಒಳಗೊಂಡಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಸುತ್ತೂರಿನ ಸಾಂಸ್ಕೃತಿಕ ಇತಿಹಾಸವನ್ನು ಸಮಗ್ರವಾಗಿ ಪುನರ್ರಚಿಸುವಲ್ಲಿ ಶಾಸನಗಳು ಬಹುಪ್ರಮುಖವಾಗಿದೆ.

ಇಂತಹ ಶಾಸನಗಳ ಸಂಗ್ರಹಣೆ ಒಂದು ನಾಡಿನ ಒಂದು ಪ್ರಾಂತ್ಯದ ಒಂದು ಊರಿನಲ್ಲಿ ಪ್ರಾರಂಭಿಸಿದಾಗ ಮಾತ್ರ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ರಚಿಸಬಹುದು ಮತ್ತು ಇತಿಹಾಸವನ್ನು ಪುನರ್‌ರಚಿಸುವಾಗ ಕಳೆದುಹೋಗಿರುವಂತಹ ಅಥವಾ ಬಿಟ್ಟುಹೋಗಿರುವಂತಹ ಭಾಗಗಳನ್ನು ಪುನಃ ತಂದುಕೊಳ್ಳಬಹುದಾಗಿದೆ. ಯಾರೂ ಈ ವಸ್ತು ವಿಷಯದ ಮೇಲೆ ಶೋಧನೆ ಮಾಡಿಲ್ಲ, ಅಂತಹ ಅಂಶಗಳನ್ನು ಈ ಶೋಧನೆಯಿಂದ ಅಂದರೆ ನನ್ನ ಕ್ಷೇತ್ರಕಾರ್ಯದಿಂದ ಸುತ್ತೂರಿನಲ್ಲಿ ಕಂಡುಬರುವ ಶಾಸನಗಳು, ಸ್ಮಾರಕಗಳು, ಶಿಲ್ಪಗಳನ್ನು ಮುಖ್ಯವಾಗಿಟ್ಟುಕೊಂಡು ನಿಬಂಧವನ್ನು ರಚಿಸಬೇಕಾಗುತ್ತದೆ.

ಇತಿಹಾಸದ ಪುನರ್‌ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಪುರಾತತ್ವ ಅವಶೇಷಗಳನ್ನು ವಿಭಿನ್ನ ದೃಷ್ಟಿಕೋನಗಳಿಂದ ಅಧ್ಯಯನ ಮಾಡಲಾಗುತ್ತದೆ. ಪ್ರಾಚೀನ ಭಾರತದಲ್ಲಿ ಅದರಲ್ಲೂ ಕ್ರಿ.ಶ.ದ ಈಚಿನ ಶತಮಾನಗಳಲ್ಲಿ ರಾಜರಿಗಿದ್ದ ಸ್ಥಾನ-ಮಾನ ನೋಡಿದರೆ ರಾಜಾಧಿರಾಜರುಗಳ ಇತಿಹಾಸ ಒಂದು ರೀತಿಯಲ್ಲಿ ನಮ್ಮ ನಾಡಿನ ಇತಿಹಾಸವೂ ಆಗಬಹುದೋ ಏನೋ ಅಲ್ಲದೆ ಎಲ್ಲಾ ದೇಶಗಳಂತೆ ನಮ್ಮಲ್ಲಿಯೂ ನಾಡಿನ ಇತಿಹಾಸವನ್ನು ಅನುಕೂಲಕರವಾಗಿ ಆಯಾ ಘಟ್ಟಗಳಾಗಿ ವಿಭಜಿಸಲು ರಾಜರುಗಳು, ರಾಜವಂಶಗಳು ಸಹಕಾರಿಯಾಗಿವೆ. ಉದಾಹರಣೆಗೆ ಕನ್ನಡ ನಾಡಿನ ಇತಿಹಾಸದಲ್ಲಿ ಅದರಲ್ಲೂ ಸುತ್ತೂರನ್ನು ಗಂಗ, ಚೋಳ, ಹೊಯ್ಸಳ, ವಿಜಯನಗರ ಅರಸರು, ಮೈಸೂರಿನ ಒಡೆಯರು ಹಾಗೂ ಸ್ಥಳೀಯ ಆಡಳಿತಗಾರರ ಆಳ್ವಿಕೆ ಇತ್ಯಾದಿ ಪ್ರಮುಖ ರಾಜವಂಶಗಳ ಕಾಲ ಘಟ್ಟಗಳನ್ನು ಗುರುತಿಸಬಹುದು. ಸುತ್ತೂರು ಪುರಾತತ್ವ ದೃಷ್ಟಿಯಿಂದಲೂ, ದೇವಾಲಯಗಳ ಮತ್ತು ಶಾಸನಗಳ ಸಂಸ್ಕೃತಿಗಳ ಹೊಸನೆಲೆಗಳ ಶೋಧನೆ, ಅಧ್ಯಯನದ ದೃಷ್ಟಿಯಿಂದಲೂ ಕುಂಠಿತವಾಗಿದೆ. ಈ ಹಿನ್ನೆಲೆಯಿಂದ ಅವುಗಳ ಸಮಗ್ರ ಅಧ್ಯಯನ ಸಮಂಜಸವಾಗಿ ಆಗಿಲ್ಲ. ಇವುಗಳನ್ನು ಒಂದೆಡೆ ಕ್ರೋಢೀಕರಿಸುವುದೇ ಪ್ರಸ್ತುತ ನಿಬಂಧದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಈ ನಿಬಂಧದ ಅಧ್ಯಯನ ವ್ಯಾಪ್ತಿಯು ಮೈಸೂರು ಜಿಲ್ಲೆಯ, ನಂಜನಗೂಡು ತಾಲ್ಲೂಕಿನ ಸುತ್ತೂರು ಗ್ರಾಮದಲ್ಲಿ ಕಂಡುಬರುವ ಶಾಸನಗಳ ಆಧಾರದಿಂದ ಹಿಡಿದು ಅಂದರೆ ಕ್ರಿ.ಶ. ೧೦ನೇ ಶತಮಾನದಿಂದ ಪ್ರಸ್ತುತದವರೆಗೂ ಶಾಸನಗಳು, ದೇವಾಲಯಗಳು, ಮೂರ್ತಿ-ಶಿಲ್ಪಗಳು, ಸ್ಮಾರಕ ಶಿಲ್ಪಗಳು, ವಾಸ್ತುರಚನೆ, ಸಮಾಜ, ಧರ್ಮ ಮತ್ತು ಆರ್ಥಿಕ ಬೆಳವಣಿಗೆ ಹಾಗೂ ಸ್ಥಳೀಯ ಪ್ರಮುಖ ಜಾನಪದೀಯ ಹಬ್ಬಗಳು, ಜಾನಪದ ಆಧಾರಗಳು, ಮೌಖಿಕ ಆಧಾರಗಳ ಸಂಕ್ಷಿಪ್ತ ವಿವರಣೆಗಳನ್ನು ಒಳಗೊಂಡಿರುತ್ತದೆ. ಅಂದರೆ ಸುತ್ತೂರು ಗ್ರಾಮವನ್ನು ಕುರಿತು ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ವಿಧಾನ:

ಸುತ್ತೂರು ಗ್ರಾಮಕ್ಕೆ ಸಂಬಂಧಪಟ್ಟ ಈ ಸಂಶೋಧನಾ ನಿಬಂಧವನ್ನು ತಯಾರಿಸಲು ಈ ಕೆಳಕಂಡ ರೀತಿವಿಧಾನಗಳನ್ನು ಅನುಸರಿಸಲಾಗಿದೆ. ಪ್ರಸ್ತುತ ಈ ಪ್ರಬಂಧದ ರಚನೆಯಲ್ಲಿ ಕೆಲವು ಹೊಸ

ಹೊಸ ಅಂಶಗಳನ್ನು, ವಿಶ್ಲೇಷಣೆಗಳನ್ನು ಸೇರಿಸಲಾಗಿದೆ. ಈ ಗ್ರಾಮದಲ್ಲಿರುವ ವೀರಶೈವ ಮಠದ ಗುರುಪರಂಪರೆಯ ಇತಿಹಾಸವನ್ನು ಅವಲೋಕಿಸಲಾಗಿದೆ. ಅಲ್ಲದೆ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ, ಶಾಸನಗಳ ಅಧ್ಯಯನ, ಸಮಾಜ, ಧರ್ಮ, ಆರ್ಥಿಕ ಬೆಳವಣಿಗೆ, ವಸ್ತು ಸಂಗ್ರಹಾಲಯ, ಜಾನಪದೀಯ ಹಬ್ಬಗಳು, ಈ ಗ್ರಾಮದಲ್ಲಿ ಕಂಡುಬರುವ ಪ್ರಾಚೀನ ಮತ್ತು ಆಧುನಿಕ ದೇವಾಲಯಗಳ ವಾಸ್ತುಶಿಲ್ಪ ರಚನೆ ನೋಟವನ್ನು ತಿಳಿಸಲಾಗಿದೆ.

ಹೊಸದಾಗಿ ನನ್ನ ಕ್ಷೇತ್ರಕಾರ್ಯದಲ್ಲಿ ದೊರಕಿದ ಮೌಖಿಕ ಮತ್ತು ಜಾನಪದೀಯ ಆಧಾರಗಳು ಈಗಾಗಲೇ ಪ್ರಕಟವಾಗಿರುವ ಕೃತಿಗಳು, ಲೇಖನಗಳು ಮತ್ತು ಬಿಡಿಲೇಖನಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಅದರೊಂದಿಗೆ ಆಕರ ಗ್ರಂಥಗಳ ಪಟ್ಟಿಯನ್ನು ತಯಾರಿಸಿಕೊಂಡು ಸಮಗ್ರ ಸುತ್ತೂರಿನ ಕ್ಷೇತ್ರಕಾರ್ಯದಲ್ಲಿ ಅಧ್ಯಯನ ಕೈಗೊಂಡು ಅವುಗಳ ಸನ್ನಿವೇಶಕ್ಕೆ, ಸಂದರ್ಭಕ್ಕೆ ತಕ್ಕಂತೆ ವಿವರಪೂರ್ಣವಾದ ಛಾಯಾಚಿತ್ರಗಳನ್ನು, ದಾಖಲೆಗಳನ್ನು ದಾಖಲಿಸಿಕೊಳ್ಳುವುದು. ಸುತ್ತೂರಿನಲ್ಲಿ ಕಂಡುಬರುವ ದೇವಾಲಯಗಳ ವ್ಯವಸ್ಥಿತ ಅಧ್ಯಯನ ಪ್ರಚಲಿತವಿದ್ದ ವಿವಿಧ ಬಗೆಯ ದೇವಾಲಯಗಳ ಮಾದರಿ ಗುರುತಿಸಿ ಅವುಗಳ ಗುಣಲಕ್ಷಣಗಳನ್ನು ಕಂಡುಕೊಳ್ಳುವುದು. ಅವುಗಳ ವಿವರಣೆ ನೀಡುವಾಗ ಮೊದಲು ದೇವಾಲಯದ ಒಳಭಾಗವನ್ನು ಅಂದರೆ ಗರ್ಭಗೃಹದಿಂದ ಮುಖಮಂಟಪದವರೆಗೆ ನಂತರ ಹೊರಭಾಗವನ್ನು ಅಂದರೆ ಅಧಿಷ್ಠಾನದಿಂದ ಕಳಸದವರೆಗೆ ಕಂಡುಬರುವ ವಿವಿಧ ಭಾಗಗಳ ವಾಸ್ತುವಿವರಣೆಯನ್ನು ನೀಡಲಾಗಿದೆ ಹಾಗೂ ದೇವಾಲಯಗಳಲ್ಲಿ ಮತ್ತು ಅವುಗಳ ಸುತ್ತಮುತ್ತಲಿನ ಪರಿಸರದಲ್ಲಿ ಕಂಡುಬರುವ ಶಿಲ್ಪಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿ ಅವುಗಳ ಶೈಲಿ, ಕಾಲಮಾನ ಮತ್ತು ಪ್ರತಿಮಾ ಲಕ್ಷಣದ ದೃಷ್ಟಿಕೋನದಿಂದ ಪರಿಶೀಲಿಸುವುದು, ಶಿಲ್ಪಗಳನ್ನು ಗಣನೆಗೆ ತೆಗೆದುಕೊಂಡು ಅವುಗಳನ್ನು ವಿವಿಧ ಬಗೆಯಲ್ಲಿ ವಿಂಗಡಿಸಿ ಅವುಗಳ ವಿವರಗಳೊಂದಿಗೆ ವಿವರಿಸಲಾಗಿದೆ. ಅಲ್ಲದೆ ಸುತ್ತೂರಿನಲ್ಲಿ ದೊರೆತಿರುವ ಶಾಸನಗಳನ್ನು ಸಹ ಇಲ್ಲಿ ನಿರೂಪಿಸಲಾಗಿದೆ. ಜಾನಪದೀಯ ಹಿನ್ನೆಲೆಯಿಂದ ಸುತ್ತೂರು ಪ್ರಾಚೀನ ಪರಂಪರೆಗೆ ಪೂರಕವಾಗಿಯೇ ಕರ್ನಾಟಕದಲ್ಲಿ ಹೆಸರು ಪಡೆದಿರುವ ಪವಿತ್ರ ಕ್ಷೇತ್ರವಾಗಿದೆ.

ಒಟ್ಟಾರೆಯಾಗಿ ಈ ಅಧ್ಯಯನದ ಮೂಲ ಉದ್ದೇಶವೇನೆಂದರೆ ಸುತ್ತೂರು ಗ್ರಾಮದ ಅಧ್ಯಯನದ ಮೂಲ ಅಂಶವಾಗಿದ್ದರೂ ಸಹ ವಿವಿಧ ರಾಜವಂಶಗಳ ಕಾಲದ ಆಳ್ವಿಕೆಯನ್ನು ಈ ಭಾಗದಲ್ಲಿನ ಧರ್ಮ, ಸಮಾಜ, ಆರ್ಥಿಕ, ಶಾಸನ, ವಸ್ತು ಸಂಗ್ರಹಾಲಯ, ಜನಪದ ಮುಂತಾದ ಮೂಲಗಳಿಂದ ಆಧ್ಯಯನ ಮಾಡಲಾಗಿದೆ. ಹೀಗೆ ಅನೇಕ ಹಿನ್ನೆಲೆಯಿಂದ ಹಲವಾರು ದೃಷ್ಟಿಕೋನಗಳಿಂದ ವಿಶೇಷ ಮಾಹಿತಿಗಳನ್ನು ಕ್ರೋಢೀಕರಿಸಿ, ಎಲ್ಲಾ ಆಕರಗಳನ್ನು ವಿಶ್ಲೇಷಿಸಿ ಸಂಶೋಧನಾ ವರದಿಯನ್ನು ತಯಾರಿಸಲಾಗಿದೆ. ವಿವರಗಳಿಗೆ ಪೂರಕವಾಗಿ ಆಧಾರಗ್ರಂಥಗಳ, ಶಾಸನಗಳ, ಪ್ರಾಚ್ಯವಸ್ತು ಇಲಾಖೆಯ ವರದಿಗಳ, ಗೆಜೆಟಿಯರ್‌ಗಳ ಪಟ್ಟಿಯನ್ನು ನೀಡಲಾಗಿದೆ ಮತ್ತು ಕೆಲವು ವಿಷಯಗಳಿಗೆ ಸ್ಥಳೀಯರಿಂದ ಮಾಹಿತಿ ಸಂಗ್ರಹಿಸಲಾಗಿದೆ ಮತ್ತು ಕೆಲವೊಂದು

ಛಾಯಾಚಿತ್ರಗಳನ್ನು ಸೇರ್ಪಡಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ನನ್ನ ಗಮನಕ್ಕೆ ಬಂದಿರುವ ಪ್ರಾಚೀನ ವಸ್ತುಗಳು ಹಾಗೂ ಆಕರಗಳನ್ನು, ಮೌಖಿಕ ಆಧಾರಗಳನ್ನು ಅವಲಂಬಿಸಿ ಈ ಒಂದು ಸಂಶೋಧನಾ ವರದಿಯನ್ನು ನೀಡಲಾಗಿದೆ.

೧.೨. ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ

೧.೨.೧. ಭೌಗೋಳಿಕ ಹಿನ್ನೆಲೆ

ಯಾವುದೇ ಒಂದು ನಾಗರೀಕತೆ ಮತ್ತು ಸಂಸ್ಕೃತಿಯ ಬೆಳವಣಿಗೆಯಲ್ಲಿ ಭೌಗೋಳಿಕ ಅಂಶಗಳು ನಿರ್ಣಾಯಕ ಪಾತ್ರವನ್ನು ವಹಿಸಿದೆ. ಮಾನವನ ವಲಸೆ ಮತ್ತು ಸಾಂಸ್ಕೃತಿಕ ಸೋಲು-ಗೆಲುವುಗಳು ಹೆಚ್ಚಾಗಿ ಅವಲಂಬಿಸಿದ್ದು ಭೌಗೋಳಿಕ ಅಂಶಗಳ ಆಧಾರದ ಮೇಲೆ ನಿಂತಿದೆ. ಇತಿಹಾಸವು ಎರಡು ಮುಖ್ಯ ವಿಚಾರಗಳ ಮೇಲೆ ನಿಂತಿದೆ. ಅವುಗಳೆಂದರೆ ಪರಿಸರ ಮತ್ತು ಮಾನವ. ಮಾನವನ ಬೆಳವಣಿಗೆಯಲ್ಲಿ ಪರಿಸರದ ಪಾತ್ರ ಮುಖ್ಯವಾದದ್ದು. ಅಂತೆಯೇ ಸುತ್ತೂರಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಅರಿಯಬೇಕಾದರೆ ಇಲ್ಲಿನ ಭೌಗೋಳಿಕ ಅಂಶಗಳ ಪ್ರಭಾವವನ್ನು ಕುರಿತು ಸ್ಥೂಲವಾಗಿ ಅಧ್ಯಯನ ಮಾಡಿದಾಗ ಇಂದು ಕೇವಲ ಹಳ್ಳಿಯಾಗಿರುವ ಸುತ್ತೂರು ಸಾವಿರ ವರ್ಷಗಳಿಗಿಂತ ಹಿಂದೆ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತ್ಯಂತರಗಳನ್ನು ಸೃಷ್ಟಿಸಿದ್ದು ಇಲ್ಲಿನ ಭೌಗೋಳಿಕ ಅಂಶಗಳ ಪ್ರಭಾವದಿಂದಾಗಿ.

ಆಂದರೆ ಒಂದು ಸ್ಥಳದ, ಪ್ರದೇಶದ ಅಭಿವೃದ್ಧಿಗೆ ಅಲ್ಲಿನ ಭೌಗೋಳಿಕ ಪರಿಸರ ತನ್ನದೇ ಆದ ರೀತಿಯಲ್ಲಿ ಪ್ರಭಾವ ಬೀರಿರುತ್ತದೆ. ಒಂದು ಊರಿನ ಭೌಗೋಳಿಕತೆಯಲ್ಲಿ ನದಿಗಳ ಪಾತ್ರ ಬಹುಮುಖ್ಯವಾದದ್ದು. ಜಗತ್ತಿನ ಎಲ್ಲಾ ನಾಗರೀಕತೆಗಳ ಮತ್ತು ಸಾಮ್ರಾಜ್ಯಗಳ ಉಗಮ ಮತ್ತು ಬೆಳವಣಿಗೆಯಲ್ಲಿ ನದಿ ಮೈದಾನಗಳು ಬಹುಮುಖ್ಯವಾದ ಪಾತ್ರ ವಹಿಸುತ್ತವೆ. ಇದೇ ರೀತಿಯಲ್ಲಿ ಸುತ್ತೂರಿನ ಭೌಗೋಳಿಕತೆಯಲ್ಲಿ ಕೂಡ ಕಾವೇರಿ ನದಿಯ ಉಪನದಿಯಾದ ಕಪಿಲಾ ನದಿ (ಕಬಿನಿ) ತನ್ನದೇ ಆದ ಪ್ರಭಾವವನ್ನು ಬೀರಿದೆ. ಕಪಿಲಾ ನದಿಯ ದಂಡೆಯ ಮೇಲೆ ಅನೇಕ ಪುಣ್ಯಕ್ಷೇತ್ರಗಳ ಬೆಳವಣಿಗೆಯನ್ನು ಕಾಣಬಹುದಾಗಿದೆ. ಆ ರೀತಿಯಲ್ಲಿ ಬೆಳವಣಿಗೆ ಕಂಡ ಧಾರ್ಮಿಕ ಕ್ಷೇತ್ರಗಳಲ್ಲಿ ಸುತ್ತೂರು ಕ್ಷೇತ್ರವೂ ಸಹ ಒಂದು. ೧೨ನೇ ಶತಮಾನದ ಹೊಯ್ಸಳರ ಕಾಲದ ಶಾಸನವೊಂದರಲ್ಲಿ[೮] ಸುತ್ತೂರಿನ ಹೆಸರು ಕಂಡುಬರುತ್ತದೆ. ಅದು ನದಿ ದಂಡೆಯ ಮೇಲಿನ ಒಂದು ಹಳ್ಳಿಯೆಂದು ತಿಳಿಸಿದೆ. ಆದರೆ ಮತ್ತೊಂದು ಶಾಸನವು[೯] ಕಪಿಲಾ ನದಿಯ ಬಲದಂಡೆಯ ಕಪಿಲಾ-ಕೌಂಡಿನಿ ನದಿಗಳ ಸಂಗಮವಾಗುವ ಹತ್ತಿರದ ಹಳ್ಳಿಯೆಂದು ಭೌಗೋಳಿಕ ಹಿನ್ನೆಲೆಯನ್ನು ನೀಡಿದೆ. ಕ್ರಿ.ಶ. ೧೫೩೦ರ ಶಾಸನವೊಂದರಲ್ಲಿ ಈ ಸ್ಥಳವನ್ನು ಹೊಳೆಯ ಸುತ್ತೂರು[೧೦] ಎಂದು ಕರೆಯಲಾಗಿದೆ. ಈ ಶಾಸನದ ಪ್ರಕಾರ ಸುತ್ತೂರು, ತಾಯೂರು ಸ್ಥಳದಲ್ಲಿನ ಮೂಗೂರು ಸೀಮೆಯಲ್ಲಿತ್ತು.

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ಪಶ್ಚಿಮ-ಪೂರ್ವವಾಗಿ ಹರಿಯುವ ಕಪಿಲಾ ನದಿಯ ದಂಡೆಯ ಮೇಲೆ ಸುತ್ತೂರು ನೆಲೆಗೊಂಡಿದೆ. ಮೈಸೂರಿನಿಂದ ದಕ್ಷಿಣಕ್ಕೆ ೨೮

ಕಿಲೋಮೀಟರ್ (ವರುಣಾ ಗ್ರಾಮದ ಮೂಲಕ ರಾಜ್ಯ ಹೆದ್ದಾರಿಗೆ ಸಂಪರ್ಕ ಹೊಂದಿದೆ) ಹಾಗೂ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಿಂದ ೧೭೦ ಕಿ.ಮೀ. ದೂರದಲ್ಲಿದೆ ಮತ್ತು ನಂಜನಗೂಡಿನ ಈಶಾನ್ಯಕ್ಕೆ ೧೫ ಕಿ.ಮೀ. ದೂರದಲ್ಲಿದೆ. ಈ ಊರು ೧೨°.೧೦' ಉತ್ತರ ಅಕ್ಷಾಂಶ ಮತ್ತು ೭೬°.೫೦' ಪೂರ್ವ ರೇಖಾಂಶದಲ್ಲಿ[೧೧] ಕಂಡುಬರುತ್ತದೆ. ಇದರ ಒಟ್ಟು ಭೌಗೋಳಿಕ ಪ್ರದೇಶವು ಸರಿಸುಮಾರು ೯೦೦ ಎಕರೆಗಳು. ಈ ಗ್ರಾಮವನ್ನು ಕಪಿಲಾ ನದಿಯು ಬಳಸಿ ಅಥವಾ ಸುತ್ತಿ ಹರಿಯುವುದರಿಂದ ಈ ಗ್ರಾಮಕ್ಕೆ ಸುತ್ತೂರು ಎಂಬ ಹೆಸರು ಬಂದಿರಬಹುದೆಂದು ಭೂಗೋಳಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ[೧೨].

ಈ ಗ್ರಾಮದ ಉತ್ತರಕ್ಕೆ ತುಮ್ಮನೇರಳೆ, ಹೊಸಕೋಟೆ, ದಕ್ಷಿಣಕ್ಕೆ ಕುಪ್ಪರವಳ್ಳಿ, ಬಿಲಗೆರೆ, ಪೂರ್ವಕ್ಕೆ ಬಿಳುಗಲಿ ಮತ್ತು ಪಶ್ಚಿಮಕ್ಕೆ ಆಲತ್ತೂರು ಗ್ರಾಮಗಳಿದ್ದು ಸುತ್ತೂರಿನ ಅಭಿವೃದ್ಧಿಯಲ್ಲಿ ತಮ್ಮದೇ ಆದ ಪಾತ್ರವನ್ನು ವಹಿಸಿವೆ. ಅಲ್ಲದೆ ಈ ಗ್ರಾಮದ ಮಧ್ಯಭಾಗದಲ್ಲಿ ನೀರಾವರಿ ನಾಲೆಯೊಂದು ಹಾದುಹೋಗಿದೆ. ಅದನ್ನು ಹುಲ್ಲಹಳ್ಳಿ ನಾಲೆ ಎಂದು ಕರೆಯಲಾಗುತ್ತದೆ. ಆರಂಭದಲ್ಲಿ ಭತ್ತ, ರಾಗಿ, ಜೋಳ, ಹಿಪ್ಪುನೇರಳೆ, ದ್ವಿದಳ ಧಾನ್ಯದ ಬೆಳೆಗಳು, ಸೊಪ್ಪು, ತರಕಾರಿ, ಹಣ್ಣು, ಹೂ, ಮಾವು, ಬೇವುಗಳನ್ನು ಇಲ್ಲಿ ಬೆಳೆಯಲಾಗುತ್ತಿತ್ತು. ಆದರೆ ಇತ್ತೀಚೆಗೆ ಆರ್ಥಿಕ ದೃಷ್ಟಿ ಬದಲಾಗಿ ಇಲ್ಲಿ ಭತ್ತ, ಬಾಳೆ, ಕಬ್ಬಿನ ಬೆಳೆಗಳನ್ನು ಹೇರಳವಾಗಿ ಬೆಳೆಯಲಾಗುತ್ತಿದೆ. ಇಲ್ಲಿ ಹುಲ್ಲಹಳ್ಳಿ ನಾಲೆಯ ಜೊತೆಗೆ ಕಬಿನಿ ಬಲದಂಡೆ ನಾಲೆಯೂ ಹರಿಯುತ್ತಿದ್ದು ಈ ಪ್ರದೇಶ ಫಲವತ್ತಾದ ಹಾಗೂ ಲಾಭದಾಯಕವಾದ ಕೃಷಿ ಚಟುವಟಿಕೆಗಳಿಗೆ ಉತ್ತೇಜನಕಾರಿಯಾಗಿದೆ.

ಸುತ್ತೂರು ಪ್ರದೇಶದಲ್ಲಿ ವಿಭಿನ್ನ ರೀತಿಯ ಮಣ್ಣು ಕಂಡುಬರುತ್ತದೆ. ಮೆಕ್ಕಲುಮಣ್ಣು, ಕೆರೆಮಣ್ಣು, ಕೆಂಪುಮಣ್ಣು, ಕೆಂಪು ಜೇಡಿಮಣ್ಣುಗಳು ಅಲ್ಲಲ್ಲಿ ಕಂಡುಬರುತ್ತದೆ. ಈ ಮಣ್ಣುಗಳು ವ್ಯವಸಾಯಕ್ಕೆ ಯೋಗ್ಯವಾಗಿದ್ದು ಊರಿನ ಆರ್ಥಿಕ ಅಭಿವೃದ್ಧಿಗೆ ತನ್ನದೇ ಆದಂತಹ ಕೊಡುಗೆಯನ್ನು ನೀಡಿದೆ. ಈ ಪ್ರದೇಶದಲ್ಲಿ ಕೃಷಿಯ ಜೊತೆಗೆ ಪಶುಸಾಕಾಣಿಕೆಯು ಪ್ರಧಾನವಾಗಿ ಕಂಡುಬರುವ ಕಸುಬಾಗಿದೆ. ಕೃಷಿ ಕ್ಷೇತ್ರವು ದನಗಳಿಗೆ ಬೇಕಾದ ಮೇವು, ನೀರು ಇತ್ಯಾದಿಗಳನ್ನು ಒದಗಿಸುತ್ತದೆ. ಈ ಊರಿನ ಭೂರಚನೆಯು ವಿಶಾಲವಾದ ನದಿ ಮೈದಾನ ಪ್ರದೇಶದಿಂದ ಕೂಡಿದ್ದು ದಖನ್ ಪ್ರಸ್ಥಭೂಮಿ (ಮೈಸೂರು ಪ್ರಸ್ಥಭೂಮಿ) ಭಾಗವಾಗಿದೆ. ಇಲ್ಲಿನ ವಾಯುಗುಣವು ಉಷ್ಣ ಮಾನ್ಸೂನ್ ಮಾದರಿ (Tropical Monsoon Climate) ವಾಯುಗುಣವನ್ನು ಹೊಂದಿದೆ. ಒಟ್ಟಾರೆ ಹೇಳುವುದಾದರೆ ಸುತ್ತೂರು ಒಂದು ಪ್ರಮುಖ ಸಾಂಸ್ಕೃತಿಕ ಕ್ಷೇತ್ರವಾಗಿ ಬೆಳವಣಿಗೆ ಹೊಂದಲು ಈ ಕೆಳಗಿನ ಅಂಶಗಳು ಪ್ರೇರಕವಾಗಿವೆ.

೧. ಕಪಿಲಾ ನದಿಯ ಹರಿವು

೨. ಮಣ್ಣಿನ ಫಲವತ್ತತೆ

೩. ಕಾಲುವೆ ನೀರಾವರಿ – (ಭತ್ತದ ಬೇಸಾಯ)

೪. ನದಿಯ ಮೂಲಕ ಸಾಗಾಣಿಕೆ – ಸರಕು ಸಾಗಾಣಿಕೆ, ಪ್ರಯಾಣಿಕರ ಸಾಗಾಣಿಕೆ

೫. ನೆರೆ–ಹೊರೆಯ ಪ್ರದೇಶಗಳೊಂದಿಗಿನ ಸಂಪರ್ಕ

೬. ಈ ಪ್ರದೇಶದಲ್ಲಿ ಆಳಿದ ಸಂತತಿಗಳ ಭೂಧಾನ ಮುಂತಾದುವುಗಳ ಕೊಡುಗೆ

ಹೀಗೆ ಸುತ್ತೂರಿನ ಮೇಲೆ ಮೇಲ್ಮೈ ಲಕ್ಷಣ, ವಾಯುಗುಣ, ನದಿ, ಕಾಲುವೆಗಳು, ಮಣ್ಣುಗಳು ಮುಂತಾದುವುಗಳು ತನ್ನದೇ ಆದಂತಹ ಪ್ರಭಾವವನ್ನು ಬೀರಿ ಸುತ್ತೂರನ್ನು ಒಂದು ಪ್ರಮುಖ ಸಾಂಸ್ಕೃತಿಕ ಮತ್ತು ಭೌಗೋಳಿಕ ಕ್ಷೇತ್ರವನ್ನಾಗಿ ಮಾಡಿದೆ.

೧.೨.೨. ಐತಿಹಾಸಿಕ ಹಿನ್ನೆಲೆ

ಹಿಂದೆ ಈ ಊರಿಗೆ ಶ್ರೋತ್ರಿಯೂರು ಎಂಬ ಹೆಸರಿದ್ದುದಾಗಿ, ಕ್ರಿ.ಶ. ೧೦೩೨ರ ಚೋಳರ ಶಾಸನದಿಂದ [೧೩] ಹಾಗೂ 'ಸೊತ್ತಿಯೂರು' ಎಂಬ ಹೆಸರಿದ್ದುದಾಗಿ ಕ್ರಿ.ಶ. ೧೧೬೯ರ ಹೊಯ್ಸಳರ ಶಾಸನದಿಂದ [೧೪] ತಿಳಿದುಬರುತ್ತದೆ. ಸೊತ್ತಿಯೂರು ರಾಜಧಾನಿಯಲು ಎಂಬುದು ಕ್ರಿ.ಶ. ೧೧೬೯ರ ಶಾಸನದಲ್ಲಿದೆ. ಜನಪದವಾದರು ಬಳಸಿ ಬಳಸಿಕೊಂಡು ಬರುವ ಊರಾದ ಕಾರಣ ಸುತ್ತೂರು ಎಂದು ಹೆಸರಾಯಿತು. ಅಲ್ಲದೆ ಸುತ್ತೂರು ನಾಮ ವಿಜಯನಗರದ ಕಾಲದ ದಾಖಲೆಗಳಲ್ಲಿ ಉಲ್ಲೇಖವಾಗಿದೆ[೧೫].

ಸುತ್ತೂರಿನ ಐತಿಹಾಸಿಕ ಹಿನ್ನೆಲೆಯನ್ನು ನೋಡಿದಾಗ ೧೧ನೇ ಶತಮಾನದ ಆರಂಭದಲ್ಲಿ ಶ್ರೋತ್ರಿಯೂರೆಂದು ಪ್ರಸಿದ್ಧವಾಗಿದ್ದ ಈ ಸ್ಥಳಕ್ಕೆ ಅನೇಕ ಶತಮಾನಗಳ ಇತಿಹಾಸವಿದೆ ಎನ್ನಬಹುದು. ಈ ಗ್ರಾಮವು ಶ್ರೋತ್ರಿಯೊರೆಂದು, ಶ್ರುತಿ, ಆಗಮವೇದ ಮೊದಲಾದವುಗಳಲ್ಲಿ ಪಾರಂಗತವಾಗಿದ್ದ ವಿದ್ವಾಂಸರ ಸ್ಥಳವೊಂದಾಗಿತ್ತೆಂದು ತಿಳಿದುಬರುತ್ತದೆ [೧೫ಎ]. ಅಂದರೆ ೧೧ನೇ ಶತಮಾನ ಮತ್ತು ಅದಕ್ಕೂ ಹಿಂದೆ ಈ ಊರು ಬ್ರಾಹ್ಮಣರ ಪ್ರಮುಖ ವಾಸಸ್ಥಾನವಾಗಿದ್ದು ವೈಷ್ಣವ ಪರಂಪರೆಯನ್ನು ಪಸರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿತ್ತು. ಆದರೆ ೧೨ನೇ ಶತಮಾನದ ವೇಳೆಗೆ ಹೊಯ್ಸಳರ ಒಂದನೆಯ ನರಸಿಂಹನ ದಂಡನಾಯಕನಾದ ಲಕ್ಷ್ಮಯ್ಯ ಈ ಊರನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು (ಕ್ರಿ.ಶ.೧೧೬೯). ಅಲ್ಲದೆ ಇಲ್ಲಿ ಒಂದು ಶೈವ ದೇವಾಲಯವನ್ನು ನಿರ್ಮಿಸಿದನು[೧೬]. ಇದೇ ಇಂದಿನ ಸೋಮೇಶ್ವರ ದೇವಾಲಯವೆನ್ನಲಾಗಿದೆ. ಅವನು ಸರ್ವಧರ್ಮ ಸಮನ್ವಯ ಕಾರನಾಗಿದ್ದು ಇತರ ಧರ್ಮಗಳಿಗೂ ಸಹ ಪ್ರೋತ್ಸಾಹ ನೀಡಿದನು. ಇವನ ಕಾಲದಲ್ಲಿ ಜೈನ ಧರ್ಮವೂ ಸಹ ಸುತ್ತೂರಿನ ಪ್ರಮುಖ ಧರ್ಮಗಳಲ್ಲಿ ಒಂದಾಗಿತ್ತು ಎಂಬುದನ್ನು ಇಲ್ಲಿ ದೊರೆತಿರುವ ಅನೇಕ ಜೈನಶಿಲ್ಪಗಳು ದೃಢೀಕರಿಸಿವೆ ಹಾಗೂ ಇಲ್ಲಿ ಜೈನಬಸದಿಗಳು ನಿರ್ಮಾಣವಾಗಿದ್ದ ಅವಶೇಷಗಳು ಸಹ ದೊರೆತಿವೆ. ಆದರೆ ಈಗ ಇಲ್ಲಿನ ಜೈನಶಿಲ್ಪಗಳನ್ನು ಪಕ್ಕದ ಊರಾದ ಬಿಳುಗಲಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಮತ್ತೆ ಕೆಲವು ಸುತ್ತೂರಿನ ವಸ್ತುಸಂಗ್ರಹಾಲಯದಲ್ಲಿವೆ. ಆದರೆ ಸುತ್ತೂರಿನ ಇತಿಹಾಸ ಇಬ್ಬರು ಮಹಾವ್ಯಕ್ತಿಗಳಿಂದ ಆರಂಭವಾಗುತ್ತದೆ. ಅವರೆಂದರೆ ಒಬ್ಬರು ಶ್ರೀ ಶಿವರಾತ್ರೀಶ್ವರರು, ಮತ್ತೊಬ್ಬರು ರಾಜೇಂದ್ರ ಚೋಳರು.[೧೭]

ದಕ್ಷಿಣ ಭಾರತದ ಮಹಾಸಾಮ್ರಾಜ್ಯಗಳಲ್ಲಿ ತಂಜಾವೂರಿನ ಚೋಳ ಸಾಮ್ರಾಜ್ಯವೂ ಸಹ ಒಂದು. ಅವರ ರಾಜಲಾಂಛನ ಹುಲಿ. ಚೋಳರ ದೊರೆಗಳಲ್ಲಿ ಅತ್ಯಂತ ಪ್ರಬಲನಾದ ದೊರೆ ರಾಜೇಂದ್ರ ಚೋಳ. ಇವನು ಅಧಿಕಾರಕ್ಕೆ ಬಂದ ನಂತರ ವಿಜಯಯಾತ್ರೆ ಕೈಗೊಂಡು ಎಲ್ಲಾ ಕಡೆ ವಿಜಯಗಳನ್ನು ಸಾಧಿಸಿ ಕರ್ನಾಟಕದ ತಲಕಾಡಿನ ಕಡೆ ತನ್ನ ಸೈನ್ಯವನ್ನು ಮುನ್ನಡೆಸಿದನು. ಆಗ ತಲಕಾಡನ್ನು ಗಂಗರ ದೊರೆಯಾದ ೪ನೇ ರಾಚಮಲ್ಲನು ಆಳುತ್ತಿದ್ದನು. ರಾಜೇಂದ್ರ ಚೋಳನು ಸೈನ್ಯಸಮೇತ ಮೊದಲು ಗರಳಪುರಿ (ನಂಜನಗೂಡು) ಕ್ಷೇತ್ರಕ್ಕೆ ಪೂಜೆ ಸಲ್ಲಿಸಿ ಪೂರ್ವಾಭಿಮುಖವಾಗಿ ಹೊರಟು ಶ್ರೋತ್ರಿಯೂರನ್ನು (ಸುತ್ತೂರು) ತಲುಪಿದನು. ತುಂಬಿ ಹರಿಯುತ್ತಿದ್ದ ಕಪಿಲೆ ಸುತ್ತಲಿನ ಪ್ರದೇಶವನ್ನು ಸಮೃದ್ಧಿಗೊಳಿಸಿದ್ದಳು. ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಹರಿದು ಬಂದ ಕಪಿಲೆ ಇಲ್ಲಿ ಉತ್ತರಕ್ಕೆ ತಿರುಗಿ ಹರಿದು ಮುಂದೆ ಮತ್ತೆ ಪೂರ್ವದ ಕಡೆ ಹರಿದುಹೋಗಿತ್ತು. ಅಂದರೆ ಈ ಸ್ಥಳವನ್ನು ಬಿಟ್ಟು ಮುಂದಕ್ಕೆ ಹೋಗುವುದಕ್ಕೆ ಕಪಿಲೆಗೆ ಇಚ್ಛೆ ಇಲ್ಲವೇನೋ, ಆದ್ದರಿಂದಲೇ ಇಲ್ಲಿಯೇ ಸುತ್ತುತಿದೆ ಎಂಬ ಭಾವನೆ ಬರುತ್ತಿತ್ತು. ಇದರಿಂದಾಗಿ ಈ ಊರಿಗೆ ಸುತ್ತೂರು ಎಂಬ ಹೆಸರು ಬಂದಿತು. ರಾಜೇಂದ್ರ ಚೋಳ ಆ ನಿಸರ್ಗ ಸೌಂದರ್ಯವನ್ನು ಆಸ್ವಾದಿಸುತ್ತಾ ಬರುತ್ತಿದ್ದ. ಆದರೆ ಅವನು ಏರಿದ್ದ ಕುದುರೆಯ ನಡಿಗೆ ಹಿಂದಿನ ರೀತಿಯದಾಗಿರಲಿಲ್ಲವೆಂದು ಅವನಿಗೆ ಅನಿಸತೊಡಗಿತು. ರಾಜನ ನಿಯಂತ್ರಣಕ್ಕೆ ಒಳಪಡದೆ ನದಿಯ ಬಳಿಯಲ್ಲಿರುವ ಮಂಟಪದ ಹತ್ತಿರಕ್ಕೆ ಬಂದು ಅದಕ್ಕೆ ಪ್ರದಕ್ಷಿಣೆ ಹಾಕಲಾರಂಭಿಸಿತು. ಹೀಗೆ ಕುದುರೆ ಪ್ರದಕ್ಷಿಣೆ ಹಾಕಿದುದರಿಂದ ಈ ಊರಿಗೆ 'ಪ್ರದಕ್ಷಿಣಪುರ' ವೆಂದು ಹೆಸರಾಯಿತು. ಕುದುರೆಯ ನಡವಳಿಕೆಯಿಂದ ಆಶ್ಚರ್ಯಚಕಿತನಾದ ರಾಜೇಂದ್ರಚೋಳ ಅಲ್ಲಿ ಏನಿರಬಹುದೆಂದು ತಿಳಿಯಲು ಇಚ್ಛೆಪಟ್ಟು ಕುದುರೆಯಿಂದ ಇಳಿದು ತನ್ನ ಸೈನಿಕರನ್ನು ಆ ಮಂಟಪವನ್ನು ಗಿಡಗಂಟೆಗಳಿಂದ ತೆರವುಗೊಳಿಸಲು ಆಜ್ಞೆ ಮಾಡಿದನು. ಸಂಜೆಯಾದುದರಿಂದ ಕೆಲಸವನ್ನು ನಿಲ್ಲಿಸಿದರು. ಆ ರಾತ್ರಿ ತುಂಬಾ ಮಳೆಯಾಗಿ ಕಪಿಲೆಯಲ್ಲಿ ಪ್ರವಾಹ ತುಂಬಿ ಹರಿಯತೊಡಗಿತು. ಮರುದಿನ ಮಧ್ಯಾಹ್ನದ ಹೊತ್ತಿಗೆ ಪ್ರವಾಹ ಇಳಿಮುಖವಾಗಿ ಮಂಟಪ ನಿಚ್ಚಳವಾಗಿ ಕಾಣತೊಡಗಿತು. ಸೈನಿಕರು ರಾಜನಿಗೆ ವಿಚಾರ ಮುಟ್ಟಿಸಿದರು. ರಾಜೇಂದ್ರಚೋಳನು ಮಂಟಪದ ಬಳಿ ಬಂದು ಅಲ್ಲಿನ ದೃಶ್ಯವನ್ನು ನೋಡಿ ಸ್ತಂಭೀಭೂತನಾದನು. ಅಲ್ಲಿ ಇಷ್ಟಲಿಂಗದಲ್ಲಿಯೇ ದೃಷ್ಟಿಯನ್ನು ಕೇಂದ್ರೀಕರಿಸಿದ ಯೋಗಿಯೊಬ್ಬರು ಮಂಟಪದ ಮಧ್ಯದಲ್ಲಿ ಕುಳಿತಿರುವುದನ್ನು ನೋಡಿ ಭಕ್ತಿಪರವಶನಾಗಿ ಯತಿಗಳಿಗೆ ವಂದಿಸಿದನು. ಆವರೇ ಸುತ್ತೂರು ಶ್ರೀಮಠದ ಆದಿಗುರುಗಳಾದ ಶ್ರೀ ಶಿವರಾತ್ರೀಶ್ವರರು[೧೮]. ಇವರ ಮಾತುಗಳಿಂದ ಪ್ರಭಾವಿತನಾದ ರಾಜೇಂದ್ರಚೋಳ ಗಂಗರಾಜ್ಯದ ಮೇಲೆ ದಂಡೆತ್ತಿ ಹೋಗುವ ಆಸೆಯನ್ನು ಬಿಟ್ಟು ಗಂಗರ ದೊರೆ ರಾಚಮಲ್ಲನೊಂದಿಗೆ ಸ್ನೇಹ ಸಂಬಂಧವನ್ನು ಹೊಂದಿದನು ಮತ್ತು ಶಿವರಾತ್ರೀಶ್ವರರಿಂದ ಊರಿನಲ್ಲಿ ಒಂದು ಮಠವನ್ನು ಸ್ಥಾಪಿಸುವಂತೆ ಕೋರಿಕೊಂಡನು.

ಆ ಮಠವೇ ಮುಂದೆ ಶ್ರೀ ಶಿವರಾತ್ರೀಶ್ವರ ವೀರಸಿಂಹಾಸನ ಮಠವೆಂದು ಪ್ರಸಿದ್ಧಿಯನ್ನು ಪಡೆಯಿತು. ರಾಜೇಂದ್ರ ಚೋಳನ ಕುದುರೆ ಶಿವರಾತ್ರೀಶ್ವರರನ್ನು ಪ್ರದಕ್ಷಿಣೆ ಹಾಕಿದ್ದರಿಂದ ಶ್ರೋತ್ರಿಯೂರು ಮುಂದೆ ಸೊತ್ತಿಯೂರು, ಸುತ್ತೂರು ಎಂದು ಹೆಸರನ್ನು ಪಡೆದುಕೊಂಡಿತು.

ಸುತ್ತೂರಿನ ಅಧ್ಯಯನಕ್ಕಾಗಿ ಶಿಲಾಶಾಸನಗಳು ೧೦ನೇ ಶತಮಾನದಿಂದ ೧೮ನೇ ಶತಮಾನದವರೆಗೆ ಲಭಿಸುತ್ತವೆ. ಎಫಿಗ್ರಾಫಿಯಾ ಕರ್ನಾಟಕದ ೩ನೇ ಸಂಪುಟದಲ್ಲಿ ೨೫ ಪ್ರಕಟಿತ ಶಾಸನಗಳು ಇವೆ. ತಂಜಾವೂರಿನ ಚೋಳರು, ದೋರಸಮುದ್ರದ ಹೊಯ್ಸಳರು, ವಿಜಯನಗರ ಪ್ರಾಂತ್ಯಾಧಿಕಾರಿಗಳು, ಮೈಸೂರಿನ ಒಡೆಯರು ಮತ್ತು ಕೆಲವು ಚಿಕ್ಕ ಚಿಕ್ಕ ಪಾಳೇಗಾರರು. ಉದಾ: ಉಮ್ಮತ್ತೂರು, ಹದಿನಾಡು ಪಾಳೇಗಾರರು. ರಾಜಕೀಯವಾಗಿ ಸುತ್ತೂರು ಮತ್ತು ಸುತ್ತಲಿನ ಪ್ರದೇಶಗಳೊಂದಿಗೆ ಸಂಪರ್ಕವನ್ನು ಸಾಧಿಸಿದ್ದರು. ಈ ರಾಜಕೀಯ ಸಂಪರ್ಕವೇ ಸುತ್ತೂರಿನಲ್ಲಿ ಸಾಂಸ್ಕೃತಿಕ ಪರಿಸರದ ಸೃಷ್ಟಿಗೆ ಕಾರಣವಾಯಿತು. ಆದ್ದರಿಂದ ರಾಜಕೀಯ ಸಂತತಿಗಳು ಬಹಳ ಪ್ರಾಮುಖ್ಯತೆ ಹೊಂದಿವೆ. ವಿವಿಧ ಸಂತತಿಗಳಿಗೆ ಸೇರಿದ ಶಾಸನಗಳ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ.

ಕ್ರ.ಸಂ.	ಸಂತತಿ	ಶಾಸನಗಳ ಕಾಲ
೧	? (ಬಹುಶಃ ಗಂಗರ ಕಾಲದ್ದು)	ಕ್ರಿ.ಶ. ೧೦ನೆ ಶತಮಾನ[೧೯]
೨	? (ಬಹುಶಃ ಗಂಗರ ಕಾಲದ್ದು)	ಕ್ರಿ.ಶ. ೧೦ನೆ ಶತಮಾನ[೨೦]
೩	ಚೋಳ	ಕ್ರಿ.ಶ. ೧೦೧೫–೧೬[೨೧]
೪	ಚೋಳ	ಕ್ರಿ.ಶ. ೧೦೩೨[೨೨]
೫	ಹೊಯ್ಸಳ	ಕ್ರಿ.ಶ. ೧೧೧೨[೨೩]
೬	ಹೊಯ್ಸಳ	ಕ್ರಿ.ಶ. ೧೧೬೯[೨೪]
೭	ಹೊಯ್ಸಳ	ಕ್ರಿ.ಶ. ೧೧೯೬–೯೭[೨೫]
೮	ಹೊಯ್ಸಳ	ಕ್ರಿ.ಶ. ೧೨೬೪[೨೬]
೯	ಹೊಯ್ಸಳ	ಕ್ರಿ.ಶ. ೧೨೬೪[೨೭]
೧೦	ಹೊಯ್ಸಳ	ಕ್ರಿ.ಶ. ೧೨೬೪[೨೮]
೧೧	ಹೊಯ್ಸಳ	ಕ್ರಿ.ಶ. ೧೨೬೪[೨೯]
೧೨	ಹೊಯ್ಸಳ	ಕ್ರಿ.ಶ. ೧೨೬೪[೩೦]
೧೩	ಹೊಯ್ಸಳ	ಕ್ರಿ.ಶ. ೧೨೬೪[೩೧]
೧೪	ಹೊಯ್ಸಳ	ಕ್ರಿ.ಶ. ೧೨೬೪[೩೨]

೧೫	ಹೊಯ್ಸಳ	ಕ್ರಿ.ಶ. ೧೨೭೭[೩೩]
೧೬	?	ಕ್ರಿ.ಶ. ೧೩ನೇ ಶತಮಾನ[೩೪]
೧೭	?	ಕ್ರಿ.ಶ. ೧೩ನೇ ಶತಮಾನ[೩೫]
೧೮	?	ಕ್ರಿ.ಶ. ೧೩ನೇ ಶತಮಾನ[೩೬]
೧೯	ವಿಜಯನಗರ	ಕ್ರಿ.ಶ. ೧೫೦೩[೩೭]
೨೦	ವಿಜಯನಗರ	ಕ್ರಿ.ಶ. ೧೫೩೦[೩೮]
೨೧	ಒಡೆಯರು	ಕ್ರಿ.ಶ. ೧೫೮೯[೩೯]
೨೨	ವಿಜಯನಗರ/ಒಡೆಯರು	ಕ್ರಿ.ಶ. ೧೫೯೩ ಶಕ ೧೫೧೫[೪೦]
೨೩	ಉಮ್ಮತ್ತೂರು ಪಾಳೆಯಗಾರರು	ಕ್ರಿ.ಶ. ೧೬ನೇ ಶತಮಾನ[೪೧]
೨೪	ಒಡೆಯರು	ಕ್ರಿ.ಶ. ೧೬೭೧[೪೨]
೨೫	ಒಡೆಯರು	ಕ್ರಿ.ಶ. ೧೭೭೧[೪೩]

ಮೇಲಿನ ಪಟ್ಟಿಯಿಂದ ತಿಳಿದುಬರುವ ಅಂಶವೇನೆಂದರೆ, ಗಂಗ ಮತ್ತು ಚೋಳರ ಕಾಲದ ನಾಲ್ಕು ಶಾಸನಗಳು, ಹೊಯ್ಸಳರ ಕಾಲದ ೧೪ ಶಾಸನಗಳು, ವಿಜಯನಗರದ ಎರಡು, ಉಮ್ಮತ್ತೂರಿನ ಪಾಳೇಗಾರರ ಒಂದು ಮತ್ತು ಮೈಸೂರು ಒಡೆಯರ ನಾಲ್ಕು ಶಾಸನಗಳು ಎಂಬುದಾಗಿವೆ. ರಾಜಕೀಯ ಪ್ರತಿಕ್ರಿಯೆಯ ದೃಷ್ಟಿಯಿಂದ ಕ್ರಿ.ಶ. ೧೧೧೨ರಿಂದ ೧೨೭೭ರವರೆಗಿನ ಹೊಯ್ಸಳರ ಕಾಲದ ಶಾಸನಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಚೋಳರ ಕಾಲದ ಕೇವಲ ಎರಡು ಶಾಸನಗಳು ದೊರೆತಿದ್ದರೂ ಸಹ ಅವು ಐತಿಹಾಸಿಕ ದೃಷ್ಟಿಯಿಂದ ತಮ್ಮದೇ ಅದಂತಹ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

ಹೊಯ್ಸಳರ ೧೧೬೯ರ ಶಾಸನದ ಪ್ರಕಾರ ದೊರೆಯಾದ ಮೊದಲನೇ ನರಸಿಂಹನ ಪ್ರಧಾನಿಯಾದ ಲಕುಮಯ್ಯನ (ಲಕ್ಷ್ಮಯ್ಯ) ಪ್ರಮುಖ ಸ್ಥಳವಾಗಿತ್ತೆಂದೂ ಹಾಗೂ ಹೊಯ್ಸಳರ ಉಪಪ್ರಾಂತ್ಯ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. ಇವನು ಧರ್ಮಭೀರುವಾಗಿದ್ದು ಸೋಮೇಶ್ವರ ಮತ್ತು ನಾರಾಯಣ (ನಾಗಕೇಶವ) ದೇವಾಲಯಗಳನ್ನು ಕಟ್ಟಿಸಿದನೆಂಬ[೪೪] ಉಲ್ಲೇಖವಿದೆ. ಇವರ ದಾಖಲೆಗಳಲ್ಲಿ ಸೊತ್ತಿಯೂರು ಎಂದು ಸುತ್ತೂರನ್ನು ಹೆಸರಿಸಲಾಗಿದೆ.

ಈ ಊರಿನಲ್ಲಿ ಪ್ರಾಚೀನ ಪರಂಪರೆಯ ಒಂದು ವೀರಶೈವ ಮಠವಿದ್ದು, ಇದರ ಸ್ಥಾಪನೆಯ ಬಗ್ಗೆ ಈಗಾಗಲೇ ಚರ್ಚಿಸಿದ್ದೇವೆ. ಈ ಮಠದ ಪ್ರಾಚೀನತೆ ೧೦ನೆ ಶತಮಾನದ ಮಧ್ಯಭಾಗಕ್ಕೆ ಹೋಗಿದೆ. ನಂಜನಗೂಡಿನ ಮತ್ತು ೧೦೩೨-೧೯೦೦ರ ಶಾಸನದಲ್ಲಿ ಉಕ್ತವಾಗಿರುವ ಈಶಾನೇಶ್ವರ ಒಡೆಯರ್ ಎಂಬುವರು ಕಂಚಿಯ ರಾಜೇಂದ್ರ ಚೋಳನಿಗೆ ರಾಜಗುರುವಾಗಿದ್ದರೆಂದು ಶಾಸನ ತಿಳಿಸುತ್ತದೆ[೪೫].

ಮೇಲಿನ ಅಂಶಗಳಲ್ಲದೆ ಸುತ್ತೂರಿನ ಗ್ರಾಮದೇವತೆಯಾದ ಸುತ್ತೂರಮ್ಮಳ ಬಗ್ಗೆ ಜನಗಳಲ್ಲಿ ಅನೇಕ ಕಥೆಗಳಿವೆ. ಅವುಗಳಲ್ಲಿ ಒಂದು ಈ ರೀತಿ ಇದೆ. ಸುತ್ತೂರಮ್ಮ ಮತ್ತು ಹೊಸಕೋಟೆಯ ಕಾಳಿಕಾಂಬರ ನಡುವೆ ಊರಿನ ಮಹತ್ವದ ಬಗ್ಗೆ ಚರ್ಚೆಯಾಗಿ, ಚರ್ಚೆ ವಿಕೋಪಕ್ಕೆ ತಿರುಗಿ ಸುತ್ತೂರಮ್ಮ "ಹತ್ತೂರು ಮುಳುಗಿದರೂ ಸುತ್ತೂರು ಮುಳುಗುವುದಿಲ್ಲ"ವೆಂದು[೪೬] ಪ್ರತಿಜ್ಞೆ ಮಾಡಿ ಕಲ್ಲಾಗಿ ಸುತ್ತೂರಿನಲ್ಲಿ ನೆಲೆ ನಿಂತಳೆಂದು ಐತಿಹ್ಯವಿದೆ. ಅಲ್ಲದೆ ಅದೇ ರೀತಿಯಲ್ಲಿ ಸುತ್ತೂರಿನ ನಾಲ್ಕನೇ ಗುರುಗಳಾದ ಶ್ರೀ ಸಿದ್ಧನಂಜ ದೇಶಿಕೇಂದ್ರ ಮಹಾಸ್ವಾಮಿಗಳ ಕಾಲದಲ್ಲಿ ಮಹಾಶರಣನಾದ ಮರಿದೇವರು ಅಥವಾ ಮಹದೇಶ್ವರರು ಮಹದೇಶ್ವರ ಬೆಟ್ಟದಲ್ಲಿ ನೆಲೆನಿಲ್ಲುವ ಮೊದಲು ಸುತ್ತೂರಿಗೆ ಬಂದಿದ್ದರು. ಇಲ್ಲಿ ಅವರಿಗೆ ರಾಗಿ ಬೀಸುವ ಕಾಯಕವನ್ನು ವಹಿಸಲಾಯಿತು. ಮಹದೇಶ್ವರ ತಮ್ಮ ತಪಃಶ್ಶಕ್ತಿಯಿಂದ ಖಂಡುಗ ಖಂಡುಗ ರಾಗಿಯನ್ನು ಕೆಲವೇ ಕ್ಷಣದಲ್ಲಿ ಬೀಸಿಬಿಡುತ್ತಿದ್ದರು ಎಂಬುದಾಗಿ ಮೌಖಿಕ ದಾಖಲೆಗಳಲ್ಲಿ ದಾಖಲಾಗಿದೆ. ಇಂದಿಗೂ ಸಹ ಸುತ್ತೂರಿನಲ್ಲಿ ಮಹದೇಶ್ವರರು ಬೀಸಿದ ರಾಗಿ ಕಲ್ಲು[೪೭] ಮತ್ತು ಅವರು ಬಳಸಿದ್ದರೆನ್ನಲಾದ ಕೆಲವು ವಸ್ತುಗಳಿದ್ದು, ಮಹದೇಶ್ವರರ ಗದ್ದಿಗೆಯೂ ಇದೆ. ಈ ಭಾಗದ ಹಾಗೂ ಕೊಳ್ಳೇಗಾಲದ ಭಾಗದ ಜನಪದರ ಹಾಡುಗಳಲ್ಲಿ ಸುತ್ತೂರು ಮತ್ತು ಮಹದೇಶ್ವರರ ಅವಿನಾಭಾವ ಸಂಬಂಧವನ್ನು ಕಾಣಬಹುದಾಗಿದೆ. ಅಂದಿನಿಂದ ಸುತ್ತೂರಿನ ಹೆಸರಿನ ಜೊತೆಗೆ ಹೊಸದೊಂದು ಗಾದೆಯ ಮಾತೇ ಹುಟ್ಟಿಕೊಂಡಿತೆನ್ನಬಹುದು. ಅದೇನೆಂದರೆ "ಸುತ್ತೂರು ಸುಖವೆಂದು ಹೋದರೆ, ಕುಕ್ಕೇಲಿ ರಾಗಿ ತುಂಬಿಟ್ಟರು" ಎಂಬುದೇ ಆಗಿದೆ. (ಇದು ಜನಪದಗಳಲ್ಲಿ ದಾಖಲಾಗಿದೆ). ಹೀಗೆ ಸುತ್ತೂರು ಅತ್ಯಂತ ಪ್ರಾಚೀನವಾದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು ೧೨ನೇ ಶತಮಾನದ ಶರಣರ ಬೀಡಾಗಿತ್ತೆಂಬುದನ್ನು ತಿಳಿಯಬಹುದಾಗಿದೆ. ಒಟ್ಟಾರೆ ಸುತ್ತೂರು ಒಂದು ಐತಿಹಾಸಿಕ ಸ್ಥಳವಾಗಿದ್ದು ತಪೋಭೂಮಿಯಾಗಿ ಇಂದಿಗೂ ಸಹ ತನ್ನ ಪ್ರಭಾವವನ್ನು ದಿಗಂತಗಳಲ್ಲಿ ಹರಡುತ್ತಿದೆ.

೧.೩. ಸುತ್ತೂರು ಶ್ರೀಮಠದ ಗುರುಪರಂಪರೆ

ಭಾರತದ ಸಾಮಾಜಿಕ ಜೀವನವು ಆಧ್ಯಾತ್ಮಿಕ ಮತ್ತು ಧಾರ್ಮಿಕ ಸಂಸ್ಥೆಗಳೊಂದಿಗೆ ನಿಕಟವಾಗಿ ತಳುಕುಗೊಂಡಿದೆ. ಜೀವನದ ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಮತ್ತು ಒಟ್ಟಾರೆ ಆರೋಗ್ಯದಾಯಕ ಸಮಾಜದ ಪ್ರಗತಿಯಲ್ಲಿ ಧಾರ್ಮಿಕ ಮುಖಂಡರು ಮಾರ್ಗದರ್ಶಕ ಶಕ್ತಿಯಾಗಿದ್ದಾರೆ. ಜಗತ್ಪ್ರಸಿದ್ದ ಹಾಗೂ ಇತಿಹಾಸ ಪ್ರಸಿದ್ಧವಾದ ಶ್ರೀ ಸುತ್ತೂರು ಮಠವು ಈ ಶ್ರೀಮಂತ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಅದಕ್ಕೆ ಸಾಕ್ಷಿಯಾಗಿದೆ.

ಶ್ರೀ ಜಗದ್ಗುರು ವೀರಸಿಂಹಾಸನ ಸುತ್ತೂರು ಮಠಕ್ಕೆ ಒಂದು ಸಾವಿರ ವರ್ಷಕ್ಕೂ ಮಿಗಿಲಾದ ಸುದೀರ್ಘ ಇತಿಹಾಸವಿದೆ. ಪ್ರಾಯಶಃ ಕರ್ನಾಟಕದಲ್ಲಿ ಕೆಲವೇ ಕೆಲವು ಮಠಗಳಿಗೆ ಈ ರೀತಿಯ ಸುದೀರ್ಘ ಇತಿಹಾಸವಿದೆ. ಇದು ಬಹು ಆಯಾಮಗಳಿಂದ ಕೂಡಿದ ಮಠವಾಗಿದೆ. ಸಾಮಾಜಿಕ ಜೀವನದ ಉನ್ನತಿಗೆ ಮಹತ್ವದ ಕೊಡುಗೆಯನ್ನು ನೀಡಿದೆ. ಶ್ರೀಮಠವು ಜನಪರ ಕಲ್ಯಾಣ

ಚಟುವಟಿಕೆಗಳು ವೀರಶೈವ ಸಮುದಾಯದ ಎಲ್ಲೆಕಟ್ಟುಗಳನ್ನು ಮೀರಿವೆಯಲ್ಲದೆ ಭಾರತೀಯ ಸಮಾಜದ ಎಲ್ಲ ಪಂಗಡಗಳನ್ನು ಒಳಗೊಂಡಂತೆ ವ್ಯಾಪಕವಾಗಿ ಮತ್ತು ಸಂಪೂರ್ಣವಾಗಿ ಆವರಿಸಿದೆ. ಅಲ್ಲದೆ ಈ ಮಠದ ಎರಡನೆಯ ಜಗದ್ಗುರುಗಳೆಂದು ಖ್ಯಾತರಾಗಿದ್ದರು. ಶ್ರೀ ಈಶಾನೇಶ್ವರ ಒಡೆಯರು ೧೧ನೇ ಶತಮಾನದ ಪೂರ್ವಾರ್ಧ ಭಾಗದಲ್ಲಿಯೇ ಕನ್ನಡ ನಾಡು ಹಾಗೂ ತಮಿಳುನಾಡುಗಳಲ್ಲಿ ವಿಖ್ಯಾತರಾಗಿರುವುದನ್ನು ಗಮನಿಸಿದರೆ, ೧೨ನೇ ಶತಮಾನದಲ್ಲಿ ಬಸವಾದಿಶರಣರಿಂದ ಧಾರ್ಮಿಕ, ಸಾಮಾಜಿಕ ಸಾಹಿತ್ಯಕ, ಆರ್ಥಿಕ ಕ್ರಾಂತಿಗಿಂತ ಮುನ್ನವೇ ಈ ಮಠ ವೀರಶೈವ ತತ್ವ ಮತ್ತು ಆದರ್ಶಗಳಿಗೆ ಹೆಸರಾಗಿತ್ತೆಂದು ತಿಳಿದುಬರುತ್ತದೆ.

ಸುತ್ತೂರು ಕಲ್ಯಾಣದ ಕ್ರಾಂತಿಯ ನಂತರ ಶರಣ ಸಂಸ್ಕೃತಿಯ ಪ್ರಚಾರದ ನೆಲೆ ಹಾಗೂ ಶರಣರ ಆಶ್ರಯತಾಣವಾಗಿದೆ. ಬಸವಾದಿಪ್ರಮಥರ ಆಶಯಗಳು, ಧ್ಯೇಯಗಳನ್ನು ಸಾಕಾರಗೊಳಿಸಿದ ಪುಣ್ಯಭೂಮಿ.

೧. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು (ಕ್ರಿ.ಶ. ೯೫೦-೧೦೫೦)

ಭಾರತದ ಯಾವುದೇ ಮಹಾಪುರುಷರ ಉದಯದ ಹಿನ್ನೆಲೆಯಲ್ಲಿ ನಮ್ಮ ಜನಪದ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಅದೇ ರೀತಿಯಲ್ಲಿ ಸುತ್ತೂರು ಶ್ರೀಮಠದ ಮೂಲಪುರುಷನಾದ ಶ್ರೀಶ್ರೀಶ್ರೀ ಶಿವರಾತ್ರೀಶ್ವರರ ಮೂಲವೂ ಇಂತಹದೇ ರೀತಿಯಲ್ಲಿರುವಂತಿದೆ.

ಭರತಖಂಡದಲ್ಲೇ ಶೈವಧರ್ಮ ತುಂಬಾ ಪುರಾತನ ಚರಿತ್ರೆಯನ್ನು ಹೊಂದಿದೆ. ಶೈವದ ಸಪ್ತ ಶಾಖೆಗಳಲ್ಲಿ (ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈಅ, ಪ್ರವರಶೈವ, ವೀರಶೈವ) ವೀರಶೈವವೂ ಒಂದು. ಇದರ ಪ್ರತಿಷ್ಠಾಪನೆಗೆ ವೀರ, ನಂದಿ, ಭೃಂಗಿ, ವೃಷಭ, ಸ್ಕಂದ – ಈ ಪ್ರಮಥರು ಕಾರಣ ಎನ್ನುತ್ತವೆ. ನಮ್ಮ ಪುರಾಣಗಳು. ಇವರು ಪರಮೇಶ್ವರನ ಪಂಚಮುಖಿಗಳೆಂದು ಪ್ರಕೀರ್ತವಾಗಿರುವ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ – ಈ ಪಂಚಮುಖಗಳಿಂದ ಉದ್ಭವರಾಗಿ ರೇಣುಕಾ, ದಾರುಕ, ಘಂಟಾಕರ್ಣ, ಗೋಕರ್ಣ, ವಿಶ್ವಕರ್ಣರೆಂದು[೮೮] ಪ್ರಸಿದ್ಧರಾಗಿ ಕಲಿಯುಗದಲ್ಲಿ ಇವರೇ ರೇವಣಸಿದ್ದ (ಬಾಳೆಹೊನ್ನೂರು), ಮರುಳಸಿದ್ಧ (ಉಜ್ಜಯಿನಿ), ಏಕೋರಾಮಾರಾಧ್ಯ (ಕೇದಾರ), ಪಂಡಿತಾರಾಧ್ಯ (ಶ್ರೀಶೈಲ), ವಿಶ್ವಾರಾಧ್ಯ (ಕಾಶಿ) ರೆಂದು ವೀರಶೈವ ಧರ್ಮದ ಇತಿಹಾಸವು ತಿಳಿಸಿಕೊಡುತ್ತದೆ[೮೯]. ಮೇಲೆ ಉಲ್ಲೇಖಿಸಿದ ಆಚಾರ್ಯರಲ್ಲಿ ಒಬ್ಬರಾದ ರೇಣುಕರ ಬಗ್ಗೆ ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅನೇಕ ಕೃತಿಗಳು ರಚಿತವಾಗಿವೆ. ಇಂತಹ ರೇಣುಕರಿಂದ ಅನುಗ್ರಹಿತರಾದವರಲ್ಲಿ ಶ್ರೀಶ್ರೀಶ್ರೀ ಶಿವರಾತ್ರೀಶ್ವರ ಭಗವತ್ಪಾದರೂ ಒಬ್ಬರು. ಇವರು ಕಪಿಲಾ ನದಿ ತೀರದಲ್ಲಿ ಮಠವೊಂದನ್ನು ಸ್ಥಾಪಿಸಿದರು. ಅದೇ ಮುಂದೆ 'ಶ್ರೀ ಸುತ್ತೂರು ಮಠ'ವೆಂದು ಹೆಸರಾಯಿತೆಂದು ಅನೇಕ ದಾಖಲೆಗಳಲ್ಲಿ ಕಂಡುಬರುತ್ತವೆ.

ಕುಂತೂರು ಶ್ರೀ ಸಂಗಪ್ಪಶಾಸ್ತ್ರಿಗಳು ರಚಿಸಿರುವ **'ಶ್ರೀ ಸುತ್ತೂರು ವೀರಸಿಂಹಾಸನ ಗುರುಪರಂಪರೆ'** ಎನ್ನುವ ಭಾಮಿನಿ ಷಟ್ಪದಿ ಕಾವ್ಯದಲ್ಲಿ ಶ್ರೀಮಠದ ಸ್ಥಾಪನೆಯ ಬಗ್ಗೆ ಮಾಹಿತಿ ಇದೆ.

ಶ್ರೀ ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಕಪಿಲಾ ನದಿಯ ತೀರದ ಸುತ್ತೂರಿನಲ್ಲಿ ತಪೋಮಗ್ನರಾಗಿದ್ದರು. ಕಂಚಿಯನ್ನು ಆಳುತ್ತಿದ್ದ ಚೋಳರಿಗೂ ಮತ್ತು ತಲಕಾಡಿನ ಗಂಗರಿಗೂ ಸಾಮ್ರಾಜ್ಯದ ವಿಸ್ತರಣೆಗಾಗಿ ಮತ್ತು ಕಾವೇರಿ ನದಿಯ ಬಯಲಿನ ಫಲವತ್ತಾದ ಭೂಮಿಗಾಗಿ ತಲಕಾಡಿನ ಗಂಗರಿಗೂ ಯುದ್ದಗಳು ನಡೆಯುತ್ತಿದ್ದವು. ಚೋಳ ದೊರೆ ರಾಜರಾಜ ಚೋಳನು ತನ್ನ ಮಗನಾದ ರಾಜೇಂದ್ರ ಚೋಳನ ನಾಯಕತ್ವದಲ್ಲಿ ತಲಕಾಡಿನ ಗಂಗರನ್ನು ಸೋಲಿಸಲು ಒಂದು ಸೈನ್ಯವನ್ನು ಕಳುಹಿಸಿದನು. ಈ ವಿಷಯವನ್ನು ತಿಳಿದ ಗಂಗರ ದೊರೆ ರಾಚಮಲ್ಲನೂ ಕೂಡ ಯುದ್ಧಕ್ಕೆ ಸಿದ್ಧನಾದನು. ರಾಜೇಂದ್ರ ಚೋಳನು ಮೊದಲು ಗರಳಪುರಿಗೆ (ನಂಜನಗೂಡು) ಹೋಗಿ ಅಲ್ಲಿ ನಂಜುಂಡೇಶ್ವರನಿಗೆ ಪೂಜೆ ಸಲ್ಲಿಸಿ ನಂತರ ಸುತ್ತೂರಿಗೆ ಬಂದನು. ಆಗ ಇದು ಶ್ರೋತ್ರಿಯೂರು ಎಂದು ಹೆಸರಾಗಿತ್ತು. ರಾಜೇಂದ್ರ ಚೋಳನ ಕುದುರೆಯು ತನ್ನ ಒಡೆಯನ ಹಿಡಿತವನ್ನು ಮೀರಿ ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಸುತ್ತಲು (ಪ್ರದಕ್ಷಿಣೆ ಹಾಕಲು) ಆರಂಭಿಸಿತು. ಇದರಿಂದ ಆಶ್ಚರ್ಯಚಕಿತನಾದ ರಾಜೇಂದ್ರ ಚೋಳನ ಕುದುರೆಯಿಂದ ಇಳಿದು ಆ ಸ್ಥಳವನ್ನು ವೀಕ್ಷಿಸಿದನು. ಅಲ್ಲಿ ಶಿವಯೋಗದಲ್ಲಿ ನಿರತರಾಗಿದ್ದ ಶ್ರೀಗುರುಗಳನ್ನು ನೋಡಿ ಅವರಿಂದ ಪ್ರಭಾವಿತನಾಗಿ ಯುದ್ಧವನ್ನು ನಿಲ್ಲಿಸಿದನು. ಇದನ್ನು ತಿಳಿದ ಗಂಗರ ದೊರೆ ರಾಚಮಲ್ಲನೂ ಸಹ ಗುರುಗಳ ದರ್ಶನಕ್ಕೆ ಬಂದನು. ಕಂಚಿಯ ಚೋಳರಿಗೂ ಮತ್ತು ತಲಕಾಡಿನ ಗಂಗರಿಗೂ ಇದ್ದ ದ್ವೇಷ ಅಳಿದು ಸ್ನೇಹಸೌಹಾರ್ದಗಳು ಉಂಟಾದವು. ಈ ಇಬ್ಬರು ರಾಜರುಗಳ ಪ್ರಾರ್ಥನೆಯನ್ನು ಮನ್ನಿಸಿ ಅಲ್ಲಿಯೇ ನೆಲೆನಿಲ್ಲಲು ನಿಶ್ಚಯಿಸಿ ಶ್ರೀ ಶಿವರಾತ್ರೀಶ್ವರರ 'ವೀರಸಿಂಹಾಸನ ಮಠ'ವನ್ನು ಶ್ರೋತ್ರಿಯೂರು, ಸೊತ್ತಿಯೂರು, ಪ್ರದಕ್ಷಿಣಪುರ[೪೨ಎ], ಇತ್ಯಾದಿ ಹೆಸರುಗಳಿಂದ ಪ್ರಸಿದ್ಧವಾಗಿರುವ ಸುತ್ತೂರಿನಲ್ಲಿ ಸಂಸ್ಥಾಪಿಸಿದರು. ಶ್ರೀ ಶಿವರಾತ್ರೀಶ್ವರರು ಮಹೋನ್ನತ ಸಾತ್ವಿಕ ಕ್ರಾಂತಿಯ ರೂವಾರಿಗಳಾಗಿ ಮುಂದಿನ ದಿನಗಳಲ್ಲಿನ ಎಲ್ಲ ಶಿವಪರ ಸಂಚಲನಗಳ ಸುಪ್ತಶಕ್ತಿಯಾಗಿ ಆದಿಜಗದ್ಗುರುಗಳಾಗಿ ಜನಮಾನಸದಲ್ಲಿ ವಿರಾಜಮಾನರಾಗಿದ್ದಾರೆ.

೨. ಈಶಾನೇಶ್ವರ ಒಡೆಯರು (೧೦೩೦-೧೦೯೦)

ಚೋಳಚಕ್ರವರ್ತಿ ರಾಜೇಂದ್ರ ಚೋಳನ ರಾಜಗುರುಗಳಾಗಿ ಶ್ರೀಪೀಠದ ಎರಡನೇ ಗುರುಗಳಾಗಿ ತಮ್ಮ ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಾಧನೆಗಳಿಂದ ಜನಮಾನಸದಾಗಸದಲ್ಲಿ ಪ್ರಜ್ವಲಿಸಿದವರು ಶ್ರೀ ಈಶಾನೇಶ್ವರ ಒಡೆಯರು. ಇವರ ಬಗ್ಗೆ ಹೆಚ್ಚಿನ ಚಾರಿತ್ರಿಕ ದಾಖಲೆಗಳು ಲಭ್ಯ ಇವೆ[೫೦]. ಆದರೆ ಈ ಶಾಸನಗಳು ಅಲ್ಲಲ್ಲಿ ನಾಶವಾಗಿರುವುದರಿಂದ ಸಂಪೂರ್ಣ ವಿವರಣೆಗಳು ತಿಳೀದುಬರುವುದು ಕಷ್ಟವಾದರೂ ಮುಖ್ಯ ಅಂಶಗಳನ್ನು ತಿಳಿಯಲು ತೊಂದರೆಯಿಲ್ಲ. ಚೋಳಚಕ್ರವರ್ತಿ ರಾಜೇಂದ್ರ ಚೋಳನ ಮೂವತ್ತೊಂದನೆಯ ಪಟ್ಟಾಭಿಷೇಕ ಉತ್ಸವದ ಸಂದರ್ಭದಲ್ಲಿ (ಶಕ ವರ್ಷ ೯೫೫, ಅಂಗೀರಸ ಸಂವತ್ಸರ, ಕಾರ್ತೀಕ ಎರಡನೇ ಸೋಮವಾರ, ರೋಹಿಣಿ ನಕ್ಷತ್ರ, ೨೩.೧೧.೧೦೩೨)[೫೧], 'ರಾಜೇಂದ್ರ ಚೋಳದೇವ ಗುರುಕ್ಕಳ್' ಆದ ಈಶಾನ ಈಶ್ವರ ಮುಡಿಯಾರ್ಗ್ಗೆ ನೀಡಿರುವ ದಾನದತ್ತಿಗಳ ವಿವರ ಸಿಕ್ಕುತ್ತದೆ. ಈ ಉತ್ಸವದಲ್ಲಿ "ಶ್ರೋತ್ರೀಯ ಗ್ರಾಮದ ಮಹಾಜನಮುಂ" ಎಲ್ಲರೂ

ಭಾಗವಹಿಸಿರುವುದು ಗಮನಾರ್ಹವಾದ ಅಂಶ. ಇದರಿಂದ ಸುತ್ತೂರಿನ ಸಮಸ್ತರ ಬಗ್ಗೆ ಚೋಳರಾಜನಿಗೆ ಎಂತಹ ಗೌರವವಿತ್ತು ಎನ್ನುವುದು ವೇದ್ಯವಾಗುತ್ತದೆ.

ರಾಜೇಂದ್ರ ಚೋಳನು ಸಪತ್ನೀಕನಾಗಿ ಕಾಶಿಯಾತ್ರೆಗೆ ಹೋಗಿದ್ದಾಗ ಅಲ್ಲಿ ಶ್ರೀ ಈಶಾನೇಶ್ವರರ ದರ್ಶನವಾಗಿ ಅವರಿಂದ ಪ್ರಭಾವಿತನಾಗಿ ಅವರನ್ನು ಕಂಚಿಗೆ ಆಗಮಿಸುವಂತೆ ಭಕ್ತಿಪೂರ್ವಕವಾಗಿ ಕೋರಿಕೊಂಡನು. ಅವನ ಕೋರಿಕೆಗೆ ಸ್ಪಂದಿಸಿದ ಈಶಾನ ಒಡೆಯರು ಕಾಶಿಯಿಂದ ಕಂಚಿಗೆ ಹೋದರು. ತಂಜಾವೂರಿನಲ್ಲಿ ಅವರಿಗಾಗಿ ಒಂದು ಬೃಹತ್ ಮಠವೊಂದನ್ನು ನಿರ್ಮಿಸಿಕೊಟ್ಟನು ಹಾಗೂ ರಾಜಗುರುಗಳಿಗೆ ಸಲ್ಲಬೇಕಾದ ಮರ್ಯಾದೆಗಳನ್ನೆಲ್ಲಾ ಅವರಿಗೆ ಸಲ್ಲಿಸಿದನು. ರಾಜೇಂದ್ರ ಚೋಳನಿಂದ ಶ್ರೀ ಶಿವರಾತ್ರೀಶ್ವರ ಮಹಿಮೆಯನ್ನು ಕೇಳಿ ಪುಳಕಿತರಾದ ಈಶಾನರು ಅವರ ಬಳಿ ಶಿಷ್ಯತ್ವ ಮಾಡುವ ಬಯಕೆಯಿಂದ ತಮಿಳುನಾಡಿನಿಂದ ಹೊರಟು ಅನೇಕ ಶೈವ ಕ್ಷೇತ್ರಗಳನ್ನು ಸಂದರ್ಶಿಸಿ ಕೊನೆಗೆ ಸುತ್ತೂರಿಗೆ ಆಗಮಿಸಿದರು. ಇವರನ್ನು ನೋಡಿದ ಶಿವರಾತ್ರೀಶ್ವರರಿಗೆ ಆನಂದ ಉಂಟಾಗಿ ಅವರನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದರು.

ಅಂಗೀರಸ ಸಂವತ್ಸರ ವಿಜಯದಶಮಿಯಂದು ರಾಜೇಂದ್ರ ಚೋಳನ ನೇತೃತ್ವದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ಶಿವಾಚಾರ್ಯರು ಈಶಾನ್ಯರಿಗೆ ಪೀಠದ ಪಟ್ಟಾಧಿಕಾರವನ್ನು ನೀಡಿದರು. ಇದೇ ವರ್ಷ ಚೋಳರಾಜನ ಮೂವತ್ತೊಂದನೆಯ ರಾಜ್ಯ ಪಟ್ಟಾಭಿಷೇಕವೂ ಸುತ್ತೂರಿನಲ್ಲಿಯೇ ನಡೆಯಿತು. ರಾಜನು ಸುತ್ತೂರಿನ ಮೂಲಸ್ಥಾನೇಶ್ವರ ಸ್ವಾಮಿಗೆ ಅನೇಕ ದಾನದತ್ತಿಗಳನ್ನು ನೀಡಿದರು. ನಗರದ ಪ್ರಮುಖರಾದ ಚಾವುಂಡಯ್ಯ, ಮಾದಯ್ಯಶೆಟ್ಟಿ, ಹೆಂಡತಿ ಗುಂಡಂಬೆ, ದೋರಯ್ಯ ಮುಂತಾದವರು ಈಶಾನೇಶ್ವರರಿಗೆ ಭೂಮಿ ಕಾಣಿಕೆಯನ್ನು ಕೊಟ್ಟು ಶಾಸನ ಹಾಕಿಸಿದರು[೫೨].

ಈಶಾನರ ಗುರುಗಳು ಈಶಾನೇಶ್ವರರಾಗಿ, ರಾಜಪೂಜಿತರಾಗಿ, 'ರಾಜಗುರು'ವಾಗಿ ಗೌರವಿಸಲ್ಪಟ್ಟರು. ರೇಣುಕಗಿರಿಗೆ (ಸಿದ್ಧಗಿರಿ – ಬೆಂಗಳೂರಿನ ಸಮೀಪವಿದೆ) ಹೋಗಿ ಅಲ್ಲಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ರೇಣುಕರ ರಥೋತ್ಸವವನ್ನು ಸಾಂಗವಾಗಿ ನಡೆಯುವಂತೆ ಮಾಡಿದರು. ಮುಂದೆ ಮುಡುಕುತೊರೆಗೆ ಆಗಮಿಸಿ ಸುತ್ತೂರು ಪೀಠದ ವತಿಯಿಂದ ಅಲ್ಲಿಯೂ ಉತ್ಸವವು ನಡೆಯುವಂತೆ ವ್ಯವಸ್ಥೆ ಮಾಡಿದರು. ಈಗಲೂ ಸಹ ಸುತ್ತೂರಿನಿಂದ ಮುಡುಕುತೊರೆಗೆ ಕಪಿಲಾ ನದಿ ನೀರನ್ನು ತೆಗೆದುಕೊಂಡು ಹೋಗಿ ಅಭಿಷೇಕ ಮಾಡುವ ಪದ್ಧತಿ ರೂಢಿಯಲ್ಲಿದೆ.

ಈಶಾನೇಶ್ವರದ ತಮ್ಮ ಗುರುಗಳ ಸಮಾಧಿಯ ಕೆಲವು ವರ್ಷಗಳ ನಂತರ ತಮ್ಮ ಶಿಷ್ಯರಲ್ಲಿ ತೇಜಸ್ವಿಯಾಗಿದ್ದ ಶ್ರೀ ನಿಜಲಿಂಗ ಶಿವಾಚಾರ್ಯರೆನ್ನುವವರಿಗೆ ಪೀಠದ ಅಧ್ಯಕ್ಷ ಪದವಿಯನ್ನು ಅನುಗ್ರಹಿಸಿ ಶ್ರೀಶೈಲಕ್ಕೆ ತೆರಳಿ ಅಲ್ಲಿಯೇ ತಮ್ಮ ಅಂತ್ಯ ಕಾಲವನ್ನು ಕಳೆದು ಶಿವೈಕ್ಯರಾದರು.

೩. ಶ್ರೀ ಜಗದ್ಗುರು ನಿಜಲಿಂಗ ಶಿವಾಚಾರ್ಯರು (೧೧೯೦-೧೧೧೦)

ಇವರು ಬಹುಕಾಲ ಶ್ರೀಮಠದಲ್ಲಿ ಉಳಿದು ಅದರ ಶ್ರೇಯೋಭಿವೃದ್ಧಿಯ ಕಾರ್ಯವನ್ನು ಕೈಗೊಂಡನು. ಇವರ ಕಾಲ ಅಂದರೆ ೧೨ನೇ ಶತಮಾನ ಕರ್ನಾಟಕದ ಸಮಾಜೋಧಾರ್ಮಿಕ ಚರಿತೆಯಲ್ಲಿ ತುಂಬಾ ಮಹತ್ವದ ಸ್ಥಾನ ಪಡೆದಿದೆ. ಕರ್ನಾಟಕದ ಕಲ್ಯಾಣದಲ್ಲಿ ನಡೆದ ಕ್ರಾಂತಿಯಿಂದಾಗಿ ಅಲ್ಲಿದ್ದ ಅನೇಕ ಶರಣರು ಚದುರಿಹೋಗುವ ಅನಿವಾರ್ಯ ಪರಿಸ್ಥಿತಿ ಉಂಟಾಯಿತು. ಹೀಗೆ ಚದುರಿಂದ ಶರಣರಲ್ಲಿ ಕೆಲವರು ಹಳೆಯ ಮೈಸೂರು ಪ್ರಾಂತ್ಯದ ಕಡೆಗೆ ಬಂದರು. ಪ್ರಾಯಶಃ ಸುತ್ತೂರು ಮಠದ ಹಿರಿಮೆಯನ್ನು ತಿಳಿದ 'ಮುಸುಡಿ ಚೌಡಯ್ಯ'ನವರು ತಮ್ಮ ಕೆಲವು ಅನುಚರರೊಡನೆ ಸುತ್ತೂರು ಶ್ರೀಮಠಕ್ಕೆ ಬಂದುದರ ಬಗ್ಗೆ ದಾಖಲೆಗಳಿವೆ. ಇದರಿಂದ ಶ್ರೀಮಠದ ಕೀರ್ತಿ ಕರ್ನಾಟಕದ ಉದ್ದಗಲಕ್ಕೂ ಹಬ್ಬಿತ್ತು ಎನ್ನುವುದು ತಿಳಿದುಬರುತ್ತದೆ.

ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಸುತ್ತೂರಿಗೆ ವಿಶೇಷ ಪ್ರಾಶಸ್ತ್ಯ ದೊರಕಿತು. ಚೋಳರನ್ನು ಸೋಲಿಸಿ ಹೊಯ್ಸಳ ರಾಜ್ಯವನ್ನು ತಲಕಾಡಿಗೆ ವಿಸ್ತರಿಸಿದ್ದು ಹೊಯ್ಸಳರ ವಿಷ್ಣುವರ್ಧನನ ಮಗನಾದ ಒಂದನೇ ನರಸಿಂಹನು ತಲಕಾಡನ್ನು ಆಳುತ್ತಿದ್ದನು. ಅವನ ದಂಡನಾಯಕನಾಗಿದ್ದ ಲಕುಮಯ್ಯ (ಲಕ್ಷ್ಮಯ್ಯ)ನೆಂಬುವನು ಸುತ್ತೂರಿನಲ್ಲಿ ನಾಗಕೇಶವ ದೇವರನ್ನು ಪ್ರತಿಷ್ಠಾಪಿಸಿದನೆಂದು ಕ್ರಿ.ಶ. ೧೧೬೯ರ ಶಾಸನದಿಂದ[೫೩] ತಿಳಿದುಬರುತ್ತದೆ. ಅಲ್ಲದೆ ಸುತ್ತೂರು ಹೊಯ್ಸಳ ಸಾಮ್ರಾಜ್ಯದ ಒಂದು ಉಪಪ್ರಾಂತೀಯ ರಾಜಧಾನಿಯಾಗಿತ್ತೆಂದು ಹಾಗೂ ಲಕುಮಯ್ಯನೇ ಸುತ್ತೂರಿನಲ್ಲಿ ಮಹಾ-ಮಂಡಲಾಧಿಪತಿಯಾಗಿದ್ದನೆಂದೂ ಮೇಲಿನ ಶಾಸನದಿಂದ ತಿಳಿದುಬರುತ್ತದೆ.

ಶ್ರೀ ನಿಜಲಿಂಗ ಶಿವಾಚಾರ್ಯರು ಮುಸುಡಿ ಚೌಡಯ್ಯನವರಿಂದ ಪ್ರಭಾವಿತರಾಗಿ ತಮ್ಮ ಶಿಷ್ಯಂದಿರಲ್ಲಿ ಒಬ್ಬರಾದ ಶ್ರೀ ಸಿದ್ಧನಂಜ ದೇಶಿಕೇಂದ್ರರಿಗೆ ಪೀಠಾಧಿಕಾರವನ್ನು ನೀಡಿ ಚೌಡಯ್ಯನವರ ಕೊತೆ ಕಲ್ಯಾಣದ ಕಡೆ ಪ್ರಯಾಣ ಬೆಳೆಸಿ ಅಲ್ಲಿ ಬಯಲಾದರು ಎಂದು ತಿಳಿದುಬರುತ್ತದೆ.

೪. ಶ್ರೀ ಸಿದ್ಧನಂಜ ದೇಶಿಕೇಂದ್ರ ಮಹಾಸ್ವಾಮಿಗಳು (೧೧೭೦-೧೨೪೦)

ಇವರ ಕಾಲದಲ್ಲಿ ಈ ಭಾಗದಲ್ಲಿ ರಾಜಕೀಯ ಗೊಂದಲವೇರ್ಪಟ್ಟು ಯುದ್ಧಗಳು ನಡೆದುದಾಗಿ ತಿಳಿದುಬರುತ್ತದೆ. ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಕಾಲದಲ್ಲಿ ಸೊತ್ತಿಯೂರು ಪ್ರಬಲ ಯುದ್ಧರಂಗವಾಗಿದ್ದಂತೆ ತೋರುತ್ತದೆ. ಈ ಸಂದರ್ಭದ ವೀರರ ವೃತ್ತಾಂತಗಳನ್ನು ಹೇಳುತ್ತಿರುವ ಅನೇಕ ವೀರಗಲ್ಲುಗಳು ಈ ಪ್ರದೇಶದಲ್ಲಿ ಸಿಕ್ಕಿವೆ. ಅವುಗಳಲ್ಲಿ ಒಂದನ್ನು ಇಲ್ಲೆ ಉಲ್ಲೇಖಿಸಬಹುದಾಗಿದೆ.

......................ಯತ್ತಿರಲು ಶ್ರೀಮನ್ಮಹಾ ಪ್ರಧಾನ ಹಿರಿಯ ನಾಯಕ ಪಮಂಚ್ಚಯ್ಯಂಗಳ ಬೆಸದಿಂ ಮಲ್ಲಸೆಟ್ಟಿ ಮಗನೆಟ್ಟಗೆ ಚಿಕಣ ಕಣಿಯಾಲ ಬವರದೊಳು ಮೂದಲಿಸಿ ಹೂತು ಹಲಬರಂ ತಿವಿದ ಸುರಲೋಕಪ್ರಾಪ್ತ..........." ಎಂಬ ನುಡಿಗಳು ಅಂದಿನ ಯುದ್ಧದ ಭೀಕರತೆಯನ್ನು ಎತ್ತಿ

ಸಾರುತ್ತದ[೫೪]. ಇತ್ತೀಚೆಗೆ ಯುದ್ಧಭೂಮಿಯನ್ನು ಸಂಶೋಧಿಸುವ ಕಾರ್ಯದಲ್ಲಿ ಸಂಶೋಧಕರು ನಿರತರಾಗಿದ್ದಾರೆ.

ಶ್ರೀ ಸಿದ್ಧನಂಜ ದೇಶಿಕೇಂದ್ರರ ಕಾಲದಲ್ಲಿ ಶ್ರೀ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರ ಮಾಡಲ್ಪಟ್ಟಿತು. ಅನೇಕ ಬ್ರಾಹ್ಮಣರೂ ಸಹ ಈ ದೇವಾಲಯಕ್ಕೆ ದಾನ-ದತ್ತಿಗಳನ್ನು ನೀಡುತ್ತಿದ್ದರು. ಶ್ರೀ ಸಿದ್ಧನಂಜ ದೇಶಿಕೇಂದ್ರರು ಮಹಾಅನುಭಾವಿಗಳಾಗಿದ್ದಂತೆಯೇ ವೇದವೇದಾಂತ ಶಾಸ್ತ್ರಪಾರಂಗತರೂ ಆಗಿದ್ದರು. ಇವರು ರಚಿಸಿದ **"ಪರಮಶಿವಾಧಿಕ್ಯ ಚೂಡಾಮಣಿ"** ಗ್ರಂಥ ಒಂದು ಶ್ರೇಷ್ಠ ಮಟ್ಟದ ಕೃತಿಯಾಗಿದೆ.

ಇವರ ಕಾಲದಲ್ಲೇ ಮಹದೇಶ್ವರರು ಶ್ರೀಶೈಲದಿಂದ ಸುತ್ತೂರಿಗೆ ಬಂದು ಹಲವು ವರ್ಷಗಳೇ ಇಲ್ಲಿ ಇದ್ದು ಹಿರಿಯರಾದ ಸಿದ್ಧನಂಜ ದೇಶಿಕೇಂದ್ರರಿಂದ ಶಿವಯೋಗ ರಹಸ್ಯವನ್ನು ಕಲಿತುಕೊಂಡು ಅನೇಕ ಪವಾಡಗಳನ್ನು ಮಾಡಿ ಮೆರೆದ ವಿಚಾರಗಳು ಜನರ ಮನದಲ್ಲಿ ಇಂದಿಗೂ ಹಸಿರಾಗಿಯೇ ಇದೆ. ಉದಾ: ಹೆಂಟೆಗೊದ್ದ, ಹಲ್ಲಿ, ಕಪ್ಪೆ, ಚೇಳು ಮುಂತಾದುವುಗಳನ್ನು ಸುಂದರ ಪುಷ್ಪಗಳನ್ನಾಗಿ ಮಾಡಿದ್ದು ಹಾಗೂ ಖಂಡುಗ ಖಂಡುಗ ರಾಗಿಯನ್ನು ಕ್ಷಣದಲ್ಲಿ ಬೀಸಿದ್ದು ಇಂದಿಗೂ ಜನಪದ ಹಾಡುಗಳಲ್ಲಿ ನಾವು ಕೇಳಬಹುದಾಗಿದೆ. ಇದರಿಂದ ತಿಳಿದುಬರುವುದೇನೆಂದರೆ ಕಲ್ಯಾಣದ ನಂತರ ಸುತ್ತೂರು ಪ್ರಮುಖ ಧಾರ್ಮಿಕ ನೆಲೆಯಾಗಿ ಕಾಯಕತತ್ವವನ್ನು ಆಚರಣೆಗೆ ತಂದು ಬಸವಣ್ಣನವರ ಆದರ್ಶಗಳನ್ನು ಪೋಷಿಸಿಕೊಂಡು ಬಂದಿರುವುದು ತಿಳಿದುಬರುತ್ತದೆ ಹಾಗೂ ಸುತ್ತೂರಿನ ಬಗ್ಗೆ ಒಂದು ಗಾದೆಯೂ ಸಹ ಹುಟ್ಟಿಕೊಂಡಿತು. ಅದೇನೆಂದರೆ "ಸುತ್ತೂರು ಸುಖ ಅಂತ ಬಂದರೆ ಕುಕ್ಕೇಲಿ ರಾಗಿ ತುಂಬಿಟ್ಟರು"[೫೫] ಎಂಬುದಾಗಿದೆ.

ಮಹಾದೇಶ್ವರರು ಸುತ್ತೂರಿನಿಂದ ಹೊರಟು ಕುಂತೂರಿಗೆ ಹೋಗಿ ಅಲ್ಲಿ ೧೩ ವರ್ಷ ನೆಲೆಸಿ ನಂತರ ಮುಂದೆ ನಡುಮಲೆಯ ಸಾಲೂರು ಮಠಕ್ಕೆ ಹೋಗಿ ನೆಲೆಸಿದರು. ಇತ್ತ ಶ್ರೀ ಸಿದ್ಧನಂಜ ದೇಶಿಕೇಂದ್ರ ಮಹಾದೇಶ್ವರರನ್ನು ಬಿಟ್ಟಿರಲಾರದೆ ತಮ್ಮ ಉತ್ತರಾಧಿಕಾರಿಯಾಗಿ ಕಪಿನಿ ನಂಜುಂಡದೇಶಿಕರನ್ನು ಆಯ್ಕೆ ಮಾಡಿ ಪಟ್ಟಾಧಿಕಾರ ಮಾಡಿ ಎಪ್ಪತ್ತೇಳು ಮಲೆಗಳ ನಡುವೆ ಇರುವ ಸಾಲೂರು ಮಠಕ್ಕೆ ಹೋಗಿ ಮಹದೇಶ್ವರರ ಜೊತೆಯಲ್ಲಿ ನೆಲೆಸಿ ಅಲ್ಲಿಯೇ ಲಿಂಗೈಕ್ಯ ಹೊಂದುತ್ತಾರೆ.

೫. ಶ್ರೀ ಕಪಿನಿ ನಂಜುಂಡ ದೇಶಿಕೇಂದ್ರರು (೧೨೪೦-೧೩೧೬)

ಇವರ ಕಾಲದಲ್ಲಿ ಸುತ್ತೂರಿನಲ್ಲಿ ಶ್ರೀ ಮಹದೇಶ್ವರರ ಗದ್ದಿಗೆಯನ್ನು ನಿರ್ಮಾಣ ಮಾಡಲಾಯಿತು. ಆದಿಜಗದ್ಗುರುಗಳವರ ಜಾತ್ರೆಯ ಸಂದರ್ಭದಲ್ಲಿ ಇಂದಿಗೂ ಸುತ್ತೂರಿನಲ್ಲಿ ಮಹದೇಶ್ವರರ ಮುತ್ತಿನ ಪಲ್ಲಕ್ಕಿ ಉತ್ಸವ, ಕೊಂಡೋತ್ಸವಗಳು ನಡೆಯುತ್ತಿರುವುದನ್ನು ಕಾಣಬಹುದು. ಇವರು ಅಪ್ರತಿಮ ಸಾಹಿತ್ಯ ಪ್ರೇಮಿಗಳು. ಇವರ ಬಗ್ಗೆ ಮಾಹಿತಿ ನೀಡುವ 'ಅಮುಗಿ ದೇವಯ್ಯಗಳ ಸಾಂಗತ್ಯ' ಎಂಬ ಕೃತಿಯನ್ನು ಶಿವಲಿಂಗಾರಾಧ್ಯ ಎಂಬುವವನು **'ಶಿವಾನಂದ'** ಎಂಬ

ಕಾವ್ಯನಾಮದಿಂದ ಬರೆದಿದ್ದಾನೆ. ಇವನಿಗೆ ಪ್ರೇರಣೆ, ಪ್ರೋತ್ಸಾಹವನ್ನು ನೀಡಿದವರೇ ಕಪಿನಿ ನಂಜುಂಡ ದೇಶಿಕೇಂದ್ರರು. ಇವರ ಬಗ್ಗೆ ಅವನು ತನ್ನ ಕೃತಿಯಲ್ಲಿ ಈ ರೀತಿ ಹೇಳಿದ್ದಾನೆ.

ಸುತ್ತೂರು ಸಿಂಹಾಸನಾಧೀಶ ಕಪ್ಪಿನ
ಮುಕ್ತಿದಾಯಕ ನಂಜುಂಡೇಶ್ವರ
ಹಸ್ತದಿ ಜನಿಸಿದ ಭೃತ್ಯ ಶಿವಾನಂದ
ವಿಸ್ತರಿಸಿದ ನಿಜಕಥೆಯ[೫೬]

ಹೀಗೆ ಕಪಿನಿ ನಂಜುಂಡರು ಕವಿ ಮತ್ತು ಸಾಹಿತಿಗಳಿಗೆ ಪ್ರೋತ್ಸಾಹ ನೀಡಿ ಸಾಹಿತ್ಯದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಸುತ್ತೂರು ಇವರ ಕಾಲದಲ್ಲಿ ವಿದ್ವಜ್ಜನರ ಕಾರ್ಯಕ್ಷೇತ್ರ ಹಾಗೂ ಆಶ್ರಯ ತಾಣವಾಯಿತು.

<u>೬. ಶ್ರೀ ಚನ್ನವೀರ ದೇಶಿಕೇಂದ್ರ ಮಹಾಸ್ವಾಮಿಗಳು (೧೩೧೦-೧೩೪೦)</u>

ಇವರು ಶ್ರೀಮಠದ ಪರಂಪರೆಯ ಆರನೇ ಗುರುಗಳು. ಶಿವಪೂಜಾನಿಷ್ಠರೂ, ತತ್ವಜಿಜ್ಞಾಸು ಪ್ರವೀಣರೂ ಹಾಗೂ ನಿಸರ್ಗದ ಆರಾಧಕರೂ ಆಗಿದ್ದರು. ಜ್ಞಾನದಾಸೋಹ ಮತ್ತು ಧರ್ಮೋಪದೇಶಗಳನ್ನು ಆರಂಭಿಸಿದರು. ಇವರು ತಮಿಳುನಾಡಿನ ತಾಳವಾಡಿ ಫಿರ್ಕಾದ ಕೊಂಗಳ್ಳಿ ಶಾಂತಮಲ್ಲಿಕಾರ್ಜುನನ ಪ್ರಭಾವಕ್ಕೆ ಒಳಪಟ್ಟು ತಮ್ಮ ಶಿಷ್ಯರಲ್ಲಿ ಒಬ್ಬರಾದ ಶ್ರೀ ಸಿದ್ಧಮಲ್ಲ ಶಿವಾಚಾರ್ಯರಿಗೆ ಪಟ್ಟಕಟ್ಟಿ ತಮಗೆ ಇಷ್ಟವಾದ ಕೊಂಗಳ್ಳಿ ಬೆಟ್ಟದಲ್ಲಿ ನೆಲೆಸಿ ಅಲ್ಲಿಯೇ ಲಿಂಗೈಕ್ಯರಾದರು. ಕೊಂಗಳ್ಳಿ ಬೆಟ್ಟಕ್ಕೆ ಸ್ತ್ರೀಯರಿಗೆ ಪ್ರವೇಶವಿಲ್ಲದಿರುವುದು ಈಗಲೂ ಸಹ ನಡೆದುಕೊಂಡು ಬರುತ್ತಿದೆ.

<u>೭. ಶ್ರೀ ಸಿದ್ಧಮಲ್ಲ ಶಿವಾಚಾರ್ಯರು (೧೩೪೦-೧೪೭೦)</u>

ಸುತ್ತೂರು ಮಠದ ಪರಂಪರೆಯ ಏಳನೇ ಜಗದ್ಗುರುಗಳಾದ ಶ್ರೀ ಸಿದ್ಧಮಲ್ಲ ಶಿವಾಚಾರ್ಯರ ಕಾಲದಲ್ಲಿ ರಾಜಕೀಯ ಸ್ಥಿರತೆ ಇದ್ದು ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನದ ಆಕರ್ಷಣೆಗೆ ಜನರು ಮಾರುಹೋಗಿದ್ದರು. ಅಲ್ಲದೆ ವೀರಶೈವ ಧರ್ಮ ೧೨ನೇ ಶತಮಾನದ ನಂತರ ಮತ್ತೊಮ್ಮೆ ಗರಿಬಿಚ್ಚಿ ನಿಂತಕಾಲ. ಶಿವಶರಣರೂ, ಹರಗುರು ಚರಮೂರ್ತಿಗಳೂ ಮತ್ತೊಮ್ಮೆ ಕನ್ನಡ ನಾಡಿನಾದ್ಯಂತ ಧರ್ಮಜಾಗೃತಿಯನ್ನುಂಟು ಮಾಡಿದ ಕಾಲ. ಈ ಮಹಾಕಾರ್ಯದಲ್ಲಿ ಶ್ರೀ ಸಿದ್ಧಮಲ್ಲ ಶಿವಾಚಾರ್ಯರೂ ಸಹ ತೊಡಗಿಕೊಂಡಿದ್ದರು. ಆ ಕಾಲಕ್ಕಾಗಲೇ ಚಾಮರಾಜನಗರ ಪಕ್ಕದಲ್ಲಿದ್ದ ಹರದನಹಳ್ಳಿಯ ಸೋಸಲೆ ಪೀಠದ ಗುರುಗಳಾಗಿದ್ದ ತೋಂಟದ ಸಿದ್ಧಲಿಂಗ ಯತಿಗಳು ೧೨ನೇ ಶತಮಾನದಲ್ಲಿ ರಚಿನೆಯಾಗಿ ಅಲ್ಲಲ್ಲಿ ಚದುರಿಹೋಗಿದ್ದ ವಚನ ಸಾಹಿತ್ಯದ ಸಂಗ್ರಹ ಮತ್ತು ಸಂಪಾದನೆಯ ಕಾರ್ಯದಲ್ಲಿ ತೊಡಗಿದ್ದರು. ಇವರು ಸಿದ್ಧಮಲ್ಲ ಶಿವಾಚಾರ್ಯರ ಕೀರ್ತಿಯನ್ನು ಕೇಳಿ ತಮ್ಮ ಶಿಷ್ಯರೊಂದಿಗೆ ಸುತ್ತೂರಿಗೆ ಬಂದು ಸ್ವಲ್ಪ ಕಾಲ ನೆಲೆಸಿರುವ ಸಿದ್ಧಲಿಂಗ ಯತಿಗಳ ಪ್ರಭಾವಕ್ಕೆ ಒಳಗಾದ ಸಿದ್ಧಮಲ್ಲ ಶಿವಾಚಾರ್ಯರು ತಮ್ಮ ಶಿಷ್ಯ ಶ್ರೀ ಪರ್ವತೇಂದ್ರ ಶಿವಾಚಾರ್ಯರಿಗೆ ಪಟ್ಟ ಕಟ್ಟಿ

ಸಿದ್ಧಲಿಂಗ ಯತಿಗಳ ಜೊತೆಯಲ್ಲಿ ಪ್ರಯಾಣ ಬೆಳೆಸಿದನು. ಈ ಶರಣ ಸಮೂಹದಲ್ಲಿ ಸುತ್ತೂರು ಶ್ರೀಮಠದ ೧೧ನೇ ಪೀಠಾಧಿಪತಿಗಳಾಗಿದ್ದು ಘನಲಿಂಗ ದೇವರೂ ಸಹ ಇದ್ದಿದ್ದು ವಿಶೇಷ. ಸಿದ್ಧಮಲ್ಲ ಶಿವಾಚಾರ್ಯರು ಸಿದ್ಧಲಿಂಗೇಶ್ವರರನ್ನು ಹಿಂಬಾಲಿಸಿಕೊಂಡು ಹೋದ ವಿಷಯ ವಿರಕ್ತ ತೋಂಟದಾರ್ಯರು ರಚಿಸಿದ 'ಸಿದ್ದೇಶ್ವರ ಧರ್ಮ'ದಿಂದ[೫೭] ತಿಳಿದುಬರುತ್ತದೆ.

<u>೮. ಪರ್ವತೇಂದ್ರ ಶಿವಾಚಾರ್ಯರು (೧೪೭೦-೧೪೯೦)</u>

ಎಂಟನೆಯ ಪೀಠಾಧಿಪತಿಯಾಗಿ ಅಧಿಕಾರಕ್ಕೆ ಬಂದ ಪರ್ವತೇಂದ್ರ ಶಿವಾಚಾರ್ಯರು ಗುಪ್ತಯೋಗಿಗಳಾಗಿ, ಸಾಧಕರಾಗಿ ಬಾಳಿದವರು. ಈ ಭಾಗದ ಜನರ ನಾಲಗೆಯಲ್ಲಿ ಇವರು 'ಪವಾಡದಪ್ಪ'ನಾಗಿ ಹೆಸರಾದವರು. ಜನರ ರೋಗರುಜಿನಗಳನ್ನು, ಮನಕ್ಲೇಷಗಳನ್ನು ಪರಿಹರಿಸಿ ಭವರೋಗನಿವಾರಕ ಎಂಬ ಹೆಸರನ್ನು ಗಳಿಸಿಕೊಂಡಿದ್ದರು. ಇವರು ಭಂಡಾರಿ ಬಸಪ್ಪ ಒಡೆಯರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿ ಸುತ್ತೂರಿನಲ್ಲಿ ಶಿವೈಕ್ಯರಾದರು.

<u>೯. ಶ್ರೀ ಭಂಡಾರಿ ಬಸಪ್ಪ ಒಡೆಯರು (೧೪೯೦-೧೫೧೫)</u>

ಪರ್ವತೇಂದ್ರ ಶಿವಾಚಾರ್ಯರ ಉತ್ತರಾಧಿಕಾರಿಯಾಗಿ ಸುತ್ತೂರು ಮಠದ ಪರಂಪರೆಯಲ್ಲೆ ೯ನೆಯವರಾಗಿ ಅಧಿಕಾರವಹಿಸಿಕೊಂಡರು. ಅಧಿಕಾರಕ್ಕೆ ಬಂದಾಗ ಶ್ರೀಮಠಕ್ಕೆ ದಿನೇ ದಿನೇ ಬರುವ ಭಕ್ತರ ಸಂಖ್ಯೆ ಹೆಚ್ಚಾಗುತ್ತಿತ್ತು. ಈ ಭಕ್ತರ ಅಭೀಷ್ಟಗಳನ್ನು ನೆರವೇರಿಸಲು 'ಕಾಯಕ' ಮತ್ತು 'ದಾಸೋಹ' ಎಂಬ ಎರಡು ಮೂಲಮಂತ್ರಗಳನ್ನು ಸಮರ್ಪಕವಾಗಿ ತಂದವರೇ ಇವರು. ಇವರ ಸೇವೆಯ ಸಾಧನೆಯನ್ನು ಸಮಕಾಲೀನವಾದ ಅನೇಕ ಬರಹಗಳಲ್ಲಿ ಹಾಗೂ ಶಾಸನಗಳಲ್ಲಿ ಉಲ್ಲೇಖವಾಗಿರುವುದು ಕಂಡುಬರುತ್ತದೆ. ಇವರ ಕಾಲದಲ್ಲೇ ಶ್ರೀ ಸುತ್ತೂರು ಮಠಕ್ಕೂ ವಿಜಯನಗರದ ಅರಸರಿಗೂ ಹೆಚ್ಚಿನ ಸಂಬಂಧವೇರ್ಪಟ್ಟಂತೆ ಕಾಣುತ್ತದೆ. ಈ ಅವಧಿಯಲ್ಲಿ ದೇವನೂರನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡು ವಿಜಯನಗರದ ಮಹಾಮಾಂಡಲೀಕನಾಗಿ ಆಳುತ್ತಿದ್ದ ಸಾಳವ ನರಸಿಂಹನ ಸಂಬಂಧಿಯಾದ ಲಿಂಗರಾಜ ಎಂಬುವವನು ಸುತ್ತೂರಿನ ಮಠದೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದುದು ೧೫೧೫ರ ಶಾಸನದಲ್ಲಿ[೫೮] ಕಂಡುಬರುತ್ತದೆ.

ಭಂಡಾರಿ ಬಸಪ್ಪ ಒಡೆಯರು ನಂಜನಗೂಡಿನ ಕಪಿಲಾ ಮತ್ತು ಕೌಂಡಿನ್ಯ ನದಿಗಳ ಸಂಗಮ ಸ್ಥಾನದಲ್ಲಿ ಮೂಲಸ್ಥಾನೇಶ್ವರ ದೇವಾಲಯವನ್ನು ನಿರ್ಮಿಸಿ ಸಂಗಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದರು[೫೯]. ಅಲ್ಲಿ ನಿತ್ಯದ ಪೂಜಾಕೈಂಕರ್ಯವನ್ನು ಮಾಡಲು ಸಿರಿಗಿರಿ ಒಡೆಯರು ಎನ್ನುವವರನ್ನು ನಿಯೋಜಿಸಿದರು ಎಂದು ಶಾಸನದಿಂದ ತಿಳಿದುಬರುತ್ತದೆ.[೬೦] ವಿಜಯನಗರದ ಅರಸರು ಪೂಜ್ಯ ಗುರುಗಳ ಮಾನವೀಯ ಕೆಲಸಗಳನ್ನು ಗುರುತಿಸಿದ್ದರು. ಧರ್ಮ ಮತ್ತು ತತ್ವಶಾಸ್ತ್ರದಲ್ಲಿ ಅಗಾಧವಾದ ಪಾಂಡಿತ್ಯವಿದ್ದಿತು.

ಪ್ರವಾಸಪ್ರಿಯರಾಗಿದ್ದ ಇವರು ತಮ್ಮ ಶಿಷ್ಯರೊಡಗೂಡಿ ಆಗಾಗ ಪ್ರವಾಸ ಕೈಗೊಳ್ಳುತ್ತಿದ್ದರು. ಇವರು ತಮ್ಮ ಕೊನೆಯ ದಿನಗಳಲ್ಲಿ ಕೊಡಗಿನ ಪ್ರಶಾಂತವಾದ ಪ್ರಾಂತ್ಯಗಳಲ್ಲಿ ಕಳೆದು ಕಾಳಿಂಗರಡಿ ಎಂಬಲ್ಲಿ ಶಿವೈಕ್ಯರಾದರು.

೧೦. ಕೂಗಲೂರು ಶ್ರೀ ನಂಜುಂಡ ದೇಶಿಕೇಂದ್ರರು (೧೫೧೩-೧೫೩೦)

೧೦ನೇ ಜಗದ್ಗುರುಗಳಾದ ಇವರು ಹದಿನೈದು ವರ್ಷಗಳ ಕಾಲ ಶ್ರೀಮಠದ ಅಧ್ಯಕ್ಷರಾಗಿದ್ದ ತಮ್ಮ ಗುರುಗಳು ಆರಂಭಿಸಿದ್ದ ಕಾಯಕ ಮತ್ತು ದಾಸೋಹಗಳನ್ನು ಅಷ್ಟೇ ಸಮರ್ಥವಾಗಿ ಮುಂದುವರಿಸಿದರು. ವಿಜಯನಗರದ ಕೃಷ್ಣದೇವರಾಯನು ಇವರ ಸಮಕಾಲೀನ. ಭದ್ರಯ್ಯನೆಂಬ ವಿಜಯನಗರದ ಅಧಿಕಾರಿ ಶ್ರೀಮಠಕ್ಕೆ ದಾನ-ದತ್ತಿಗಳನ್ನು ನೀಡಿದನು ಎಂಬುದಾಗಿ ಶಾಸನಗಳಿಂದ[೧೯] ತಿಳಿದುಬರುತ್ತದೆ. ದೇಶಸಂಚಾರ ಮಾಡುತ್ತಿದ್ದ ಘನಲಿಂಗಿ ಶಿವಯೋಗಿಗಳು ತಮ್ಮ ಸಂಚಾರವನ್ನು ನಿಲ್ಲಿಸಿ ಸುತ್ತೂರಿಗೆ ಮರಳಿ ಆಗಮಿಸಿದರು. ಇದರಿಂದ ಆನಂದತುಂದಿಲರಾದ ನಂಜುಂಡ ದೇಶಿಕೇಂದ್ರರು ಪೀಠದ ಜವಾಬ್ದಾರಿಯನ್ನು ಘನಲಿಂಗಿ ಶಿವಯೋಗಿಗಳಿಗೆ ವಹಿಸಿ ಬೆಂಗಳೂರು ಜಿಲ್ಲೆಯ ರೇವಣಸಿದ್ದೇಶ್ವರ ಬೆಟ್ಟಕ್ಕೆ ಹೋಗಿ ಅಲ್ಲಿಯೇ ಶಿವೈಕ್ಯರಾದರು.

೧೧. ಶ್ರೀ ಘನಲಿಂಗಿ ಶಿವಯೋಗಿಗಳು (೧೫೩೦-೧೫೫೦)

ಕನ್ನಡ ಸಾಹಿತ್ಯ ಲೋಕದಲ್ಲಿ ಸುತ್ತೂರು ಮಠಕ್ಕೆ ಕೀರ್ತಿಯನ್ನು ತಂದುಕೊಟ್ಟವರೇ ಶ್ರೀ ಘನಲಿಂಗಿ ಶಿವಯೋಗಿಗಳು. ವಚನಸಾಹಿತ್ಯ ಚರಿತ್ರೆಯಲ್ಲಿ ೧೫-೧೬ನೇ ಶತಮಾನ ೧೨ನೇ ಶತಮಾನದಷ್ಟೇ ಮಹತ್ವವಾದ ಕಾಲಮಾನ. ಈ ಕಾಲದಲ್ಲಿ ಸಿದ್ಧಲಿಂಗಯತಿಗಳು ತಮ್ಮ ಏಳುನೂರು ಶಿಷ್ಯೋತ್ತಮರೊಂದಿಗೆ ನಾಡಿನಾದ್ಯಂತ ಸಂಚರಿಸುತ್ತಾ ವಚನಗಳ ಸಂಕಲನ, ಪರಿಷ್ಕರಣ ಮತ್ತು ಪ್ರಚಾರಗಳನ್ನು ಮಾಡುತ್ತಾ, ಎಲ್ಲರಿಗೂ ಅವುಗಳನ್ನು ತಲುಪಿಸುವ ಕಾರ್ಯವನ್ನು ಮಾಡಿದರು. ಅಲ್ಲದೆ ಸ್ವತಃ ೭೦೦ ವಚನಗಳನ್ನು ರಚಿಸಿದರು. ಹಾಗೆ ಇವರು ಸುತ್ತೂರಿಗೂ ಬಂದು ಸಿದ್ಧಮಲ್ಲ ಶಿವಾಚಾರ್ಯರ ಆತಿಥ್ಯವನ್ನು ಸ್ವೀಕರಿಸಿ ಹೋಗುವಾಗ ಇನ್ನೂ ಬಾಲಕನಾಗಿದ್ದ ಘನಲಿಂಗಿಯನ್ನು ಸಹ ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದರು. ನಂತರ ಘನಲಿಂಗಿ ಶಿವಯೋಗಿಗಳು ಪರಿಪಕ್ವರಾಗಿ ಹಿಂದಿರುಗುವ ವೇಳೆಗೆ ಶ್ರೀ ಪರ್ವತೇಂದ್ರರು ಶ್ರೀ ಬಸಪ್ಪ ಒಡೆಯರು ಮತ್ತು ಕೂಗಲೂರು ನಂಜುಂಡ ದೇಶಿಕೇಂದ್ರರೂ ಪೀಠಾಧಿಪತಿಗಳಾಗಿ ಕಾರ್ಯನಿರ್ವಹಿಸಿದ್ದರು. ಘನಲಿಂಗಿ ಶಿವಯೋಗಿಗಳು ಕೆಲವು ವರ್ಷಗಳ ಕಾಲ ಮಠದಲ್ಲಿದ್ದು ಅನಂತರ ಮತ್ತೆ ನಾಡಿನ ಉದ್ದಗಲಕ್ಕೂ ಸಂಚರಿಸಿದರು. ಇವರು ತಮ್ಮ ಸಂಚಾರವನ್ನು ಆರಂಭಿಸುವ ಮೊದಲೇ ಇಮ್ಮಡಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ಮಾಡಿದ್ದರು. ಇವರು ತಮ್ಮ ಅಂತಿಮದಿನಗಳನ್ನು ಸಿದ್ಧಲಿಂಗಯತಿಗಳ ಜೊತೆಯಲ್ಲಿ ಎಡೆಯೂರಿನಲ್ಲಿ ಕಳೆದು ಸಮೀಪದ ಕಗ್ಗೆರೆಯಲ್ಲಿ ಶಿವೈಕ್ಯರಾದರು.

ಘನಲಿಂಗಿಗಳು ಶ್ರೇಷ್ಠ ವಚನಕಾರರಾಗಿದ್ದು ತಮ್ಮ ವಚನವೊಂದರಲ್ಲಿ ಮಠದ ಶ್ರೀ ಗುರುಪರಂಪರೆಯನ್ನು, ದೀಕ್ಷಾ ಗುರುಗಳನ್ನು, ಪರಮಗುರು ಸಿದ್ಧಲಿಂಗಯತಿಗಳ ಸಮಾಗಮವನ್ನು ಕುರಿತು ಹೇಳುತ್ತಾ ತಾವು ಆಧ್ಯಾತ್ಮದಲ್ಲಿ ಮುನ್ನಡೆದ ಮಾರ್ಗವನ್ನು ತಿಳಿಸುತ್ತಾರೆ.

"ಎಲೆ ತಂಗಿ,
ಶರಣಸತಿ ಲಿಂಗಪತಿಯಾದ ಪತಿವ್ರತಾ ಭಾವದ ಚಿಹ್ನೆ
ನಿನ್ನ ನಡೆನುಡಿಯಲ್ಲಿ ಹೊಗರುದೋರುತ್ತಿದೆ
ನಿನ್ನ ಪೂರ್ವಾಪರವಾವುದನ್ನು?
ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು
ಭಂಡಾರಿ ಬಸವಪ್ಪಡೆಯ ದೇವರು
ಆ ಭಂಡಾರಿ ಬಸವಪ್ಪಡೆಯ ದೇವರ ಶಿಷ್ಯರು ಕೂಗಲು ನಂಜಯ್ಯದೇವರು
ಆ ನಂಜಯ್ಯದೇವರ ಕರಕಮಲದಲ್ಲಿ ಉದಯವಾದ ಶರಣವೆಣ್ಣಯ್ಯ ನಾನು!
ಎನ್ನ ಗುರುವಿನ ಗುರು ಪರಮಗುರು ಪರಮಾರಾಧ್ಯ ತೋಂಟದಾರ್ಯನಿಗೆ
ಗುರುಭಕ್ತಿಯಿಂದೆನ್ನ ಶರಣು ಮಾಡಿದರು.
ಆ ತೋಂಟದಾರ್ಯನು ತನ್ನ ಕೃಪೆಯಿಂದ ತೊಟ್ಟಿಲೊಳಗೆನ್ನಂ ಮಲಗಿಸಿ
ಪ್ರಮಥಗಣಂಗಳ ವಚನಪುರುಷಪತ್ರಾರ್ಚನೆಯ
ಹಾಲುತುಪ್ಪವಂ .... ದಣಿಯಲೆರೆದು
ಅಕ್ಕರಿಂದ ರಕ್ಷಣೆಯಂ ಮಾಡಿ
'ಘನಲಿಂಗಿ' ಎಂಬ ನಾಮಕರಣಮಂ ಕೊಟ್ಟು
.... ಸಮರ್ಪಣೆಯಂ ಮಾಡಿ
ಸತ್ಯ–ಸದಾಚಾರ–ಜ್ಞಾನ–ಕ್ರೀಗಳೆಂಬ ದಿವ್ಯಾಭರಣಂಗಳಂ ಮಾಡಿಸಿ
ಅರಿವೆಂಬ ಬಣ್ಣವನಿರಿವಿಡಿದುಡಿಸಿ
ಅರ್ತಿಯ ಮೂಡಿನೆಪ್ಪ ಸಮಯದಲ್ಲಿ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ
ತನಗೆ ನಾನಾಗಬೇಕೆಂದು ಬೇಡಿ ಕಳುಹಲು
ಎಮ್ಮವಾದ ಅವರಿಂದ ಮಾತನಿಕ್ಕದಮ್ಮ[೨]

ಘನಲಿಂಗಿ ದೇವರು ೬೩ ವಚನಗಳನ್ನು ರಚಿಸಿದ್ದಾರೆ. ಘನಲಿಂಗಿದೇವರು ಮೋಹದ ಚೆನ್ನಮಲ್ಲಿಕಾರ್ಜುನ ಎಂಬ ಅಂಕಿತದಿಂದಲೇ ವಚನಗಳನ್ನು ರಚಿಸಿದ್ದಾರೆ. ಸಾಧಕರ ಆರ್ತತೆ–ತೀವ್ರತೆಯನ್ನು ವ್ಯಕ್ತಪಡಿಸುವ ಇಲ್ಲಿನ ಬಹುಪಾಲು ವಚನಗಳು ಸುದೀರ್ಘವಾಗಿವೆ. ಘನಲಿಂಗಿದೇವರ ವಚನಗಳು ವೀರಶೈವ ಧರ್ಮದತತ್ವಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಲಿಂಗಾಂಗ

ಸಾಮರಸ್ಯವನ್ನು ಬೋಧಿಸುತ್ತವೆ. ಘನಲಿಂಗಿಯ ವಚನಗಳಲ್ಲಿ ಶರಣಸತಿ, ಲಿಂಗಪಥ, ಸತಿ–ಪತಿ ಭಾಗ್ಯ, ಸಾಮರಸ್ಯವನ್ನು ಕಾಣಬಹುದು[೬೨].

೧೨. ಇಮ್ಮಡಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು (೧೫೫೦–೧೫೮೯)

ಘನಲಿಂಗಿದೇವರು ಇವರಿಗೆ ಪಂಚಮುದ್ರೆಗಳನ್ನು ನೀಡಿದರು. ಇವರು ಶ್ರೇಷ್ಠ ವಿದ್ವಾಂಸರೂ ಹಾಗೂ ಗ್ರಂಥಕಾರರೂ ಆಗಿದ್ದರು. ಇವರ ಈ ಸಾಧನೆಗೆ ಗುರುಗಳಾಗಿದ್ದ ಘನಲಿಂಗಿದೇವರ ಪ್ರೋತ್ಸಾಹವೂ ಸಹ ಕಾರಣವಾಗಿದೆ ಎನ್ನಬಹುದು. ಇವರು ಘನವಿದ್ವಾಂಸರಾಗಿದ್ದು **'ವೃಷಭೇಂದ್ರ ವಿಜಯಪುರಾಣ'**ವೆಂಬ ಗ್ರಂಥವನ್ನು ರಚಿಸಿದ್ದಾರೆ[೬೩] ಎಂದು ತಿಳಿದುಬರುತ್ತದೆ. ಇವರ ಕಾಲದಲ್ಲೂ ಸಹ ಭಕ್ತಸಮೂಹ ಹೆಚ್ಚಾಗಿ ಸುತ್ತೂರಿಗೆ ಆಗಮಿಸುತ್ತಿದ್ದರು. ಇವರೆಲ್ಲರಿಗೂ ಯಾವುದೇ ಕೊರತೆಯಾಗದಂತೆ ದಾಸೋಹಕಾರ್ಯವನ್ನು ಇವರು ನಡೆಸಿಕೊಂಡು ಬಂದರು. ಜೊತೆಗೆ ಶ್ರೀಸಾಮಾನ್ಯರ ನೈತಿಕ ಬದುಕನ್ನು ಹಸನುಗೊಳಿಸಲು ಶ್ರಮಿಸಿದರು. ಇವರ ಕಾಲದಲ್ಲಿ ಸುತ್ತೂರು ಸಾಂಸ್ಕೃತಿಕ ಕೇಂದ್ರವಾಗಿ ಪರಿವರ್ತನೆಯಾಯಿತು. ಸುತ್ತೂರಿನಲ್ಲಿಯೇ ಐಕ್ಯರಾದರು.

೧೩. ಶ್ರೀ ಚನ್ನಬಸವ ದೇಶಿಕೇಂದ್ರರು (೧೫೯೦–೧೬೦೮)

ಶ್ರೀಮಠದ ೧೩ನೇ ಪೀಠಾಧ್ಯಕ್ಷರಾದ ಇವರು ಅಧಿಕಾರಕ್ಕೆ ಬಂದಾಗ ವಿಜಯನಗರದ ವೆಂಕಟಪತಿರಾಯನು ಆಳುತ್ತಿದ್ದನು. ಇವನ ಸಾಮಂತನಾಗಿದ್ದ ೨ನೇ ರಾಮರಾಜನಾಯಕನು ಹದಿನಾರು ಪ್ರಾಂತ್ಯವನ್ನು ಆಳುತ್ತಿದ್ದನು. ಇವನ ತಾಯಿಯಾದ ಚೆನ್ನಾಜಮ್ಮನವರಿಗೆ ಭಯಂಕರ ರೋಗ ಬಂದಿತ್ತು. ಅದನ್ನು ವಾಸಿಮಾಡಲು ಯಾರಿಂದಲೂ ಸಹ ಆಗಲಿಲ್ಲ. ಚನ್ನಬಸವ ದೇಶಿಕೇಂದ್ರರು ಆ ರೋಗವನ್ನು ವಾಸಿ ಮಾಡಿದರು. ಆಗ ರಾಮರಾಜನಾಯಕರು "ಹಸುರಳ್ಳಿ" ಎಂಬ ಗ್ರಾಮವನ್ನು ದತ್ತಿಯಾಗಿ ಕೊಟ್ಟು ಶಾಸನ ಬರೆಸಿದನು.[೬೪]

ಚೆನ್ನಬಸವ ದೇಶಿಕೇಂದ್ರರೂ ಸಹ ತಮ್ಮ ಹಿರಿಯ ಗುರುಗಳಂತೆ ಸಂಚಾರಪ್ರಿಯರಾಗಿದ್ದು ಉತ್ತರ ಭಾರತದ ಯಾತ್ರೆ ಕೈಗೊಂಡು ಅಲ್ಲೇ ಬಯಲಾದರು.

೧೪. ಶ್ರೀ ಗುರುನಂಜ ದೇಶಿಕೇಂದ್ರರು (೧೬೦೮–೧೬೪೦)

ಇವರು ಪ್ರಾಚೀನಶಾಸ್ತ್ರಗಳಲ್ಲಿ ಪರಿಣತಿಯನ್ನು ಪಡೆದಿದ್ದಂತೆಯೇ ಮಂತ್ರತಂತ್ರಗಳನ್ನು ಸಹ ಚೆನ್ನಾಗಿ ಕರತಲಾಮಲಕ ಮಾಡಿಕೊಂಡಿದ್ದರು. ಇವರೂ ಸಹ ತಮ್ಮ ಹಿರಿಯರಂತೆ ಸಂಚಾರ ಕೈಗೊಂಡು ತಮ್ಮ ಕೊನೆಯ ದಿನಗಳನ್ನು ಕೇರಳದಲ್ಲಿ ಕಳೆದು ಅಲ್ಲಿಯ ಮಾಂತ್ರಿಕರುಗಳನ್ನು ಸೋಲಿಸಿ ಅವರು ಸನ್ಮಾರ್ಗದಲ್ಲಿ ಹೋಗುವಂತೆ ಮಾಡಿ ಕಪಿಲಾ ನದಿಯ ಉಗಮ ಸ್ಥಳವಾದ ಕೇರಳದ ವೈನಾಡಿನ ಬಾಣಾಸುರ ಪರ್ವತದಲ್ಲಿ ಶಿವೈಕ್ಯರಾದರು.

೧೫. ಶ್ರೀಗುರು ಚನ್ನಬಸವ ಶಿವಾಚಾರ್ಯರು (೧೬೪೦-೧೭೧೩)

ಇವರ ಕಾಲದಲ್ಲಿ ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದರು. ಅದರ ಪರಿಣಾಮವಾಗಿ ಸೋಸಲೆ ರೇವಣಸಿದ್ಧಶಾಸ್ತ್ರಿಗಳ ಮಗನಾದ ರೇವಣಾರಾಧ್ಯರ **'ಶಿವಾಧಿಕ್ಯಶಿಖಾಮಣಿ'** ಎಂಬ ಕೃತಿಗೆ ಕನ್ನಡದಲ್ಲಿ ಟೀಕೆಯನ್ನು ಬರೆಯಲಾಯಿತು. ೧೬೭೧ರ ಶಾಸನವೊಂದರಲ್ಲಿ ಇವರು ಸೋಮೇಶ್ವರ ದೇವಾಲಯಕ್ಕೆ ಮುಖಮಂಟಪವನ್ನು ಕಟ್ಟಿಸಿದರೆಂದು ತಿಳಿದುಬರುತ್ತದೆ[೬೫]. ಇವರೂ ಸಹ ಸಂಚಾರಿಗಳಾಗಿದ್ದು ಸ್ವಲ್ಪಕಾಲ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ತಪಸ್ಸಿನಲ್ಲಿ ನಿರತರಾಗಿದ್ದರು. ಈ ವಿಷಯವನ್ನು ತಿಳಿದ ಆಗಿನ ಮೈಸೂರು ಒಡೆಯರಾಗಿದ್ದ ದೊಡ್ಡದೇವರಾಜರು ಪೂಜ್ಯರ ಹತ್ತಿರ ಬಂದು ಗುರುಗಳನ್ನು ಅರಮನೆಗೆ ಆಹ್ವಾನಿಸಿ ಗೌರವಿಸಿದರು. ಅಲ್ಲದೆ ಪಶ್ಚಿಮವಾಹಿನಿಯಲ್ಲಿ ಮಠವೊಂದನ್ನು ಕಟ್ಟಿಸಿಕೊಟ್ಟರು. ಆದರೆ ಅಲ್ಲಿ ನೆಲೆನಿಲ್ಲದೆ ಪೂಜ್ಯರು ತಮ್ಮ ಶಿಷ್ಯರಾದ ಗುರುಪಂಚಾಕ್ಷರ ದೇಶಿಕೇಂದ್ರರಿಗೆ ಅಧಿಕಾರ ವಹಿಸಿ ಸಂಚಾರ ಕೈಗೊಂಡು ಶಿವನಸಮುದ್ರದ ಬಳಿ ಕಾವೇರಿ ನದಿಯ ಹತ್ತಿರದ ಮಡಿವಾಳದಲ್ಲಿ ಶಿವೈಕ್ಯರಾದರು.

೧೬. ಶ್ರೀಗುರು ಪಂಚಾಕ್ಷರ ದೇಶಿಕೇಂದ್ರರು (೧೭೧೩-೧೭೩೦)

ಇವರು ತಮ್ಮ ಜೀವಿತದ ಕೊನೆಯವರೆಗೂ ಶಿಷ್ಯವರ್ಗಕ್ಕೆ ಹಾಗೂ ಧರ್ಮಚಿಂತಕರಿಗೆ ಪಂಚಾಕ್ಷರಿ ಮಂತ್ರದ ಮಹಿಮೆಯನ್ನು ಸಾರಿದರು. ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ತಮ್ಮ ಶಿಷ್ಯರಾದ ಶ್ರೀ ಚಿದ್ಘನದೇವರಿಗೆ ಪೀಠದ ಅಧಿಕಾರವನ್ನು ವಹಿಸಿ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ಈ ಹಿಂದೆ ಸ್ಥಾಪಿತವಾಗಿದ್ದ ಮಠದಲ್ಲಿದ್ದುಕೊಂಡು ಶಿವಸಾಧನೆ ಮಾಡುತ್ತಾ ಅಲ್ಲಿಯೇ ಶಿವೈಕ್ಯರಾದರು.

೧೭. ಶ್ರೀ ಚಿದ್ಘನ ಶಿವಾಚಾರ್ಯರು (೧೭೩೦-೧೭೫೧)

ಇವರು ಸುತ್ತೂರಿನಲ್ಲಿ ಹೆಚ್ಚಿನ ದಿನಗಳಿರದೆ ಕೊಡಗಿನ ಭಕ್ತಾದಿಗಳ ಆಸೆ ಯಂತೆ ಕೊಡಗಿಗೆ ಪ್ರಯಾಣ ಬೆಳೆಸಿ ಅಲ್ಲಿಯ ಭಕ್ತರಿಗೆ ಪ್ರವಚನಗಳನ್ನು ಮಾಡಿ ಅವರ ಮೆಚ್ಚುಗೆಯನ್ನು ಪಡೆದುಕೊಂಡರು. ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಬೆಟ್ಟದಲ್ಲಿ ತಪಸ್ಸು ಮಾಡಿದರು. ನಂತರ ಕೇರಳಕ್ಕೂ ಭೇಟಿ ನೀಡಿ ಅಲ್ಲಿ ಕೆಲವು ಮಠಗಳನ್ನು ಸ್ಥಾಪಿಸಿ ನಂತರ ಸುತ್ತೂರಿಗೆ ಹಿಂತಿರುಗೆ ಕೆಲವು ದಿನಗಳ ನಂತರ ಶ್ರೀ ಚನ್ನವೀರದೇಶಿಕೇಂದ್ರರಿಗೆ ಪಟ್ಟ ಕಟ್ಟಿ ತಾವು ಶಿವಯೋಗದಲ್ಲಿ ನಿರತರಾಗಿ ಸುತ್ತೂರಿನಲ್ಲಿಯೇ ಶಿವೈಕ್ಯರಾದರು.

೧೮. ಶ್ರಿ ಚನ್ನವೀರ ದೇಶಿಕೇಂದ್ರರು (೧೭೫೦-೧೮೦೦)

ಇವರು ಪಟ್ಟಾಧಿಕಾರವನ್ನು ವಹಿಸಿಕೊಂಡಾಗ ಮೈಸೂರಿನ ಅಧಿಕಾರವನ್ನು ಮೈಸೂರಿನ ಒಡೆಯರಿಂದ ಹೈದರಾಲಿ ಕಿತ್ತುಕೊಂಡನು. ಆದರೆ ಅವನೂ ಸಹ ಮಠದ ಜೊತೆ ಉತ್ತಮ

ಬಾಂಧವ್ಯವನ್ನು ಮುಂದುವರೆಸಿದನು. ಶ್ರೀಗಳು ತಮ್ಮ ಹಿರಿಯರಂತೆ ಕೊಡಗು, ಪಶ್ಚಿಮ ಕರಾವಳಿಯ ತೀರದಲ್ಲಿ ಪ್ರವಾಸ ಕೈಗೊಂಡು ಉಡುಪಿಯ ಹತ್ತಿರ ಶಂಕರನಾರಾಯಣದಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ನಂತರ ಶ್ರೀಮಠದ ಬಗ್ಗೆ ತಿಳಿದ ಹೈದರ್‌ಆಲಿ ಶ್ರೀಮಠಕ್ಕೆ ಭೇಟಿಕೊಟ್ಟು ೧೭.೦೬.೧೭೬೮ರಲ್ಲಿ ಒಂದು ಸನ್ನದನ್ನು ಬರೆದು ಕಳುಹಿಸಿಕೊಟ್ಟರು[೬೬]. ಇವರು ಕೊಡಗಿನ ಕಾಲಂಗುಡಿಯಲ್ಲಿ ಮತ್ತೊಂದು ಮಠವನ್ನು ಸ್ಥಾಪಿಸಿದರು. ಅಲ್ಲಿ ಭಕ್ತರು ಸ್ವಯಂಪ್ರೇರಿತರಾಗಿ ಸುಂಕವನ್ನು ವಿಧಿಸಿಕೊಂಡು ಮಠಕ್ಕೆ ಆ ಸುಂಕವನ್ನು ಸಲ್ಲಿಸಿದರು[೬೭]. ಇವರು ಶ್ರೀಮಠಕ್ಕೆ ಪೀಠಾಧಿಪತಿಗಳಾಗಿ ಮಹಾಂತ ದೇಶಿಕೇಂದ್ರರಿಗೆ ಅಧಿಕಾರವಹಿಸಿ ಲಕ್ಷ್ಮಣತೀರ್ಥ ನದಿ ತೀರದ ಸಿಂಗನಹಳ್ಳಿಯಲ್ಲಿ ಲಿಂಗೈಕ್ಯರಾದರು.

೧೯. ಶ್ರೀ ಮಹಾಂತ ದೇಶಿಕೇಂದ್ರರು (೧೮೦೧-೧೮೪೨)

ಇವರು ಬಹುದೊಡ್ಡ ಪಂಡಿತರೂ, ಆಧ್ಯಾತ್ಮಚಿಂತಕರೂ ಮತ್ತು ವಿಚಾರವಂತರೂ ಆಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರು ಆಗ ಮೈಸೂರಿನ ಅರಸರಾಗಿದ್ದರು. ಇವರು ಸುತ್ತೂರು ಮಠದ ಬಗ್ಗೆ ಅಪಾರವಾದ ಭಕ್ತಿಯನ್ನು ಹೊಂದಿದ್ದು ೧೮೧೨ರಲ್ಲಿ ಒಂದು ಸನ್ನದು ನೀಡಿದ್ದಾರೆ[೬೮]. ಇದು ಶ್ರೀಮಠದ ಜೊತೆ ರಾಜರು ಹೊಂದಿದ್ದ ಸಂಬಂಧ ತಿಳಿದುಬರುತ್ತದೆ. ಶ್ರೀಗಳವರು ಭಕ್ತರ ಕೋರಿಕೆಯಂತೆ ಕೊಡಗು ಮತ್ತು ಕೇರಳದ ಕೆಲವು ಭಾಗಗಳಿಗೆ ಹೋಗಬೇಕಾಗಿ ಬರುತ್ತದೆ. ಆಗ ಅವರು ತಮ್ಮ ಶಿಷ್ಯರಾದ ಶ್ರೀ ಬಸವಲಿಂಗ ದೇಶಿಕೇಂದ್ರರಿಗೆ ಪಟ್ಟಾಧಿಕಾರ ನೀಡಿ ಪ್ರವಾಸ ಕೈಗೊಳ್ಳುತ್ತಾರೆ. ಆದರೆ ಶ್ರೀ ಬಸವಲಿಂಗ ದೇಶಿಕೇಂದ್ರರು ಅಕಾಲಮರಣಕ್ಕೆ ತುತ್ತಾಗುತ್ತಾರೆ. ಇದನ್ನು ತಿಳಿದು ವಾಪಸ್ಸು ಸುತ್ತೂರಿಗೆ ಆಗಮಿಸಿ ಮಠದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇದರಿಂದ ಸಂತುಷ್ಟರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಶ್ರೀಗಳನ್ನು ಅರಮನೆಗೆ ಕರೆದು ಗೌರವಿಸಿದರು. ಇದರ ಜೊತೆಗೆ ಆಗ ಮೈಸೂರಿನಲ್ಲಿ ಅಧಿಕಾರಿಯಾಗಿದ್ದ ಲ್ಯಾಸಿಂಗ್‌ಟನ್ ಎನ್ನುವವನು ಇವರ ಸಂಚಾರಕ್ಕಾಗಿ ವಿಶೇಷ ಸನ್ನದು ಒಂದನ್ನು ನೀಡಿದನು (೧೮೩೧). ಈ ದಾಖಲೆ ಇಂದಿಗೂ ಸುತ್ತೂರು ಮಠದಲ್ಲಿದೆ. ಶ್ರೀಗಳು ಮಲೆ ಮಹದೇಶ್ವರ ಬೆಟ್ಟದಲ್ಲಿ ಮಹಂತರ ಕಟ್ಟೆ ಮತ್ತು ವಿರಕ್ತ ಕಟ್ಟೆಗಳನ್ನು ನಿರ್ಮಿಸಿದರು. ಹೀಗೆ ಲೋಕಕಲ್ಯಾಣ ಮಾಡುತ್ತಲೇ ಸುತ್ತೂರಿನಲ್ಲಿ ಶಿವೈಕ್ಯರಾದರು.

೨೦. ಶ್ರೀ ಸಿದ್ಧಲಿಂಗ ಶಿವಾಚಾರ್ಯರು (ಶ್ರೀ ಸಿದ್ಧಮಲ್ಲ ಶಿವಾಚಾರ್ಯರು) (೧೮೪೨-೧೮೯೬)

ಶ್ರೀಮಠದ ೨೦ನೇ ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ತ್ರಿವಿಧ ದಾಸೋಹವನ್ನು ಆರಂಭಿಸಿದವರು. ಇವರು ಧರ್ಮತತ್ವಗಳನ್ನು ಪ್ರಸಾರ ಮಾಡುವ ಕಾಯಕದಲ್ಲಿ ನಿರತರಾಗಿದ್ದರು. ಇವರ ಕಾಲದಲ್ಲಿ ಸಾಹಿತ್ಯಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿದ್ದ ನಗರ್ಲೆ ನಂಜುಂಡಶಾಸ್ತ್ರಿಗಳು ಶ್ರೀಗಳವರನ್ನು ಕುರಿತು "ಸ್ತೋತ್ರರತ್ನಾಕರ" ಕೃತಿಯನ್ನು ರಚಿಸಿದರು. ಶ್ರೀಗಳ ಕಾಲದಲ್ಲಿ ವೀರಸಂಗಪ್ಪ ಎನ್ನುವ ಶ್ರೀಮಂತರು "ಮೈಸೂರು ಸ್ಟಾರ್" ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿ ಸ್ವಾಮೀಜಿಗಳ ಮಾರ್ಗದರ್ಶನದಂತೆ ವೀರಶೈವ ಧರ್ಮದ ಸಾರವನ್ನು

ಹರಡಿದರು. ಈ ಕೆಲಸಕ್ಕೆ ಬೆನ್ನೆಲುಬಾಗಿ ನಿಂತವರೇ ಶ್ರಿ ಪಿ.ಆರ್. ಕರಿಬಸವಶಾಸ್ತ್ರಿಗಳು. ನಂಜನಗೂಡು ತಾಲ್ಲೂಕಿನ ಮತ್ತೊಂದು ಪ್ರಸಿದ್ಧ ಮಠವಾದ ಕಂಬಳೇಶ್ವರ ಮಠದ ಸ್ಥಾಪಕರಾದ ಕಂಬಳೇಶ್ವರರು ಇವರ ಕಾಲದಲ್ಲಿ ಮಠವನ್ನು ಸಂದರ್ಶಿಸಿದ್ದರು. ಹೀಗೆ ಜೀವನವೆಲ್ಲಾ ಸಮಾಜ ಕಾರ್ಯಗಳಲ್ಲಿ ತೊಡಗಿಕೊಂಡಿದ್ದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ೧೮೯೬ರಲ್ಲಿ ಲಿಂಗೈಕ್ಯರಾದರು.

<u>೨೧. ಶ್ರೀ ಶಿವರಾತ್ರಿ ದೇಶಿಕೇಂದ್ರರು (೧೮೮೪-೧೯೦೨)</u>

ಇವರು ಯಾವಾಗಲೂ ಅಂತರ್ಮುಖಿಗಳಾಗಿ ಇರುತ್ತಿದ್ದರು. ಹೆಚ್ಚಾಗಿ ಶಿವಪಂಚಾಕ್ಷರೀ ಮಂತ್ರವನ್ನು ಮಾತ್ರ ನುಡಿಯುತ್ತಿದ್ದರು. ಯಾವಾಗಲೂ ಅಂತರ್ಮುಖಿಯಾಗಿರುತ್ತಿದ್ದ ಇವರು ಭಕ್ತರಿಗೆ ಭಸ್ಮವನ್ನು ನೀಡುತ್ತಾ ಜನರ ರೋಗವನ್ನು ವಾಸಿ ಮಾಡುತ್ತಾ ಕಾಲಕಳೆದ ಇವರು ತಮ್ಮ ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯರ ಮರಣ ಹೊಂದಿದ ಆರು ವರ್ಷಗಳಲ್ಲೇ ೨೨ನೇ ಜಗದ್ಗುರುಗಳಾದ ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರರಿಗೆ ಪಟ್ಟ ಕಟ್ಟಿ (೧೯೦೨) ಉಳಿದ ಕಾಲ ಶಿವಪೂಜೆ, ಧ್ಯಾನಗಳಲ್ಲಿ ನಿರತರಾಗಿ ೧೯೪೨ರಲ್ಲಿ ಸುತ್ತೂರಿನಲ್ಲಿಯೇ ಶಿವೈಕ್ಯರಾದರು.

<u>೨೨. ಪಟ್ಟದ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು (ಮಂತ್ರಮಹರ್ಷಿಗಳು) (೧೯೦೨-೧೯೬೭)</u>

ಇಂದು ದೊಡ್ಡ ಆಲದಮರದಂತೆ ಬೆಳೆದು ಸಾಗರದಾಚೆಗೆ ರೆಂಬೆಕೊಂಬೆಗಳನ್ನು ಹರಡಿರುವ ಶ್ರೀಮಠದ ಕಾರ್ಯವ್ಯಾಪ್ತಿಗೆ ಅಡಿಪಾಯ ಹಾಕಿದ್ದು ೨೨ನೇ ಪೀಠಾಧಿಪತಿಗಳಾಗಿ ಬಂದ ಮಂತ್ರಮಹರ್ಷಿಗಳೆಂದು ಖ್ಯಾತರಾದ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳಿಂದ ಎನ್ನುವುದು ಸತ್ಯ. ಇವರು ತಮ್ಮ ಶಿಕ್ಷಣವನ್ನು ಕಾರ್ಯ (ನಂಜನಗೂಡು ತಾಲ್ಲೂಕು) ಗ್ರಾಮದ ಗುರುಗಳಾಗಿದ್ದ ಶ್ರೀ ಪ್ರಭುಸ್ವಾಮಿಗಳವರಲ್ಲಿ ಪಡೆದರು. ಇಲ್ಲಿಯೂ ಅವರಿಗೆ ಕ್ಯಾತನಹಳ್ಳಿಯ ಸಾಹುಕಾರ ಸಿದ್ಧಲಿಂಗಯ್ಯನವರ ಪರಿಚಯವಾಗಿ ಅವರು ಶ್ರೀಗಳ ಪ್ರಭಾವಕ್ಕೆ ಒಳಗಾದರು. ನಂತರ ತಮ್ಮ ೧೬ನೇ ವಯಸ್ಸಿನಲ್ಲಿಯೇ ಮಠದ ಅಧಿಕಾರವನ್ನು ವಹಿಸಿಕೊಂಡರು (೧೮.೦೫.೧೯೦೨).

ಇವರು ಅಧಿಕಾರಕ್ಕೆ ಬಂದಾಗ ಅನೇಕ ಸಮಸ್ಯೆಗಳು ಇದ್ದವು. ಅವುಗಳನ್ನು ಒಂದೊಂದಾಗಿ ತಮ್ಮ ಬುದ್ಧಿಶಕ್ತಿಯಿಂದ ಬಗೆಹರಿಸಲಾರಂಭಿಸಿದರು. ಮೊದಲು ಮಠಕ್ಕೆ ಸೇರಿದ್ದ ನೂರಾರು ಎಕರೆ ಭೂಮಿಯನ್ನು ವ್ಯವಸಾಯಕ್ಕೊಳಪಡಿಸಿದರು. ನಂತರ ಶ್ರೀಕ್ಷೇತ್ರದಲ್ಲಿ ಮಠದ ಕಟ್ಟಡ, ಮೂಲಸ್ಥಾನೇಶ್ವರ ದೇವಸ್ಥಾನ ಮತ್ತು ವೀರೇಶ್ವರ ದೇವಸ್ಥಾನಗಳ್ನು ಜೀರ್ಣೋದ್ದಾರಗೊಳಿಸಲು ಇಚ್ಚೆಪಟ್ಟರು. ಶ್ರೀಕ್ಷೇತ್ರದಲ್ಲಿ ಮೊತ್ತಮೊದಲು ನಿರ್ಮಿತವಾಗಿದ್ದ ದೇವಸ್ಥಾನವೇ ಮೂಲಸ್ಥಾನೇಶ್ವರ ದೇವಾಲಯ. ಇದು ಸ್ವತಃ ರಾಜೇಂದ್ರಚೋಳನಿಂದ ನಿರ್ಮಿತವಾಗಿದ್ದುದು. ತುಂಬಾ ದುಃಸ್ಥಿತಿಯನ್ನು ತಲುಪಿತ್ತು. ಇದನು ಸುಂದರವಾಗಿ ಜೀರ್ಣೋದ್ಧಾರಗೊಳಿಸಿದರು. ಅದೇ ರೀತಿ ವೀರೇಶ್ವರ ಮತ್ತು ಶ್ರೀಮಠವನ್ನು ಜೀರ್ಣೋದ್ಧಾರಗೊಳಿಸಿದರು.

ಇವರ ಕಾಲದಲ್ಲಿ ಶ್ರೀಕ್ಷೇತ್ರದಲ್ಲಿ ದೊರಕಿದಂತಹ ಶಿಲಾಶಾಸನಗಳನ್ನು ಕ್ರೋಢೀಕರಿಸಿದರು. ಇದರಲ್ಲಿ ರಾಜೇಂದ್ರಚೋಳನಿಂದ ಹಿಡಿದು ಮೈಸೂರು ಒಡೆಯರ ತನಕ ಅನೇಕರು ಕೊಟ್ಟಿರುವ ದಾನದತ್ತಿಗಳು ದಾಖಲಾಗಿವೆ. ಅಲ್ಲದೆ ಅನೇಕ ಕಾಗದಪತ್ರಗಳನ್ನು ಸಹ ಸಂಗ್ರಹಿಸಿಟ್ಟರು.

ಇವರಿಂದ ಪ್ರಭಾವಿತರಾದ ಸಾಹುಕಾರ್ ಕ್ಯಾತನಹಳ್ಳಿ ಸಿದ್ಧಲಿಂಗಯ್ಯ ಎನ್ನುವವರು ಮೈಸೂರಿನ ಅಗ್ರಹಾರದ ವಾಣಿವಿಲಾಸ ರಸ್ತೆಯಲ್ಲಿ (ಇಂದಿನ ಮಹಾತ್ಮಾ ಗಾಂಧಿ ರಸ್ತೆ) ಇರುವ ಕಟ್ಟಡವೊಂದನ್ನು ಸುತ್ತೂರು ಶ್ರೀಮಠಕ್ಕೆ ಕೊಡುಗೆಯಾಗಿ ನೀಡಿದರು. ಹೀಗೆ ೧೯೩೦ರಲ್ಲಿ ಶ್ರೀಮಠದ ಮೊದಲ ವಿದ್ಯಾರ್ಥಿನಿಲಯವಾಗಿ ಮೈಸೂರಿನಲ್ಲಿ ಆರಂಭಗೊಂಡಿತು. ಇದರ ಜೊತೆಗೆ ಸಂಸ್ಕೃತ ವಿದ್ಯಾಭ್ಯಾಸ ಮತ್ತು ಅನ್ನದಾಸೋಹ ಆರಂಭವಾಯಿತು.

ಇವರ ಪ್ರಯತ್ನ ಮತ್ತು ಆಶಯದಂತೆ ಘನವಿದ್ವಾಂಸರಾಗಿದ್ದ ಕುಂತೂರಿನ ಸಂಗಪ್ಪಶಾಸ್ತ್ರಿಗಳಿಂದ ೧೯೩೩ರಲ್ಲಿ ಭಾಮಿನಿಷಟ್ಪದಿಯಲ್ಲಿ "ಶ್ರೀ ಸುತ್ತೂರು ವೀರಸಿಂಹಾಸನ ಗುರು ಪರಂಪರೆ" ಎನ್ನುವ ಕೃತಿಯನ್ನು ರಚಿಸಿದರು. ನಂತರ ಮುಂದೆ ಆಸ್ಥಾನವಿದ್ವಾನ್‌ರಾದ ಎಂ.ನಂಜುಂಡಾರಾಧ್ಯರು ೧೯೬೧ರಲ್ಲಿ "ಶಿವರಾತ್ರಿ ಶಿವಾಚಾರ್ಯ" ಎನ್ನುವ ಗದ್ಯ ಕೃತಿಯನ್ನು ರಚಿಸಿದರು. ನಂತರ ಇವರ ಸಂಪರ್ಕಕ್ಕೆ ಮೈಸೂರಿನ ಅರಮನೆಯ ಪಂಚಗವಿಮಠದ ಅಧ್ಯಕ್ಷರಾದ ಶ್ರೀ ಗೌರಿಶಂಕರ ಮಹಾಸ್ವಾಮಿಗಳ ಪರಿಚಯವಾಗಿ ಅವರಿಂದ ಪ್ರೇರೇಪಿತರಾಗಿ ಪ್ರಣವ ಪಂಚಾಕ್ಷರೀ ಮಂತ್ರವನ್ನು ಬರೆಯಲಾರಂಭಿಸಿದರು. ಹೀಗೆ ಪ್ರಣವಮಂತ್ರಗಳನ್ನು ಬರೆದು "ಮಂತ್ರಮಹರ್ಷಿ"ಗಳೆಂದು[೬೯] ಹೆಸರು ಪಡೆದರು. ಶ್ರೀಮಠಕ್ಕೆ ಭೇಟಿ ನೀಡಿದ್ದ ನಾಡಿನ ಹಿರಿಯ ಸಾಹಿತಿಗಳಾದ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಸ್ವಾಮೀಜಿಯವರ ಈ ಕಾರ್ಯವನ್ನು ಶ್ಲಾಘಿಸಿದ್ದಾರೆ ಮತ್ತು ಇದೇ ರೀತಿ ಪೂಜ್ಯರ ಪಂಚಾಕ್ಷರೀ ಮಂತ್ರಲೇಖನದಿಂದ ಪ್ರಭಾವಿತರಾದವರೆಂದರೆ ಮೈಸೂರಿನ ಕೊನೆಯ ಅರಸರಾದ ಶ್ರೀಜಯಚಾಮರಾಜ ಒಡೆಯರು ಮಠದ ಶಿಷ್ಯರಾಗಿ ಮಠದ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಮಂತ್ರಮಹರ್ಷಿಗಳು "ಶಿವಮಂತ್ರ ಮಹಿಮೆ" ಎಂಬ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯನ್ನು ಡಾ. ಬಿ. ಶಿವಮೂರ್ತಿಶಾಸ್ತ್ರಿಗಳು ಸಹ ಹೊಗಳಿದ್ದಾರೆ.

೨೩. ರಾಜಗುರುತಿಲಕ ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು (೧೯೨೧–೧೯೮೬)

ಸುತ್ತೂರು ಶ್ರೀಮಠದ ಗುರುಪರಂಪರೆಯಲ್ಲಿ ಬಹುದೊಡ್ಡ ಹೆಸರು. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳದ್ದು. ಇವರು ೧೯೧೬ನೇ ಆಗಸ್ಟ್ ೧೯ರಲ್ಲಿ ಶ್ರೀ ಮಲ್ಲಿಕಾರ್ಜುನ ದೇವರು ಮತ್ತು ಮರಮ್ಮಣ್ಣಿ (ಶಂಕರಮ್ಮ) ಯವರ ಮಗನಾಗಿ ಜನಿಸಿದರು. ಇವರ ಪ್ರಯತ್ನದಿಂದ ಶ್ರೀಮಠದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಮಹತ್‌ಸಾಧನೆಯ ಮೂಲಪುರುಷರು ಇವರು. ತಮ್ಮ ಶಿಕ್ಷಣಕ್ಕಾಗಿ ಮೈಸೂರಿನ ನಮಃಶಿವಾಯ ಮಠದಲ್ಲಿ ಶಿಕ್ಷಣ ಪಡೆಯುವುದಕ್ಕಾಗಿ

ಹೋದರು. ಅಲ್ಲಿ ಅವರಿಗೆ ಕಾಶಿಗೆ ಹೋಗಿ ಹೆಚ್ಚಿನ ವಿದ್ಯಾಭ್ಯಾಸ ಪಡೆಯಬೇಕೆನ್ನುವ ಹಂಬಲ ಚಿಗುರೊಡೆಯತೊಡಗಿತು. ಇದು ಸ್ವಲ್ಪ ದಿನದಲ್ಲಿಯೇ ಹೆಮ್ಮರವಾಗಿ ಬೆಳೆದು ಅವರನ್ನು ಕಾಡತೊಡಗಿತು. ಕೊನೆಗೆ ಧೈರ್ಯ ಮಾಡಿ ಯಾರಿಗೂ ತಿಳಿಸದೆ ಏಕಾಂಗಿಯಾಗಿ ರೈಲು ಬಂಡಿಯನ್ನು ಹತ್ತಿ ಕಾಶಿಗೆ ಹೋಗಿ ಜಂಗಮವಾಡಿ ಮಠಕ್ಕೆ ಹೋಗಿ ಅಲ್ಲಿದ್ದ ಗವಿಮಠದ ಗೌರಿಶಂಕರ ಮಹಾಸ್ವಾಮಿಗಳವರ ಎದುರು ನಿಂತರು. ಆದರೆ ಮಂತ್ರಮಹರ್ಷಿಗಳು ಕಾಶಿಗೆ ಹೋಗಿ ಅವರನ್ನು ಹಿಂದಿರುಗಿ ಕರೆದುಕೊಂಡು ಬಂದರು.

ಕಾಶಿಯಿಂದ ಹಿಂದಿರುಗಿಬಂದ ಶ್ರೀ ರಾಜೇಂದ್ರರು ಮೈಸೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ೧೯೩೦ರಲ್ಲಿ ಸ್ಥಾಪನೆಯಾಗಿದ್ದ ಕ್ಯಾತನಹಳ್ಳಿ ಹಾಸ್ಟೆಲ್‌ನ (ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆ) ಮೇಲ್ವಿಚಾರಣೆಯನ್ನು ವಹಿಸಿಕೊಂಡರು ಹಾಗೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಸಮಸ್ಯೆಯನ್ನು ಅರಿತಿದ್ದ ಇವರು ಅವರಿಗಾಗಿ ಮರುಗಲಾರಂಭಿಸಿದರು. ಅದೊಂದು ದಿನ ವಾರಾನ್ನ ಮಾಡುತ್ತಿದ್ದ ಹುಡುಗನೊಬ್ಬ ಊಟವಿಲ್ಲದೆ ಮಲಗಿದ್ದುದನ್ನು ನೋಡಿದ ಇವರು ತಮ್ಮ ಚಿನ್ನದ ಕರಡಿಗೆ ಮತ್ತು ಚಿನ್ನದ ಕವಚದ ರುದ್ರಾಕ್ಷಿಗಳನ್ನು ಗಿರವಿ ಇಟ್ಟು ೧೯.೦೯.೧೯೪೧ರಂದು[೨೦] ಶ್ರೀಮಠದ ಆಶ್ರಯದಲ್ಲಿ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು. ಇದು ನಿರಕ್ಷರಕುಕ್ಷಿಗಳ, ದೀನರ ಬದುಕಿನಲ್ಲಿ, ಬಾಳಿನಲ್ಲಿ ಬೆಳಕಿನ ಆಶಾಕಿರಣವಾಯಿತು.

ಪ್ರಾರಂಭದ ದಿನದಲ್ಲಿ ಪ್ರಸಾದನಿಲಯಗಳ ನಿರ್ವಹಣೆ ತುಂಬಾ ಕಷ್ಟದಾಯಕವಾಯಿತು. ಆದರೆ ನಂತರ ಎಲ್ಲವೂ ಪವಾಡಸದೃಶ್ಯ ರೀತಿಯಲ್ಲಿ ಬೆಳವಣಿಗೆಯಾಗತೊಡಗಿತು. ಅನ್ನದಾಸೋಹ, ಜ್ಞಾನದಾಸೋಹ, ಆರೋಗ್ಯ, ಆಧ್ಯಾತ್ಮ, ಸಂಗೀತ ಸಾಹಿತ್ಯ, ಕಲೆ, ಧಾರ್ಮಿಕ ದತ್ತಿ, ಜಾತ್ರೆ, ಜಯಂತಿ, ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ೩೦೦ಕ್ಕೂ ಹೆಚ್ಚು ಸಂಸ್ಥೆಗಳನ್ನು ಹೊಂದಿರುವ ಇಂದಿನ ಶ್ರೀಮಠದ ಕಾರಣಿಕ ಪುರುಷರು ಕಾಯಕತಪಸ್ವಿಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ತಮ್ಮ ದೂರದೃಷ್ಟಿಯಿಂದ ಅವರು ಸ್ಥಾಪಿಸಿದ ಜೆಎಸ್‌ಎಸ್ ಮಹಾವಿದ್ಯಾಪೀಠ ಈಗ ೫೦ ವರ್ಷಗಳನ್ನು ಪೂರೈಸಿ ಸುವರ್ಣ ಮಹೋತ್ಸವವನ್ನು ಆಚರಿಸಿದೆ. ಇವರ ಮತ್ತು ಮಹಾರಾಜರ ಸಂಬಂಧವನ್ನು ಬೆಸೆದ ಇವರಿಗೆ "ರಾಜಗುರುತಿಲಕ" ಎಂಬ ಬಿರುದು ಹಾಗೂ ಘನತೆವೆತ್ತ ಮೈಸೂರು ವಿಶ್ವವಿದ್ಯಾಲಯ ಇವರಿಗೆ 'ಗೌರವ ಡಾಕ್ಟರೇಟ್' ಪದವಿಯನ್ನು ಕೊಟ್ಟು ತನ್ನನ್ನು ತಾನೇ ಗೌರವಿಸಿಕೊಂಡಿದೆ. ಇವರ ದೂರದೃಷ್ಟಿ ಮತ್ತು ದಿವ್ಯದೃಷ್ಟಿಗಳ ವಿಶೇಷ ಶಕ್ತಿಗೆ ಅನೇಕ ಮಹಾವ್ಯಕ್ತಿಗಳು ಮಾರುಹೋಗಿ ಶ್ರೀಮಠಕ್ಕೆ ಭೇಟಿಕೊಟ್ಟಿದ್ದಾರೆ. ಅವರುಗಳಲ್ಲಿ ಪ್ರಮುಖರೆಂದರೆ ಡಾ. ರಾಜೇಂದ್ರಪ್ರಸಾದ್, ಡಾ. ರಾಧಾಕೃಷ್ಣನ್, ಡಾ. ಬಿ.ಡಿ.ಜತ್ತಿ, ಕೆ.ಸಿ. ರೆಡ್ಡಿ, ನಿಜಲಿಂಗಪ್ಪ, ಸೋನಿಯಾಗಾಂಧಿ, ಅಬ್ದುಲ್ ಕಲಾಮ್, ಡಾ. ರಾಜ್‌ಕುಮಾರ್ ಮುಂತಾದವರು.

೮. ಎ.ಕ. ಸಂ.III (N.S.) ನಂ.ಗೂ.೨೩೫, ಪುಟ ೩೨೩

೯. ಎ.ಕ. ಸಂ.III (N.S.) ನಂ.ಗೂ.೨೩೫, ಪುಟ ೨೧೭

೧೦. ಅದೇ

೧೧. ಥೊಪೋಶೀಟ್ಸ್, ನಂ. ೫೭ ಡಿ/ಮೈಸೂರು, ಕರ್ನಾಟಕ-ಹಾಸನ, ಕೊಡಗು ಜಿಲ್ಲೆ, ಎಸ್‌ಜಿಪಿ-೧೯೮೧, ಭಾರತ ಸರ್ಕಾರ

೧೨. ಪ್ರೊ. ನಾಗರಾಜಪ್ಪ, ಸೆಕ್ರೆಡ್ ಜಿಯೋಗ್ರಫಿ ಆಫ್ ಕಾವೇರಿ ಬೇಸಿನ್ ಇನ್ ಕರ್ನಾಟಕ - ಎ ಸ್ಟಡಿ ಆಫ್ ಸುತ್ತೂರು, ಪುಟ ೩, ೨೦೦೨

೧೩. ಎ.ಕ. ಸಂ.III (N.S.) ನಂ.ಗೂ.೨೧೫, ಪುಟಗಳು ೩೧೧-೩೧೨

೧೪. ಎ.ಕ. ಸಂ.III (N.S.) ನಂ.ಗೂ.೨೩೫, ಪುಟಗಳು ೩೨೩-೩೨೪

೧೫. ಎ.ಕ. ಸಂ.III (N.S.) ನಂ.ಗೂ.೨೧೭, ಪುಟಗಳು ೩೧೪-೩೧೫

೧೫ಎ. ಎ.ಕ. ಸಂ.III (N.S.) ನಂ.ಗೂ.೨೧೫, ಪುಟಗಳು ೩೧೧-೩೧೨

೧೬. ಎ.ಕ. ಸಂ.III (N.S.) ನಂ.ಗೂ.೨೩೫, ಪುಟಗಳು ೩೨೩-೩೨೪ ಮತ್ತು ಕನ್ನಡ ವಿಷಯ ವಿಶ್ವಕೋಶ, ಪುಟಗಳು ೧೫೧೩-೧೫೧೪

೧೭. ಮಲೆಯೂರು ಗುರುಸ್ವಾಮಿ, ಶ್ರೀ ಸುತ್ತೂರು ಮಠದ ಗುರುಪರಂಪರೆ, ಶ್ರೀ ಸಿದ್ಧಗಂಗಾ ಪ್ರಕಾಶನ, ಪುಟಗಳು ೭-೧೩, ೨೦೦೮

೧೮. ಪ್ರೊ. ಎಂ.ಜಿ. ನಂಜುಂಡಾರಾಧ್ಯ, ಶಿವರಾತ್ರಿ ಶಿವಾಚಾರ್ಯ, ಜೆಎಸ್‌ಎಸ್ ಗ್ರಂಥಮಾಲೆ, ೧೯೬೧, ಪುಟ ೩೦

೧೯. ಎ.ಕ. ಸಂ.III (N.S.) ನಂ.ಗೂ.೨೨೨, ಪುಟ ೩೧೭

೨೦. ಎ.ಕ. ಸಂ.III (N.S.) ನಂ.ಗೂ.೨೧೯, ಪುಟ ೩೧೬

೨೧. ಎ.ಕ. ಸಂ.III (N.S.) ನಂ.ಗೂ.೨೧೩, ಪುಟ ೩೧೦

೨೨. ಎ.ಕ. ಸಂ.III (N.S.) ನಂ.ಗೂ.೨೧೫, ಪುಟಗಳು ೩೧೧-೩೧೨

೨೩. ಎ.ಕ. ಸಂ.III (N.S.) ನಂ.ಗೂ.೨೩೪, ಪುಟ ೩೨೨

೨೪. ಎ.ಕ. ಸಂ.III (N.S.) ನಂ.ಗೂ.೨೩೫, ಪುಟಗಳು ೩೨೩-೩೨೪

೨೫. ಎ.ಕ. ಸಂ.III (N.S.) ನಂ.ಗೂ.೨೨೦, ಪುಟ ೩೧೬

೨೬. ಎ.ಕ. ಸಂ.III (N.S.) ನಂ.ಗೂ.೨೨೯, ಪುಟ ೩೨೦

೨೭. ಎ.ಕ. ಸಂ.III (N.S.) ನಂ.ಗೂ.೨೩೨, ಪುಟ ೩೨೧

೨೮. ಎ.ಕ. ಸಂ.III (N.S.) ನಂ.ಗೂ.೨೩೧, ಪುಟ ೩೨೧

೨೯. ಎ.ಕ. ಸಂ.III (N.S.) ನಂ.ಗೂ.೨೩೦, ಪುಟ ೩೨೦

೩೦. ಎ.ಕ. ಸಂ.III (N.S.) ನಂ.ಗೂ.೨೨೭, ಪುಟ ೩೧೯

೩೧. ಎ.ಕ. ಸಂ.III (N.S.) ನಂ.ಗೂ.೨೨೬, ಪುಟ ೩೧೯

೩೨. ಎ.ಕ. ಸಂ.III (N.S.) ನಂ.ಗೂ.೨೨೫, ಪುಟ ೩೧೮

೩೩. ಎ.ಕ. ಸಂ.III (N.S.) ನಂ.ಗೂ.೨೨೮, ಪುಟ ೩೧೯-೩೨೦

೩೪. ಎ.ಕ. ಸಂ.III (N.S.) ನಂ.ಗೂ.೨೨೪, ಪುಟ ೩೧೬

೩೫. ಎ.ಕ. ಸಂ.III (N.S.) ನಂ.ಗೂ.೨೨೩, ಪುಟಗಳು ೩೧೭-೩೧೮

೩೬. ಎ.ಕ. ಸಂ.III (N.S.) ನಂ.ಗೂ.೨೨೧, ಪುಟ ೩೧೭

೩೭. ಎ.ಕ. ಸಂ.III (N.S.) ನಂ.ಗೂ.೨೩೬, ಪುಟ ೩೨೫

೩೮. ಎ.ಕ. ಸಂ.III (N.S.) ನಂ.ಗೂ.೨೧೭, ಪುಟಗಳು ೩೧೪-೩೧೫

೩೯. ಎ.ಕ. ಸಂ.III (N.S.) ನಂ.ಗೂ.೨೧೪, ಪುಟ ೩೧೧

೪೦. ಎ.ಕ. ಸಂ.III (N.S.) ನಂ.ಗೂ.೨೧೮, ಪುಟಗಳು ೩೧೫-೩೧೬

೪೧. ಎ.ಕ. ಸಂ.III (N.S.) ನಂ.ಗೂ.೨೧೬, ಪುಟಗಳು ೩೧೩-೩೧೪

೪೨. ಎ.ಕ. ಸಂ.III (N.S.) ನಂ.ಗೂ.೨೩೩, ಪುಟ ೩೨೧

೪೨ಎ. ಡಾ. ಎಂ.ಜಿ.ನಂಜುಂಡಾರಾಧ್ಯ, ಶಿವರಾತ್ರಿ ಶಿವಾಚಾರ್ಯ, ಜII ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ಪುಟ ಸಂಖ್ಯೆ ೧೮, ೧೯೬೧

೪೩. ಎ.ಕ. ಸಂ.III (N.S.) ನಂ.ಗೂ.೨೩೭, ಪುಟಗಳು ೩೨೫-೩೨೬

೪೪. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ವಿಶ್ವವಿದ್ಯಾಲಯ, ಪುಟಗಳು ೧೧-೧೪

೪೫. ಎ.ಕ. ಸಂ.III (N.S.) ನಂ.ಗೂ.೨೧೫, ಪುಟಗಳು ೩೧೧-೩೧೨, ಕ್ರಿ.ಶ. ೧೦೩೨

೪೬ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಊರಿನವರುಗಳು ಹೇಳಿದ ಮಾತನ್ನು ದಾಖಲಿಸಲಾಗಿದೆ.

೪೭ ಶ್ರೀ ಮಹದೇಶ್ವರರು ಬೀಸಿದ ರಾಗಿಕಲ್ಲಿನ ಚಿತ್ರವನ್ನು ಕೊನೆಯಲ್ಲಿ ಕೊಡಲಾಗಿದೆ ಹಾಗೂ ಜನಪದ ಹಾಡುಗಳಲ್ಲಿ ದಾಖಲಾಗಿದೆ.

೪೮. ಡಾ. ಎಂ.ಜಿ. ನಂಜುಂಡಾರಾಧ್ಯರು, ಶಿವರಾತ್ರಿ ಶಿವಾಚಾರ್ಯ, ಜII ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ಪುಟ ಸಂಖ್ಯೆ ೧೪, ೧೯೬೧

೪೯. ಅದೇ

೪೯ಎ. ಅದೇ, ಪುಟ ೧೮

೫೦. ಎ.ಕ. ಸಂ.III (N.S.) ನಂ.ಗೂ.೨೧೫, ಪುಟಗಳು ೩೧೧-೩೧೨

೫೧. ಅದೇ

೫೨. ಅದೇ

೫೩. ಎ.ಕ. ಸಂ.III (N.S.) ನಂ.ಗೂ.೨೩೫, ಪುಟಗಳು ೩೨೩-೩೨೪ ಮತ್ತು ಮೈಸೂರು ಪ್ರಾಚ್ಯವಸ್ತು ಇಲಾಖೆಯ ೧೯೪೬ನೇ ವರ್ಷದ ವರದಿ, ಪುಟಗಳು ೫೫-೫೬

೫೪. ಮೈಸೂರು ಪ್ರಾಚ್ಯವಸ್ತು ಇಲಾಖೆಯ ವರದಿ, ೧೯೪೫ನೇ ವರ್ಷದ ವರದಿ, ಪುಟ ೨೦

೫೫. ಜಾನಪದಗಳಲ್ಲಿ ದಾಖಲಾಗಿದೆ

೫೬. ತಿಪ್ಪೇರುದ್ರಸ್ವಾಮಿ, ಸಂಪಾದಕರು, ಅಮುಗಿದೇವಯ್ಯಗಳ ಸಾಂಗತ್ಯ, ಜ॥ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ಸಂಧಿ ೭, ಪದ್ಯ ೧೬೦

೫೭. ಹೆಚ್.ಪಿ.ಮಲ್ಲೇದೇವರು, ಸಂಪಾದಕರು, ಅರ್ಚನ, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವ ಅಭಿನಂದನಾ ಗ್ರಂಥ, ೧೯೮೪, ಪುಟ ೩೦

೫೮. ಮೈಸೂರು ಜಿಲ್ಲೆಯ ಶಾಸನಗಳು, ಭಾಗ-೧, ನಂ.ಗೂ.೧೨೪

೫೯. ಮೈಸೂರು ಪ್ರಾಚ್ಯವಸ್ತು ಇಲಾಖೆಯ ೧೯೩೬ನೇ ವರ್ಷದ ವರದಿ, ಪುಟಗಳು ೧೧೫-೧೧೬

೬೦. ಎ.ಕ.ಸಂ.೧೪, ಸಪ್ಲಿಮೆಂಟರಿ ಇನ್‌ಸ್ಕ್ರಿಪ್‌ಶನ್ಸ್ ಇನ್ ಮೈಸೂರ್ ಅಂಡ್ ಮಂಡ್ಯ ಡಿಸ್ಟ್ರಿಕ್ಟ್, ಪುಟಗಳು ೧೫೪-೧೫೫

೬೧. ಮೈಸೂರು ಪ್ರಾಚ್ಯವಸ್ತು ಇಲಾಖೆಯ ವರದಿ, ೧೯೪೬ನೇ ವರ್ಷದ ವರದಿ, ಪುಟಗಳು ೫೭-೫೮

೬೨. ಜ॥ ಶ್ರೀ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, ಸಂಪಾದಕರು, ಘನಲಿಂಗಿದೇವರ ವಚನಗಳು, ಪುಟಗಳು ೫-೬

೬೨ಎ. ಪಂ. ಬಿ. ಶಿವಮೂರ್ತಿಶಾಸ್ತ್ರಿ, ಘನಲಿಂಗಿದೇವರ ವಚನಗಳು, ಜ॥ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ಪುಟ ೩, ೧೯೫೦

೬೩. ಆರ್. ನರಸಿಂಹಾಚಾರ್ಯ, ಕನ್ನಡ ಕವಿ ಚರಿತ್ರೆ, ಭಾಗ III, ಪುಟ ೪೩೦

೬೪. ನಂಜನಗೂಡು ಶಾಸನ ಸಂಖ್ಯೆ ೩೦, ಮೈಸೂರು ಜಿಲ್ಲೆಯ ಶಾಸನಗಳು ಭಾಗ ೧

೬೫. ನಂಜನಗೂಡು ಶಾಸನ ಸಂಖ್ಯೆ ೧೭೬, ಮೈಸೂರು ಜಿಲ್ಲೆಯ ಶಾಸನಗಳು ಭಾಗ ೧

೬೬. ಪ್ರಾಚ್ಯವಸ್ತು ಇಲಾಖೆಯ ೧೯೩೦ರ ವರ್ಷದ ವರದಿ, ಪುಟಗಳು ೧೯೧-೧೯೨

೬೭. ಪ್ರಾಚ್ಯವಸ್ತು ಇಲಾಖೆಯ ೧೯೩೦ರ ವರ್ಷದ ವರದಿ, ಪುಟಗಳು ೧೯೨-೧೯೩

೬೮. ಪ್ರಾಚ್ಯವಸ್ತು ಇಲಾಖೆಯ ೧೯೩೦ರ ವರ್ಷದ ವರದಿ, ಪುಟಗಳು ೧೮೮-೧೮೯

೬೯. ಇವರು ಬರೆದಿರುವ ಪಂಚಾಕ್ಷರೀ ಮಂತ್ರದ ೨೨ ಸಂಪುಟಗಳು ಮಠದ ವಸ್ತು ಸಂಗ್ರಹಾಲಯದಲ್ಲಿವೆ

೭೦. ಜೆಎಸ್‌ಎಸ್ ಮಹಾವಿದ್ಯಾಪೀಠದ ದಾಖಲೆಗಳ ಪ್ರಕಾರ

ಅಧ್ಯಾಯ ೨

ಸುತ್ತೂರು ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸ ರಚನೆಗೆ ಶಾಸನಗಳು ಬಹುಮುಖ್ಯ ಆಕರಗಳು. ಈ ಹಿನ್ನೆಲೆಯಲ್ಲಿ ಡಾ. ಹೆಚ್. ತಿಪ್ಪೇರುದ್ರಸ್ವಾಮಿಯವರು ಹೇಳಿರುವಂತೆ ಇತಿಹಾಸದ ಪ್ರಮಾಣ-ಭೂತವಾದ ಪುನರ್‌ನಿರ್ಮಾಣಕ್ಕೆ ಇರುವ ಅತಿಪ್ರಮುಖವಾದ ಆಧಾರಗಳೆಂದರೆ ಶಾಸನಗಳು.[೧]

೧೦-೧೧ನೇ ಶತಮಾನದ ವೇಳೆಗಾಗಲೇ ಈ ಗ್ರಾಮ ಪ್ರಸಿದ್ಧವಾಗಿತ್ತು. ಇದಕ್ಕೆ ಶ್ರೋತ್ರಿಯ, ಶ್ರೋತ್ರಿಯೂರು, ಸೊತ್ತಿಯೂರು, ಸತ್ತುರೂರ್, ಪ್ರದಕ್ಷಿಣಪುರ ಮೊದಲಾದ ಹೆಸರುಗಳಿದ್ದವು. ನಂತರ ಇದು ಸುತ್ತೂರು ಆಯಿತು. ಕ್ರಿ.ಶ. ೧೫೧೪ನೇ ವರ್ಷದ ಶಾಸನ[೧೨] ದಲ್ಲಿ ಇದನ್ನು ಸುತ್ತೂರು ಎಂದೂ, ಇಲ್ಲಿನ ಶ್ರೀಮಠವನ್ನು ಸುತ್ತೂರು ವೀರಸಿಂಹಾಸನವೆಂದು ಹೇಳಿದೆ.

ಕ್ರಿ.ಶ. ೧೦ನೇ ಶತಮಾನದಲಿ ಕರ್ನಾಟಕದ ದಕ್ಷಿಣ ಭಾಗವನ್ನು (ಅಂದರೆ ಕಾವೇರಿ ನದಿಯ) ತಲಕಾಡಿನ ಗಂಗರು ಆಳುತ್ತಿದ್ದಾಗ ಸುತ್ತೂರು ಗಂಗವಾಡಿಯಲ್ಲಿ ಸೇರಿತ್ತು. ಮುಂದೆ ಚೋಳರು ಈ ಭಾಗವನ್ನು ಜಯಿಸಿ ತಮ್ಮದೇ ಆದ ಆಡಳಿತ ಪದ್ಧತಿಯನ್ನು ಜಾರಿಗೆ ತಂದು ತಮ್ಮದೇ ಆದ ಹೆಸರುಗಳನ್ನು ಇಟ್ಟರು. ಸುತ್ತೂರು ಆಗ ಮುಡಿಗೊಂಡ ಚೋಳಮಂಡಲದ ಗಂಗೈಕೊಂಡ ಚೋಳ ಒಳನಾಡಿನಲ್ಲಿ ಇಡ್ಯೆನಾಡು (ಕನ್ನಡದಲ್ಲಿ ಎಡೆನಾಡು) ಆಡಳಿತ ವಿಭಾಗಕ್ಕೆ ಸೇರಿದ್ದ ಗ್ರಾಮವಾಗಿತ್ತು[೨]. ಕ್ರಿ.ಶ. ೧೧೯೯ನೆಯ ವರ್ಷದ ಶಾಸನ[೩]. ಹೊಯ್ಸಳರ ೨ನೇ ನರಸಿಂಗನ ಕಾಲಕ್ಕೆ ಸೇರಿದೆ. ಈ ಶಾಸನ ಅಲ್ಲಲ್ಲಿ ಭಗ್ನವಾಗಿದ್ದು ಮಾಹಿತಿ ಸ್ಪಷ್ಟವಾಗಿಲ್ಲ. ಆದರೆ ಇದರಲ್ಲಿ ಈ ಗ್ರಾಮವನ್ನು ಸೊತ್ತಿಯೂರು ಎಂದು ಸಂಭೋದಿಸಲಾಗಿದೆ. ಈ ಗ್ರಾಮವನ್ನು ೧೫೩೦ರ ಶಾಸನದಲ್ಲಿ[೪] ಹೊಳೆಯ ಸುತ್ತೂರು ಎಂದು ಕರೆಯಲಾಗಿದ್ದು ಇದು ಮೂಗೂರು ಸೀಮೆಯ ತಾಯೂರು ಗ್ರಾಮಕ್ಕೆ ಸೇರಿದ್ದ ಗ್ರಾಮವೆಂದು ಹೇಳಲಾಗಿದೆ. ತಾಯೂರು ನಂಜನಗೂಡು ತಾಲ್ಲೂಕಿಗೆ ಸೇರಿದ ಅದೇ ಹೆಸರಿನ ಗ್ರಾಮವಾಗಿದೆ.

ಸುತ್ತೂರಿನಲ್ಲಿ ಪ್ರಸ್ತುತ ೨೫ ಶಿಲಾಶಾಸನಗಳು ಸಿಕ್ಕಿವೆ. ಅವುಗಳಲ್ಲಿ ಒಂದು ಶಾಸನದ ಕಲ್ಲು[೫] ಹೆಡೆಯಾಲದಲ್ಲಿತ್ತೆಂದು ತಿಳಿದುಬಂದಿದೆ. ಅಲ್ಲದೆ ನಂಜನಗೂಡಿನ ತೀರ್ಥಘಟ್ಟದಲ್ಲಿರುವ ಹದಿನಾರು ಕಾಲುಮಂಟಪದ ಮೇಲ್ಛಾವಣಿಯಲ್ಲಿರುವ ಎರಡು ಕಲ್ಲುಗಳ ಮೇಲೂ ಸುತ್ತೂರಿಗೆ ಸಂಬಂಧಿಸಿದ ಮಾಹಿತಿಗಳೂ ಇವೆ[೬].

ಸುತ್ತೂರಿನಲ್ಲಿ ಕ್ರಿ.ಶ. ೧೦ನೇ ಶತಮಾನಕ್ಕೆ ಸಂಬಂಧಿಸಿದ ಶಾಸನವೊಂದು ದೊರಕಿದೆ[೭]. ಇದು ಒಂದು ತುಂಡು ಶಾಸನವಾಗಿದ್ದು ಅದರ ಪ್ರಮುಖ ವಿಷಯಗಳನ್ನು ತಿಳಿಯಲು ಅಸಾಧ್ಯವಾಗಿದೆ. ಆದರೆ ಇನ್ನೊಂದು ತುಂಡು ಶಾಸನ ದೊರಕಿದ್ದು "ಸ್ವದತ್ತಂ ತನ್ನಿತ್ತುದಕ್ಕೆ ಪದಿತ್ತಂ" [೮] ಎನ್ನುವ ಶಾಪಾಶಯ ಪದದೊಂದಿಗೆ ಆರಂಭವಾಗುವ ಗದ್ಯವನ್ನು ಹೊಂದಿದ್ದು ಕುತೂಹಲಕಾರಿಯಾದ ಮಾಹಿತಿಯನ್ನು ನೀಡುತ್ತದೆ. ಈ ಗದ್ಯದಲ್ಲಿ "ಯಾರು ತನಗೆ ನೀಡಲಾದ ಅಥವಾ ತಾನು ನೀಡಿದ

ಭೂಮಿಯನ್ನು ನಾಶಪಡಿಸುವನೇ ಅವನು ಅರವತ್ತು ವರ್ಷಗಳವರೆಗೆ ಹುಳುವಾಗಿ ಹುಟ್ಟುವವನು" ಎಂದು ತಿಳಿಸಿದೆ. ಅಂದರೆ ಈ ವೇಳೆಗಾಗಲೇ ಸುತ್ತೂರು ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿತ್ತು ಎಂಬುದನ್ನು ಈ ದಾನಶಾಸನದಿಂದ ತಿಳಿದುಬರುತ್ತದೆ. ಬಹುಶಃ ಈ ಎರಡೂ ತುಂಡು ಶಾಸನಗಳು ಗಂಗರ ಕಾಲಕ್ಕೆ ಸೇರಿದವುಗಳಾಗಿವೆ. ಗಂಗರ ಕಾಲದಲ್ಲಿ ಜೈನತೀರ್ಥಂಕರರು ಮತ್ತು ಅವರ ಅನುಯಾಯಿಗಳು ಸುತ್ತೂರಿಗೆ ಆಗಮಿಸಿ ನೆಲೆಸಿದರೆಂದು ತಿಳಿದುಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ಸುತ್ತೂರಿನಲ್ಲಿ ದೊರೆತಿರುವ ಜೈನತೀರ್ಥಂಕರರ ಕೆಲವು ಭಗ್ನಗೊಂಡ ಮೂರ್ತಿಗಳಿಂದ ಹಾಗೂ ಸುತ್ತೂರಿನಲ್ಲಿ ಒಂದು ಜೈನ ಬಸದಿ ಇದ್ದು ಈಗ ಹಾಳಾಗಿರುವುದನ್ನು ಕಾಣಬಹುದು. ಅಲ್ಲದೇ ಈ ಜೈನಬಸದಿಯನ್ನು ಜೈನಮೂರ್ತಿಗಳನ್ನು ಸುತ್ತೂರಿನ ನೆರೆಯ ಊರಾದ ಬಿಳುಗಲಿ ಗ್ರಾಮದಲ್ಲಿ ಪ್ರತಿಷ್ಠಾಪಿಸಲಾಗಿದೆ ಹಾಗೂ ಸುತ್ತೂರಿನಲ್ಲಿ ಇಂದಿಗೂ ಜೈನ ಸಂಪ್ರದಾಯವನ್ನು ಅನುಸರಿಸುತ್ತಿರುವ ಐದು ಕುಟುಂಬಗಳು ವಾಸಮಾಡುತ್ತಿವೆ. ಇವೆಲ್ಲಾ ಅಂಶಗಳು ಸುತ್ತೂರಿನಲ್ಲಿ ಜೈನಧರ್ಮಕ್ಕೂ ಮಾನ್ಯತೆ ಇದ್ದುದು ತಿಳಿದುಬರುತ್ತದೆ.

ಸುತ್ತೂರಿನ ಶ್ರೀಮಠದ ಮುಂಭಾಗದಲ್ಲಿರುವ ಶಾಸನಗಳಲ್ಲಿ ಒಂದು ಇದ್ದು ಕನ್ನಡಲಿಪಿಯಲ್ಲಿದ್ದು ತಮಿಳು ಮತ್ತು ಕನ್ನಡ ಭಾಷೆಯಲ್ಲಿದೆ. ಇದು ಒಂದನೇ ರಾಜೇಂದ್ರ ಚೋಳನ ಆಳ್ವಿಕೆಯ ನಾಲ್ಕನೇ ವರ್ಷದಲ್ಲಿ ಹುಟ್ಟಿದೆ. ಅಂದರೆ ಇದರ ಕಾಲ ೧೦೧೫-೧೬ ಎಂದು ತೀರ್ಮಾನಿಸಬಹುದು. ಶಾಸನದಲ್ಲಿ ಸುತ್ತೂರನ್ನು ಬ್ರಹ್ಮದೇಯವೆಂದು ಕರೆಯಲಾಗಿದೆ. ಇದರಿಂದ ತಿಳಿದುಬರುವುದೇನೆಂದರೆ ಸುತ್ತೂರಿಗೆ ಬ್ರಾಹ್ಮಣರು ಬಂದು ನೆಲೆಸಿದ್ದರು ಹಾಗೂ ಇದು ಒಂದು ಅಗ್ರಹಾರವಾಗಿತ್ತೆಂದು ಸಹ ಊಹಿಸಬಹುದು. ಅಲ್ಲದೆ ಈ ಶಾಸನದಿಂದ ಮತ್ತೊಂದು ಅಂಶವು ತಿಳಿದುಬರುತ್ತದೆ. ಅದೇನೆಂದರೆ ಚೋಳರ ಆಡಳಿತಕ್ಕೆ ಒಳಪಟ್ಟ ಈ ಊರಿಗೆ ಅನೇಕ ತಮಿಳರು ಬಂದು ನೆಲೆನಿಂತರು. ಇದನ್ನು ಇಲ್ಲಿ ಸಿಕ್ಕಿರುವ ತಮಿಳು ಶಾಸನಗಳು ದೃಢಪಡಿಸುತ್ತವೆ. ಅಲ್ಲದೆ ಈ ಊರು ಮುಡಿಗುಂಡ ಚೋಳಮಂಡಲಂನಲ್ಲಿ ಕೇಂದ್ರೀಕೃತವಾಗಿತ್ತು. ಇದು ಗಂಗೈಕೊಂಡ ಚೋಳಮಂಡಲಂನಲ್ಲಿ ಸೇರಿತ್ತೆಂದು ಈ ಶಾಸನ ತಿಳಿಸುತ್ತದೆ.

ಈ ಗ್ರಾಮದಲ್ಲಿ ರಾಜನ ಅಧಿಕಾರಿಯಾಗಿದ್ದ ವೇಲಾನ್ ಮತ್ತು ಮುಞ್ಜಡಿ ಆರಿಯಂ ಚಿಮ್ಮನ್ ಎಂಬುವರಿಗೆ ಗ್ರಾಮದ ಜನರು ಈ ಪ್ರದೇಶದ ಬೆಲೆಯಲ್ಲಿ ಎರಡು ಖಂಡುಗ ಹತ್ತು ಬಳ್ಳ ಬಿತ್ತಬಹುದಾದ ಎರಡು ಮಾರ್ಗಣಿ ಭೂಮಿಯನ್ನು ಎರಡು ಕಳಂಜು (ತೂಕ) ಚಿನ್ನಕ್ಕೆ ಮಾರಿದರು. ಹೀಗೆ ಕೊಂಡ ಭೂಮಿಯನ್ನು ಇವರು ಸುತ್ತೂರಿನ ಸ್ತವಿಣ್ಣರ್ (ಸೋಮೇಶ್ವರ?) ದೇವಾಲಯದಲ್ಲಿದ್ದ ದುರ್ಗಾದೇವತೆಯ ಪೂಜೆಯ ಖರ್ಚಿಗಾಗಿ ದಾನ ಮಾಡಿದರು. ಭೂಮಿಯನ್ನು ಮಾರಿದ ಹಣದಿಂದ ಬಂದ ಬಡ್ಡಿಯನ್ನು ಗ್ರಾಮದ ಜನರು ಅದೇ ದೇವಾಲಯದಲ್ಲಿ ನಂದಾದೀಪ ಉರಿಸಲು ಹಾಗೂ ಆಹಾರನೈವೇದ್ಯಕ್ಕಾಗಿ ಬಿಟ್ಟರೆಂದು ಈ ಶಾಸನ ಉಲ್ಲೇಖಿಸುತ್ತದೆ. ಈ ಗ್ರಾಮದ ಜನರಲ್ಲಿ ಕೆಲವರನ್ನು ಮಾರಯ್ಯ, ವೀರಯ್ಯ, ದೇವಯ್ಯ, ಸೋಮಯ್ಯ, ನರಸಿಂಹ, ನಾರಾಯಣ, ಶ್ರೀಮಾರ ಚಾವುಣ್ಡಯ್ಯ

ಎಂದು ಶಾಸನದಲ್ಲಿ ಹೆಸರಿಸಿದೆ. ಈ ದಾನವನ್ನು ಕದಂಬಳಿಗೆ ನಾಡಿನ ಕಳೆಯೂರು ಗ್ರಾಮದ ಒಡೆಯನಾದ ಬ್ರಾಹ್ಮಣ ಅಯ್ಚುಮಯ್ಯ, ಚಾವುಣ್ಡಯ್ಯ, ಅಯ್ಯಾಹೊಳೆಯ ಬ್ರಹ್ಮಸೆಟ್ಟಿಗಳು, ಐನೊರ್ವ್ವರೂ ರಕ್ಷಿಸಬೇಕೆಂದು ಈ ಶಾಸನದಲ್ಲಿ ಕಟ್ಟು ಮಾಡಿದೆ.

ಸುತ್ತೂರು ಶ್ರೀಮಠದ ಮುಂಭಾಗದಲ್ಲಿ ಇನ್ನೊಂದು ಶಿಲಾಶಾಸನವು ಇದೆ. ಇದೂ ಸಹ ರಾಜೇಂದ್ರಚೋಳನಿಗೆ ಸೇರಿದುದು[೧೦], ಈ ಶಾಸನದ ಕಾಲ ಕ್ರಿ.ಶ. ೯೫೫ನೆಯ ಅಂಗೀರಸ ಸಂವತ್ಸರದ ಕಾರ್ತಿಕ ಮಾಸದ ಪೂರ್ಣಿಮೆ, ಸೋಮವಾರ, ರೋಹಿಣಿ ನಕ್ಷತ್ರ, ತೇದಿಯ ಈ ವಿವರಗಳು ಕ್ರಿ.ಶ. ೧೦೩೩ನೇ ವರ್ಷಕ್ಕೆ ಸರಿಹೊಂದುತ್ತದೆ. ಇದರಲ್ಲಿ ಶ್ರೋತ್ರಿಯ (ಶ್ರೋತ್ರಿಯೂರು) ಗ್ರಾಮದ ಜನರು ಈಶಾನ ಈಶ್ವರ ಮುಡೈಯಾರ್ ದೇವಸ್ಥಾನಕ್ಕೂ, ಮೂಲಸ್ಥಾನೇಶ್ವರ ದೇವಾಲಯಕ್ಕೂ, ಭೂಮಿ, ಹಸು, ಎಣ್ಣೆ ಮುಂತಾದುವುಗಳನ್ನು ದಾನ ಮಾಡಿದ ಉಲ್ಲೇಖವಿದೆ.

ಶಾಸನದ ಭಾಷೆ ಕನ್ನಡವಾದರೂ ತಮಿಳು ಭಾಷೆಯ ಪ್ರಭಾವವನ್ನು ಕಾಣಬಹುದು. ಅವುಗಳಲ್ಲಿ ಕೆಲವು ಪದಗಳು ಈ ರೀತಿ ಇವೆ. 'ಅರುಳಿಚ್ಚಯ್ಯವದಾವರು', 'ಕಲ್ವೆಟ್ಟ ಕೊಡುವುದಕ್ಕೆ ತಿರುವಾಯಿ ತೊಳಪಡಿ', 'ತಿರುವಮುದು, ಪೊನ್ನರಕುಡುತ್ತು ಮಣ್ಣರ ಕೊಂಡು' ಎಂಬ ಮೇಲಿನ ಪದಗಳು ತಮಿಳಿನ ಪ್ರಭಾವಕ್ಕೆ ಸಾಕ್ಷಿಯಾಗಿವೆ.

ಈ ಶಾಸನದಲ್ಲಿ ಹೆಸರಿಸಲಾಗಿರುವ ಮೂಲಸ್ಥಾನ ದೇವರ್ಗೆ ದೇವಾಲಯವನ್ನು ಗ್ರಾಮದ ಮಾರಯ್ಯಸೆಟ್ಟಿಯ ಹೆಂಡತಿಯಾದ ಗುಂಡಬ್ಬೆ ಕಟ್ಟಿಸಿದಳೆಂದು ಶಾಸನದಿಂದ ತಿಳಿದುಬರುತ್ತದೆ. ಅಲ್ಲದೆ ಶ್ರೀಯೂರ ಚಾವುಣ್ಡಯ್ಯ ಎಂಬುವವನು ಈ ಊರಿನ ಪ್ರಮುಖರಲ್ಲಿ ಒಬ್ಬನಾಗಿದ್ದು ಈಶಾನ ಈಶ್ವರ ಮೊಡೆಯರ್ಗ್ಗಂ, ಮೂಲಸ್ಥಾನ ಮೊಡೆಯರ್ಗ್ಗಂ, ದೇವಾಲಯಗಳಿಗೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದನ್ನು ತಿಳಿದುಬರುತ್ತದೆ ಹಾಗೂ ಈ ಆಲಯಗಳಲ್ಲಿ ತ್ರಿಕಾಲದಲ್ಲಿಯೂ ತ್ರಿವಳಿ, ಪಟ್ಟಿ, ಖಂಡಿಕೆ, ಜಯಗಂಟೆ ಮತ್ತು ಕಾಳೆ ಎಂಬ ಪಂಚಮಹಾಶಬ್ದಗಳನ್ನು ಭಾರಿಸಬೇಕೆಂದು ಸೂಚಿಸಿದೆ. ದಾನಿಗಳ ಹೆಸರಿನಲ್ಲಿ ದೇಗುಲದ ಪೂರ್ವದಿಕ್ಕಿನ ಮಠದ ಪೂವಿನಸೆಟ್ಟಿಯ ಪ್ರಸ್ತಾಪವಿದೆ. ಬಹುಶಃ ಈ ಮಠವೇ ಇಂದಿನ ಶ್ರೀ ಶಿವರಾತ್ರೀಶ್ವರ ಮಠವಾಗಿದ್ದು, ಅಂದಿನ ಪೀಠಾಧಿಪತಿಗಳಾಗಿ ಈಶಾನೇಶ್ವರ ಒಡೆಯರು ಇದ್ದರೆಂಬ ಶ್ರೀ ನಂಜುಂಡಾರಾಧ್ಯರ ಅಭಿಪ್ರಾಯವನ್ನು ಒಪ್ಪಬಹುದು[೧೧].

ಈ ಶಾಸನದಲ್ಲಿರುವ ಮತ್ತೊಂದು ಗಮನಾರ್ಹವಾದ ಅಂಶವೆಂದರೆ ಸೊತ್ತಿಯೂರವ್ವಗೂ (ಸುತ್ತೂರಮ್ಮ) ಸಹ ಭೂಮಿ ದಾನ ಮಾಡಿರುವುದನ್ನು ಹೇಳಿರುವುದು. ಇದು ಸುತ್ತೂರಿನ ಗ್ರಾಮದೇವತೆಯಾಗಿದ್ದು ಗ್ರಾಮದ ಪೂರ್ವಕ್ಕೆ ಕಾಲುವೆ ಮತ್ತು ಗದ್ದೆಗಳ ನಡುವೆ ಇದೆ. ಇದನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಇಲ್ಲಿ ಸಪ್ತಮಾತೃಕೆಯರ ವಿಗ್ರಹಗಳಿವೆ. ಇವು ಸುಮಾರು ೮-೯ನೇ ಶತಮಾನಕ್ಕೆ ಸೇರಿದ್ದಂತೆ ಕಾಣುತ್ತದೆ. ಅಂದರೆ ಗಂಗರ ಕಾಲಕ್ಕೆ ಇದು ಸರಿಹೊಂದುತ್ತದೆ.

ಸುತ್ತೂರಿನಲ್ಲಿರುವ ನಾರಾಯಣಸ್ವಾಮಿ ದೇವಸ್ಥಾನ ಪ್ರಾಚೀನವಾದ ದೇವಾಲಯ. ಆದರೆ ಇದನ್ನು ಈಗ ಸ್ಥಳಾಂತರ ಮಾಡಿ ಹೊಸದಾಗಿ ಕಟ್ಟಿಸಿದ ಆಲಯದಲ್ಲಿ ನಾರಾಯಣಸ್ವಾಮಿಯನ್ನು

ಪ್ರತಿಷ್ಠಾಪಿಸಲಾಗಿದೆ. ಹಳೆಯ ನಾರಾಯಣಸ್ವಾಮಿ ದೇವಸ್ಥಾನದ ಹಿಂಭಾಗ ದಕ್ಷಿಣ ಪಾರ್ಶ್ವದಲ್ಲಿ ಗೋಡೆಯ ಮೇಲೆ ಮತ್ತೊಂದು ಶಾಸನವಿದೆ[೧೨].

ಮೊದಲು ಈ ದೇವಾಲಯದಲ್ಲಿದ್ದ ವಿಗ್ರಹವನ್ನು ವರದರಾಜ ವಿಗ್ರಹವೆಂದು ಇದು ಗಂಗರ ಕಾಲದ್ದೆಂದೂ ಡಾ. ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ[೧೩]. ಈ ದೇವಸ್ಥಾನದಲ್ಲಿರುವ ಶಾಸನದಲ್ಲಿ ಇದನ್ನು ನಾಗಕೇಶವ ಎಂದು ಕರೆಯಲಾಗಿದೆ. ಈ ಶಾಸನ ಸ್ವಲ್ಪ ಮಟ್ಟಿಗೆ ಭಗ್ನವಾಗಿರುವುದರಿಂದ ಕೆಲವು ವಿವರಗಳು ಅಲಭ್ಯವಾಗಿವೆ. ಹೊಯ್ಸಳರ ದೊರೆ ೧ನೇ ನರಸಿಂಹನ ದಂಡನಾಯಕರಾಗಿದ್ದ ಲಕ್ಷ್ಮಯ್ಯನು ತನ್ನ ಪ್ರಾಂತೀಯ ರಾಜಧಾನಿಯಾದ ಸೂತ್ತಿಯೂರಿನಲ್ಲಿ ಕ್ರಿ.ಶ. ೧೧೬೯ರಲ್ಲಿ ಈ ವಿಗ್ರಹವನ್ನು ಪ್ರತಿಷ್ಠಾಪಿಸಿದನೆನ್ನಲಾಗಿದೆ. ಈ ವಿಗ್ರಹ ಹೆಚ್ಚಿನ ಅಲಂಕಾರವಿಲ್ಲದೆ ಸರಳವಾಗಿದೆ. ಬಹುಶಃ ಲಕ್ಷ್ಮಯ್ಯನು ಮೊದಲಿದ್ದ ದೇವಾಲಯವನ್ನು ಜೀರ್ಣೋದ್ಧರಗೊಳಿಸಿ ಪುನಃ ಪ್ರತಿಷ್ಠಾಪನೆ ಮಾಡಿರಬಹುದು ಎನ್ನಲಾಗಿದೆ. ಈ ದೇವಾಲಯದ ಪೂಜೆಗೆ ಮತ್ತು ನೈವೇದ್ಯಕ್ಕೆ ಬೆಳುಗಲಿ ಗ್ರಾಮವನ್ನು ದಾನವಾಗಿ ನೀಡಿರುವುದನ್ನು[೧೪] ಶಾಸನದಲ್ಲಿ ಹೇಳಿದೆ. ಈ ದೇವಾಲಯವನ್ನು ಈಗಿನ ಸುತ್ತೂರಿನ ಮಠಾಧ್ಯಕ್ಷರಾದ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ೨೦೦೭ರಲ್ಲಿ ಈ ದೇವಾಲಯವನ್ನು ಸ್ಥಳಾಂತರಗೊಳಿಸಿ ನಿರ್ಮಿಸಲಾಗಿದೆ.

ಸೋಮೇಶ್ವರ ದೇವಸ್ಥಾನದ ಉತ್ತರದ ಗೋಡೆಯ ಸಮೀಪದಲ್ಲಿದ್ದ ವೀರಗಲ್ಲು[೧೫] (ಈಗ ಇದನ್ನು ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ) ಹೊಯ್ಸಳರ ದೊರೆ ೨ನೇ ಬಲ್ಲಾಳನ ಕಾಲಕ್ಕೆ ಸೇರಿದ ಶಾಸನ (೧೧೯೬-೯೭) ಹಿರಿಯನಾಡ ಒಡನಾಡಿಗೆ ಸೇರಿದ ಸೊತ್ತಿಯೂರು ಗ್ರಾಮವನ್ನು ಕುಮಾರಲಕ್ಷ್ಮಿದೇವ ಎಂಬ ದಂಡನಾಯಕನು ಮುತ್ತಿಗೆ ಹಾಕಿದನು. ಆಗ ಯಭಾರಸಾಲೆಯನ ತಮ್ಮನಾದ ಮಂಚೆಯಣನು ಹಲವರನ್ನು ಕೊಂದು ತಾನೂ ಮಡಿದ ವಿಷಯವನ್ನು ಈ ಶಾಸನದಲ್ಲಿ ತಿಳಿಸಿದೆ. ಈ ವೀರಗಲ್ಲಿನ ಮೇಲ್ಭಾಗ ಒಡೆದು ಹೋಗಿದ್ದು ವಿವರಗಳು ಅಸ್ಪಷ್ಟವಾಗಿದೆ.

ನಾರಾಯಣಸ್ವಾಮಿ ದೇವಸ್ಥಾನದ ಹಿಂದೆ ದಕ್ಷಿಣ ಪಾರ್ಶ್ವದ ಗೋಡೆಯ ಮೇಲೆ ಮತ್ತೊಂದು ಶಾಸನವಿದ್ದು[೧೬] ಇದು ಅಸ್ಪಷ್ಟತೆಯನ್ನು ಹೊಂದಿದೆ. ಅಲ್ಲದೆ ಈ ಶಾಸನ ಭಗ್ನವಾಗಿ ಸವೆದಿದ್ದು ವಿವರಗಳು ಅಲಭ್ಯವಾಗಿವೆ.

ಹಿಂದೆ ಈಶಾನ ಈಶ್ವರ ಮೊಡೆಯಾರ್ ಎಂದು ಕರೆಯುತ್ತಿದ್ದೌ ದೇವಾಲಯವೇ ಮುಂದೆ ಸೋಮೇಶ್ವರ ದೇವಾಲಯವೆಂಬ ಹೆಸರನ್ನು ಪಡೆದುಕೊಂಡಿತು. ಚೋಳರು ಇಲ್ಲಿದ್ದ ಮೂಲಸ್ಥಾನೇಶ್ವರಲಿಂಗವನ್ನು ತೆಗೆಸಿ (ಮೂಲಸ್ಥಾನೇಶ್ವರ ಲಿಂಗವನ್ನು ಮಠದ ವಸ್ತುಸಂಗ್ರಹಾಲಯದಲ್ಲಿ ನೋಡಬಹುದು) ಆ ಜಾಗದಲ್ಲಿ ಈಗಿರುವ ಚೋಳರ ಕಾಲದ ಸೋಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದರೆನ್ನಲಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದ ಮಂಟಪದ ಎಂಟು ಕಂಬಗಳಲ್ಲಿ ಶಾಸನಗಳಿವೆ[೧೭]. ಇವುಗಳಲ್ಲಿ ಒಂದನ್ನು ಹೊರತುಪಡಿಸಿ[೧೮] ಉಳಿದವುಗಳೆಲ್ಲವನ್ನು ಸೋಮೇಶ್ವರ ದೇವಾಲಯಗಳ ಮಂಟಪಕ್ಕೆ ಬೇರೆ ಬೇರೆ ವ್ಯಕ್ತಿಗಳು ಶಕ ವರ್ಷ ೧೧೮೬ನೆಯ ವರ್ಷದ (ಕ್ರಿ.ಶ.

೧೨೬೪) ರಕ್ತಾಕ್ಷಿ ಸಂವತ್ಸರದ ಆಷಾಡ ಶುದ್ಧಬಿದಿಗೆಯೆಂದು ಮಾಡಿಸಿಕೊಟ್ಟಿದ್ದಾರೆ (ಎರಡರಲ್ಲಿ ತಿಥಿಯನ್ನು ಶುದ್ದ ಪಾಡ್ಯಮಿ (೧) ಎಂದು ಹೇಳಿದೆ). ಇವುಗಳಲ್ಲಿ ಕೆಲವು ಶಾಸನಗಳು ಭಗ್ನಗೊಂಡಿದ್ದು ಕೆಲವು ಹೆಸರು ತಿಳಿದುಬರುವುದಿಲ್ಲ. ರಕ್ತಾಕ್ಷಿ ಸಂವತ್ಸರದ ಆಷಾಡಶುದ್ಧ ಬಿದಿಗೆಯೆಂದು ಈ ಮಂಟಪವನ್ನು ಕಟ್ಟಿಸಲಾಗಿದೆ ಎಂದು ಶಾಸನದಲ್ಲಿ ಹೇಳಿದೆ[೧೯]. ಕೆಲವು ಶಾಸನಗಳಲ್ಲಿ ಈ ಕಂಬಗಳನ್ನು ಮಾಡಿಸಿದವರ ಹೆಸರುಗಳಿವೆ. ಒಂದು ಕಂಬವನ್ನು ದಾಸಾಚಾರಿಯ ಮಗ ನಾರಣಾಚಾರಿ ಎಂಬುವವನು[೨೦]. ಇನ್ನೊಂದು ಕಂಬವನ್ನು ರಾಜಾಚಾರಿ ಮಗ ಳಳವವಜಗೋಮ (?) ಕಾಳಾಚಾರಿ[೨೧] ಎಂಬುವವನು ಮಾಡಿಸಿದನೆಂದು ತಿಳಿದುಬರುತ್ತದೆ. ಅಲ್ಲದೆ ಈ ಶಾಸನದಲ್ಲಿ ನೃತ್ಯಮಂಟಪವಾಗಿತ್ತೆಂದು ತಿಳಿಸಿದೆ. ಕವುಸಿಕ ಗೋತ್ರದ ಬಸವಯ್ಯನ ಮಗ ಬಪ್ಪೆಯನು ಒಂದು ಕಂಬವನ್ನು[೨೨] ಕಾಧಂಮನ ಮಗ ಭಕ್ತ ರಜಾಕಶೆಟ್ಟಿ[೨೩] ಮತ್ತೊಂದು ಕಂಬವನ್ನು ಮಾಡಿಸಿದನೆಂದು ಈ ಶಾಸನಗಳಿಂದ ತಿಳಿದುಬರುತ್ತದೆ. ಈ ಮಂಟಪಕ್ಕೆ ಸೇರಿದ ಮತ್ತೊಂದು ಕಂಬ ಹಿಂದೆ ಬಿಲ್ವಪತ್ರ ತೋಟವಾಗಿದ್ದ ಸ್ಥಳದಲ್ಲಿ ದೊರಕಿದ್ದು ಮರಿನಾಯಕ ಎಂಬುವನನ್ನು ಈ ಕಂಬವನ್ನು ಮಾಡಿಸಿದನೆಂದು ತಿಳಿಸುತ್ತವೆ[೨೪]. ಈ ಕಂಬಗಳಲ್ಲಿ ಒಂದನ್ನು ನಾಗಣ್ಣನ ಅಳಿಯ ರಾಘವದೇವ ಮಾಡಿಸಿದನೆಂದು ಶಾಸನ[೨೫] ಹೇಳಿದೆ. ಮೇಲಿನ ಕಂಬಗಳನ್ನು ಮಾಡಿಸಿದ ೧೩ ವರ್ಷಗಳ ನಂತರ ಈ ಕಂಬವನ್ನು (೧೨೭೭) ಮಾಡಿಸಿರುವುದು ಆ ಶಾಸನದಲ್ಲಿರುವ ಕಾಲಮಾನದಿಂದ ತಿಳಿದುಬಂದಿದೆ (೧೨೭೭ ಆಗಸ್ಟ್ ೭). ಸೋಮೇಶ್ವರ ದೇವಸ್ಥಾನದಲ್ಲಿ ಎರಡನೇ ಮುಖಮಂಟಪ ಒಂದಿತ್ತು. ಅದರ ಕಂಬದಲ್ಲಿ ಒಂದು ಶಾಸನವಿತ್ತು[೨೬]. ಅದರಲ್ಲಿ ಕಾಶ್ಯಪಗೋತ್ರದ ಗಂಗಗೊಂಡ ಮಾರಾಯನ ಮೊಮ್ಮಗ, ಜಗದೇವ ಮಾರಾಯನ ಮಗನಾದ ಬಿಟ್ಟಿಮಾರಾಯನು ನಿಲ್ಲಿಸಿದನೆಂದು ತಿಳಿಸಿದೆ. ಈತ ಬಹುಶಃ ಸುತ್ತೂರಿನ ಊರೊಡೆಯ ನಾಗಿದ್ದಿರಬಹುದೆಂದು ಊಹಿಸಲಾಗಿದೆ. ಈ ಶಾಸನದ ಮೇಲಿರುವ ಲಿಪಿಯ ಆಧಾರದ ಮೇಲೆ ಇದನ್ನು ೧೩ನೇ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದು.

ಸುತ್ತೂರಿನ ಶ್ರೀಮಠದ ಸ್ವಾಮಿಗಳವರ ಬಗ್ಗೆ ಸ್ಪಷ್ಟವಾಗಿ ಮಾಹಿತಿ ಸಿಗುವ ಈ ಶಾಸನ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಗದ್ದಿಗೆಯ ನಂದಿ ಪೀಠದಲ್ಲಿ ಸಿಕ್ಕಿದೆ[೨೭]. ೧೬ನೇ ಶತಮಾನಕ್ಕೆ ಸೇರಿರುವ ಈ ಶಾಸನದಲ್ಲಿ ಶ್ರೀಮಠದ ಗುರುಗಳಾದ ಶ್ರೀ ಶಿವರಾತ್ರಿ ದೇವರ ನಿರೂಪದಿಂದ ಲಿಂಗಣ್ಣ ಒಡೆಯರು ದುಂದುಭಿ ಸಂವತ್ಸರದ ಮಾಘ ಶುದ್ಧ ೧೦ ಶನಿವಾರದಂದು ಬಸವ ಪ್ರತಿಷ್ಠೆ ಮಾಡಿದರೆಂದು ತಿಳಿದುಬರುತ್ತದೆ. ಈ ಶಾಸನ ವಿವರಗಳಿಂದ ೧೫೦೩ನೇ ಜನವರಿ ೭ಕ್ಕೆ ಸರಿಬರುತ್ತದೆ. ಈ ಶಿವರಾತ್ರಿ ದೇವರು ಶ್ರೀಮಠದ ಪೀಠಾಧಿಕಾರಿಗಳಾದ ಭಂಡಾರಿ ಬಸವಪ್ಪ ಒಡೆಯರ್ ಎಂದು ಗುರುತಿಸಬಹುದು. ಕಾರಣವೇನೆಂದರೆ ಶ್ರೀಪೀಠದ ಎಲ್ಲಾ ಗುರುಗಳೂ ತಮ್ಮ ಹೆಸರಿಗೆ ಶಿವರಾತ್ರಿದೇವ ಎಂಬ ಹೆಸರನ್ನು ಸೇರಿಸಿಕೊಳ್ಳುತ್ತಿದ್ದರು. ಭಂಡಾರಿ ಬಸವಪ್ಪ ಒಡೆಯರ ಕಾಲ ಕ್ರಿ.ಶ. ೧೪೯೦–೧೫೧೫. ಇದು ಮೇಲಿನ ದಿನಾಂಕಕ್ಕೆ ಸರಿಹೊಂದುತ್ತದೆ.

ನಂಜನಗೂಡಿನ ತೀರ್ಥಘಟ್ಟದ ಬಳಿ ಇರುವ ಹದಿನಾರು ಕಾಲು ಮಂಟಪದ ಮೇಲ್ಭಾವಣಿಯಲ್ಲಿ ಸಿಕ್ಕಿರುವ ಎರಡು ಶಾಸನಗಳು ಸುತ್ತೂರಿಗೆ ಸಂಬಂಧಿಸಿದ ಮಾಹಿತಿಗಳನ್ನು ನೀಡುತ್ತವೆ[೨೮]. ಈ ಎರಡೂ ಶಾಸನಗಳೂ ಸಹ ಸ್ವಲ್ಪಮಟ್ಟಿಗೆ ಭಗ್ನಗೊಂಡಿವೆ. ಈ ಶಾಸನಗಳಲ್ಲಿ ಸುತ್ತೂರು ಸಿಂಹಾಸನದ ೯ನೇ ಜಗದ್ಗುರುಗಳಾದ ಭಂಡಾರಿ ಬಸವಣ್ಣ ಒಡೆಯರ ಬಗ್ಗೆ ಮಾಹಿತಿ ಇದೆ. ಇವೆರಡೂ ಶಾಸನಗಳ ಕಾಲ ಒಂದೇ ಆಗಿದೆ. ಶ್ರಾವಣ ಶುದ್ಧ ಭಾವಿ ಸಂವತ್ಸರದ ಶಕ ವರ್ಷ ೧೪೩೬ ಎಂದು ಈ ಶಾಸನದಲ್ಲಿ ಕೆತ್ತಲ್ಪಟ್ಟಿದೆ. ಭಂಡಾರಿ ಬಸವಣ್ಣ ಒಡೆಯರು ಸಂಗಮೇಶ್ವರ ಎಂಬ ದೇವರನ್ನು ಕಪಿಲಾ ನದಿಯ ದಕ್ಷಿಣದಲ್ಲಿ ಪ್ರತಿಷ್ಠಾಪಿಸಿ ಆ ದೇವಾಲಯದ ಮೇಲ್ವಿಚಾರಣೆಯನ್ನು ಸಿರಿಗೆರೆ ಒಡೆಯ ಎಂಬುವವರಿಗೆ ನಿಯೋಜಿಸಿ ಅವರಿಗೆ ದೇವಾಲಯದ ವೆಚ್ಚಕ್ಕಾಗಿ ಭೂಮಿಯನ್ನು ದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಮೊದಲ ಶಾಸನದಲ್ಲಿ ಕೊತ್ತಗಾಲದ ಸಿಂಡೆನಹಳ್ಳಿ ಗ್ರಾಮದ ಹಾಗೂ ಮುಳ್ಳೂರು ಸ್ಥಳದ ಚೀಲಹಳ್ಳಿಯನ್ನು ಸಂಗಮೇಶ್ವರ ದೇವಾಲಯದಲ್ಲಿ ವಾಸವಾಗಿದ್ದು ಸಿರಿಗೆರೆ ಒಡೆಯರಿಗೆ ಅರ್ಧ ನೀಡಿ ಉಳಿದರ್ಧವನ್ನು ಸಂಗಮೇಶ್ವರ ದೇವಾಲಯಕ್ಕೆ ದಾನ ಮಾಡಿದುದಾಗಿ ತಿಳಿದುಬರುತ್ತದೆ.

ಎರಡನೆಯ ಶಾಸನದಲ್ಲಿ ತಮಗೆ ನೀಡಲಾಗಿದ್ದು ಬೊಪ್ಪನಹಳ್ಳಿ ಗ್ರಾಮದ, ಹೊಳಲವಾಡಿ ಗದ್ದೆ ಮತ್ತಿತರ ಭೂಮಿಗಳನ್ನು ಭಂಡಾರಿ ಬಸವಪ್ಪ ಒಡೆಯರು ತಮ್ಮ ಹಿರಿಯ ಗುರುಗಳ ಪೂಜೆಯನ್ನು ನೈವೇದ್ಯಕ್ಕೆ ಕೊಟ್ಟರೆಂದು ಹೇಳಲಾಗಿದೆ.

ಈ ಭಂಡಾರಿ ಬಸವಪ್ಪ ಒಡೆಯರನ್ನು ಪರ್ವತ ಒಡೆಯರ ಶಿಷ್ಯರೆಂದು ಮೊದಲು ಹೆಡಿಯಾಲದಲ್ಲಿದ್ದು ಈಗ ಸುತ್ತೂರಿನಲ್ಲಿರುವ ಶಾಸನ[೨೯] ಸ್ಪಷ್ಟವಾಗಿ ಹೇಳುತ್ತದೆ. ಅಲ್ಲದೆ ಬಸವಪ್ಪ ಒಡೆಯರು ತಾವು ಪ್ರತಿಷ್ಠಾಪಿಸಿದ ಸಂಗಮೇಶ್ವರ ದೇವಾಲಯದ ಪೂಜಾಕಾರ್ಯಕ್ಕೆ ಅಲ್ಲಿ ವಾಸವಾಗಿದ್ದು ಸಿರಿಗೆರೆ ಒಡೆಯರಿಗೆ ಹಾಗೂ ಅವರೊಡನಿದ್ದ ಅವರ ಹಿರಿಯರಿಗೆ ಮುಳ್ಳೂರು ಹೆಡೆಯಾಲ ಸ್ಥಳದ ಚೀಲಹಳ್ಳಿಯನ್ನು ಸಂಗಮೇಶ್ವರ ದೇವರಿಗೂ, ಸಿರಿಗೆರೆ ಒಡೆಯರಿಗೂ ಸಹ ಭಾಗ ಮಾಡಿದುದಾಗಿ ಈ ಶಾಸನ ಹೇಳುತ್ತಿದೆ. ಅಲ್ಲದೆ ಇದನ್ನು ಪಾಲಿಸದಿದ್ದರೆ ಅವರು ಬ್ರಾಹ್ಮಣರನ್ನು ಕೊಲೆ ಮಾಡಿದ ಮತ್ತು ಕಾಶಿಯಲ್ಲಿ ಗೋಹತ್ಯೆ ಮಾಡಿದ ಪಾಪಕ್ಕೆ ಗುರಿಯಾಗುವರು ಎಂದು ಹೇಳಿದೆ ಮತ್ತು ೬೦,೦೦೦ ವರ್ಷಗಳವರೆಗೆ ಹೀಗೆ ಮುಂದುವರೆಯಬೇಕೆಂದು ತಿಳಿಸಿದೆ.

೧೫೧೭ರ ಏಪ್ರಿಲ್ ೨೧ನೇ ದಿನದ ಶಾಸನವೊಂದು[೩೦] ನಂಜನಗೂಡು ತಾಲ್ಲೂಕಿನ ದೇವನೂರಿನಲ್ಲಿ ದೊರಕಿದೆ. ಈ ಶಾಸನದ ಕೆಲವು ಸಾಲುಗಳು ಸವೆದುಹೋಗಿದ್ದು ಸಾಳುವ ಲಿಂಗರಾಜ ಎಂಬುವವನು ದೇವನೂರಿನ ಮಾಂಡಲೀಕನಾಗಿ ಆಳುತ್ತಿದ್ದು ಭಂಡಾರಿ ಬಸವಪ್ಪ ಒಡೆಯರನ್ನು ಬರಮಾಡಿಕೊಂಡು ಅವರ ಪಾದಪೂಜೆ ಮಾಡಿ ಅವರಿಗೆ ಉಂಬಳಿ ನೀಡಿದನು ಎಂದು ನಂಜುಂಡಾರಾಧ್ಯರು ಬರೆದಿದ್ದಾರೆ[೩೧]. ಈ ಶಾಸನದಲ್ಲಿ ತಾಯೂರು ಮತ್ತು ಧಾನುಧರ್ಮಗಳ ಬಗ್ಗೆ ಪ್ರಸ್ತಾಪಿಸಲಾಗಿದೆ.

ಸುತ್ತೂರು ಮಠದ ಎದುರುಗಡೆ ಇರುವ ನಾಲ್ಕನೆಯ ಕಲ್ಲಿನಲ್ಲಿ ಮತ್ತೊಂದು ಶಾಸನವಿದೆ[೩೨]. ನಂಜುಂಡಾರಾಧ್ಯರು ಬರೆಯುತ್ತಾ ಮಹಾಮಂಡಲೇಶ್ವರ ರಾಮರಾಜ ತಿರುಮಲರಾಚಯ್ಯದೇವನ ಕಾರ್ಯಕರ್ತನಾದ ಭದ್ರಯ್ಯನು ಸೋಮೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದನೆಂದು ಅಭಿಪ್ರಾಯಪಟ್ಟಿದ್ದಾರೆ[೩೩]. ಆದರೆ ಶಾಸನವನ್ನು ಓದಿದಾಗ ಅದರ ಅರ್ಥವೇ ಬೇರೆಯಾಗಿದೆ. ಭದ್ರಯ್ಯನು ಸುತ್ತೂರು ಮಠದ ಹಿರಿಯರುಗಳಿಗೆ ಗುತ್ತಿಗೆಯಾಗಿ ಶ್ರೀ ಸೋಮೇಶ್ವರ ದೇವರಿಗೆ ನೀಡಿದ್ದ ಭೂಹಿಡುವಳಿಗಳನ್ನು ಈಗ ಶ್ರೀಮಠಕ್ಕೆ ನೀಡಿ ಅವರಿಂದ ಒಂದು ವರ್ಷಕ್ಕೆ ವಿಕ್ರುತ ಸಂವತ್ಸರದ ಆಷಾಢ ಶುದ್ಧ ೧ ಆರಾಭ್ಯ ಖರ ಸಂವತ್ಸರದ ದೇವಸ್ಥಾನದ ಭಂಡಾರಕ್ಕೆ ಸಲ್ಲಿಸಬೇಕೆಂದು ತಿಳಿಸಿದೆ. ಭಾ.ರಾ. ಗೋಪಾಲ್‌ರವರು ಅಭಿಪ್ರಾಯಪಟ್ಟಿರುವಂತೆ[೩೪] ಸುತ್ರಯ ಪಟ್ಟಿ ಗುತಿಗೆ ಎಂದರೆ ಐದು ವರ್ಷಕ್ಕೊಮ್ಮೆ ನಿಗದಿಗೊಳಿಸಲಾದ ಗುತ್ತಿಗೆಯ ಹಣಕ್ಕೆ ಕೇವಲ ಒಂದೊಂದು ವರ್ಷಕ್ಕೆ ಮಾತ್ರ ಅನ್ವಯಿಸುವಂತೆ ಭೂಹಿಡುವಳಿಗೆ ಬಳಸುವ ಮಾತು ಇದಾಗಿದೆ ಎಂದಿದ್ದಾರೆ.

ಸುತ್ತೂರು ಮಠದ ಎದುರುಗಡೆಯಿರುವ ಐದನೇ ಕಲ್ಲಿನಲ್ಲಿ[೩೫] ಇಮ್ಮಡಿ ಶಿವರಾತ್ರಿದೇವರು ಪೀಠಾಧಿಪತಿಗಳಾಗಿದ್ದಾಗ ಅಲ್ಲಿನ ಮಹತ್ತಿನ ಕೆರೆಗೆ ಭಕ್ತನೊಬ್ಬ ದಾನ ಮಾಡಿದ ಮಾಹಿತಿ ಇದೆ. ಈ ಕಲ್ಲಿನ ಕೆಳಭಾಗ ಒಡೆದು ಹೋಗಿದೆ. ಅದರಿಂದ ಈ ಶಾಸನದ ಪೂರ್ಣ ಪಾಠವೂ ಸಹ ತಿಳಿದುಬಂದಿಲ್ಲ. ಆದರೆ ದಾನಮಾಡಿದ ಹಣಕ್ಕೆ ಬರುವ ಬಡ್ಡಿಯಿಂದ ಕೆರೆಯ ಜೀರ್ಣೋದ್ಧಾರ ಇತ್ಯಾದಿ ಕೆಲಸಗಳಿಗೆ ಬಳಸಬೇಕೆಂದು ಏರ್ಪಾಡು ಮಾಡಿರಬಹುದಾಗಿದೆ.

ಸುತ್ತೂರು ಮಠದ ಎದುರುಗಡೆ ಇರುವ ಆರನೇ ಕಲ್ಲಿನ ಶಾಸನದಲ್ಲಿ[೩೬] ವಿಜಯನಗರವನ್ನು ವೆಂಕಟಪತಿರಾಜನು ಆಳುತ್ತಿದ್ದಾಗ ಹದಿನಾಡು ಸೀಮೆಯನ್ನು ಪ್ರಭುದೇವಪ್ಪಗೌಡನ ಮಗನಾದ ರಾಮರಾಜನಾಯಕನು ತನ್ನ ತಾಯಿಯಾದ ಚಂನ್ನಾಜಿಯಮ್ಮನಿಗೆ ಒಳ್ಳೆಯದಾಗಲಿ ಎಂದು ತನ್ನ ಆಡಳಿತಕ್ಕೆ ಸೇರಿದ ಹೊಂಗನೂರು ಸ್ಥಳದ ಹಸುರಹಳ್ಳಿ ಗ್ರಾಮವನ್ನು ಆಗ ಸುತ್ತೂರಿನ ಸಿಂಹಾಸನಾಧೀಶ್ವರರಾದ ಚನ್ನಬಸವರಾಜ ದೇವರಿಗೆ ಸಲ್ಲಿಸಿದುದಾಗಿ ತಿಳಿದುಬರುತ್ತದೆ. ಈ ಹೊಂಗನೂರು ಗ್ರಾಮ ಈಗ ಚಾಮರಾಜನಗರ ಜಿಲ್ಲೆಗೆ ಸೇರಿದ ಒಂದು ಹಳ್ಳಿಯಾಗಿದೆ.

ಸುತ್ತೂರು ಮಠದ ಎದುರುಗಡೆ ಇರುವ ಮತ್ತೊಂದು ಕಲ್ಲಿನಲ್ಲಿ ಸುತ್ತೂರಿನ ಸೋಮೇಶ್ವರ ದೇವಾಲಯಕ್ಕೆ ಉಮ್ಮತ್ತೂರಿನ ನರಸಪ್ಪಯ್ಯನ ಮಗನಾದ ರಾಮಪ್ಪನು ಭೂಮಿಯನ್ನು ಖರೀದಿಸಿ ನಂತರ ದಾನ ಮಾಡಿದುದಾಗಿ[೩೭] ಈ ಶಾಸನದಲ್ಲಿ ತಿಳಿಸಿದೆ. ಈ ಶಾಸನದಲ್ಲಿ ಕಾಲದ ಬಗ್ಗೆ ಮಾಹಿತಿ ಇರುವ ಭಾಗ ಒಡೆದುಹೋಗಿದೆ. ಆದರೆ ಇದರ ಲಿಪಿಯನ್ನು ನೋಡಿದರೆ ಇದು ೧೬ನೇ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ.

ಸುತ್ತೂರಿನಲ್ಲಿ ಸಿಕ್ಕಿರುವ ಮತ್ತೊಂದು ಶಾಸನದಲ್ಲಿ ದೇಪಯ್ಯ ಎಂಬಾತನು ಕಟ್ಟಿಸಿದ ಮಂಟಪದ ಉಲ್ಲೇಖವಿದೆ. ಆ ಮಂಟಪದ ಕಂಬವೊಂದರಲ್ಲಿ ದೇಪಯ್ಯನು ಕೊರೆಸಿರುವ ಶಾಸನವಿದೆ[೩೮]. ಇದರಲ್ಲಿ ಸೋಮೇಶ್ವರ ದೇವಾಲಯದ ಸ್ಥಾನಿಕನಾಗಿದ್ದು ನಿಜಲಿಂಗ ಒಡೆಯರ ಮಗ

ಗಂಗೊಡೆಯರು. ಗಂಗೊಡೆಯರ ಮಗ ಚಂದ್ರಯ್ಯನ ತಮ್ಮ ದೇಪಯ್ಯ ಎಂದು ಉಲ್ಲೇಖವಿದೆ. ಅಲ್ಲದೆ ದೇವರಿಗೆ ಮೊಸರನ್ನ ನೈವೇದ್ಯ ಮಾಡಲು ಹಣವನ್ನು ದತ್ತಿಯಾಗಿ ಬಿಟ್ಟ ವಿಚಾರವಿದೆ.

"ಸುತ್ತೂರು ಮಠದ ಮಂತ್ರ ಮಹರ್ಷಿಗಳು ಸಂಗ್ರಹಿಸಿದ್ದ ತಾಮ್ರಶಾಸನವೊಂದು ಮಠದ ಪತ್ರಾಗಾರ ಇಲಾಖೆಯಲ್ಲಿದೆ[೯]. ಈ ಶಾಸನ ೧೭೭೧ ವರ್ಷಕ್ಕೆ ಅಂದರೆ ೧೮ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ. ಇದರಲ್ಲಿ ಶಾಲಿವಾಹನ ಶಕ ವರ್ಷ ೧೬೯೩ನೇ ಖರ ಸಂವತ್ಸರದ ಶ್ರಾವಣ ಶುಕ್ಲದ ದಶಮಿಯಲ್ಲಿ ಪೇಟಿಶೆಟ್ಟಿ, ಪಟ್ಟಣಸ್ವಾಮಿ ಮುಂತಾದ ಉಭಯ ನಾನಾ ದೇಶದ ಮಹಾನಾಡಿನ ವರ್ತಕರು ಕಾಲಂಗಡಿ ಮಠಕ್ಕೆ ಬರೆದುಕೊಟ್ಟ ದಾನದ ಬಗ್ಗೆ ಉಲ್ಲೇಖವಿದೆ. ಎಡದೊರೆಕೋಟೆಗೆ ಹೋಗುವ ಮಾರ್ಗದಲ್ಲಿ ಮೂಲೆಹೇರಿಗೆ ಒಂದು ಕಾಸು, ಜವಳಿ, ಹೊಗೆಸೊಪ್ಪು, ಅರಿಸಿಣ, ಮೆಣಸು ಮುಂತಾದ 'ಕನಾಡ ಸರಕಿನ' ಹೇರಿಗೆ ೨ ಕಾಸು, ಎಲೆನಡೆಗೆ ೧ ಕಾಸುಗಳನ್ನು ಕಾಲಂಗರಡಿ ಮಠಕ್ಕೆ ನೀಡಬೇಕೆಂದು ಈ ಶಾಸನದಲ್ಲಿ ತಿಳಿಸಿದೆ. ಒಂದು ವೇಳೆ ಮೇಲಿನಂತೆ ನಡೆದುಕೊಳ್ಳದಿದ್ದರೆ ಅವರಿಗೆ ಕಾಶಿಯಲ್ಲಿ ಗೋಹತ್ಯೆ ಮಾಡಿದ, ಶಿಶುಹತ್ಯೆ ಮಾಡಿದ, ಮಾತೃಗಮನ ಮಾಡಿದ ಪಾಪಕ್ಕೆ ತುತ್ತಾಗುವರು ಎಂದೂ ಸಹ ಹೇಳಿದೆ. ದೇವನಗರ ಬಹುಶಃ ದೇವನೂರು ಆಗಿರಬಹುದು.

ಹೀಗೆ ಸುತ್ತೂರು ಬಹುಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದುಕೊಂಡಿತ್ತೆಂದು ಅಲ್ಲಿ ದೊರೆತಿರುವ ಗಂಗ, ಚೋಳ, ಹೊಯ್ಸಳ, ವಿಜಯನಗರ, ಮೈಸೂರು ಒಡೆಯರು ಹಾಗೂ ಸ್ಥಳೀಯ ಪಾಳೇಗಾರರುಗಳ ಶಾಸನಗಳಿಂದ ತಿಳಿದುಬರುತ್ತದೆ. ಈ ಶಾಸನಗಳ ಅಧ್ಯಯನದಿಂದ ಸುತ್ತೂರು ಪ್ರಾಚೀನ ಕಾಲದಿಂದಲೂ ತಮಿಳುನಾಡು, ಕೇರಳ, ಕೊಡಗು, ಉತ್ತರ ಕರ್ನಾಟಕ ಮುಂತಾದ ಕಡೆಗಳಲ್ಲಿ ಹೆಸರುವಾಸಿಯಾಗಿತ್ತೆಂದು ತಿಳಿದುಬರುತ್ತದೆ. ಅಲ್ಲದೆ ಸರ್ವಧರ್ಮ ಸಮನ್ವಯದ ಕೇಂದ್ರವಾಗಿಯೂ ಸಹ ಸುತ್ತೂರು ಹೆಸರು ಮಾಡಿತ್ತೆಂದು ಮೇಲಿನ ಅಧ್ಯಯನದಿಂದ ತಿಳಿದುಬರುತ್ತದೆ.

ಅಡಿಟಿಪ್ಪಣಿಗಳು

೧. ಡಾ. ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ, ಮೈಸೂರು, ಪುಟ ೨೩೩, ೧೯೯೨

೧ಎ. ಎ.ಕ.ಸಂ XIV (NS) ನಂ.ಗೂ.೪೦೧, ಪುಟಗಳು ೫೪೬–೫೪೭

೨. ಎ.ಕ. ಸಂ.III (NS) ನಂ.ಗೂ.೨೧೨ ಪುಟ ೩೧೦

೩. ಎ.ಕ. ಸಂ.III (NS) ನಂ.ಗೂ.೨೩೫ ಪುಟಗಳು ೩೨೩–೩೨೪

೪. ಎ.ಕ. ಸಂ.III (NS) ನಂ.ಗೂ.೨೧೭ ಪುಟಗಳು ೩೧೪–೩೧೫

೫. ಎ.ಕ. ಸಂ. XIV (NS) ನಂ.ಗೂ.೪೦೧, ಪುಟಗಳು ೫೪೬–೫೪೭

೬. ಎ.ಕ. ಸಂ.III (NS) ನಂ.ಗೂ.೩೯೫–೩೯೬ ಪುಟಗಳು ೪೨೮–೪೩೦

೭. ಎ.ಕ. ಸಂ.III (NS) ನಂ.ಗೂ.೨೧೯ ಪುಟ ೩೧೬

೮. ಎ.ಕ. ಸಂ. III (NS) ನಂ.ಗೂ.೨೨೨ ಪುಟ ೩೧೭

೯. ಎ.ಕ. ಸಂ.III (NS) ನಂ.ಗೂ.೨೧೩ ಪುಟ ೩೧೦

೧೦. ಎ.ಕ. ಸಂ.III (NS) ನಂ.ಗೂ.೨೧೫ ಪುಟಗಳು ೩೧೧-೩೧೨

೧೧. ಪ್ರೊ. ಎಮ್.ಜಿ.ನಂಜುಂಡಾರಾಧ್ಯರು, ಶಿವರಾತ್ರಿ ಶಿವಚಾರ್ಯ, ಜ॥ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ಪುಟಗಳು ೫೮-೬೦, ೧೯೬೧

೧೨. ಎ.ಕ. ಸಂ.III (NS) ನಂ.ಗೂ.೨೩೫ ಪುಟಗಳು ೩೨೩-೩೨೪

೧೩. ಹೆಚ್.ಪಿ.ಮಲ್ಲೇದೇವರು, ಸಂಪಾದಕರು, ಅರ್ಚನ, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವ ಅಭಿನಂದನಾ ಗ್ರಂಥ, (ಲೇಖನ.ಬಾ.ರಾ.ಗೋಪಾಲ್), ಪುಟ ೯೪, ಕ್ರಿ.ಶ.೧೯೮೪

೧೪. ಎ.ಕ. ಸಂ. III (NS) ನಂ.ಗೂ.೨೩೫ ಪುಟಗಳು ೩೨೩-೨೩೪

೧೫. ಎ.ಕ. ಸಂ.III, ನಂ.ಗೂ.೨೨೦ ಪುಟ ೩೧೬

೧೬. ಎ.ಕ. ಸಂ.III ನಂ.ಗೂ.೨೩೪ ಪುಟಗಳು ೩೨೨

೧೭. ಎ.ಕ. ಸಂ.III ನಂ.ಗೂ.೨೨೪-೨೩೧ ಪುಟಗಳು ೩೧೮-೩೨೧

೧೮. ಎ.ಕ. ಸಂ.III ನಂ.ಗೂ.೨೨೮ ಪುಟಗಳು ೩೧೯-೩೨೦

೧೯. ಎ.ಕ. ಸಂ.III ನಂ.ಗೂ.೨೨೫ ಪುಟ ೩೧೮

೨೦. ಎ.ಕ. ಸಂ. III ನಂ.ಗೂ.೨೨೬ ಪುಟ ೩೧೯

೨೧. ಎ.ಕ. ಸಂ. III ನಂ.ಗೂ.೨೨೭ ಪುಟ ೩೧೯

೨೨. ಎ.ಕ. ಸಂ. III ನಂ.ಗೂ.೨೩೦ ಪುಟ ೩೨೦

೨೩. ಎ.ಕ. ಸಂ.III ನಂ.ಗೂ.೨೩೧ ಪುಟ ೩೨೧

೨೪. ಎ.ಕ. ಸಂ.III ನಂ.ಗೂ.೨೩೭ ಪುಟ ೩೨೧

೨೫. ಎ.ಕ. ಸಂ. III ನಂ.ಗೂ.೨೨೮ ಪುಟಗಳು ೩೧೯-೩೨೦

೨೬. ಎ.ಕ. ಸಂ. III ನಂ.ಗೂ.೨೨೩ ಪುಟಗಳು ೩೧೭-೩೧೮

೨೭. ಎ.ಕ. ಸಂ.III ನಂ.ಗೂ.೨೩೬ ಪುಟ ೩೨೪

೨೮. ಎ.ಕ. ಸಂ. III ನಂ.ಗೂ.೩೯೫-೩೯೬ ಪುಟಗಳು ೫೪೬-೫೪೭

೨೯. ಎ.ಕ. ಸಂ. XIV ನಂ.ಗೂ.೪೦೧, ಪುಟಗಳು ೫೪೬-೫೪೭

೩೦. ಎ.ಕ. ಸಂ. III ನಂ.ಗೂ.೨೭೭ ಪುಟ ೩೫೧

೩೧. ಪ್ರೊ. ಎಮ್.ಜಿ.ನಂಜುಂಡಾರಾಧ್ಯರು, ಶಿವರಾತ್ರಿ ಶಿವಚಾರ್ಯ, ಜ॥ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ಪುಟ ೧೨೨, ಕ್ರಿ.ಶ.೧೯೬೧

೩೨. ಎ.ಕ. ಸಂ. III ನಂ.ಗೂ.೨೧೭ ಪುಟಗಳು ೩೧೪-೩೧೫

೩೩. ಪ್ರೊ. ಎಮ್.ಜಿ.ನಂಜುಂಡಾರಾಧ್ಯರು, ಶಿವರಾತ್ರಿ ಶಿವಾಚಾರ್ಯ, ಜ॥ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ಪುಟ ೧೨೮, ಕ್ರಿ.ಶ.೧೯೬೧

೩೪. ಹೆಚ್.ಪಿ.ಮಲ್ಲೇದೇವರು, ಸಂಪಾದಕರು, ಅರ್ಚನ, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವ ಅಭಿನಂದನಾ ಗ್ರಂಥ, ಪುಟ ೯೬, ಕ್ರಿ.ಶ.೧೯೮೪

೩೫. ಎ.ಕ. ಸಂ. III ನಂ.ಗೂ.೨೧೪ ಪುಟ ೩೧೧

೩೬. ಎ.ಕ. ಸಂ. III ನಂ.ಗೂ.೨೧೮ ಪುಟಗಳು ೩೧೫-೩೧೬

೩೭. ಎ.ಕ. ಸಂ. III ನಂ.ಗೂ.೨೧೬ ಪುಟಗಳು ೩೧೩-೩೧೪

೩೮. ಎ.ಕ. ಸಂ. III ನಂ.ಗೂ.೨೩೩ ಪುಟ ೩೨೧

೩೯. ಎ.ಕ. ಸಂ. III ನಂ.ಗೂ.೨೩೭ ಪುಟಗಳು ೩೨೫-೩೨೬

ಅಧ್ಯಾಯ ೨

ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ

ಸಾಮಾಜಿಕ ಸ್ಥಿತಿಗತಿ

ಮಾನವ ಜನಾಂಗವು ಸಾವಿರಾರು ವರ್ಷಗಳಿಂದ ಬದುಕುತ್ತಾ ಬರುತ್ತಿರುವುದು ಒಂದು ಅನುಭವ. ಆಲೋಚನಾ ಶಕ್ತಿ, ನಂಬಿಕೆಗಳು, ನಡವಳಿಕೆಗಳಿಂದ ಅಂದರೆ ಆಚಾರ-ವಿಚಾರಗಳು, ನಡೆ-ನುಡಿಗಳು, ಸಂಪ್ರದಾಯಗಳು ಇವುಗಳನ್ನು ನಾವು ಸಂಸ್ಕೃತಿಯ ಮೂಲಅಂಶವೆಂದು ಹೇಳಬಹುದು. ಇಲ್ಲಿ ಬಳಸಿರುವ ಸಂಸ್ಕೃತಿ ಎಂಬ ಪದವು ಮಾತಿಗೆ ನಿಲುಕದೆ ಜನರು ಅನುಭವಿಸುವ, ಆಚರಿಸುವ ರೀತಿ-ನೀತಿಗಳಿಂದ ಹಾಗೂ ಅದರಿಂದ ಪಡೆಯುವ ಅನುಭವಕ್ಕೆ ಕಂಡುಬರುವ ವಿಷಯವನ್ನು ಸಂಸ್ಕೃತಿ ಎಂದು ಹೇಳಬಹುದು. ಈ ಸಂಸ್ಕೃತಿಯು ಒಂದು ದಿನಕ್ಕಾಗಲೀ, ವ್ಯಕ್ತಿಗಾಗಲೀ ಅಥವಾ ಸಮಾಜಕ್ಕಾಗಲೀ ಬರತಕ್ಕದ್ದಲ್ಲ. ಒಂದು ತೆಂಗಿನ ಗಿಡ ನೆಟ್ಟರೆ ಅದು ಮರವಾಗಿ ಫಲ ಕೊಡಲು ಹಲವಾರು ವರ್ಷಗಳೇ ಬೇಕು. ಅದೇ ರೀತಿಯಲ್ಲಿ ಜನರು ತಮ್ಮ ಸಾವಿರಾರು ವರ್ಷಗಳ ನಡೆ-ನುಡಿಗಳು, ಆಚಾರ-ವಿಚಾರಗಳ ಫಲವಾಗಿಯೇ ಸಮಾಜಕ್ಕೆ ಕೂಡಿಬರುವ ಸಂಸ್ಕಾರವನ್ನು ನಾವು ಸಂಸ್ಕೃತಿ[೧] ಎಂದು ಕರೆಯಬಹುದು. ಯಾವುದೇ ಸಮಾಜಕ್ಕೆ ತನ್ನದೇ ಆದ ಸಂಸ್ಕೃತಿ ಇದ್ದೇ ಇರುತ್ತದೆ. ಸಂಸ್ಕೃತಿ ಎಂಬುದು ಒಂದು ರೀತಿಯಲ್ಲಿ ಸಮಾಜಕ್ಕೆ ಸ್ಫೂರ್ತಿಯನ್ನು ಕೊಡುವಂತದ್ದು ಎಂದು ಹೇಳಬಹುದು.

ಪ್ರಾಚೀನ ಕಾಲದಿಂದಲೂ ನಮ್ಮ ಇತಿಹಾಸವನ್ನು ಗಮನಿಸಿದರೆ ಭಾರತದಲ್ಲಿ ಜನರ ಜೀವನಕ್ಕೆ ಧರ್ಮವೇ ಪ್ರಬಲ ಶಕ್ತಿಯಾಗಿ ಅಂತಿಮವಾಗಿ ರೂಪುಗೊಂಡಿತು. ಇದರಿಂದಾಗಿ ಇಂದು ನಾವು ಎಲ್ಲಾ ಕಾಲದಲ್ಲೂ ಧರ್ಮ ಹಾಸುಹೊಕ್ಕಾಗಿರುವುದನ್ನು ಕಾಣಬಹುದಾಗಿದೆ. ಒಂದು ರೀತಿಯಲ್ಲಿ ಇದು ಒಳ್ಳೆಯದಾದರೆ ಮತ್ತೊಂದು ರೀತಿಯಲ್ಲಿ ಸಾಮಾಜಿಕ ಜೀವನದ ಮೇಲೆ ಕೆಟ್ಟ ಪರಿಣಾಮವನ್ನು ಬೀರಿದೆ. ಇವರೆಡರ ಮಧ್ಯೆ ಸುತ್ತೂರು ಹಾಗೂ ಶ್ರೀಮಠದ ಆಶ್ರಯದಲ್ಲಿ ಬಂದಂತಹ ಅನೇಕ ವ್ಯಕ್ತಿಗಳು ತಮ್ಮ ಸಮಾಜಸೇವೆಯ ಮೂಲಕ ಸಾಮಾಜಿಕ ಜೀವನಕ್ಕೆ ಉತ್ತಮವಾದ ಕೊಡುಗಗಳನ್ನು ನೀಡಿದ್ದಾರೆ ಎಂದು ಹೇಳಬಹುದು.

ಮೇಲೆ ಹೇಳಿದ ಸಂಸ್ಕೃತಿಯ ಮೂಲ ಸೆಲೆ-ನೆಲೆ ಇರುವುದೇ ಸಮಾಜದಲ್ಲಿ ಹಿಂದಿನ ಕಾಲದ ಸಾಮಾಜಿಕ ಜನಜೀವನವನ್ನು ಅರಿಯಬೇಕಾದರೆ ಶಾಸನಗಳಿಗಿಂತ ಉತ್ತಮವಾದ ಸಾಧನವಿಲ್ಲ. ಅಲ್ಲದೆ ಇವುಗಳ ಜೊತೆಗೆ ಸ್ಮಾರಕಗಳು, ಜನಪದ ಐತಿಹ್ಯಗಳು ನಮಗೆ ತಿಳಿಸುತ್ತವೆ. ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿದ ಇತಿಹಾಸದ ವಿಚಾರದಿಂದ ಸುತ್ತೂರಿನ ಪ್ರದೇಶದ ಇತಿಹಾಸದ ರಚನೆಗೆ ಅಸ್ಥಿಪಂಜರವೊದಗಿದರೆ ಅದಕ್ಕೆ ರಕ್ತ ಮಾಂಸವನ್ನು ಸಾಮಾಜಿಕ ಸ್ಥಿತಿಗತಿಯ ಸಾಂಸ್ಕೃತಿಕ ಅಧ್ಯಯನ

ತುಂಬುತ್ತದೆ. ಯಾವುದೇ ಒಂದು ಗ್ರಾಮದ ಸಾಮಾಜಿಕ ಸ್ಥಿತಿ-ಗತಿಗಳನ್ನು ಅಲ್ಲಿನ ಜಾತಿವ್ಯವಸ್ಥೆ, ಕುಟುಂಬ ವ್ಯವಸ್ಥೆ, ಸ್ತ್ರೀಯರ ಸ್ಥಾನಮಾನ, ವಿವಾಹ ಪದ್ಧತಿ, ಉಡುಗೆ-ತೊಡಿಗೆಗಳು, ಆಭರಣಗಳು, ಆಹಾರ ಪದ್ಧತಿ, ಕೈಗಾರಿಕೆ, ಗೃಹೋಪಯೋಗಿ ಸಲಕರಣೆಗಳು, ವ್ಯವಸಾಯಕ್ಕೆ ಸಂಬಂಧಿಸಿದ ಸಲಕರಣೆಗಳು, ಸಾಕುಪ್ರಾಣಿಗಳು, ಜಾನಪದೀಯ ಆಚರಣೆಗಳು, ಮನರಂಜನೆ ಕಾರ್ಯಗಳು, ಶಿಕ್ಷಣ ಮುಂತಾದ ಅಂಶಗಳು ಆ ಗ್ರಾಮದ ನಾಗರೀಕತೆಯನ್ನು, ಸಾಮಾಜಿಕ ಸ್ಥಿತಿ-ಗತಿಗಳನ್ನು ತಿಳಿಸುತ್ತವೆ. ಸುತ್ತೂರಿನ ಪರಿಸರದ ಸಾಮಾಜಿಕ ಜೀವನದ ಮೇಲೆ ಶಾಸನಶಿಲ್ಪಗಳು, ಮೂರ್ತಿಶಿಲ್ಪಗಳು ಬೆಳಕನ್ನು ಚೆಲ್ಲುತ್ತವೆ. ಇವುಗಳ ಆಧಾರದ ಮೇಲೆ ವಿಭಿನ್ನ ಕಾಲಘಟ್ಟದಲ್ಲಿ ಸಾಮಾಜಿಕ ಸ್ಥಿತಿಗತಿಗಳನ್ನು ವಿಶ್ಲೇಷಣೆ ಮಾಡಬಹುದಾಗಿದೆ.

ಜಾತಿ ವ್ಯವಸ್ಥೆ

ವೇದಗಳ ಕಾಲದಿಂದಲೂ ಸಹ ಭಾರತದಲ್ಲಿ ವರ್ಣವ್ಯವಸ್ಥೆಯನ್ನು ಕಾಣಬಹುದು. ನಂತರದ ಬೆಳವಣಿಗೆಗಳಿಂದ ವರ್ಣವ್ಯವಸ್ಥೆಯ ಜಾಗದಲ್ಲಿ ಜನರು ಕೈಗೊಳ್ಳುವ ವೃತ್ತಿಗಳಿಂದ ಜಾತಿಗಳು ಹುಟ್ಟುಕೊಂಡವು. ಹೀಗೆ ಹುಟ್ಟಿಕೊಂಡ ಜಾತಿಗಳು ಎಲ್ಲಾ ಕಡೆ ತಮ್ಮ ಬೇರುಗಳನ್ನು ಬಿಟ್ಟವು. ಅದೇ ರೀತಿಯಲ್ಲಿ ಸುತ್ತೂರಿನಲ್ಲಿ ಸಹ ಅನೇಕ ಜಾತಿಗಳಿವೆ. ಬ್ರಾಹ್ಮಣ, ಜೈನ, ಲಿಂಗಾಯಿತ, ಪರಿವಾರ, ಮಡಿವಾಳ, ಕುಂಬಾರ, ಅಕ್ಕಸಾಲಿಗ, ನಾಯಿಂದ, ಗಾಣಿಗ, ಕಮ್ಮಾರ, ಬಡಗಿ, ಹರಿಜನ ಮುಂತಾದ ಜಾತಿಗಳಿದ್ದು ತಮ್ಮದೇ ಆದ ಪ್ರತ್ಯೇಕ ಕುಲಗಳನ್ನು, ಬೀದಿಗಳನ್ನು (ಕೇರಿಗಳನ್ನು) ಹೊಂದಿವೆ. ಜಾತಿ ವ್ಯವಸ್ಥೆ ಮೊದಮೊದಲು ಸಂಕೀರ್ಣವಾಗಿತ್ತು. ಆದರೆ ಈಗ ನಾಗರೀಕತೆಯ ಫಲವಾಗಿ ಸ್ವಲ್ಪ ಸಡಿಲವಾಗಿದೆ. ಆದರೆ ಇನ್ನೂ ಸಹ ಉಚ್ಚ ನೀಚ ಎಂಬ ಭಾವನೆ ಈ ಗ್ರಾಮದಲ್ಲಿರುವ ಕೆಲವು ಜನರಲ್ಲಿ ಇದೆ. ಆದರೆ ಎಲ್ಲಾ ಜಾತಿಯವರೂ ಒಂದುಗೂಡಿ ಊರಿನ ಧಾರ್ಮಿಕ ಉತ್ಸವಗಳನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಈ ಗ್ರಾಮವು ಸುತ್ತಲಿನ ಹಳ್ಳಿಗಳಿಗಿಂತಲೂ ಮುಂದುವರೆದಿದ್ದು ಹೆಚ್ಚಿನ ಜನಸಂಖ್ಯೆಯು ಕಂಡುಬರುತ್ತದೆ. ಗೌಡ, ಪಟೇಲ, ಶಾನುಭೋಗ ಮುಂತಾದ ಪಾರಂಪರಿಕ ಆಡಳಿತಗಾರರ ಕುಟುಂಬಗಳನ್ನು ಈಗಲೂ ಇಲ್ಲಿ ಕಾಣಬಹುದಾಗಿದೆ.

ಕುಟುಂಬ ವ್ಯವಸ್ಥೆ

ಕುಟುಂಬದ ಕಾರ್ಯಕ್ಷೇತ್ರವು ಬಹಳ ವಿಶಾಲವಾದುದು. ಅದು ವ್ಯಕ್ತಿಯ ಇಡೀ ಸಾಮಾಜಿಕ ಜೀವನವನ್ನು ಆವರಿಸಿದೆ. ಕುಟುಂಬದ ಚಟುವಟಿಕೆಗಳು ಸಮಾಜಕ್ಕೆ ಹೊಂದಿಕೊಂಡಂತೆ ಇವೆ. ಕುಟುಂಬ ನಿರ್ವಹಿಸುವ ಕಾರ್ಯಗಳು ಆಯಾ ಸಮಾಜಕ್ಕೆ ಹೊಂದಿಕೊಂಡಂತೆ ಇವೆ. ಕುಟುಂಬ ನಿರ್ವಹಿಸುವ ಕಾರ್ಯಗಳು ಆಯಾ ಸಮಾಜಕ್ಕೆ ತಕ್ಕಂತಿವೆಯಲ್ಲದೆ ಕಾಲಕಾಲಕ್ಕೆ ಬದಲಾವಣೆ ಹೊಂದುತ್ತವೆ. ನಾಗರೀಕತೆ ಹೆಚ್ಚಿದಂತೆ ಕುಟುಂಬವು ಅದಕ್ಕನುಗುಣವಾಗಿ ಬದಲಾಯಿಸುವುದನ್ನು ಕಾಣುತ್ತೇವೆ. ಪ್ರಾಚೀನ ಸಮಾಜಗಳಲ್ಲಿ ಕುಟುಂಬದ ಕಾರ್ಯಗಳು ವ್ಯಕ್ತಿಜೀವನದ ಸರ್ವಭಾಗಗಳನ್ನು

ಆವರಿಸಿದ್ದವು. ಆದರೆ ಆಧುನಿಕ ಕುಟುಂಬದಲ್ಲಿ ಅದರ ಕಾರ್ಯಕ್ಷೇತ್ರವು ದಿನೇ ದಿನೇ ಸಂಕುಚಿತವಾಗುತ್ತಿದೆ.

ಈ ಗ್ರಾಮದ ಪ್ರತಿಯೊಂದು ಕುಟುಂಬದಲ್ಲೂ ತಂದೆ-ತಾಯಿ ಅಥವಾ ಹಿರಿಯ ವ್ಯಕ್ತಿಗಳು ಯಜಮಾನರಾಗಿರುತ್ತಾನೆ. ಇವನು ಕುಟುಂಬದ ಎಲ್ಲಾ ಆಗುಹೋಗುಗಳನ್ನು ನೋಡಿಕೊಳ್ಳುತ್ತಾನೆ. ಅವಿಭಕ್ತ ಕುಟುಂಬದಲ್ಲಿ ಅಜ್ಜ, ಅಜ್ಜಿ, ಅಪ್ಪ, ಅಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ಅಣ್ಣ, ತಮ್ಮ, ಅಕ್ಕ, ತಂಗಿಯರು ಒಟ್ಟಾಗಿ ಜೀವಿಸುತ್ತಾರೆ. ಮನೆಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ತಾಯಿಯ ಮಾತಿಗೆ ಬೆಲೆ ಇರುತ್ತದೆ. ಹೊರಗಿನ ವ್ಯವಹಾರಗಳನ್ನು ಮನೆಯ ಯಜಮಾನನಾದ ತಂದೆ ನೋಡಿಕೊಳ್ಳುತ್ತಾನೆ. ಅವಿಭಕ್ತ ಕುಟುಂಬದ ಸದಸ್ಯರು ಒಬ್ಬರಿಗೊಬ್ಬರು ಅನ್ಯೋನ್ಯದಿಂದ ಸಹಕಾರದಿಂದ ಬಾಳುತ್ತಾರೆ. ಒಬ್ಬನ ಏಳಿಗೆಯೇ ಮತ್ತೊಬ್ಬನ ಏಳಿಗೆ, ಒಬ್ಬನ ಕಷ್ಟವೇ ಮತ್ತೊಬ್ಬನ ಕಷ್ಟ ಎಂಬುದು ಈ ಅವಿಭಕ್ತ ಕುಟುಂಬಗಳ ಭಾವನೆಯಾಗಿದೆ. ಆದರೆ ಇತ್ತೀಚಿನ ಬೆಳವಣಿಗೆಯಿಂದಾಗಿ ಕುಟುಂಬಗಳು ಒಡೆದುಹೋಗಿ ವಿಭಕ್ತ ಕುಟುಂಬಗಳು ಹೆಚ್ಚಾಗುತ್ತಿವೆ. ಇದಕ್ಕೆ ಸ್ವಾರ್ಥ, ಅಸೂಯೆ, ಹೊಟ್ಟೆಕಿಚ್ಚುಗಳೇ ಕಾರಣವಾಗಿದೆ.

ಸ್ತ್ರೀಯರ ಸ್ಥಾನಮಾನ

ಈ ಗ್ರಾಮದ ಸ್ತ್ರೀಯರು ಪುರುಷರಿಗೆ ಸಮಾನರಾಗಿ ಹೊಲ, ಗದ್ದೆ, ಮನೆಗಳಲ್ಲಿ ದುಡಿಯುತ್ತಾರೆ. ಈ ಊರಿನ ಸಮಾಜದಲ್ಲಿ ಸ್ತ್ರೀಯರಿಗೆ ಗೌರವವಾದ ಸ್ಥಾನಮಾನಗಳನ್ನು ಪ್ರಾಚೀನ ಕಾಲದಿಂದಲೂ ನೀಡಿಕೊಂಡು ಬಂದಿದ್ದಾರೆ. ಮಹಿಳೆಯರೂ ಕೂಡ ಊರಿನ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿದುದು ಕಂಡುಬಂದಿದೆ. ಗುಂಡಬ್ಬೆ ಎಂಬುವಳು ಮೂಲಸ್ಥಾನೇಶ್ವರ ದೇವಾಲಯವನ್ನು ನಿರ್ಮಿಸಿದಳು ಎಂಬುದಾಗಿ ಶಾಸನಗಳು[೨] ಹೇಳುತ್ತವೆ. ಹದಿನಾಡು ಸೀಮೆ ಆಳುತ್ತಿದ್ದ ರಾಮರಾಜನಾಯಕನು ತನ್ನ ತಾಯಿಯಾದ ಚಂನ್ನಾಜಿಯಮ್ಮನಿಗೆ ಒಳ್ಳೆಯದಾಗಲಿ ಎಂದು ಹೊಂಗನೂರು ಸ್ಥಳದ ಹಸುರುಹಳ್ಳಿಯನ್ನು ಸುತ್ತೂರು ಮಠಕ್ಕೆ ಬಿಟ್ಟುಕೊಟ್ಟನು[೩]. ಇಲ್ಲಿ ದೊರೆತಿರುವ ಮಾಸ್ತಿ ಕಲ್ಲಿನಿಂದ ಸ್ತ್ರೀಯರು ಸತಿಹೋಗುವ ಪದ್ಧತಿ ರೂಢಿಯಲ್ಲಿತ್ತು. ಅವರಿಗೆ ಸಮಾಜದಲ್ಲಿ ಉನ್ನತಸ್ಥಾನವಿತ್ತು. ಉನ್ನತ ವರ್ಗಗಳಿಗೆ ಸೇರಿದ ಸ್ತ್ರೀಯರು ಹಾಗೂ ಇತರ ವರ್ಗಗಳಿಗೆ ಸೇರಿದ ಸ್ತ್ರೀಯರೂ ಸಹ ಶಿಕ್ಷಣದ ಅನುಕೂಲತೆಯನ್ನು ಪಡೆದುಕೊಂಡಿದ್ದಾರೆ.

ವಿವಾಹಪದ್ಧತಿ

ಈ ಗ್ರಾಮದ ಜನರು ವೈವಾಹಿಕ ಸಂಬಂಧಗಳಿಗೆ ಬಹಳ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ವಿವಾಹಗಳು ಹೆಚ್ಚಾಗಿ ಸಂಬಂಧಿಕರಲ್ಲಿ ಅಂದರೆ ರಕ್ತಸಂಬಂಧದಲ್ಲೇ ನಡೆಯುತ್ತವೆ. ಸೋದರಮಾವ, ಸೋದರ ಅತ್ತೆ ಹಾಗೂ ಅಕ್ಕನ ಮಗಳನ್ನು ಮದುವೆಯಾಗುವ ಪದ್ಧತಿ ಇದೆ. ಇದರ ಜೊತೆಗೆ ಹೊಸ ಸಂಬಂಧಗಳಲ್ಲೂ ಸಹ ವಿವಾಹ ಕಾರ್ಯ ನಡೆಯುತ್ತಿದೆ. ಬಹುತೇಕ ಎಲ್ಲರೂ ಏಕ ಪತ್ನಿವ್ರತಸ್ಥರಾಗಿದ್ದಾರೆ. ಶೀಲಕ್ಕೆ ಪಾವಿತ್ರ್ಯತೆಯನ್ನು ನೀಡಲಾಗಿದೆ. ಪತಿಯೇ ದೈವ ಎನ್ನುವ ಪರಿಕಲ್ಪನೆ

ಇತ್ತೀಚಿನ ದಿನಗಳಲ್ಲಿ ಕಳೆಗುಂದುತ್ತಿದೆ. ವಿವಾಹವು ಹಿಂದೂ ಧರ್ಮದ ಶಾಸ್ತ್ರಕ್ಕನುಗುಣವಾಗಿ ನಡೆಯುತ್ತದೆ. ಈ ಗ್ರಾಮದಲ್ಲಿ ಒಂದು ವಿವಾಹ ಮಂಟಪ ಇದ್ದು ವಿವಾಹ ಕಾರ್ಯಗಳಿಗೆ ನೆರವಾಗುತ್ತದೆ. ಅಲ್ಲದೆ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿ ಸಾಮೂಹಿಕ ವಿವಾಹವನ್ನು ನಡೆಸಲಾಗುತ್ತಿದೆ.

ಉಡುಗೆ-ತೊಡುಗೆ

ಇಲ್ಲಿಯ ಜನರ ಉಡುಪುಗಳ ಬಗ್ಗೆ ಲಭ್ಯವಿರುವ ಶಾಸನ ಮತ್ತು ಶಿಲ್ಪಗಳಿಂದ ಹಾಗೂ ಪ್ರಸ್ತುತದ ಸನ್ನಿವೇಶಗಳೀಂದ ತಿಳಿಯಬಹುದಾಗಿದೆ. ಸ್ತ್ರೀಪುರುಷರಿಬ್ಬರೂ ಎರಡೆರಡು ಬಟ್ಟೆಗಳನ್ನು ತೊಡುತ್ತಿದ್ದರು. ಗಂಡಸರು ಸೊಂಟದ ಸುತ್ತ ಒಂದು ವಸ್ತ್ರವನ್ನು ತೊಟ್ಟು ಮೈಮೇಲೆ ಅಂಗಿಯನ್ನು ತೊಡುತ್ತಾರೆ. ಮತ್ತೆ ಕೆಲವರು ಚಡ್ಡಿ ಮತ್ತು ಒಂದು ಚೌಕವನ್ನು ಮಾತ್ರ ಬಳಸುತ್ತಾರೆ. ಇಲ್ಲಿನ ಸ್ತ್ರೀಯರು ಕುಪ್ಪಸ ಸೀರೆಗಳನ್ನು ತೊಡುತ್ತಾರೆ. ಬಟ್ಟೆಗಳನ್ನು ಹೊಲಿಸಿಕೊಂಡು ಹಾಕಿಕೊಳ್ಳುತ್ತಾರೆ. ರೇಷ್ಮೆ, ಹತ್ತಿ, ಉಣ್ಣೆ ಮತ್ತು ಆಧುನಿಕ ರೀತಿಯ ಉಡುಗೆ ತೊಡುಗೆಗಳನ್ನು ಸಹಾ ಧರಿಸುತ್ತಾರೆ. ವಿವಿಧ ರೀತಿ ಕೇಶವಿನ್ಯಾಸವನ್ನು ಮಾಡಿಕೊಳ್ಳುತ್ತಾರೆ.

ಆಭರಣಗಳು

ಈ ಗ್ರಾಮದ ಪುರುಷರು ಪ್ರಾಚೀನ ಕಾಲದಲ್ಲಿ ನೀಳವಾದ ಕೂದಲುಗಳನ್ನು ಬಿಡುತ್ತಿದ್ದರು. ಆದರೆ ಈಗ ಕೂದಲನ್ನು ಕತ್ತರಿಸಿ ವಿವಿಧ ರೀತಿಯ ವಿನ್ಯಾಸಗಳನ್ನು ಮಾಡಿಸಿಕೊಳ್ಳುತ್ತಾರೆ. ಸ್ತ್ರೀ-ಪುರುಷರಿಬ್ಬರೂ ಸಹ ಆಭರಣಗಳನ್ನು ಧರಿಸುತ್ತಾರೆ. ಪುರುಷರು ಕಿವಿಗೆ, ಕತ್ತಿಗೆ, ಕೈಗೆ ಬೆರಳಿಗೆ ಬೆಲೆಬಾಳುವ ಅಂದರೆ ಚಿನ್ನ, ಬೆಳ್ಳಿಯ ಆಭರಣಗಳನ್ನು ಧರಿಸುತ್ತಾರೆ. ಸ್ತ್ರೀಯರು ಕಿವಿಗೆ, ಕತ್ತಿಗೆ, ಕೈಗೆ, ತೋಳಿಗೆ, ಬೆರಳಿಗೆ, ಕಾಲಿಗೆ ಅಂದರೆ ಸರಗಳು, ಬಳೆಗಳು, ಓಲೆಗಳು, ತೋಳಬಂದಿ, ಸೊಂಟಪಟ್ಟಿ, ಕಾಲುಂಗುರ, ಕಾಲುಗೆಜ್ಜೆ ಮುಂತಾದ ವಿವಿಧ ಮಾದರಿಯ ಆಭರಣಗಳನ್ನು ತೊಡುತ್ತಾರೆ. ಸ್ತ್ರೀ-ಪುರುಷರಿಬ್ಬರೂ ಸುಗಂಧದ್ರವ್ಯಗಳನ್ನು ಬಳಸುತ್ತಾರೆ. ಸ್ತ್ರೀಯರು ಕಣ್ಣಿಗೆ ಕಾಡಿಗೆಯನ್ನು, ಮುಖಕ್ಕೆ ಬಣ್ಣವನ್ನು ಬಳಸುತ್ತಾರೆ.

ಆಹಾರ ಪದಾರ್ಥಗಳು

ಸುತ್ತೂರಿನ ಜನರು ಸಸ್ಯಾಹಾರಿ ಹಾಗೂ ಮಾಂಸಾಹಾರಿಗಳಾಗಿದ್ದಾರೆ. ಬ್ರಾಹ್ಮಣ, ಲಿಂಗಾಯಿತರು ಸಸ್ಯಾಹಾರಿಗಳಾಗಿದ್ದಾರೆ. ಉಳಿದವರು ಮಾಂಸಾಹಾರಿಗಳಾಗಿದ್ದಾರೆ. ಅಕ್ಕಿ, ರಾಗಿ, ಜೋಳ, ಹುರುಳಿ, ಉದ್ದು, ಅಲಸಂದೆ, ಅವರೆ, ಹಸರು, ಎಳ್ಳು, ನೆಲಗಡಲೆ, ಹಣ್ಣು, ಹಂಪಲು, ಕಾಯಿಪಲ್ಯಗಳನ್ನು ಆಹಾರದ ವಸ್ತುಗಳಾಗಿ ಬಳಸುತ್ತಾರೆ. ಅಲ್ಲದೆ ಮೊಟ್ಟೆ, ಮೀನು, ಕುರಿ, ಕೋಳಿ, ಕೋಣದ ಮಾಂಸ ಮುಂತಾದುವುಗಳನ್ನು ಸಹ ಇವರು ಹೆಚ್ಚಾಗಿ ಬಳಸುತ್ತಾರೆ. ಊಟದ ನಂತರ ಎಲೆ-ಅಡಿಕೆ ಹಾಕುವ ಅಭ್ಯಾಸ ಇವರಿಗೆ ಇದೆ.

ಕೈಗಾರಿಕೆ

ಸುತ್ತೂರು ಗ್ರಾಮದಲ್ಲಿ ಗುಡಿಕೈಗಾರಿಕೆಗಳು ಹೆಚ್ಚಾಗಿ ಮೊದಲು ಇದ್ದವು. ಆಧುನಿಕತೆಯ ಪರಿಣಾಮವಾಗಿ ಗುಡಿಕೈಗಾರಿಕೆಗಳು ನಾಶವಾಗಿವೆ. ಆದರೂ ಸಹ ಕೆಲವು ಗುಡಿಕೈಗಾರಿಕೆಗಳು ಇಲ್ಲಿ ಕಂಡುಬರುತ್ತಿವೆ. ಎಣ್ಣೆ ತೆಗೆಯುವ ಗುಡಿ ಕೈಗಾರಿಕೆ, ಮಡಿಕೆ ತಯಾರಿಕೆ, ಕಬ್ಬಿಣ ಕೆಲಸದ ಕೈಗಾರಿಕೆ, ಮರಗೆಲಸ, ನೂಲುವುದು. ನೇಯುವುದು, ಪುರಿಬಟ್ಟಿ ಮುಂತಾದ ಗುಡಿಕೈಗಾರಿಕೆಗಳಿವೆ.

ಸಾಕುಪ್ರಾಣಿಗಳು

ಈ ಗ್ರಾಮದ ಜನರು ಹಸು, ಎತ್ತು, ಎಮ್ಮೆ, ಕುರಿ, ಕೋಳಿ, ಮೇಕೆ, ಪಾರಿವಾಳ ಮುಂತಾದ ಪ್ರಾಣಿ-ಪಕ್ಷಿಗಳನ್ನು ಸಾಕುತ್ತಾರೆ. ಇವುಗಳಿಂದ ಇವರ ಆರ್ಥಿಕ ಸ್ಥಿತಿಯೂ ಉತ್ತಮವಾಗಲು ಕಾರಣವಾಗಿದೆ.

ಗೃಹೋಪಯೋಗಿ ಸಲಕರಣೆಗಳು

ಈ ಗ್ರಾಮದ ಜನರು ಮರದ ಬೀರು, ಪೆಟ್ಟಿಗೆ, ಮೇಜು, ಕುರ್ಚಿ, ಕಾಲುಮಣೆ, ಮಂಚ, ಚಾಕು, ಈಳಿಗೆಮಣೆ, ತುಂಡುಕತ್ತಿ, ಮೀನಿನಗಾಳ, ಪಾತ್ರೆ, ಜಾಡಿ, ತಟ್ಟೆ, ಲೋಟ, ಚಮಚ, ಸೌಟು ಮುಂತಾದುವುಗಳನ್ನು ಈ ಊರಿನ ಜನರು ಗೃಹೋಪಯೋಗಿ ವಸ್ತುಗಳಾಗಿ ದಿನನಿತ್ಯ ಬಳಸುತ್ತಾರೆ.

ವ್ಯವಸಾಯಕ್ಕೆ ಸಂಬಂಧಿಸಿದ ಸಲಕರಣೆಗಳು

ಈ ಗ್ರಾಮದ ಜನರು ಮರದ ನೇಗಿಲು, ಕಬ್ಬಿಣದ ನೇಗಿಲು, ಎಲಕೊಂಟು, ಗುದ್ದಲಿ, ಹಾರೆ, ಪಿಕಾಸಿ, ಕಲಕೊಂಟು, ಹಲುಭ, ತಡಿಬುಂಡೆ, ಕೊಡಲಿ, ಕುಡಗೋಲು, ಮಚ್ಚು, ತುಂಡುಗತ್ತಿಗಳನ್ನು ಹಾಗೂ ಇತ್ತೀಚಿನ ದಿನಗಳ ಪ್ರಚಲಿತದಲ್ಲಿರುವ ಟಿಲ್ಲರ್ ಮತ್ತು ಟ್ರಾಕ್ಟರ್‌ಗಳನ್ನು ಬಳಸುತ್ತಿದ್ದಾರೆ.

ಮನರಂಜನೆ ಆಟಗಳು

ಈ ಗ್ರಾಮದ ಜನರು ಪಗಡೆ, ಚೌಕಾಬಾರ, ಅಳಿಗುಳಿ ಮಣೆ, ಹಸು ಮತ್ತು ಹುಲಿ, ಟಗರು ಕಾಳಗ, ಕೋಳಿ ಕಾಳಗ, ಪಾರಿವಾಳ ಕಾಳಗ, ದೊಣ್ಣೆವರಸೆ, ಕುಸ್ತಿ, ಲಗೋರಿ ಆಟ, ಎತ್ತಿನ ಗಾಡಿಯ ಓಟ, ಇಸ್ಪೀಟ್, ಕೋಲಾಟ, ಗಿಲ್ಲಿದಾಂಡು, ಮರಕೋತಿ ಇತ್ಯಾದಿ ಆಟಗಳನ್ನು ಆಡುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ದೂರದರ್ಶನ ಪ್ರಭಾವ ಹೆಚ್ಚಾಗಿ ಕ್ರಿಕೆಟ್ ಆಟ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿದೆ. ಈ ಊರಿನ ಜನರು ವಾಲಿಬಾಲ್, ಫುಟ್‌ಬಾಲ್ ಆಟಗಳನ್ನು ಸಹ ಆಡುತ್ತಾರೆ. ತಮಟೆ, ಕೊಂಬು, ಕಹಳೆ ಮುಂತಾದ ವಾದ್ಯಗಳನ್ನು ಸಹ ನುಡಿಸುತ್ತಾರೆ. ಅಲ್ಲದೆ ನೃತ್ಯ, ಸಂಗೀತ, ನಾಟಕಗಳನ್ನು ಮಾಡುತ್ತಾರೆ.

ಮೇಲೆ ತಿಳಿಸಿದಂತೆ ಸುತ್ತೂರು ಗ್ರಾಮವು ತನ್ನದೇ ಆದ ವೈವಿಧ್ಯತೆಗಳ ಮೂಲಕ ಸಮಾಜದ ಬೆಳವಣಿಗೆಯ ಮೇಲೆ ಪ್ರಭಾವ ಬೀರಿದೆ. ಭಾರತದಂತಹ ದೇಶ ಅನೇಕ ಹಳ್ಳಿಗಳಿಂದ ಕೂಡಿದ್ದರೂ

ಸಹ ಹಳ್ಳಿ ಹಳ್ಳಿಗೆ ವಿಭಿನ್ನವಾದ ಸಂಸ್ಕೃತಿಯನ್ನು ಹೊಂದಿದೆ. ಅದೇ ರೀತಿಯಲ್ಲಿ ಸುತ್ತೂರು ಸಹ ತನ್ನದೇ ಆದಂತಹ ಸಾಮಾಜಿಕ ಸ್ಥಿತಿ-ಗತಿಗಳನ್ನು ಹೊಂದಿದ್ದು ಕರ್ನಾಟಕದ ಹಾಗೂ ಭಾರತದ ಇತಿಹಾಸದ ಮೇಲೆ ತನ್ನದೇ ಆದ ಛಾಪನ್ನು ಮೂಡಿಸಿದೆ.

ಹಬ್ಬಗಳು ಮತ್ತು ಉತ್ಸವಗಳು

ಮನೋರಂಜನೆ ಇಲ್ಲದೆ ಮನುಷ್ಯ ಬದುಕಲಾರ. ಈ ಮನೋರಂಜನಾ ಪ್ರವೃತ್ತಿ ಅಭಿವ್ಯಕ್ತವಾಗುವ ಹಬ್ಬಗಳು, ಉತ್ಸವಗಳಾಗಲೀ ಹಾಗೂ ಸಂಗೀತ, ನಾಟ್ಯ, ನಾಟಕ ಮುಂತಾದ ಕಲೆಗಳು ಆಗಿನ ಕಾಲದ ಜನರ ಸಾಮಾಜಿಕ ಜೀವನದ ಮೇಲೆ ಬಹಳ ಪ್ರಭಾವ ಬೀರಿದವು. ಇಂತಹ ಹಬ್ಬಗಳು, ಉತ್ಸವಗಳು ಮುಂತಾದುವುಗಳು ನಾಡಿನ ವಿವಿಧ ಭಾಗಗಳಲ್ಲಿ ಏಷ್ಯಾದಾದ್ಯಂತ ನಡೆಯುತ್ತಿದ್ದರೂ ಸುತ್ತೂರಿನಲ್ಲಿ ಕಂಡುಬರುವ ಹಬ್ಬಗಳು ಹಾಗೂ ಉತ್ಸವಗಳು ತನ್ನ ಸುತ್ತಮುತ್ತಲಿನ ಲಕ್ಷಾಂತರ ಜನರನ್ನು ಆಕರ್ಷಿಸುತ್ತಿವೆ.

ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ದೀಪಾವಳಿ, ಗೌರಿ-ಗಣೇಶ, ಮಾರಿಹಬ್ಬ ಮುಂತಾದ ಹಬ್ಬಗಳನ್ನು ಈ ಊರಿನ ಜನರು ಅತ್ಯಂತ ಶ್ರದ್ಧೆ-ಭಕ್ತಿಗಳಿಂದ ಆಚರಿಸುತ್ತಾರೆ. ಇದಲ್ಲದೆ ದೊಡ್ಡಮ್ಮತಾಯಿ, ಮಹದೇಶ್ವರ, ವೀರಭದ್ರೇಶ್ವರ, ಶ್ರೀ ಶಿವರಾತ್ರೀಶ್ವರರ ಉತ್ಸವಗಳೂ ಸಹ ಬಹಳ ವಿಜೃಂಭಣೆಯಿಂದ ನಡೆಯುತ್ತವೆ. ಜೊತೆಗೆ ಮಹದೇಶ್ವರ ಮತ್ತು ವೀರಭದ್ರೇಶ್ವರ ಕೊಂಡೋತ್ಸವ, ಶ್ರೀ ಶಿವರಾತ್ರೀಶ್ವರರ ತೆಪ್ಪೋತ್ಸವಗಳು ಸಹ ಅತ್ಯಂತ ವೈಭವದಿಂದ ನಡೆಯುತ್ತವೆ. ಇವುಗಳಿಗೆ ಕಳಸವಿಟ್ಟಂತೆ ಪ್ರತಿ ವರ್ಷ ಜನವರಿ ಕೊನೆವಾರ ಅಥವಾ ಫೆಬ್ರವರಿ ಮೊದಲವಾರದಲ್ಲಿ ಶ್ರೀ ಶಿವರಾತ್ರೀಶ್ವರರ ಜಾತ್ರಾ ಮಹೋತ್ಸವವು ಅತ್ಯಂತ ವೈಭವ ವಿಜೃಂಭಣೆಯಿಂದ ನಡೆಯುತ್ತದೆ.

ಸಂಕ್ರಾಂತಿ ಹಬ್ಬವನ್ನು ಸುಗ್ಗಿಯ ಹಬ್ಬವೆಂತಲೂ ಕರೆಯುತ್ತಾರೆ. ರೈತರು ತಾವು ಬೆಳೆದಂತಹ ಪದಾರ್ಥಗಳನ್ನು ಕಣದಲ್ಲಿ ಒಟ್ಟುಗೂಡಿಸಿ ಅವುಗಳಿಗೆ ಪೂಜೆ ಸಲ್ಲಿಸಿ ನಂತರ ಮನೆಗೆ ಸಾಗಿಸುತ್ತಾರೆ. ಅಲ್ಲದೆ ಸಣ್ಣ ಸಣ್ಣ ಮಕ್ಕಳು ಹೊಸಬಟ್ಟೆಯನ್ನು ಧರಿಸಿ ಸಡಗರದಿಂದ ಓಡಾಡುತ್ತಾ ಎಳ್ಳು, ಬೆಲ್ಲ, ಕಬ್ಬು, ಎಲೆಚಿಹಣ್ಣು ಮುಂತಾದುವುಗಳನ್ನು ಪರಸ್ಪರ ನೀಡಿ ಸಂಭ್ರಮಿಸುತ್ತಾರೆ. ಪೊಂಗಲನ್ನು (ಕಿಚಡಿ) ಮಾಡಿ ಊಟ ಮಾಡುತ್ತಾರೆ.

ಶಿವರಾತ್ರಿ ಈ ಹಬ್ಬವನ್ನು ಈ ಊರಿನಲ್ಲಿ ಬಹಳ ಸಡಗರದಿಂದ ಬಹಳ ಪ್ರಾಚೀನ ಕಾಲದಿಂದಲೂ ಸಹ ನಡೆಸಿಕೊಂಡು ಬರುತ್ತಿದ್ದಾರೆ. ವಿಶೇಷವಾಗಿ ಲಿಂಗಾಯಿತರು ಈ ಹಬ್ಬವನ್ನು ವೈಭವದಿಂದ ಆಚರಿಸುತ್ತಾರೆ. ಶಿವರಾತ್ರಿಯ ದಿನ ಊರಿನ ಎಲ್ಲಾ ದೇವಾಲಯಗಳಲ್ಲೂ ವಿಶೇಷ ಪೂಜೆಯನ್ನು ಏರ್ಪಡಿಸಲಾಗುತ್ತದೆ. ಅಲ್ಲದೆ ಶಿವಕಥೆ, ಭರತನಾಟ್ಯ, ನಾಟಕ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಈ ದಿನದಂದು ಇಡೀ ರಾತ್ರಿ ಜಾಗರಣೆ ಮಾಡುತ್ತಾರೆ. ಸುತ್ತೂರಿನ ಶ್ರೀಮಠವು ಈ ಎಲ್ಲ ಕಾರ್ಯಕ್ರಮಗಳ ವ್ಯವಸ್ಥೆಯನ್ನು ಬಹಳ ಹಿಂದಿನಿಂದಲೂ ಮಾಡಿಕೊಂಡು ಬರುತ್ತಿದೆ. ಈ ಹಬ್ಬದ ವಿಶೇಷವಾಗಿ ತಂಬಿಟ್ಟನ್ನು ಮಾಡುತ್ತಾರೆ.

ಯುಗಾದಿ ಈ ಊರಿನ ಜನರು ಆಚರಿಸುವ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಈ ಹಬ್ಬದ ದಿನದಂದು ಹೊನ್ನೇರು ಬಂಡಿಯನ್ನು ಕಟ್ಟಿ ಅದರಲ್ಲಿ ಗೊಬ್ಬರವನ್ನು ತುಂಬಿ ಹೊಲಗದ್ದೆಗಳಿಗೆ ಹೋಗಿ ಅಲ್ಲಿ ಗೊಬ್ಬರವನ್ನು ಹಾಕಿ ನಂತರ ಶ್ರೀ ಶಿವರಾತ್ರೀಶ್ವರ ಗದ್ದುಗೆಗೆ ಬಂದು ಶ್ರೀಗಳವರಿಂದ ಬೇವು-ಬೆಲ್ಲವನ್ನು ತೆಗೆದುಕೊಂಡು ಬರುತ್ತದೆ. ಇದು ಈ ಭಾಗದ ಜನರ ಹೊಸ ವರುಷದ ಆಗಮನದ ಮೊದಲ ಹಬ್ಬವಾಗಿದೆ. ಎಲ್ಲರೂ ಹೊಸ ಬಟ್ಟೆಗಳನ್ನು ಧರಿಸಿ ಹಿರಿಯರಿಗೆ ನಮಸ್ಕರಿಸಿ ಅವರಿಂದ ಆಶೀರ್ವಾದ ಪಡೆದುಕೊಳ್ಳುತ್ತಾರೆ. ಈ ಹಬ್ಬದ ಪರವಾಗಿ ಇಡ್ಲಿ, ಒಬ್ಬಟ್ಟನ್ನು ಮಾಡುತ್ತಾರೆ.

ದೀಪಾವಳಿ ಹಬ್ಬವನ್ನು ಈ ಗ್ರಾಮದ ಜನರು ಮೂರು ದಿನಗಳ ಕಾಲ ವೈಭವದಿಂದ ಆಚರಿಸುತ್ತಾರೆ. ಮರ್‌ಪಂಜು, ಎರಡನೆಯ ಪಂಜು ಮತ್ತು ಮೂರನೇ ಪಂಜುಗಳನ್ನು ಈ ದಿನಗಳಲ್ಲಿ ಹತ್ತಿಸುತ್ತಾರೆ. ಅಂದರೆ ಕತ್ತಲೆಯಿಂದ ಬೆಳಕಿನೆಡೆಗೆ ತಮ್ಮನ್ನು ಸಾಗಿಸು ಎಂಬುದು ಇವರ ಉದ್ದೇಶವಾಗಿದೆ. ಈ ಹಬ್ಬವನ್ನು ಕಲ್ಲೆತ್ತುವ ಹಬ್ಬವೆಂತಲೂ ಕರೆಯುತ್ತಾರೆ. ಅಂದರೆ ಈ ದಿನ ದೋಸೆಯನ್ನು ವಿಶೇಷವಾಗಿ ಮಾಡುತ್ತರೆ. ದೀಪಾವಳಿ ಹಬ್ಬದ ಕೊನೆಯ ದಿನ ದನಗಳನ್ನು ಸಿಂಗರಿಸಿ ಅವುಗಳಿಂದ ಕಿಚ್ಚನ್ನು ಹಾಯಿಸುತ್ತಾರೆ. ಊರಿನ ಎಲ್ಲಾ ದನಗಳು ಒಂದು ಕಡೆ ಸೇರುವುದು ಈ ದಿನದ ವಿಶೇಷವಾಗಿದೆ.

ಗೌರಿ-ಗಣೇಶನ ಹಬ್ಬವನ್ನು ಈಗ ಈ ಜನರು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಶ್ರೀಮಠದ ವತಿಯಿಂದ ಗೌರಿಯನ್ನು ತಂದು ಸೋಮೇಶ್ವರ ದೇವಸ್ಥಾನದ ಪಡಸಾಲೆಯಲ್ಲಿ ಪೂಜಿಸಲಾಗುತ್ತಿದೆ. ಊರಿನ ಎಲ್ಲಾ ಮುತ್ತೈದೆಯರೂ ಸಹ ಇಲ್ಲಿಯೇ ಬಂದು ಗೌರಿ ಪೂಜೆಯನ್ನು ಮಾಡಿ ಪರಸ್ಪರ ಅರಿಸಿನಕುಂಕುಮವನ್ನು ಕೊಟ್ಟು, ಗೌರಿಕಥೆಯನ್ನು ಓದಿ ವಿರಮಿಸುತ್ತಾರೆ. ಇದೇ ರೀತಿಯಲ್ಲಿ ಗಣೇಶನನ್ನು ಪ್ರತಿಯೊಂದು ಮನೆಯವರೂ ಸಹ ತಂದು ಪೂಜಿಸುತ್ತಾರೆ. ಸಗಣಿ ಮತ್ತು ಗರಿಕೆಯಿಂದ ಮಾಡಿದ ಬೆನಕನನ್ನು ಇಲ್ಲಿ ಪೂಜಿಸಲಾಗುತ್ತದೆ. ಇದಕ್ಕಾಗಿ ವಿಶೇಷವಾಗಿ ಜಾಗರವನ್ನು ಬೆಳೆಸಲಾಗುತ್ತದೆ. ಈ ದಿನ ಗಣಪತಿಗೆ ಬಹು ಇಷ್ಟವಾದ ಕಾಯಿ-ಕಡುಬುಗಳನ್ನು ವಡೆ ಸರಗಳನ್ನು ಮಾಡುತ್ತಾರೆ.

ಈ ಊರಿನ ಜನ ಮಾರಿಹಬ್ಬವನ್ನು ಬಹಳ ಹಿಂದಿನಿಂದಲೂ ಆಚರಿಸಿಕೊಂಡು ಬರುತ್ತಾರೆ. ಮಾರಿಗೆ ಕೋಳಿ, ಕುರಿ, ಕೋಣಗಳನ್ನು ಬಲಿಕೊಡುತ್ತಾರೆ. ಈ ಹಬ್ಬವನ್ನು ಹೆಚ್ಚಾಗಿ ಹರಿಜನರು ಆಚರಿಸುತ್ತಾರೆ.

ದೊಡ್ಡಮ್ಮ ತಾಯಿ ಉತ್ಸವ ಈ ಊರಿನಲ್ಲಿ ಬಹಳ ವಿಜೃಂಭಣೆಯಿಂದ ನಡೆಯುವ ಮತ್ತೊಂದು ಪ್ರಮುಖ ಉತ್ಸವವಾಗಿ ಊರಿನ ಎಲ್ಲಾ ಕೇರಿಗಳಲ್ಲೂ ಈ ಉತ್ಸವ ಹೋಗಿ ಅವರಿಂದ ಪೂಜೆಯನ್ನು ಸ್ವೀಕರಿಸುತ್ತದೆ.

ಶ್ರೀ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವ ಈ ಊರಿನಲ್ಲಿ ನಡೆಯುವ ಅತ್ಯಂತ ಪ್ರಮುಖವಾದ ಉತ್ಸವವಾಗಿದೆ. ಇದನ್ನು ವಿಜಯನಗರದ ಕಾಲದ ದಸರಾ ಹಾಗೂ ಈಗಿನ ಮೈಸೂರಿನ ದಸರಾ

ಉತ್ಸವಕ್ಕೆ ಹೋಲಿಸಬಹುದಾಗಿದೆ. ಏಕೆಂದರೆ ಈ ಜಾತ್ರಾ ಸಂದರ್ಭದಲ್ಲಿ ವಿವಿಧ ರೀತಿಯ ಮನರಂಜನೆ, ಸ್ಪರ್ಧೆಗಳು ಹಾಗೂ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿರುತ್ತದೆ. ಜಾತ್ರಾ ಮಹೋತ್ಸವದ ಅಂಗವಾಗಿ ಸೋಮೇಶ್ವರನ ಉತ್ಸವ, ಶಿವರಾತ್ರೀಶ್ವರ ಉತ್ಸವ, ದೊಡ್ಡಮ್ಮತಾಯಿ ಉತ್ಸವ, ವೀರಭದ್ರೇಶ್ವರನ ಕೊಂಡೋತ್ಸವ, ಮಹದೇಶ್ವರರ ಮುತ್ತಿನ ಪಲ್ಲಕ್ಕಿ ಉತ್ಸವ ಮತ್ತು ಕೊಂಡೋತ್ಸವಗಳು ಬಹಳ ವಿಜೃಂಭಣೆಯಿಂದ ಐದು ದಿನಗಳವರೆಗೆ ನಡೆಯುತ್ತವೆ. ಇವುಗಳ ಜೊತೆಗೆ ಕಲಾತಂಡಗಳ ಪ್ರದರ್ಶನ, ಆಹಾರ ಮೇಳ, ಕೃಷಿ ಮೇಳ, ಭಜನಾ ಮೇಳ, ಕುಸ್ತಿ ಪಂದ್ಯಾವಳಿ, ದನಗಳ ಜಾತ್ರೆ, ಜಾನಪದ ಜಾತ್ರೆ, ನಾಟಕಗಳು, ರೂಪಕಗಳು, ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆ, ರಂಗೋಲಿ ಮತ್ತು ವರ್ಣಚಿತ್ರ ಸ್ಪರ್ಧೆ, ಸಾಮೂಹಿಕ ವಿವಾಹ ಇನ್ನು ಹತ್ತು ಹಲವಾರು ಕಾರ್ಯಕ್ರಮಗಳನ್ನು ಈ ಸಂದರ್ಭದಲ್ಲಿ ನಡೆಸಲಾಗುತ್ತದೆ. ಇವುಗಳಿಗೆ ಕಳಸವಿಟ್ಟಂತೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ರಥೋತ್ಸವವನ್ನು ಅತ್ಯಂತ ವೈಭವದಿಂದ ಆಚರಿಸಲಾಗುತ್ತಿದೆ. ರಥೋತ್ಸವದ ಸಂದರ್ಭದಲ್ಲಿ ನಂದಿಕಂಬ ಕುಣಿತ, ಗೊರವರ ಕುಣಿತ, ವೀರಮಕ್ಕಳ ಕುಣಿತ, ವೀರಭದ್ರನ ಕುಣಿತ, ಲಿಂಗಧೀರರ ಕುಣಿತ, ಕರಗ, ಕಂಸಾಳೆ, ಕೊಂಬು, ಕಹಳೆ, ಜಾಗಟೆ, ತಮಟೆ, ನಗಾರಿ, ನಾದಸ್ವರ, ಗಾಡಿಗೊಂಬೆ, ಮರಗಾಲು ಕುಣಿತ, ಕೇರಳ, ತಮಿಳುನಾಡು ಕಲಾ ತಂಡಗಳ ಪ್ರದರ್ಶನ ಹೀಗೆ ಅನೇಕ ಕಲಾತಂಡಗಳು ರಥೋತ್ಸವದಲ್ಲಿ ಬಹಳ ಭಕ್ತಿ ಸಡಗರಗಳಿಂದ ಭಾಗವಹಿಸುತ್ತಿವೆ. ಈ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಊರಲ್ಲೆಲ್ಲಾ ತುಂಬಾ ಸಡಗರ, ಜನಸಂದಣಿ, ಬಿರುಸಾದ ವ್ಯಾಪಾರ, ಮಕ್ಕಳ ಸಡಗರ, ಓಡಾಟ, ಜಾನಪದ ಕಲೆಗಳ ಪ್ರದರ್ಶನ, ವಿಶೇಷ ಪೂಜಾಕಾರ್ಯಗಳು, ರಥವನ್ನೆಳೆಯಲು ಉತ್ಸಾಹದಿಂದ ನಾ ಮುಂದೆ, ತಾ ಮುಂದೆ ಎಂದು ಬರುವ ಭಕ್ತಾದಿಗಳು, ಹಣ್ಣು-ಜವನ ಎಸೆಯಲು ಬರುವ ಹೊಸದಾಗಿ ಮದುವೆಯಾಗಿರುವ ಗಂಡು-ಹೆಣ್ಣುಗಳು ಹೀಗೆ ಅಬಾಲವೃದ್ಧರಾದಿಯಗಿ ಈ ಧಾರ್ಮಿಕ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ.

ರಥೋತ್ಸವವಾದ ಮೂರನೆಯ ದಿನ ಶ್ರೀ ಶಿವರಾತ್ರೀಶ್ವರರ ತೆಪ್ಪೋತ್ಸವು ಕಪಿಲಾ ನದಿಯ ಮೇಲೆ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಕಣ್ಣು ಕೋರೈಸುವ ಸಿಡಿಮದ್ದುಗಳು, ಬಾಣಬಿರುಸುಗಳ ಪ್ರದರ್ಶನ, ಎಲ್ಲರನ್ನೂ ಮಂತ್ರಮುಗ್ಧರನ್ನಾಗಿಸುತ್ತದೆ. ಈ ಜಾತ್ರಾ ಮಹೋತ್ಸವಕ್ಕೆ ಬರುವ ಭಕ್ತಾದಿಗಳಿಗೆ ಪ್ರಸಾದ ಮತ್ತು ವಸತಿ ವ್ಯವಸ್ಥೆಯನ್ನು ಅತ್ಯಂತ ಅಚ್ಚುಕಟ್ಟಾಗಿ ಮಾಡಲಾಗುತ್ತದೆ. ಸುತ್ತೂರು ಜಾತ್ರೆಯ ಕೊನೆಯ ದಿನವನ್ನು ಅನ್ನ ಬ್ರಹ್ಮೋತ್ಸವ ದಿನವನ್ನಾಗಿ ಆಚರಿಸಲಾಗುತ್ತದೆ. ಆ ದಿನ ಮೊಸರನ್ನ, ಬೆಲ್ಲದ ಅನ್ನ, ಕಾರದ ಅನ್ನಗಳನ್ನು ಮಾಡಿ ಅವುಗಳ ಮೇಲೆ ದ್ರಾಕ್ಷಿ, ಗೋಡಂಬಿ, ಕರ್ಜೂರಗಳನ್ನು ಹಾಕಿ ಪೂಜೆ ಮಾಡಿ ನಂತರ ಭಕ್ತಾದಿಗಳಿಗೆ ಬಡಿಸಲಾಗುತ್ತದೆ.

ಹೀಗೆ ಸುತ್ತೂರಿನ ಜನರು ಅನೇಕ ರೀತಿಯ ಲೌಕಿಕ ಮತ್ತು ಅಲೌಕಿಕ ಉತ್ಸವಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಾಚೀನ ಕಾಲದಿಂದಲೂ ಆಚರಿಸಿಕೊಂಡು ಬರುತ್ತಿದ್ದಾರೆ. ಈ ಆಚರಣೆಗಳು ಇತ್ತೀಚಿನ ದಿನಗಳಲ್ಲಿ ಜಾಗತೀಕರಣ, ಉದಾರೀಕರಣ ಮುಂತಾದುವುಗಳಿಗೆ ಒಳಗಾಗಿ ತಮ್ಮ

ಅರ್ಥವನ್ನು ಕಳೆದುಕೊಳ್ಳುತ್ತಿವೆ. ಆದರೂ ಸಹ ಕೆಲವು ಜನರು ಸಂಪ್ರದಾಯಬದ್ಧರಾಗಿ ಮೇಲಿನ ಹಬ್ಬ-ಉತ್ಸವಗಳನ್ನು ಆಚರಿಸಿಕೊಂಡು ಬರುತ್ತಿದ್ದಾರೆ.

ಶಿಕ್ಷಣ

ಸುತ್ತೂರು ಕ್ರಿ.ಶ. ೧೧ನೇ ಶತಮಾನದಿಂದಲೂ ಪ್ರಮುಖ ಶೈಕ್ಷಣಿಕ ಕೇಂದ್ರವಾಗಿದ್ದುದಾಗಿ ತಿಳಿದುಬರುತ್ತದೆ. ಸುತ್ತೂರನ್ನು ಸಂದರ್ಶಿಸಿದ ಮುಸಡಿ ಚೌಡಯ್ಯ, ತೋಂಟದ ಸಿದ್ಧಲಿಂಗಯತಿಗಳು, ಮಹದೇಶ್ವರರು ಇದನ್ನು ದೃಢಪಡಿಸುತ್ತಾರೆ. 'ಕಾಯಕತತ್ವ'ಕ್ಕೆ ಮಹತ್ವ ನೀಡಿದ ಈ ಊರು ಶಿಕ್ಷಣ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನು ಮಾಡಿತ್ತು. ಸುತ್ತೂರು ಶ್ರೀಗುರುಪರಂಪರೆಯಲ್ಲಿ ಕಂಡುಬರುವ ಗುರುವರ್ಯರುಗಳು ಉದ್ದಾಮಪಂಡಿತರೂ, ವಿದ್ವಾಂಸರೂ, ಕವಿಗಳೂ, ಬರಹಗಾರರೂ ಆಗಿದ್ದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ.

ಈಗಲೂ ಸಹ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಇಲ್ಲಿ ನಡೆಯುತ್ತಿರುವ ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆ, ಜೆಎಸ್‌ಎಸ್ ಉಚಿತ ಶಾಲೆ, ಒಂದರಿಂದ ಹತ್ತನೇ ತರಗತಿಯ ಮಕ್ಕಳಿಗೆ ಉಚಿತವಾಗಿ ಊಟ ಮತ್ತು ವಸತಿಯನ್ನು ನೀಡಿ ಜೊತೆಗೆ ಶಿಕ್ಷಣವನ್ನು ಸಹ ನೀಡುತ್ತಿದೆ. ಕರ್ನಾಟಕದ ಮೂಲೆಗಳಿಂದಲ್ಲದೆ ಭಾರತದ ವಿವಿಧ ಭಾಗಗಳಿಂದ ಬಂದಿರುವ ಮಕ್ಕಳೂ ಸಹ ಇಲ್ಲಿ ವಿದ್ಯೆಯನ್ನು ಕಲಿಯುತ್ತಿದ್ದಾರೆ. ಇಲ್ಲಿರುವ ಜೆಎಸ್‌ಎಸ್ ದೈಹಿಕ ಶಿಕ್ಷಕರ ತರಬೇತಿ ಶಾಲೆ, ಜೆಎಸ್‌ಎಸ್ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ತರಬೇತಿ ಕೇಂದ್ರಗಳು ಇದ್ದು ಸಮಾಜವನ್ನು ತಿದ್ದುವ ಉತ್ತಮ ಶಿಕ್ಷಕರುಗಳನ್ನು ನಾಡಿಗೆ ನೀಡುತ್ತಿವೆ. ಇವುಗಳ ಜೊತೆಗೆ ಸರ್ಕಾರದ ವತಿಯಿಂದ ನಡೆಯುತ್ತಿರುವ ಹಿರಿಯ ಪ್ರಾಥಮಿಕ ಶಾಲೆಯೂ ಸಹ ಇಲ್ಲಿದೆ. ಈ ಊರಿಗೆ ಬಹಳ ಹಿಂದಿನಿಂದಲೂ ಅಕ್ಕ-ಪಕ್ಕದ ಊರುಗಳಿಂದ ವಿದ್ಯಾಭ್ಯಾಸಕ್ಕಾಗಿ ತಂಡೋಪತಂಡಗಳಲ್ಲಿ ವಿದ್ಯಾರ್ಥಿಗಳು ಬಂದು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಲ್ಲದೆ ಇಲ್ಲಿ ವಿದ್ಯಾಭ್ಯಾಸ ಮಾಡಿದ ಅನೇಕರು ಇಂದು ಸಮಾಜದಲ್ಲಿ ಉನ್ನತ ಸ್ಥಾನ-ಮಾನಗಳನ್ನು ಹೊಂದಿದ್ದಾರೆ ಹಾಗೂ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀಮಠದ ವತಿಯಿಂದ ಸ್ಥಾಪಿತವಾಗಿರುವ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಈ ಭಾಗದ ರೈತರ ಭಾಗ್ಯದ ಬಾಗಿಲನ್ನು ತೆರೆದಿದೆ ಎನ್ನಬಹುದು. ರೈತರಿಗೆ ಕಾಲಕಾಲಕ್ಕೆ ಯಾವ ಯಾವ ಬೆಳೆಗಳನ್ನು ಬೆಳೆಯಬೇಕು, ಹೇಗೆ ಬೆಳೆಯಬೇಕು, ಯಾವ ಬೆಳೆಯನ್ನು ಬೆಳೆದರೆ ಲಾಭ ಬರುತ್ತದೆ, ಮುಂತಾದ ವಿಚಾರಗಳ ಬಗ್ಗೆ ಈ ಊರಿನ ಹಾಗೂ ಸುತ್ತ ಮುತ್ತಲಿನ ಜನರಿಗೆ ಮಾಹಿತಿಯನ್ನು ನೀಡುತ್ತದೆ. ಅಲ್ಲದೆ ಯಾವ ರೀತಿಯ ಗೊಬ್ಬರವನ್ನು ಬಳಸಿದರೆ ಹೆಚ್ಚು ಇಳುವರಿ ಬರುತ್ತದೆ. ಗೊಬ್ಬರದ ಪ್ರಮಾಣ ಹೇಗಿರಬೇಕು ಮುಂತಾದ ಅಂಶಗಳನ್ನು ಇದು ಜನರಿಗೆ ತಿಳಿಸುತ್ತದೆ. ವರ್ಷಪೂರ್ತಿ ಕಾರ್ಯಚಟುವಟಿಕೆಯಲ್ಲಿರುವ ಈ ಕೇಂದ್ರ ರೈತರಿಗಾಗಿ ಕಾರ್ಯಾಗಾರಗಳನ್ನು, ಗೋಷ್ಠಿಗಳನ್ನು ನಡೆಸಿಕೊಂಡು ಸಾವಯವ ಕೃಷಿಗೆ ಉತ್ತೇಜನವನ್ನು ನೀಡುತ್ತಾ ಬಂದಿದೆ.

ಸಾಹಿತ್ಯ

ಸುತ್ತೂರಿನ ಸಾಮಾಜಿಕ ಸ್ಥಿತಿ-ಗತಿಗಳನ್ನು ಅಧ್ಯಯನ ಮಾಡಿದಾಗ ಅಲ್ಲಿಯ ಜನರು ಹಾಗೂ ಶ್ರೀಮಠವು ಸಾಹಿತ್ಯ ಮತ್ತು ಶಿಕ್ಷಣಕ್ಕೆ ಅಪಾರವಾದ ಪ್ರೋತ್ಸಾಹವನ್ನು ನೀಡಿವೆ. ವಾಸ್ತವವಾಗಿ ಸುತ್ತೂರಿನ ಪರಿಸರದಲ್ಲಿ ಅನೇಕ ಕವಿಗಳು, ವಿದ್ವಾಂಸರು ಮತ್ತು ಬರಹಗಾರರು ಕಾಣಿಸಿಕೊಂಡು ಸಾಹಿತ್ಯಕ್ಷೇತ್ರವನ್ನು ಶ್ರೀಮಂತಗೊಳಿಸಿವೆ. ಅದರ ಜೊತೆಗೆ ಸುತ್ತೂರಿನ ಚರಿತ್ರೆಯನ್ನು ಕಟ್ಟುವ ಕೆಲಸವನ್ನು ಮಾಡಿವೆ. ಅದರಲ್ಲೂ ಸುತ್ತೂರು ಶ್ರೀಮಠದ ಗುರುವರ್ಯರುಗಳು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಸಾಹಿತ್ಯ ಕೃತಿಗಳಿಂದ ಸಮಾಜವನ್ನು ಉದ್ಧರಿಸುವ ಕಾರ್ಯವನ್ನು ಮಾಡಿದ್ದಾರೆ. ಅಲ್ಲದೆ ಇವರುಗಳ ಪ್ರೋತ್ಸಾಹದಿಂದ ಅನೇಕ ಕೃತಿಗಳು ರಚನೆಯಾಗಿ ಈ ಭಾಗದ ಜನರ ಮೌಢ್ಯವನ್ನು ಹೋಗಲಾಡಿಸಲು ಸಾಕಷ್ಟು ಕಾಣಿಕೆ ನೀಡಿವೆ. ಸಾಹಿತ್ಯಕೃತಿಗಳ ರಚನೆ, ಸುತ್ತೂರಿನಲ್ಲಿ ಆದುದನ್ನು ನೋಡಿದರೆ ಸುತ್ತೂರು ಹಿಂದೆ ಒಂದು ಪ್ರಮುಖ ಶಿಕ್ಷಣ ಕೇಂದ್ರವಾಗಿದ್ದಿರಬಹುದು ಎಂದು ಹೇಳಬಹುದಾಗಿದೆ. ಅದಕ್ಕೆ ಸಾಕ್ಷೀಭೂತವಾಗಿ ಇಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಹೆಸರಿನಲ್ಲಿ ಸುತ್ತೂರು ಮಠವು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಿರುವುದನ್ನು ನೋಡಬಹುದು. ಇದೇ ರೀತಿ ಹಿಂದೆಯೂ ಸಹ ಸುತ್ತೂರು ಒಂದು ಪ್ರಮುಖ ಶೈಕ್ಷಣಿಕ ಕ್ಷೇತ್ರವಾಗಿದ್ದಿರಬಹುದು ಎಂದು ಅಭಿಪ್ರಾಯಪಡಲಾಗಿದೆ. ಸುತ್ತೂರು ಶ್ರೀಮಠದ ಗುರುಪರಂಪರೆಯಲ್ಲಿ ಕಂಡುಬರುವ ಗುರುಗಳೆಲ್ಲರೂ ಕನ್ನಡ-ಸಂಸ್ಕೃತ ಭಾಷೆಯಲ್ಲಿ ಘನಪಂಡಿತರಾಗಿದ್ದರೆಂಬುದು ಶಾಸನ, ಉಪಲಬ್ಧ ಕೃತಿಗಳಿಂದ ತಿಳಿದುಬರುತ್ತದೆ. ಈ ಕಾಲದ ಸಾಹಿತ್ಯಗಳ ಪರಿಚಯಕ್ಕೆ ಹೊರಟಾಗ ಕೆಲವು ಎಡರು-ತೊಡರುಗಳು ಉಂಟಾದರೂ ಕೆಲವು ಕೃತಿಗಳ ಬಗ್ಗೆ ಬೇರೆ ಕಡೆ ತಿಳಿದುಬಂದರೂ ದುರಾದೃಷ್ಟದಿಂದ ಇನ್ನೂ ಕೆಲವು ಕೃತಿಗಳು ಲಭ್ಯವಾಗಿಲ್ಲ. ಆದರೆ ಉಪಲಬ್ಧವಾಗಿರುವ ಕೈಬೆರಳೆಣಿಕೆಯ ಕೆಲವು ಕೃತಿಗಳೇ ಸಾಕು ಸುತ್ತೂರು ಸಾಹಿತ್ಯ ಸೇವೆಗೆ ಸಲ್ಲಿಸಿರುವ ಕೊಡುಗೆಯನ್ನು ತಿಳಿಸುತ್ತವೆ.

ಸುತ್ತೂರಿನಲ್ಲಿ ಸಾಹಿತ್ಯ ಕೃಷಿಯು ಕ್ರಿ.ಶ. ೧೧ನೇ ಶತಮಾನದವೇಳೆಗೆ ಬೆಳವಣಿಗೆಯನ್ನು ಹೊಂದಿತ್ತು ಎಂಬುದು ತಿಳಿದುಬರುತ್ತದೆ. ಚೋಳದೊರೆ ೧ನೇ ರಾಜೇಂದ್ರ ಚೋಳನ (ಕ್ರಿ.ಶ. ೧೦೧೨-೧೦೪೪) ರಾಜಗುರು ಗಳೆನಿಸಿದ್ದ ಈಶಾನೇಶ್ವರ ಒಡೆಯರ ಕಾಲದಲ್ಲಿ ಸಾಹಿತ್ಯ ರಚನೆ ಆರಂಭವಾಯಿತು. ಇವರು ಶ್ರೇಷ್ಠ ವಿದ್ವಾಂಸರೂ, ಕವಿಗಳೂ ಆಗಿದ್ದು, ಸಂಸ್ಕೃತದಲ್ಲಿ 'ರೇವಣಸಿದ್ದೇಂದ್ರ ದೇಶಿಕರ ಪರಮಲೀಲಾ ಕಥನ" ಎಂಬ ಗ್ರಂಥವನ್ನು ರಚಿಸಿದರು ಎಂದು ಬೊಮ್ಮರಸನು ಬರೆದ "ರೇವಣಸಿದ್ದೇಶ್ವರ ಪುರಾಣ"[೪]ದಿಂದ ತಿಳಿದುಬರುತ್ತದೆ.

ಕಲ್ಯಾಣದಲ್ಲಿ ಸಂಭವಿಸಿದ ಕ್ರಾಂತಿಯ ನಂತರ ಸುತ್ತೂರು ಶರಣರಿಗೆ ಆಶ್ರಯ ನೀಡಿದ ತಾಣವಾಗಿತ್ತು. ಅಲ್ಲದೆ ಮುಸುಡಿ ಚೌಡಯ್ಯರಂತ ಶರಣರನ್ನು ತನ್ನ ಪರಿಸರದಲ್ಲಿ ಇರಿಸಿಕೊಂಡಿತ್ತು ಹಾಗೂ ಸುತ್ತೂರು 'ದಕ್ಷಿಣದ ಅನುಭವ ಮಂಟಪ' ಎಂಬ ಹೆಸರನ್ನು ಪಡೆದುಕೊಂಡಿತ್ತು. ಅಲ್ಲದೆ ಈ ಅವಧಿಯಲ್ಲಿ ಶರಣರಶರಣರಾದ ಮಹದೇಶ್ವರರು[೫] ಮಠಕ್ಕೆ ಬಂದು ಕಾಯಕದ ಮಹತ್ವವನ್ನು

ಸಾರಿದ್ದಾರೆ. ಈ ಅವಧಿಯಲ್ಲಿ ಸುತ್ತೂರಿನ ಮಠದ ಪೀಠಾಧಿಪತಿಗಳಾಗಿದ್ದ ಸಿದ್ಧನಂಜ ದೇಶಿಕೇಂದ್ರರು ಶಿವಾನುಭವ ಶಾಸ್ತ್ರದಲ್ಲಿ ಪಾಂಡಿತ್ಯವನ್ನು ಪಡೆದಿದ್ದರು. ಇವರು "ಪರಮಶಿವಾಧಿಕ್ಯ ಶಿಖಾಮಣಿ"[೬] ಎಂಬ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ವೀರಶೈವ ಧರ್ಮತತ್ವಗಳನ್ನು ಕುರಿತು ವ್ಯಾಖ್ಯಾನ ನೀಡಿದ್ದಾರೆ. ಇದರ ಬಗ್ಗೆ ಕರ್ನಾಟಕ ಕವಿ ಚರಿತ್ರೆಯ ಮೂರನೇ ಸಂಪುಟದ ಅನುಬಂಧದಲ್ಲಿ ಮಾಹಿತಿ ನೀಡಲಾಗಿದೆ.

'ಅಮುಗಿದೇವಯ್ಯಗಳ ಸಾಂಗತ್ಯ' ಎಂಬ ಶ್ರೇಷ್ಠ ಕೃತಿಯನ್ನು ರಚಿಸಿದವನು ಶಿವಾನಂದ ಎಂಬ ಕಾವ್ಯನಾಮದಿಂದ ಹೆಸರಾದ ಶಿವಲಿಂಗಾರಾಧ್ಯನು. ಈ ಕೃತಿಯಲ್ಲಿ ಶಿವಲಿಂಗಾರಾಧ್ಯನು ತನ್ನ ಗುರುಗಳಾದ ಕಪಿನಿ ನಂಜುಂಡೇಶ್ವರರನ್ನು ಕುರಿತು ಈ ರೀತಿ ವರ್ಣಿಸಿದ್ದಾನೆ.

ಸದಮಲಾನಂದ ಸದ್ಗುರು ನಂಜೇಶ್ವರ
ವಡಗೆನ್ನ ಹೃದಯಜಿಹ್ವೆಯಲಿ
ಸುತ್ತೂರು ಸಿಂಹಾಸನಾಧೀಶ್ವರ ಕಪ್ಪಿನ
ಮುಕ್ತಿದಾಯಕ ನಂಜೇಶ್ವರನ
ಹಸ್ತದಿ ಜನಿಸಿದ ಭೃತ್ವ ಶಿವಾನಂದ
ವಿಸ್ತರಿಸಿದ ನಿಜಕಥೆಯ[೭]

ಇದರಿಂದ ತಿಳಿದುಬರುವುದೇನೆಂದರೆ ಕಪಿನಿ ನಂಜುಂಡದೇಶಿಕೇಂದ್ರ ಕವಿಗಳಿಗೆ ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದರು ಎಂಬುದು. ಇದನ್ನು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ಸಂಪಾದಿಸಿ ಜೆಎಸ್‌ಎಸ್ ಗ್ರಂಥಮಾಲೆಯಿಂದ ಹೊರತಂದಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ಸುತ್ತೂರಿನ ಮತ್ತೊಂದು ಕೊಡುಗೆಯೆಂದರೆ ಘನಲಿಂಗಿ ಶಿವಯೋಗಿಗಳು. ಇವರು ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯರಾಗಿ ಪ್ರಸಿದ್ಧ ವಚನಕಾರರಾಗಿ ವಚನ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ೧೫–೧೬ನೇ ಶತಮಾನಗಳಲ್ಲಿ ಕಲ್ಯಾಣ ಕ್ರಾಂತಿಯ ತರುವಾಯ ಕಾಣೆಯಾಗಿದ್ದ ವಚನ ಸಾಹಿತ್ಯ ಮತ್ತೆ ಫೀನಿಕ್ಸ್‌ನಂತೆ ಎದ್ದು ಬಂದದ್ದು ಇವರೀರ್ವರಿಂದಲೇ. ಇವರಿಬ್ಬರು ಕರ್ನಾಟಕದ ವಿವಿಧ ಭಾಗಗಳಲ್ಲಿ ಸಂಚರಿಸಿ ಹಳೆಯ ವಚನಗಳ ಸಂಕಲನ, ಸಂರಕ್ಷಣೆ, ಸಂಪಾದನೆ ಮಾಡುವ ಕಾಯಕದಲ್ಲಿ ತೊಡಗಿಸಿಕೊಂಡರು. ಘನಲಿಂಗಿ ದೇವರು ತಮ್ಮ ವಚನದಲ್ಲಿ ಸುತ್ತೂರು ಸಿಂಹಾಸನದ ಗುರುಪರಂಪರೆಯನ್ನು ಮತ್ತು ತೋಂಟದ ಸಿದ್ಧಲಿಂಗ ಯತಿಗಳು ಅವರಿಗೆ ಘನಲಿಂಗಿ ಎಂಬ ಹೆಸರನ್ನು ಕೊಟ್ಟುದುದನ್ನು ಅಕ್ಕರೆಯಿಂದ ಸ್ಮರಿಸಿದ್ದಾರೆ.

ಎಲೆ ತಂಗಿ
ಶರಣಸತಿ ಲಿಂಗಪತಿಯಾದ ಪತಿವ್ರತಾಭಾವದ ಚಿಹ್ನೆ
ನಿನ್ನ ನಡೆನುಡಿಯಲ್ಲಿ ಹೊಗರುದೋರುತ್ತಿದೆ
ನಿನ್ನ ಪೂರ್ವಾಪರವಾವುದಮ್ಮ?
ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು
ಭಂಡಾರಿ ಬಸವಪ್ಪೊಡೆಯದೇವರು
ಆ ಭಂಡಾರಿ ಬಸವಪ್ಪೊಡೆಯ ದೇವರ ಶಿಷ್ಯರು
ಕೂಗಲೂರು ನಂಜಯ್ಯದೇವರು
ಆ ನಂಜಯ್ಯದೇವರ ಕರಕಮಲದಲ್ಲಿ
ಉದಯವಾದ ಶರಣವೆಣ್ಣಯ್ಯ ನಾನು!
ಎನ್ನಗುರುವಿನ ಗುರು ಪರಮಗುರು ಪರಮಾರಾಧ್ಯ
ತೋಂಟದಾರ್ಯರಿಗೆ
ಗುರುಭಕ್ತಿಯಿಂದೆನ್ನ ಶರಣು ಮಾಡಿದರು
ಆ ತೋಂಟದಾರ್ಯನು ತನ್ನ ಕೃಪೆಯೆಂಬ
ತೊಟ್ಟಿಲೊಳಗೆನ್ನಂ ಮಲಗಿಸಿ
ಪ್ರಮಥ ಗಣಂಗಳ ವಚನಸ್ವರೂಪ ತತ್ವಾರ್ಥವೆಂಬ
ಹಾಲು ತುಪ್ಪವಂ ಸದಾ ದಣಿಯಲೆರೆದು
ಅಕ್ಕರಿಂದ ರಕ್ಷಣೆಯಂ ಮಾಡಿ
‘ಘನಲಿಂಗಿ’ ಯೆಂಬ ನಾಮಕರಣಮಂ ಕೊಟ್ಟು
ಪ್ರಾಯಸಮರ್ಥೆಯಂ ಮಾಡಿ
ಸತ್ಯ-ಸದಾಚಾರ-ಜ್ಞಾನ-ಕ್ರೀಡೆಗಳೆಂಬ ದಿವ್ಯಾಭರಣಂಗಳಂ ತೊಡಿಸಿ
ಅರಿವೆಂಬ ಬಣ್ಣವ ನಿರಿವಿಡಿದುಡಿಸಿ
ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಂ
ತನಗೆ ನಾನಾಗಬೇಕೆಂದು ಬೇಡಿಕಳುಹಲು
ಎಮ್ಮವರು ಅವರಿಂದ ಮಾತನಿಕ್ಕಿದರಮ್ಮ[೮]

ವಿರಕ್ತ ತೋಂಟದಾರ್ಯರು ಬರೆದಿರುವ ಸಿದ್ದೇಶ್ವರ ಪುರಾಣದಲ್ಲಿ (೧೫೬೦) ಘನಲಿಂಗಿಗಳ ಬಗ್ಗೆ ಮಾಹಿತಿ ನೀಡಿದ್ದಾರೆ (ಸಿದ್ದೇಶ್ವರನ ಪುರಾಣ ೧೫-೪೬). ಘನಲಿಂಗಿ ಶಿವಯೋಗಿಗಳು ೬೩ ವಚನಗಳು ಸುದೀರ್ಘವೂ, ಸೈದ್ಧಾಂತಿಕವೂ ಆಗಿದೆ. ಇವರ ವಚನಗಳ ಅಂಕಿತ “ಘನಲಿಂಗಿ ಮೋಹದ ಚನ್ನಮಲ್ಲಿಕಾರ್ಜುನ ’, ಘನಲಿಂಗಿಗಳು ಶರಣಸತಿ-ಲಿಂಗಪತಿ” ಎಂಬ ಮಾರ್ಗದಲ್ಲಿ ನಡೆದುದನ್ನು ಕಾಣಬಹುದು. ಬೂಟಾಟಿಕೆ ವಿರಕ್ತರ ಬಗ್ಗೆ, ಸಂಸಾರ ಜಂಜಾಟದಲ್ಲಿ ಸಿಲುಕಿಕೊಂಡುದರ

ಬಗ್ಗೆ, ಮಾಯೆಯ ಬಗ್ಗೆ, ಹೆಣ್ಣು, ಹೊನ್ನು, ಮಣ್ಣುಗಳ ಬಗ್ಗೆ ಅವರು ಬರೆದಿರುವ ವಚನಗಳು ಅವರನ್ನು ಒಬ್ಬ ಶ್ರೇಷ್ಠ ವಚನಕಾರರನ್ನಾಗಿ ಮಾಡಿದೆ.

ಸುತ್ತೂರಿನ ಇಮ್ಮಡಿ ಶಿವರಾತ್ರೀಶ್ವರ ಸ್ವಾಮಿಗಳು "ವೃಷಭೇಂದ್ರ ವಿಜಯಪುರಾಣ"[೧೦] ಎಂಬ ಗ್ರಂಥವನ್ನು ಬರೆದಿರುವುದಾಗಿ ಕರ್ನಾಟಕ ಕವಿಚರಿತ್ರೆಯ ದ್ವಿತೀಯ ಸಂಪುಟದ ಅನುಬಂಧದಲ್ಲಿ ಕೊಟ್ಟಿದೆ. ಗುರುಚನ್ನಬಸವ ಶಿವಾಚಾರ್ಯರ ಕಾಲದಲ್ಲಿ ಸೋಸಲೆಯ ರೇವಣಾರಾಧ್ಯರು ಶಿವಾಧಿಕ್ಯ ಶಿಖಾಮಣಿ ಎಂಬ ಸಂಸ್ಕೃತ ಕೃತಿಯನ್ನು ರಚಿಸಿದ್ದಾರೆ. ಸುತ್ತೂರಿನ ೨೨ನೇ ಜಗದ್ಗುರುಗಳಾದ ಮಂತ್ರಮಹರ್ಷಿ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು ಕವಿಗಳಿಗೆ ವಿದ್ವಾಂಸರಿಗೆ ಕೊಟ್ಟು ಪ್ರೋತ್ಸಾಹದಿಂದ ಕುಂತೂರು ಸಂಗಪ್ಪಶಾಸ್ತ್ರಿಗಳವರಿಂದ **"ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ"** ಎಂಬ ಗ್ರಂಥ ೧೯೩೩ರಲ್ಲಿ ಪ್ರಕಟವಾಯಿತು. ಅಲ್ಲದೆ ಸಾಹಿತ್ಯರತ್ನರಾದ ಶ್ರೀ ಎಂ.ಜಿ.ನಂಜುಂಡಾರಾಧ್ಯರಿಂದ ಶಿವರಾತ್ರಿ ಶಿವಾಚಾರ್ಯ ಎಂಬ ಕೃತಿ ೧೯೬೧ರಲ್ಲಿ ಪ್ರಕಟವಾಯಿತು. ಇವೆರಡೂ ಕೃತಿಗಳು ಸುತ್ತೂರಿನ ಹಾಗೂ ಶ್ರೀಮಠದ ಪ್ರಾಚೀನ ಇತಿಹಾಸವನ್ನು ತಿಳಿಸಿಕೊಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಶಿವರಾತ್ರಿ ಮಹಾಸ್ವಾಮಿಗಳವರೇ ಸ್ವತಃ **"ಶಿವಮಂತ್ರ ಮಹಿಮೆ"** ಎಂಬ ಮಹಾಕೃತಿಯನ್ನು ಕನ್ನಡದಲ್ಲಿ ರಚಿಸಿ ತಮ್ಮ ವಿದ್ವತ್ತನ್ನು ಮರೆದಿದ್ದಾರೆ. ಅಲ್ಲದೆ ಶ್ರೀಗಳು ಪ್ರಣವ ಪಂಚಾಕ್ಷರೀ ಮಂತ್ರವನ್ನು ೨೨ ಸಂಪುಟಗಳಲ್ಲಿ ಬರೆದಿದ್ದಾರೆ[೧೧]. ಇದರಲ್ಲಿ **ಓಂನಮಃಶಿವಾಯ** ಎಂಬ ಮಂತ್ರ ಸುಮಾರು ಆರು ಕೋಟಿಯಷ್ಟು ಇದೆ. ಇದನ್ನು ಮೆಚ್ಚಿ ನಾಡಿನ ಗಣ್ಯರುಗಳಾದ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಜಯಚಾಮರಾಜ ಒಡೆಯರ್, ಡಾ. ಎಸ್. ರಾಧಾಕೃಷ್ಣನ್, ಡಾ. ಆರ್. ರಾಜೇಂದ್ರಪ್ರಸಾದ್ ಮುಂತಾದವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

೨೩ನೇ ಗುರುಗಳಾದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಆಜ್ಞಾನುಸಾರ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆಯನ್ನು ಸ್ಥಾಪಿಸಿ, ಗೌರಿಶಂಕರ ಮಹಾಸ್ವಾಮಿಗಳು, ಅಕ್ಕಮಹಾದೇವಿ, ಘನಲಿಂಗಿದೇವರ ವಚನಗಳು, ಡಾ. ಎಲ್. ಬಸವರಾಜುರವರು ಸಂಪಾದಿಸಿರುವ ಶಿವದಾಸಗೀತಾಂಜಲಿ, ಡಾ.ಎಚ್.ತಿಪ್ಪೇರುದ್ರಸ್ವಾಮಿಯವರಿಂದ ಸಂಪಾದಿತವಾದ ಅಮುಗಿದೇವಯ್ಯಗಳ ಸಾಂಗತ್ಯ ಮೊದಲಾದ ಪ್ರಾಚೀನ ಕೃತಿಗಳೂ, ಶೂನ್ಯ ತತ್ವ ವಿಕಾಸ ಮತ್ತು ಶೂನ್ಯ ಸಂಪಾದನೆ, ಪ್ರಸಾದ ಮುಂತಾದ ವಿಮರ್ಶಾಕೃತಿಗಳು, ಕಂಬಳಿನಾಗಿದೇವ, ಶಿವರಾತ್ರೀಶ್ವರ ವಿಜಯ, ಕಾಯಕವೆಂಬ ನಾಟಕ ಕೃತಿಗಳನ್ನು ಹೊರತಂದಿದ್ದಾರೆ.

ಮೇಲೆ ತಿಳಿಸಿದಂತೆ ಸುತ್ತೂರು ಒಂದು ಪ್ರಮುಖ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕೇಂದ್ರವಾಗಿ ಶಿಕ್ಷಣ, ಅದರ ಜೊತೆಜೊತೆಗೆ ಸಾಹಿತ್ಯದ ಬೆಳವಣಿಗೆಗೆ ತನ್ನದೇ ಆದಂತಹ ಕೊಡುಗೆಯನ್ನು ನೀಡಿ ಕನ್ನಡ ಸಾಹಿತ್ಯ ಚರಿತ್ರೆಗೆ ವಿಶಿಷ್ಟವಾದ ಕೊಡುಗೆಗಳನ್ನು ನೀಡಿದೆ. ಸುತ್ತೂರು ಎಂಬ ಹೆಸರನ್ನು ಈ ಕೃತಿಗಳು ಚಿರಸ್ಥಾಯಿಯಾಗಿ ಮಾಡಿವೆ.

ಆರ್ಥಿಕ ಸ್ಥಿತಿಗತಿಗಳು (ಕೃಷಿ ಮತ್ತು ನೀರಾವರಿ)

ಸುತ್ತೂರಿನ ಆರ್ಥಿಕ ಸ್ಥಿತಿಗತಿಗಳನ್ನು ನಿರ್ಧರಿಸುತ್ತಿದ್ದುದೇ ಕೃಷಿ ವ್ಯವಸ್ಥೆ ಅಂದರೆ ರೈತನೇ ಹಳ್ಳಿಯ ಸಂಪತ್ತು. ಅವನು ಉದ್ಧಾರವಾದರೆ ಅಂದರೆ ರೈತನಿಗೆ ಸುಖ, ಸಂಪತ್ತು, ಸಮೃದ್ಧಿಯಾಗಿದ್ದರೆ ಊರಿನ ನೆಲವೂ, ಜಲವೂ, ಸಂಪತ್ತೂ ನದಿಯಂತೆ ಹರಿಯುತ್ತದೆ ಎಂಬುದಾಗಿ ತಿಳಿದವರು ಹೇಳುತ್ತಾರೆ. ರೈತರು ಅಂದರೆ ವ್ಯವಸಾಯವನ್ನು ಅವಲಂಬಿಸಿದ್ದವರಿಗೆ ಎಲ್ಲಿ ಮಾನ್ಯತೆ ಇರುತ್ತದೆಯೋ ಅಲ್ಲಿ ಆರ್ಥಿಕ ಬೆಳವಣಿಗೆಯೂ ಸಹ ಉತ್ತಮವಾಗಿರುತ್ತದೆ.

ಅಂದಿನ ಕೃಷಿಯು ಮಳೆಯ ಆಧಾರದಲ್ಲಿ ನಡೆಯುತ್ತಿತ್ತು. ಕಪಿಲಾ ನದಿ ಸಮೀಪದಲ್ಲಿ ಹರಿಯುತ್ತಿದ್ದುದರಿಂದ ಸುತ್ತೂರಿನ ಆರ್ಥಿಕ ಸ್ಥಿತಿ ಉತ್ತಮವಾಗಲು ಕಾರಣವಾಗಿತ್ತು. ಕೃಷಿಭೂಮಿ, ಭೂಮಿಯ ಫಲವತ್ತತೆ, ಬೆಳೆಗಳು ಹಾಗೂ ಪಶುಪಾಲನೆಗಳ ಬಗ್ಗೆ ಶಾಸನಗಳು ಮಾಹಿತಿ ನೀಡುತ್ತವೆ. ಸುತ್ತೂರಿನ ಶಿಲಾಶಾಸನಗಳಲ್ಲಿ ದಾಖಲಾಗಿರುವಂತೆ ಎಣ್ಣೆ ತೆಗೆಯುವ ಕೈಗಾರಿಕೆಗಳು ಮತ್ತು ಅವುಗಳ ನಿರ್ವಹಣೆಗಾಗಿ ಎಣ್ಣೆ ಮಾರುವವರು ಇಲ್ಲಿ ನೆಲೆಸಿದ್ದರೆಂಬ ಮಾಹಿತಿಯೂ ಸಿಗುತ್ತದೆ. ಕ್ರಿ.ಶ. ೧೦೧೫–೧೬ರ ಶಾಸನವೊಂದು[೧೨] ವ್ಯಾಪಾರಿಗಳಿಗೆ ಸಂಬಂಧಿಸಿದ ಪದಗಳನ್ನು ಹೇಳಿದೆ. ಅದರಲ್ಲಿ

೧. ಏಚಮಯ್ಯ ಕದಂಬಾಳಿಗೆ ನಾಡಿನ ಕೆರೆಯೂರಿನ ಬ್ರಾಹ್ಮಣ ಒಡೆಯ

೨. ನಾಡಿನ ನಾನಾ ದೇಶಿಗಳು

೩. ಐಯ್ಯಪೊಲ್ಲಾಲ್‌ನ ಬ್ರಹ್ಮಶೆಟ್ಟಿಗಳು ಎಂಬ ವೈಶ್ಯವರ್ಗಕ್ಕೆ ಸೇರಿದ್ದು ವ್ಯಾಪಾರಿಗಳ ಇಲ್ಲಿ ನೆಲೆಸಿದ್ದರೆಂದು ತಿಳಿದುಬರುತ್ತದೆ. ಐಯ್ಯಾಹೊಳೆ–ಐದನೂರು ಎಂಬ ಪ್ರಸಿದ್ಧ ದಕ್ಷಿಣಭಾರತದ ವರ್ತಕ ಸಂಘಗಳು ಕೂಡ ಇಲ್ಲಿ ಇದ್ದುದಾಗಿ ತಿಳಿದುಬರುತ್ತದೆ.

ಸುತ್ತೂರು ಮಠವು ವರ್ತಕ ಸಮುದಾಯ ಮತ್ತು ಶ್ರೇಣಿಗಳನ್ನು ಪೋಷಿಸಿಕೊಂಡು ಬಂದಿದ್ದು ಶಾಸನದಿಂದ ವೇದ್ಯವಾಗುತ್ತದೆ. ಕ್ರಿ.ಶ. ೧೦೩೨ರ ರಾಜೇಂದ್ರಚೋಳನ ಕಾಲಕ್ಕೆ ಸೇರಿದ ಮತ್ತೊಂದು ಶಾಸನದಲ್ಲಿ[೧೩] ಭೂಬಳಕೆಗೆ ಸಂಬಂಧಿಸಿದಂತೆ ನೀರಾವರಿ ಕಾಲುವೆ, ಕೆರೆಗಳ ನಿರ್ವಹಣೆಗಾಗಿ ಭೂಮಿಯನ್ನು ದಾನವಾಗಿ ಕೊಟ್ಟಿರುವ ವಿಚಾರವು ತಿಳಿದುಬರುತ್ತದೆ. ಅಂದರೆ ಯಾವುದೇ ಒಂದು ಪ್ರದೇಶದ ಅಭಿವೃದ್ಧಿಗೆ ಅಲ್ಲಿ ಕಂಡುಬರುವ ನೀರಾವರಿ ಅನುಕೂಲತೆಯೇ ಮುಖ್ಯವಾದ ಕಾರಣವಾಗಿದೆ.

ವ್ಯವಸಾಯ, ಪಶುಪಾಲನೆ, ಜನಜೀವನದ ನಿರ್ವಹಣೆಗೆ ನೀರು ಅತ್ಯವಶ್ಯಕವಾಗಿದೆ. ಸುತ್ತೂರಿನ ನೀರಾವರಿಯನ್ನು ಗಮನಿಸಿದಾಗ, ಗಂಗ, ಚೋಳ, ಹೊಯ್ಸಳ, ವಿಜಯನಗರ, ಮೈಸೂರು ಒಡೆಯರು ಇವರುಗಳ ಕಾಲದಿಂದ ಕಾಲಕ್ಕೆ ನೀರಾವರಿ ವ್ಯವಸ್ಥೆಯಲ್ಲಿ ಅಂತಹದ್ದೇನು ವಿಶೇಷ ಬದಲಾವಣೆ–ಗಳಾಗಿಲ್ಲದಿರುವುದನ್ನು ಕಾಣಬಹುದು. ಈ ಗ್ರಾಮದಲ್ಲಿ ಹರಿಯುವ ಕಪಿಲಾ ನದಿ ಕೇರಳದ ವೈನಾಡಿನಲ್ಲಿ ಹುಟ್ಟಿ ಟಿ.ನರಸೀಪುರದಲ್ಲಿ ಕಾವೇರಿ ನದಿ ಜೊತೆ ಸಂಗಮವಾಗುತ್ತದೆ. ಈ ನದಿ ಈ

ಊರಿನ ಆರ್ಥಿಕತೆಯ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ಅಲ್ಲದೆ ಸುತ್ತೂರಿನಲ್ಲಿರುವ ಕೆರೆ, ಬಾವಿಗಳೂ ಸಹ ಈ ಗ್ರಾಮದ ಆರ್ಥಿಕ ಸ್ಥಿತಿ ಉತ್ತಮವಾಗಿರಲು ಕಾರಣವಾಗಿವೆ. ಪ್ರಾರಂಭದಲ್ಲಿ ಈ ಊರಿನ ವ್ಯವಸಾಯಕ್ಕೆ ಸಂಬಂಧಿಸಿದ ಕೆಲಸಗಳು ಮಳೆ ಹಾಗೂ ಕಪಿಲಾ ನದಿಯ ಕೃಪಾಕಟಾಕ್ಷದಿಂದಲೇ ನಡೆಯುತ್ತಿದ್ದವು.

ಈ ಗ್ರಾಮದಲ್ಲಿ ಹುಲ್ಲಹಳ್ಳಿ ನಾಲೆ ಮತ್ತು ಕಬಿನಿ ಬಲದಂಡೆ ನಾಲೆಗಳು ಹಾದು ಹೋಗಿ ಈ ಪ್ರದೇಶವನ್ನು ಹಚ್ಚ ಹಸುರಾಗಿಸಿವೆ. ಈ ಗ್ರಾಮದಲ್ಲಿ ಕಂಡುಬರುವ ವಿವಿಧ ರೀತಿಯ ನೀರಾವರಿ ಸೌಲಭ್ಯಗಳನ್ನು ಪರಿಶೀಲಿಸಿದಾಗ ಗ್ರಾಮಸ್ಥರ ಬಳಕೆಗೆ ಅನೇಕ ಕೈಬಾವಿಗಳು (ಸುಮಾರು ೧೮), ಕೆಲವೇ ಕೆಲವು ಪೊಂಪು ಸೆಟ್‌ಗಳು ಇವೆ. ಈ ಗ್ರಾಮವನ್ನು ಸುತ್ತಿ ಸುತ್ತಿ ಹಾದುಹೋಗಿರುವ ಕಪಿಲಾ ನದಿಯು ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಿವೆ. ಈ ನದಿಯ ಬಯಲಿನಲ್ಲಿ ಸಾಧಾರಣ ರೀತಿಯಲ್ಲಿ ಗಿಡಮರಗಳ ಬೆಳವಣಿಗೆಯಿದೆ. ಈ ಗಿಡಮರಗಳನ್ನು ಇನ್ನೂ ದಟ್ಟವಾಗಿ ಬೆಳೆಸಿದಲ್ಲಿ ಗ್ರಾಮದ ಆರ್ಥಿಕ ಸ್ಥಿತಿ ಇನ್ನೂ ಉತ್ತಮವಾಗುತ್ತದೆ.

ಈ ಗ್ರಾಮದಲ್ಲಿ ಶೇ. ೭೫ಕ್ಕೂ ಹೆಚ್ಚು ಜನರು ವ್ಯವಸಾಯವನ್ನು ಪ್ರಧಾನವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಇಲ್ಲಿಯ ಜನರು ಹಳೆಯ ಮಾದರಿಯ ವ್ಯವಸಾಯ ಉಪಕರಣಗಳಾದ ಮರದ ನೇಗಿಲು, ಕುಂಟೆ, ತಡಿಬುಂಡೆ, ಹಲುಬೆ, ಕುಡಗೋಲು, ಕಡಕತ್ತಿಗಳ ಬಳಕೆಯನ್ನು ಇತ್ತೀಚಿನವರೆಗೂ ಮಾಡುತ್ತಿದ್ದರು. ಇತ್ತೀಚೆಗೆ ಕಬ್ಬಿಣದ ನೇಗಿಲು, ಟ್ರೈಲರ್, ಟ್ರಾಕ್ಟರ್‌ಗಳಂತಹ ಆಧುನಿಕ ಉಪಕರಣಗಳನ್ನು ಬಳಸಿ ವ್ಯವಸಾಯದ ಅಭಿವೃದ್ಧಿಗೆ ಕಾರಣವಾಗಿದ್ದಾರೆ. ಅಲ್ಲದೆ ಕೃಷಿ ಇಲಾಖೆ, ಸಹಕಾರ ಸಂಘ ಮತ್ತು ರೈತರ ಸಂಘದ ಮಾರ್ಗದರ್ಶನದಲ್ಲಿ ಉತ್ತಮವಾದ ಗೊಬ್ಬರ, ಬಿತ್ತನೆ ಬೀಜ, ಕ್ರಿಮಿನಾಶಕ ವಸ್ತುಗಳನ್ನು ಬಳಸಿ ಉತ್ತಮ ಬೆಳೆಯನ್ನು ತೆಗೆಯುತ್ತಿದ್ದಾರೆ.

ಸುತ್ತೂರಿನ ಒಟ್ಟು ಭೌಗೋಳಿಕ ವಿಸ್ತೀರ್ಣ ಸುಮಾರು ೬೦೦ ಎಕರೆಗಳು ಇದರಲ್ಲಿ ೭೦೦ ಎಕರೆಗೂ ಹೆಚ್ಚು ಭೂಪ್ರದೇಶವು ವ್ಯವಸಾಯಕ್ಕೆ ಒಳಪಟ್ಟಿದ್ದು ಉಳಿದ ಪ್ರದೇಶದಲ್ಲಿ ಜನವಸತಿ ಕಂಡುಬರುತ್ತದೆ. ಈ ಭೂಪ್ರದೇಶದಲ್ಲಿ ಪ್ರಧಾನವಾಗಿ ಭತ್ತ, ಕಬ್ಬು, ಬಾಳೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಅಲ್ಲದೆ ರಾಗಿ, ಜೋಳ, ದ್ವಿದಳ ಧಾನ್ಯಗಳನ್ನು (ಉದ್ದು, ಹಸರು, ನೆಲಗಡಲೆ, ಅಲಸಂದೆ, ತೊಗರಿ, ಅವರೆ, ಹುರಳಿ, ಎಳ್ಳು) ಅಲ್ಪಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಇಲ್ಲಿ ಹುಲ್ಲುಗಾವಲೂ ಸಹ ಇದ್ದು ಪಶುಪಾಲನೆಗೆ ಪ್ರೋತ್ಸಾಹದಾಯಕವಾಗಿದೆ. ಈ ಗ್ರಾಮದ ವ್ಯವಸಾಯ ಅಭಿವೃದ್ಧಿಯ ಪಥದಲ್ಲಿದೆ. ಅದಕ್ಕೆ ಕಾರಣವೇನೆಂದರೆ ಭೂಲಕ್ಷಣ, ಉತ್ತಮನೀರಾವರಿ ಸೌಲಭ್ಯ, ಉತ್ತಮವಾದ ರಾಸಾಯನಿಕ ಗೊಬ್ಬರ ಮತ್ತು ಆಧುನಿಕ ವ್ಯವಸಾಯ ಉಪಕರಣ ಬಳಕೆ ಕಾರಣವಾಗಿದೆ. ಈ ಗ್ರಾಮದಲ್ಲಿ ಬೆಳೆಯುತ್ತಿರುವ ವ್ಯವಸಾಯದ ಬೆಳೆಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ,

೧. ಆಹಾರ ಬೆಳೆಗಳು -- ಭತ್ತ, ರಾಗಿ, ಜೋಳ

೨. ದ್ವಿದಳ ಧಾನ್ಯಗಳು -- ಉದ್ದು, ಹಲಸಂದೆ, ಹಸರು, ಅವರೆ, ತೊಗರಿ ಹುರುಳಿ, ಕಡಲೆ, ಇತ್ಯಾದಿ

೩. ಎಣ್ಣೆಯ ಬೀಜಗಳು -- ಎಳ್ಳು, ಹುಚ್ಚೆಳ್ಳು, ಹರಳು, ಸೂರ್ಯಕಾಂತಿ, ನೆಲಗಡಲೆ

೪, ವಾಣಿಜ್ಯ ಬೆಳೆಗಳು -- ತೆಂಗು, ಕಬ್ಬು, ಬಾಳೆ, ಹಿಪ್ಪುನೇರಳೆ[೧೪]

ಈ ಗ್ರಾಮದಲ್ಲಿ ವರ್ಷಕ್ಕೆರಡು ಬೆಳೆಗಳನ್ನು ಬೆಳೆಯಲಾಗುತ್ತಿದೆ. ಅವುಗಳನ್ನು ಐಯ್ಯನ ಫಸಲು ಮತ್ತು ಕಾರ್ ಫಸಲು ಎಂದು ಕರೆಯಲಾಗುತ್ತದೆ. ಐಯ್ಯನ ಫಸಲಿನಲ್ಲಿ ಪ್ರಧಾನವಾಗಿ ತೇವಾಂಶದ ಬೆಳೆಯಾದ ಭತ್ತವನ್ನು ಬೆಳೆಯುತ್ತಾರೆ. ಕಾರ್ ಫಸಲಿನಲ್ಲಿ ರಾಗಿ, ಜೋಳ, ದ್ವಿದಳ ದಾನ್ಯಗಳನ್ನು ಬೆಳೆಯುತ್ತಾರೆ. ಬಾವಿ ಮತ್ತು ಪೊಂಪು ಸೆಟ್ ಇರುವವರು ಕಬ್ಬು, ಬಾಳೆಯನ್ನು ಬೆಳೆಯುತ್ತಾರೆ.

ವ್ಯವಸಾಯದ ಜೊತೆಜೊತೆಗೆ ಈ ಗ್ರಾಮದ ಜನ ಪಶುಪಾಲನೆಯನ್ನು ಸಹ ಮಾಡುತ್ತಾರೆ. ಇದರಿಂದ ದೈನಂದಿನ ಆಹಾರಬಳಕೆ ವಸ್ತುಗಳಾದ ಹಾಲು, ಮೊಸರು, ಬೆಣ್ಣೆ, ಮಾಂಸ ಮುಂತಾದವು ದೊರೆಯುತ್ತವೆ. ಇಲ್ಲಿ ಒಂದು ಹಾಲು ಉತ್ಪಾದಕರ ಸಂಘವೂ ಇದ್ದು ಪಶುಪಾಲನೆಗೆ ಪ್ರೋತ್ಸಾಹ ನೀಡುತ್ತಿದೆ. ಆದರೆ ಇತ್ತೀಚೆಗೆ ಆಧುನೀಕರಣಕ್ಕೆ ಒಳಗಾಗಿ ಪಶುಪಾಲನೆ ಸಾಕಾಣಿಕೆ ಕಡಿಮೆಯಾಗುತ್ತಿದೆ. ಈ ಜಾನುವಾರುಗಳ ತಪಾಸಣೆಗೆ ಈ ಊರಿನಲ್ಲಿ ಒಂದು ಪಶುವೈದ್ಯ ಶಾಲೆ ಸಹ ಇದೆ.

ಸುತ್ತೂರು ಗ್ರಾಮದ ಆರ್ಥಿಕ ಸ್ಥಿತಿ ಉತ್ತಮವಾಗಿರುವುದು ಮೇಲ್ಕಂಡ ಅಂಶಗಳಿಂದ ದೃಢಪಡುತ್ತದೆ. ಈ ಗ್ರಾಮದ ಸ್ವಾಭಾವಿಕ ಪರಿಸರವೇ ಈ ಗ್ರಾಮದ ಅಭಿವೃದ್ಧಿಗೆ ಕಾರಣವಾಗಿದೆ. ಆಧುನಿಕವಾದ ಕೃಷಿ ಮತ್ತು ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡು ಇಲ್ಲಿನ ಜನತೆ ಅದನ್ನು ತಮ್ಮ ಅಭಿವೃದ್ಧಿಗೆ ಬಳಸಿಕೊಳ್ಳುತ್ತಿದ್ದಾರೆ. ಒಟ್ಟಾರೆ ಸುತ್ತೂರಿನ ಆರ್ಥಿಕ ಸ್ಥಿತಿ-ಗತಿಗಳು ಉತ್ತಮವಾಗಿವೆ ಎನ್ನಬಹುದು. ಏಕೆಂದರೆ ಒಂದು ಗ್ರಾಮವು ಆರ್ಥಿಕಾಭಿವೃದ್ಧಿಯನ್ನು ಹೊಂದಬೇಕಾದರೆ ಅಲ್ಲಿನ ಜನರ ವೃತ್ತಿ ಪ್ರಮುಖವಾಗಿರುತ್ತದೆ. ಈ ಗ್ರಾಮದಲ್ಲಿ ವ್ಯವಸಾಯದಿಂದ ಹೆಚ್ಚು ಲಾಭವನ್ನು ಗಳಿಸುತ್ತಾರೆ. ಗೃಹ ಕೈಗಾರಿಕೆಗಳಾದ ಕುಂಬಾರಿಕೆ, ಗಾಣಿಗ ವೃತ್ತಿ, ಅಕ್ಕಸಾಲಿಗ ವೃತ್ತಿ ಇತ್ಯಾದಿಗಳಿಂದ ಅಂತಹದ್ದೇನೂ ಲಾಭ ಕಂಡುಬಂದಿರುವುದಿಲ್ಲ. ಈ ಗ್ರಾಮದ ಅಭಿವೃದ್ಧಿಗೆ ಉತ್ತಮವಾದ ಸಾರಿಗೆ ಸಂಪರ್ಕವಿದ್ದು ನಂಜನಗೂಡು, ಮೈಸೂರು, ನರಸೀಪುರಗಳಿಗೆ ಸಂಪರ್ಕ ಕಲ್ಪಿಸಿದೆ. ಇದರಿಂದ ರೈತರಿಗೆ ತಾವು ಬೆಳೆದ ಪದಾರ್ಥಗಳನ್ನು ನಗರ ಪ್ರದೇಶಕ್ಕೆ ತೆಗೆದುಕೊಂಡು ಹೋಗಿ ಮಾರಲು ಅವಕಾಶ ದೊರೆತಂತಾಗಿದೆ. ಅಲ್ಲದೆ ಸಹಕಾರ ಸಂಘಗಳು ಮತ್ತು ಬ್ಯಾಂಕುಗಳಿಂದ ಅಲ್ಪಾವಧಿ ಸಾಲ ಮತ್ತು ದೀರ್ಘಾವಧಿ ಸಾಲವನ್ನು ಪಡೆದು ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದರ ಜೊತೆಗೆ ತಾವೂ ಸಹ ಅಭಿವೃದ್ಧಿ ಹೊಂದುತ್ತಿದ್ದಾರೆ. ಇಲ್ಲಿನ ಜನತೆ ಈ ಗ್ರಾಮದ ಆರ್ಥಿಕಾಭಿವೃದ್ಧಿಯನ್ನು

ಗಮನಿಸಿದಾಗ ಒಟ್ಟು ಆದಾಯಕ್ಕಿಂತಲೂ ತಲಾ ಆದಾಯವು ಸಾಮಾನ್ಯ ಮಟ್ಟದಲ್ಲಿದೆ. ಈ ಊರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ಶಾಖೆಯೊಂದಿದೆ.

ಸುತ್ತೂರಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಕ ಬೆಳವಣಿಗೆಯು ಉತ್ತಮವಾದ ರೀತಿಯಲ್ಲಿ ಆಗಿದೆ. ಅಲ್ಲಿರುವ ಶ್ರೀ ಸುತ್ತೂರು ಮಠದಿಂದಾಗಿ ಆ ಭಾಗದ ಜನರ ಭಾಗ್ಯದ ಬಾಗಿಲು ತೆರೆದಿದೆ. ರಾಜೀವ್‌ಗಾಂಧಿ ಕುಡಿಯುವ ನೀರಿನ ಸರಬರಾಜು ಯೋಜನೆ, ವಿದ್ಯುಚ್ಛಕ್ತಿ ಘಟಕ, ಕೃಷಿ ವಿಜ್ಞಾನ ಕೇಂದ್ರ, ಮಾದರಿ ಆರೋಗ್ಯ ಗ್ರಾಮ, ಸುವರ್ಣ ಗ್ರಾಮೋದಯ ಯೋಜನೆ, ನೈರ್ಮಲ್ಯ ಯೋಜನೆ, ಸಾರ್ಕ್ ಗ್ರಾಮ ಯೋಜನೆ ಮುಂತಾದುವುಗಳ ಮೂಲಕ ಸುತ್ತೂರು ಒಂದು ಪ್ರಗತಿಪರವಾದ ಊರಾಗಿ ಬದಲಾವಣೆಯನ್ನಾಗಿ ಹೊಂದುತ್ತಿದೆ. ಇಲ್ಲಿನ ಜನರ ನಿರುದ್ಯೋಗ ಸಮಸ್ಯೆಯನ್ನು ಈಡೇರಿಸುವಲ್ಲೂ ಸಹ ಮೇಲಿನ ಮಠ ತನ್ನದೇ ಆದ ಪಾತ್ರವನ್ನು ವಹಿಸುತ್ತಾ ಬಂದಿದೆ. ಅಲ್ಲದೆ ಇಲ್ಲಿನ ಜನ ಆರ್ಥಿಕವಾಗಿ ಸದೃಢವಾಗುವಂತೆಯೂ ಸಹ ಮಾಡಿದೆ. ಉತ್ತಮ ಭೂಮಿ, ಉತ್ತಮ ಶಿಕ್ಷಣ, ಉತ್ತಮ ಸೌಲಭ್ಯಗಳನ್ನು ಹೊಂದಿರುವ ಈ ಗ್ರಾಮ ಒಂದು ಪ್ರಗತಿಪರವಾದ ಗ್ರಾಮವಾಗಿದ್ದು ಅಭಿವೃದ್ಧಿಗೆ ತನ್ನನ್ನು ತೊಡಗಿಸಿಕೊಂಡಿದೆ.

ಅಡಿಟಿಪ್ಪಣಿಗಳು

೧. ಡಾ. ಎಚ್.ಎಮ್. ಸದಾಶಿವಯ್ಯ, ಕನ್ನಡ ಅಧ್ಯಯನ ಸಂಸ್ಥೆ–ಸಮಾಜಶಾಸ್ತ್ರ, ಭಾಗ–೧, ಪುಟ ೧೧೯

೨. ಎ.ಕ. ಸಂ.III ನಂ.ಗೂ.೨೧೫ ಪುಟಗಳು ೩೧೧–೩೧೨

೩. ಎ.ಕ. ಸಂ. III ನಂ.ಗೂ.೨೧೮ ಪುಟಗಳು ೩೧೫–೩೧೬

೪. ಹೆಚ್.ಪಿ.ಮಲ್ಲೇದೇವರು, ಸಂಪಾದಕರು, ಅರ್ಚನ, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವ ಅಭಿನಂದನಾ ಗ್ರಂಥ, ಪುಟ ೧೧೧, ಕ್ರಿ.ಶ. ೧೯೮೪

೫. ಕುಂತೂರು ಸಂಗಪ್ಪಶಾಸ್ತ್ರಿ, ಶ್ರೀ ಸುತ್ತೂರು ವೀರಸಿಂಹಾಸನದ ಗುರುಪರಂಪರೆ, ಜ.ಶ್ರೀ.ಶಿವರಾತ್ರೀಶ್ವರ ಗ್ರಂಥಮಾಲೆ, ಕ್ರಿ.ಶ.೧೯೩೩

೬. ಆರ್.ನರಸಿಂಹಾಚಾರ್ಯ, ಕನ್ನಡ ಕವಿಚರಿತೆ, ಭಾಗ–೩, ಕ.ಅ.ಪ್ರಾ, ಬೆಂಗಳೂರು, ಪುಟ ೪೩೦

೭. ಹೆಚ್.ತಿಪ್ಪೇರುದ್ರಸ್ವಾಮಿ, ಸಂಪಾದಕರು, ಆಮುಗಿದೇವಯ್ಯಗಳ ಸಾಂಗತ್ಯ, ಪುಟಗಳು ೧–೧೩

೮. ಜ|| ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, ಸಂಪಾದಕರು, ಘನಲಿಂಗಿ ದೇವರ ವಚನಗಳು, ಪ್ರಕಾಶಕರು: ಜೆಎಸ್‌ಎಸ್ ಗ್ರಂಥಮಾಲೆ

೯. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ, ಪುಟ ೫೪೦

೧೦. ಆರ್.ನರಸಿಂಹಾಚಾರ್ಯ, ಕನ್ನಡ ಕವಿಚರಿತೆ, ಭಾಗ–೨, ಕ.ಅ.ಪ್ರಾ, ಬೆಂಗಳೂರು, ಪುಟ ೪೩೦, ೨೦೦೫

೧೧. ಶ್ರೀಮಠದ ವಸ್ತುಸಂಗ್ರಹಾಲಯದಲ್ಲಿಡಲಾಗಿದೆ.

೧೨. ಎ.ಕ. ಸಂ. III ನಂ.ಗೂ.೨೧೩ ಪುಟ ೩೧೦

೧೩. ಎ.ಕ. ಸಂ. I ನಂ.ಗೂ.೨೧೫ ಪುಟಗಳು ೩೧೧–೩೧೨

೧೪. ಎಮ್.ಮಹದೇವಪ್ಪ, ಸುತ್ತೂರು ಭೌಗೋಳಿಕ ಸಾದೃಶ್ಯ ಸಮೀಕ್ಷೆ, ಜೆಎಸ್‌ಎಸ್ ಗ್ರಂಥಮಾಲೆ, ಕ್ರಿ.ಶ.೧೯೭೬

ಅಧ್ಯಾಯ ೪

ಧಾರ್ಮಿಕ ಸ್ಥಿತಿಗತಿಗಳು

ಭಾರತವು ಹಲವಾರು ಧರ್ಮ, ಜಾತಿ, ಭಾಷೆ ಹಾಗೂ ಸೀಮೆಗಳ ಆಗರ. ಹೀಗಿದ್ದರೂ ಕೂಡ ನಮ್ಮ ಈ ದೇಶವು ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡುಕೊಂಡು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಜಗತ್ತಿಗೆ ನೀಡಿದೆ. ಪ್ರಾಚೀನ ಕಾಲದಿಂದಲೂ ಅನೇಕ ರಾಜವಂಶಗಳು ಈ ದೇಶದಲ್ಲಿ ಆಳ್ವಿಕೆ ನಡೆಸಿ ತಮ್ಮದೇ ಆದ ಸಂಸ್ಕೃತಿಯನ್ನು ಕೊಡುಗೆಯಾಗಿ ನೀಡಿರುವುದರಿಂದಲೋ ಏನೋ ಧಾರ್ಮಿಕ ಅಥವಾ ಜಾತಿಯ ವೈಷಮ್ಯಕ್ಕೆ ಪ್ರಚೋದನೆ ನೀಡದೆ ಸರ್ವಧರ್ಮವನ್ನು ಸಮನಾಗಿ ನೋಡಿಕೊಂಡು ಅವುಗಳನ್ನು ಪೋಷಿಸಿಕೊಂಡು ಬಂದಿರುವುದಕ್ಕೆ ಸಾಕಷ್ಟು ಆಧಾರಗಳಿವೆ.

ಸುತ್ತೂರು ತನ್ನ ಒಡಲಿನಲ್ಲಿ ಜೈನ, ಶೈವ, ವೈಷ್ಣವ, ವೀರಶೈವ ಮುಂತಾದ ಮತ-ಧರ್ಮಗಳಿಗೆ ಸಮನಾದ ಆಶ್ರಯ ಮತ್ತು ಪ್ರೋತ್ಸಾಹವನ್ನು ನೀಡಿ ಸರ್ವಧರ್ಮ ಸಮನ್ವಯವನ್ನು ಕಾಪಾಡಿಕೊಂಡು ಬಂದಿತೆನ್ನಬಹುದು. ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಸ್ಥಳೀಯ ಪಾಳೇಗಾರರು ಮತ್ತು ಮೈಸೂರು ಒಡೆಯರುಗಳ ಆಳ್ವಿಕೆಗೆ ವಿವಿಧ ಕಾಲಘಟ್ಟಗಳಲ್ಲಿ ಒಳಪಟ್ಟಿದ್ದ ಈ ಗ್ರಾಮ ಗಂಗರ ಕಾಲದಲ್ಲಿ ಜೈನ ಮತ್ತು ಬ್ರಾಹ್ಮಣರ ಪ್ರಮುಖ ಕೇಂದ್ರವಾಗಿಯೂ, ಚೋಳರ ಕಾಲದಲ್ಲಿ ಶೈವ ಮತ್ತು ವೀರಶೈವ ಧರ್ಮಗಳ ಕೇಂದ್ರವಾಗಿಯೂ, ಹೊಯ್ಸಳರು, ವಿಜಯನಗರ ಹಾಗೂ ಇತರ ರಾಜಮನೆತನಗಳ ಕಾಲದಲ್ಲಿ ಮೇಲಿನ ಎಲ್ಲಾ ಮತ-ಧರ್ಮಗಳಿಗೂ ಪ್ರೋತ್ಸಾಹವನ್ನು ಪಡೆದುಕೊಂಡಿತ್ತು. ಅಂದರೆ ಈ ಗ್ರಾಮ ಸರ್ವಧರ್ಮ ಸಮನ್ವಯದ ಕೇಂದ್ರವಾಗಿ ರೂಪುಗೊಂಡಿತ್ತು. ಈಶಾನೇಶ್ವರ ಒಡೆಯರ್‌ರ "ರೇವಣಸಿದ್ಧೇಂದ್ರ ದೇಶಿಕರ ಪರಮಲೀಲಾಕಥನ", ಬೊಮ್ಮರಸನ "ರೇವಣಸಿದ್ದೇಶ್ವರ", ಸಿದ್ಧನಂಜ ದೇಶಿಕರ "ಪರಮ ಶಿವಾಧಿಕ್ಯ ಶಿಖಾಮಣಿ", ಶಿವಾನಂದನ (ಶಿವಲಿಂಗಾರಾಧ್ಯ) "ಅಮುಗಿ ದೇವಯ್ಯಗಳ ಸಾಂಗತ್ಯ" (ಸಂ. ಡಾ. ಎಚ್. ತಿಪ್ಪೇರುದ್ರಸ್ವಾಮಿ), ಘನಲಿಂಗಿದೇವರ "ವಚನಗಳು", ವಿರಕ್ತ ತೋಂಟದಾರ್ಯರ "ಸಿದ್ದೇಶ್ವರ ಪುರಾಣ", ಇಮ್ಮಡಿ ಶಿವರಾತ್ರೀಶ್ವರ ಸ್ವಾಮಿಗಳ "ವೃಷಭೇಂದ್ರ ವಿಜಯಪುರಾಣ", ಸೋಸಲೆಯ ರೇವಣಾರ್ಧ್ಯರ "ಶಿವಾಧಿಕ್ಯ ಶಿಖಾಮಣಿ", ಕುಂತೂರು ಸಂಗಪ್ಪ ಶಾಸ್ತ್ರಿಯವರ "ಶ್ರೀ ಸುತ್ತೂರು ಸಿಂಹಾಸನದ ಗುರುಪರಂಪರೆ", ಎಂ.ಜಿ.ನಂಜುಂಡಾರಾಧ್ಯರಿಂದ "ಶಿವರಾತ್ರಿ ಶಿವಾಚಾರ್ಯ" ಮುಂತಾದ ಕೃತಿಗಳು ಸುತ್ತೂರಿನ ಧಾರ್ಮಿಕ ಸ್ಥಿತಿಗತಿಗಳನ್ನು ತಿಳಿಸುವ ಪ್ರಮುಖ ಆಧಾರಗಳಾಗಿವೆ. ಇವುಗಳ ಜೊತೆಗೆ ಸುತ್ತೂರಿನಲ್ಲಿ ದೊರೆತಿರುವ ಶಿಲಾಶಾಸನ ಮತ್ತು ತಾಮ್ರ ಶಾಸನಗಳ ಅಂದಿನ ಧಾರ್ಮಿಕ ಸ್ಥಿತಿಗತಿಗಳನ್ನು ತಿಳಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ.

ಒಂದು ಸಾಂಸ್ಕೃತಿಕ ದೃಷ್ಟಿಯಲ್ಲಿ ವಿಶ್ಲೇಷಿಸುವುದಾದರೆ ಸುತ್ತೂರಿನ ಧಾರ್ಮಿಕ ಪರಂಪರೆಯು ಭರತಖಂಡದ ಧಾರ್ಮಿಕ ಪರಂಪರೆಯ ಚೌಕಟ್ಟಿನಲ್ಲೇ ಬೆಳೆದುಬಂದದ್ದು ಎನ್ನಬಹುದು. ಏಕೆಂದರೆ ಸುತ್ತೂರು ದೇಶದ ಪ್ರಮುಖ ಧರ್ಮಗಳನ್ನು ತನ್ನ ಮಡಿಲಿನಲ್ಲಿ ಬೆಳೆಸಿ, ಪೋಷಿಸಿ, ರಕ್ಷಿಸಿಕೊಂಡು

ಬಂದಿರುವುದಕ್ಕೆ ಅಪೂರ್ವವಾದ ದಾಖಲೆಗಳು ದೊರಕುತ್ತವೆ. ಸುತ್ತೂರಿನಲ್ಲಿ ಪ್ರಧಾನವಾಗಿ ಹಿಂದೂಗಳು ಇದ್ದರೂ ಅವರಲ್ಲಿಯೇ ಶೈವ, ವೈಷ್ಣವ ಮತ್ತು ವೀರಶೈವ ಮತಗಳನ್ನು ಅನುಸರಿಸಿಕೊಂಡು ಬಂದವರ ಸಂಖ್ಯೆಯೇ ಹೆಚ್ಚೆನ್ನಬಹುದು. ಸುತ್ತೂರಿನ ಪ್ರಾಚೀನ ಕಾಲದ ಇತಿಹಾಸವನ್ನು ಅಧ್ಯಯನ ಮಾಡಿದರೆ ಈ ಊರಿನ ಪ್ರಾಚೀನ ನಂಬಿಕೆಗಳ ಬಗೆಗೆ ಹೆಚ್ಚಿನ ಮಾಹಿತಿ ದೊರಕುತ್ತದೆ. ಏಕೆಂದರೆ ಸುತ್ತೂರಿನಂತಹ ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಜೈನಬಸದಿ ಮತ್ತು ವಿಗ್ರಹಗಳು, ಜೈನಧರ್ಮವು ಈ ಊರಿನ ಪ್ರಾಚೀನ ಧರ್ಮಗಳಲ್ಲಿ ಒಂದಾಗಿತ್ತೆನ್ನಬಹುದು. ಇದಕ್ಕೆ ಸಾಕ್ಷಿ ಎಂಬಂತೆ ಗಂಗರು, ಹೊಯ್ಸಳರ ಕಾಲದಲ್ಲಿ ಈ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂಬುದಕ್ಕೆ ದೊರೆತಿರುವ ಶಾಸನಗಳು, ಬಸದಿಯ ಅವಶೇಷಗಳು, ತೀರ್ಥಂಕರರ ಭಗ್ನಗೊಂಡ ವಿಗ್ರಹಗಳು ಮೂಕಸಾಕ್ಷಿಯಾಗಿವೆ.

ವೈಷ್ಣವ ಮತ ಅಥವಾ ಬ್ರಾಹ್ಮಣ ಮತ ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಜನಪ್ರಿಯತೆಯ ಫಲವಾಗಿ ಸುತ್ತೂರಿನಲ್ಲಿ ವೈಷ್ಣವ ದೇವಾಲಯವಾದ ವರದರಾಜ ದೇವಾಲಯ (ನಾಗಕೇಶವ ಅಥವಾ ನಾರಾಯಣಸ್ವಾಮಿ) ವನ್ನು ಕಾಣಬಹುದಾಗಿದೆ. ಹಾಗೆಯೇ ದೇವಾಲಯಗಳ ನಿರ್ಮಾಣ, ದುರಸ್ತಿಗೊಳಿಸಿ ದಾನದತ್ತಿ ನೀಡಿರುವುದು. ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಅವುಗಳಲ್ಲಿ ಒಂದಾದ ೧ನೇ ರಾಜೇಂದ್ರ ಚೋಳನ ಆಳ್ವಿಕೆಯ ನಾಲ್ಕನೇ ವರ್ಷದಲ್ಲಿ ಹಾಕಿಸಿದ ೧೦೧೫-೧೬ನೇ ಶಾಸನದಲ್ಲಿ[೧] ಸುತ್ತೂರನ್ನು "ಬ್ರಹ್ಮದೇಯ" ವೆಂದು ಕರೆಯಲಾಗಿದೆ. ಇದರ ಅರ್ಥವೇನೆಂದರೆ ರಾಜೇಂದ್ರ ಚೋಳನ ಆಗಮನಕ್ಕೂ ಮುಂದೆ ಇಲ್ಲಿ ಬ್ರಾಹ್ಮಣರು ಬಂದು ನೆಲೆಸಿದ್ದರು ಹಾಗೂ ಸಂಸ್ಕೃತ ಒಂದು ಪ್ರಮುಖ ಭಾಷೆಯಾಗಿತ್ತೆಂದು ತಿಳಿಯಬಹುದಾಗಿದೆ. ಅಲ್ಲದೆ ಈ ಶಾಸನದಿಂದ ತಿಳಿದುಬರುವ ಮತ್ತೊಂದು ಮುಖ್ಯವಾದ ಅಂಶವೆಂದರೆ ಸುತ್ತೂರು ಒಂದು ಅಗ್ರಹಾರವಾಗಿದ್ದು ವೇದ, ಆಗಮಗಳ ಶಿಕ್ಷಣ ಕೇಂದ್ರವಾಗಿತ್ತೆಂಬುದು.

ಚೋಳರ ಆಗಮನದೊಂದಿಗೆ ಸುತ್ತೂರು ನಿಧಾನವಾಗಿ ಜೈನ, ವೈಷ್ಣವ ಧರ್ಮಗಳಿಂದ ಶೈವಧರ್ಮ ಅದರಲ್ಲೂ ಮುಖ್ಯವಾಗಿ ವೀರಶೈವ ಧರ್ಮದ ಪ್ರಮುಖ ಕೇಂದ್ರವಾಗಿ ಬೆಳೆಯಲಾರಂಭಿಸಿತು. ಚೋಳರ ದೊರೆ ರಾಜೇಂದ್ರ ಚೋಳನ ಕಾಲದ ಮತ್ತೊಂದು ಶಾಸನ ಸುತ್ತೂರಿನಲ್ಲಿ ದೊರೆತಿದ್ದು[೨], ಇದರಲ್ಲಿ ಸುತ್ತೂರನ್ನು ಶ್ರೋತ್ರೀಯ (ಶ್ರೋತ್ರಿಯೂರು) ಎಂದು ಸಂಭೋದಿಸಿ ಮುಂದುವರೆಯುತ್ತಾ ಜೈನ ದೇವಾಲಯಗಳಾದ ಈಶ್ವರ ಮುಡೈಯಾರ ದೇವಸ್ಥಾನಕ್ಕೂ, ಮೂಲಸ್ಥಾನೇಶ್ವರ ದೇವಾಲಯಕ್ಕೂ ಗ್ರಾಮದ ಜನರು ಭೂಮಿ, ಹಣ, ಎಣ್ಣೆ ಮುಂತಾದವುಗಳನ್ನು ದಾನ ಮಾಡಿದ ಮಾಹಿತಿಯನ್ನು ತಿಳಿಸುತ್ತದೆ. ಅಲ್ಲದೆ ಈಶಾನದಲ್ಲಿ ತಮಿಳು ಪ್ರಭಾವವಿತ್ತೆಂಬುದನ್ನು ಕಾಣಬಹುದಾಗಿದೆ. ಮೇಲಿನ ದೇವಾಲಯಗಳಲ್ಲಿ ತಿವಳಿ, ದಟ್ಟೆ, ಖಂಡಿಕೆ, ಜಯಗಂಟೆ ಮತ್ತು ಕಾಳೆ ಎಂಬ ಪಂಚಮಹಾ ಶಬ್ದಗಳನ್ನು ಬಾರಿಸಬೇಕೆಂದೂ ಹೇಳಿದೆ. ಈ ಶಾಸನದಲ್ಲಿ ಕಂಡುಬರುವ

ಮತ್ತೊಂದು ಗಮನಾರ್ಹವಾದ ಅಂಶವೆಂದರೆ ಸೊತ್ತಿಯೂರವ್ವೆಗೂ (ಗ್ರಾಮದೇವತೆ ಸುತ್ತೂರಮ್ಮ) ಸಹ ಭೂಮಿದಾನ ಮಾಡಿರುವುದನ್ನು ಹೇಳಿರುವುದು.

ಚೋಳರ ಪ್ರೋತ್ಸಾಹ ಮತ್ತು ಪ್ರಭಾವದಿಂದ ಸುತ್ತೂರಿನಲ್ಲಿ ಶೈವ ಪಂಥಗಳಲ್ಲಿ ಒಂದಾದ ವೀರಶೈವ ಪಂಥ ಬೆಳವಣಿಗೆಯನ್ನು ಹೊಂದಲಾಗಿ ಸುತ್ತೂರು ಅನಂತರ ಪ್ರಮುಖ ಜೈನ ಕೇಂದ್ರವಾಗಿ (ವೀರಶೈವ) ಪರಿವರ್ತನೆಗೊಂಡಿತು. ಚೋಳರು ಸುತ್ತೂರಿನ ಅತ್ಯಂತ ಪ್ರಾಚೀನ ದೇವಾಲಯವಾದ ಮೂಲಸ್ಥಾನೇಶ್ವರ ಲಿಂಗವನ್ನು ತೆಗೆಯಿಸಿ ಅಲ್ಲಿ ಈಗಿರುವ ಸೋಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದರು. ಹೊಯ್ಸಳ ಮಹಾದಂಡನಾಯಕನಾಗಿದ್ದ ಲಕ್ಷ್ಮಯ್ಯನು ತನ್ನ ಪ್ರಾಂತೀಯ ರಾಜಧಾನಿಯಾದ ಸುತ್ತೂರಿನಲ್ಲಿ (ಸೊತ್ತಿಯೂರು) ಸೋಮೇಶ್ವರ ದೇವಾಲಯವನ್ನು ನಿರ್ಮಿಸಿದನು ಎಂಬುದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೆ ದೇವಾಲಯ ಮಂಟಪದ ಕಂಬಗಳನ್ನು ಮಾಡಿಸಿದವರ ಮಾಹಿತಿಗಳನ್ನು ಸಹ ಶಾಸನಗಳು[೩] ನೀಡುತ್ತವೆ. ಈ ದೇವಸ್ಥಾನವನ್ನು ವಿಜಯನಗರ ಮಹಾಮಂಡಳೇಶ್ವರ ರಾಮರಾಜ, ತಿರುಮಲರಾಜಯ್ಯ ದೇವನ ಕಾರ್ಯಕರ್ತನಾದ ಭದ್ರಯ್ಯನು ಜೀರ್ಣೋದ್ಧಾರಗೊಳಿಸಿದನು. ಇದೇ ದೇವಾಲಯ ೨೨ನೇ ಜಗದ್ಗುರುಗಳಾದ ಮಂತ್ರಮಹರ್ಷಿ ಶ್ರೀ ಶಿವರಾತ್ರಿ ಮಹಾಸ್ವಾಮಿಗಳ ಮತ್ತು ಈಗಿನ ಜಗದ್ಗುರುಗಳಾದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ.

ಸುತ್ತೂರಿನ ಆದಿಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರರ ಗದ್ದುಗೆಯ 'ನಂದಿಪೀಠ'ದಲ್ಲಿ ಶಾಸನವೊಂದಿದೆ[೪]. ಇದು ೧೬ನೇ ಶತಮಾನಕ್ಕೆ ಸೇರಿದ್ದು ಶ್ರೀ ಮಠದ ಗುರುಗಳಾದ ಶ್ರೀ ಶಿವರಾತ್ರಿ ದೇವರ (ಭಂಡಾರಿ ಬಸವಪ್ಪ ಒಡೆಯರ್) ನಿರೂಪದಿಂದ ಲಿಂಗಣ್ಣ ಒಡೆಯರ್ ಬಸವ ಪ್ರತಿಷ್ಠೆ ಮಾಡಿಸಿದರೆಂದು ತಿಳಿದುಬರುತ್ತದೆ.

ನಂಜನಗೂಡಿನ ಕಪಿಲಾ ನದಿಯ ತೀರ್ಥಘಟ್ಟದ ಬಳಿಯಿರುವ ಹದಿನಾರುಕಾಲು ಮಂಟಪದ ಮೇಲ್ಛಾವಣಿಯಲ್ಲಿ ಎರಡು ಶಾಸನಗಳು[೫] ಇದ್ದು ಇವು ಸುತ್ತೂರಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡುತ್ತವೆ. ಈ ಶಾಸನದಲ್ಲಿ ಸುತ್ತೂರಿನ ಭಂಡಾರಿ ಬಸವಪ್ಪ ಒಡೆಯರ್‌ರವರು ಕಪಿಲ ಮತ್ತು ಕೌಂಡಿನ್ಯ ನದಿಯ ಸಂಗಮದ ದಕ್ಷಿಣಕ್ಕೆ ಸಂಗಮೇಶ್ವರ ದೇವಾಲಯವನ್ನು ಪ್ರತಿಷ್ಠಾಪಿಸಿ ಅದನ್ನು ನೋಡಿಕೊಳ್ಳಲು ಸಿರಿಗಿರಿ ಒಡೆಯರನ್ನು ನಿಯೋಜಿಸಿದ ವಿಚಾರ ತಿಳಿದುಬರುತ್ತದೆ. ಇದೇ ಮಾಹಿತಿಯನ್ನು ಮತ್ತೊಂದು ಶಾಸನ ಸ್ಪಷ್ಟಪಡಿಸುತ್ತದೆ[೬].

ಹೀಗೆ ಸುತ್ತೂರಿನಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ಸಹ ವಿವಿಧ ಮತಧರ್ಮಗಳಿಗೆ ಪ್ರೋತ್ಸಾಹವಿದ್ದುದಾಗಿ ತಿಳಿದುಬರುತ್ತದೆ. ಸುತ್ತೂರಿನಲ್ಲಿರುವ ನಾರಾಯಣಸ್ವಾಮಿ, ವೀರಭದ್ರೇಶ್ವರ, ಸೋಮೇಶ್ವರ ಮತ್ತು ಸುತ್ತೂರಮ್ಮ ದೇವಾಲಯಗಳು ಹಾಗೂ ದೊಡ್ಡಮ್ಮತಾಯಿ, ಮಾರಮ್ಮ ದೇವಾಲಯಗಳು, ಜೊತೆಗೆ ಈಗ ಸುತ್ತೂರಿನ ಕೀರ್ತಿಯನ್ನು ಜಗತ್ತಿನಾದ್ಯಂತ ಪಸರಿಸಿರುವ ಶ್ರೀ

ಸುತ್ತೂರು ಮಠದ ಆದಿಜಗದ್ಗುರುಗಳವರ ಶ್ರೀ ಶಿವರಾತ್ರೀಶ್ವರ ಗದ್ದಿಗೆ ಇತ್ಯಾದಿಗಳು ಸುತ್ತೂರಿನ ಧಾರ್ಮಿಕ ಸ್ಥಿತಿ-ಗತಿಯನ್ನು ತಿಳಿಸುತ್ತವೆ.

ನಾರಾಯಣಸ್ವಾಮಿ ದೇವಾಲಯ ಮೂಲತಃ ವರದರಾಜಸ್ವಾಮಿಯ ದೇವಾಲಯವಾಗಿತ್ತೆಂದು ಅನಂತರ ನಾಗಕೇಶವ ದೇವಾಲಯವೆಂತಲೂ ಹೆಸರಾಗಿ ಈಗ ನಾರಾಯಣಸ್ವಾಮಿ ದೇವಾಲಯವೆಂದು ಹೆಸರಾಗಿದೆ. ಸೋಮೇಶ್ವರಸ್ವಾಮಿ ದೇವಾಲಯವು ಒಂದು ಸರ್ವಧರ್ಮ ಸಮನ್ವಯದ ಕೇಂದ್ರವಾಗಿದೆ. ಇಲ್ಲಿರುವ ಚೋಳರ ಕಾಲದ ಶಿವಲಿಂಗ, ಗಣಪತಿ, ಚಂಡಿಕೇಶ್ವರ, ಪಾರ್ವತಿ, ಶಂಕರನಾರಾಯಣ ಹಾಗೂ ಸಪ್ತಮಾತೃಕೆಯರ ವಿಗ್ರಹಗಳು ಅಲ್ಲಿನ ಧಾರ್ಮಿಕ ಸಮನ್ವಯತೆಯನ್ನು ಸಾರುತ್ತವೆ. ಅದರಲ್ಲೂ ಪ್ರಮುಖವಾಗಿ ಶಂಕರನಾರಾಯಣ ವಿಗ್ರಹ ಎಲ್ಲಾ ಆಸ್ತಿಕರನ್ನು ತನ್ನ ಚೆಲುವಿನಿಂದ ಸೆಳೆಯುತ್ತಿದೆ. ಈ ವಿಗ್ರಹ ಹರಿ ಮತ್ತು ಹರರ ಸಂಗಮವಾದ ವಿಗ್ರಹವಾಗಿದೆ. ಇದರಲ್ಲಿ ಶಿವನ ತ್ರಿಶೂಲ, ಹರಿಯ ಶಂಖಚಕ್ರಗಳನ್ನು ಕಾಣಬಹುದಾಗಿದೆ. ಇದು ಸುತ್ತೂರಿನ ಧಾರ್ಮಿಕ ಸಮನ್ವಯತೆಯನ್ನು ಇಂದಿಗೂ ಜಗತ್ತಿಗೆ ಸಾರುತ್ತಿದೆ.

ಚೋಳರ ಕಾಲದ ನಂತರ ಅಂದರೆ ೧೨ನೇ ಶತಮಾನದ ನಂತರ 'ಕಾಯಕವೇ ಕೈಲಾಸ' ಎಂದು ಕಾಯಕಕ್ಕೆ ವಿಶೇಷವಾದ ಮಹತ್ವ ಕಲ್ಪಿಸಿದ ವೀರಶೈವ ಧರ್ಮ ಈ ಗ್ರಾಮದಲ್ಲಿ ಪ್ರಾಬಲ್ಯಕ್ಕೆ ಬರತೊಡಗಿತ್ತು. ವೀರಶೈವ ಧರ್ಮದ ರಕ್ಷಾ ಕವಚಗಳಂತಿರುವ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿ ಮಂತ್ರಗಳು ಗ್ರಾಮದ ಜನರನ್ನು ಆಕರ್ಷಿಸಿ ಅನೇಕ ಜನರು ವೀರಶೈವ ಧರ್ಮವನ್ನು ಸ್ವೀಕರಿಸಿದ್ದು ಕಂಡುಬರುತ್ತದೆ. ಕಲ್ಯಾಣದ ಕ್ರಾಂತಿಯ ನಂತರ ಮುಸಡಿ ಚೌಡಯ್ಯನವರು[2] ಆಶ್ರಯ ಬಯಸಿ ಸುತ್ತೂರಿಗೆ ಬಂದು ಸ್ವಲ್ಪ ಕಾಲ ನೆಲೆಸಿದ್ದು **"ಶಿವಪಂಚಾಕ್ಷರಿ ಮಹಾಮಂತ್ರ ಮಹಿಮೆ"**ಯನ್ನು ಸುತ್ತೂರಿನಲ್ಲಿ ಸಾರಿದರು. ಅಲ್ಲಿಂದೀಚೆಗೆ ಸುತ್ತೂರು ದಕ್ಷಿಣದ ಕಲ್ಯಾಣವೋ ಎಂಬ ರೀತಿಯಲ್ಲಿ ಪ್ರಸಿದ್ಧವಾಯಿತು.

ಸುತ್ತೂರಿನಲ್ಲಿ ಇದ್ದು ಅನಂತರ ಕಲ್ಯಾಣ ಶ್ರೀಶೈಲದತ್ತ ನಡೆದ ಶರಣ ಮುಸುಡಿ ಚೌಡಯ್ಯನವರಿಂದ ಪ್ರಭಾವಿತರಾದ ಆ ಭಾಗದ ಅನೇಕ ಶರಣರು ಸುತ್ತೂರನ್ನು ಸಂದರ್ಶಿಸಲು ಬಂದರು. ಅಂತಹವರುಗಳಲ್ಲಿ ಮಹದೇಶ್ವರರು ಪ್ರಮುಖರು. ಸುತ್ತೂರಿಗೂ ಮತ್ತು ಮಹದೇಶ್ವರರಿಗೂ ಒಂದು ಅವಿನಾಭಾವ ಸಂಬಂಧವಿದೆ. ಇವರು ಜಾನಪದದ ಹಾಡುಗಳಲ್ಲಿ ಮಹಾನಾಯಕರಾಗಿ ಮೆರೆದಿದ್ದಾರೆ. ಸುತ್ತೂರು ಆ ವೇಳೆಗಾಗಲೇ ಆಧ್ಯಾತ್ಮಿಕ ಅನಂದದ ನೆಲೆಯಾಗಿದ್ದುದರ ಜೊತೆಗೆ **'ಕಾಯಕತತ್ವ'** ವನ್ನು ಪ್ರಚಾರಗೊಳಿಸುತ್ತಿತ್ತು. ಸುತ್ತೂರಿನಲ್ಲಿ ನಡೆಯುತ್ತಿದ್ದ ಅನ್ನದಾಸೋಹಕ್ಕೆ ಬೇಕಾದ ಆಹಾರಪದಾರ್ಥಗಳನ್ನು ಸಿದ್ಧಗೊಳಿಸಲು ಬಂದವರಿಗೆ ನೀಡಲಾಗುತ್ತಿತ್ತು. ಅದೇ ರೀತಿಯಲ್ಲಿ ಮಹಾದೇಶ್ವರರು ಸುತ್ತೂರಿಗೆ ಆಗಮಿಸಿದಾಗ ಅವರಿಗೆ ರಾಗಿ ಬೀಸುವ ಮತ್ತು ಹೂವುಗಳನ್ನು ತರುವ ಕಾಯಕವನ್ನು ವಹಿಸಲಾಯಿತು. ಮಹದೇಶ್ವರರು ತಮ್ಮ ದಿವ್ಯಶಕ್ತಿಯಿಂದ ಚೀಲಚೀಲಗಟ್ಟಲೆ ರಾಗಿಯನ್ನು ಕೆಲವೇ ಕ್ಷಣಗಳಲ್ಲಿ ಬೀಸಿಬಿಡುತ್ತಿದ್ದರು. ಇದು ಒಂದು ಪವಾಡ ಆಗಿ ಹೆಸರು ಪಡೆಯಿತು.

ಇಂದಿಗೂ ಸುತ್ತೂರಿನಲ್ಲಿ ಮಹಾದೇಶ್ವರರು ಬೀಸಿದ ರಾಗಿಕಲ್ಲು, ಮಹದೇಶ್ವರ ಗದ್ದಿಗೆ, ಕೊಳಗ ಮಹಾದೇಶ್ವರರು ಬಳಸಿದ ವಸ್ತುಗಳನ್ನು ಪೂಜಿಸಲಾಗುತ್ತಿದೆ[5]. ಮಹದೇಶ್ವರ ಉತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ವೀರಶೈವ ಧರ್ಮದ ಪ್ರಚಾರ ಕಾರ್ಯವು ಸುತ್ತೂರು ಶಿವರಾತ್ರೀಶ್ವರ ಮಠದ ವತಿಯಿಂದ ನಡೆದು ನುಡಿಗಿಂತ ನಡೆಗೆ, ವಿಚಾರಕ್ಕಿಂತ ಆಚಾರಕ್ಕೆ, ಬುದ್ಧಿಗಿಂತ ಭಾವಕ್ಕೆ, ತರ್ಕಕ್ಕಿಂತ ಅನುಭಾವಕ್ಕೆ, ಕುಲಕ್ಕಿಂತ ಶೀಲಕ್ಕೆ ಹಾಗೂ ಅಹಿಂಸಾತ್ಮಕ ಕಾಯಕಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟು ವೀರಶೈವ ಧರ್ಮದ ಅಭಿವೃದ್ಧಿಗೆ ಕಾರಣವಾಯಿತು.

ಸುತ್ತೂರಿನಲ್ಲಿ ಹಬ್ಬ ಹರಿದಿನಗಳ ಹಿನ್ನೆಲೆಯಲ್ಲಿ ನಡೆಯುತ್ತಿದ್ದ ಹಲವಾರು ಧಾರ್ಮಿಕ ಸಂಪ್ರದಾಯಗಳನ್ನು ಅವಲೋಕಿಸಿದಾಗ ಅಲ್ಲಿನ ಸಾಮಾನ್ಯ ಜನತೆಯ ಧಾರ್ಮಿಕ ಸಂಸ್ಕೃತಿಯು ವಿಶಾಲವಾಗಿ ಹರಡಿಕೊಳ್ಳುತ್ತದೆ. ದೀಪಾವಳಿ ಈ ಗ್ರಾಮದ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಎತ್ತುಗಳ ಕೊಂಬಿಗೆ ಬಣ್ಣ ಹಾಕಿ **ಕಿಚ್ಚು ಹಾಯಿಸುವ** ಸಂಪ್ರದಾಯ ಇಂದಿಗೂ ನಡೆದುಕೊಂಡು ಬರುತ್ತಿದೆ. ಸಿಡಿಮದ್ದುಗಳ ಬಳಕೆಯನ್ನು ಕಾಣಬಹುದು. ಯುಗಾದಿ ಈ ಊರಿನ ಜನರ ಮತ್ತೊಂದು ಪ್ರಮುಖ ಹಬ್ಬವಾಗಿದ್ದು ಊರಿನ ಪ್ರತಿಯೊಬ್ಬರೂ ಎಣ್ಣೆ ಸ್ನಾನ ಮಾಡಿ ಹೊಸಬಟ್ಟೆಗಳನ್ನು ಹಾಕಿಕೊಂಡು ಹಿರಿಯರ ಕಾಲಿಗೆ ನಮಸ್ಕಾರ ಮಾಡಿ ಬೇವು ಬೆಲ್ಲ ತಿಂದು, ಹೊನ್ನೇರು ಬಂಡಿಯನ್ನು ಕಟ್ಟಿ (ಯುಗಾದಿಯ ಸಂದರ್ಭದಲ್ಲಿ ಬಣ್ಣಗಳಿಂದ ಅಲಂಕೃತವಾದ ಎತ್ತಿನ ಗಾಡಿಯನ್ನು ಸಿಂಗರಿಸಿ ಅದರಲ್ಲಿ ಗೊಬ್ಬರವನ್ನು ತುಂಬಿ ಅದನ್ನು ಜಮೀನಿಗೆ ಕೊಂಡೊಯ್ದು ಅಲ್ಲಿ ಹಾಕಿ ನಂತರ ವ್ಯವಸಾಯವನ್ನು ಆರಂಭಿಸುವ ಪದ್ಧತಿ) ಓಡಿಸುವ ಪದ್ಧತಿ ಈಗಲೂ ನಡೆದುಕೊಂಡು ಬರುತ್ತಿದೆ. ಈ ಹಬ್ಬಗಳ ಜೊತೆಗೆ ಸಂಕ್ರಾಂತಿ, ಶಿವರಾತ್ರಿ, ಊರಿನ ಗ್ರಾಮದೇವತೆಯ ಹಬ್ಬಗಳನ್ನು ಹಾಗೂ ಶ್ರೀ ಶಿವರಾತ್ರೀಶ್ವರರ ಜಾತ್ರೆಯನ್ನು ಸಹ ಬಹಳ ಹಿಂದಿನ ಕಾಲದಿಂದಲೂ ನಡೆಸಿಕೊಂಡು ಬರಲಾಗುತ್ತಿದೆ. ಸುತ್ತೂರಿನಲ್ಲಿ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಮಹದೇಶ್ವರ ಉತ್ಸವ ಮತ್ತು ಕೊಂಡೋತ್ಸವ, ವೀರಭದ್ರಸ್ವಾಮಿ ಕೊಂಡೋತ್ಸವ, ಗ್ರಾಮದೇವತೆ ಉತ್ಸವಗಳು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತವೆ. ಅಲ್ಲದೆ ದನಗಳ ಪರಿಷೆಯು ಸಹ ಇಲ್ಲಿ ನಡೆಯುತ್ತದೆ. ಶೈವ ಸಂಪ್ರದಾಯದ ಜನಪದ ಗಂಡುಕಲೆಯಾದ ನಂದೀಧ್ವಜ ಕುಣಿತ, ವೀರಭದ್ರ ಕುಣಿತಗಳು ಹೆಚ್ಚಾಗಿ ಕಂಡುಬರುತ್ತದೆ. ಅಲ್ಲದೆ ದೊಣ್ಣೆವರಸೆ, ತಮಟೆ, ಕೊಂಬು ಕಹಳೆ, ನಾದಸ್ವರ ಮುಂತಾದ ಕಲೆಗಳು ಇಲ್ಲಿ ಇಂದಿಗೂ ಪ್ರಸಿದ್ಧಿ ಪಡೆದಿವೆ.

ಸುತ್ತೂರಿನ ಧಾರ್ಮಿಕ ಸಂಸ್ಕೃತಿಯು ಅಲ್ಲಿನ ಜನರ ಕಲೆ, ವೇಷ-ಭೂಷಣ, ಅವರ ವೈಯ್ಯಾರ ಹಾಗೂ ಜನಪದರ ರಸಿಕತೆಯ ಬದುಕಿನ ಕನ್ನಡಿಯಂತಿರುತ್ತದೆ. ಸುತ್ತೂರಿನಲ್ಲಿ ದಲಿತವರ್ಗದವರ ಆರಾಧ್ಯದೈವವಾಗಿರುವ **"ಮಾರಮ್ಮ ದೇವಿ"**ಗೆ ಹಬ್ಬ ಏರ್ಪಡಿಸಿ ಅದಕ್ಕೆ ಇಷ್ಟವಾದ ಕೋಣನ ಬಲಿಯನ್ನು ಅರ್ಪಿಸಿ ಕುಣಿದು, ಕುಪ್ಪಳಿಸುವುದನ್ನು ನೋಡಬಹುದು. ಇದನ್ನು **'ಮಾರಿಕುಣಿತ'** ಎಂದು

ಕರೆಯುತ್ತಾರೆ. ಮಾರಿ ದೇವತೆಗೆ ಶಾಂತಿಗೈಯ್ಯುವುದೇ ಈ ಕುಣಿತದ ಉದ್ದೇಶ. ತಲೆಗೆ ತೆಂಗಿನಕಾಯಿ ಒಡೆದುಕೊಳ್ಳುವುದು. ಕತ್ತಿಯಿಂದ ಮೈಯ್ಯನ್ನು ಕುಯಿದುಕೊಳ್ಳುವುದು, ಚಾವಟಿಯಿಂದ ಹೊಡೆದುಕೊಳ್ಳುವುದು, ಬೆಂಕಿಯನ್ನು ತುಳಿದುಕೊಂಡು ನಡೆಯುವುದು ಮುಂತಾದ ಪದ್ಧತಿಗಳನ್ನು ಹಾಗು ಕೆಲ ಪವಾಡಗಳನ್ನು ಈ ಮಾರಮ್ಮನ ಭಕ್ತರು ನಡೆಸುತ್ತಾರೆ.

ಗೌರಿ-ಗಣೇಶ ಹಬ್ಬವನ್ನು ಈ ಗ್ರಾಮದ ಜನತೆ ಅತ್ಯಂತ ವೈಭವ-ವಿಜೃಂಭಣೆಯಿಂದ ನಡೆಸುತ್ತದೆ. ಗೌರಿಯನ್ನು ಊರಿನ ಜನತೆಯಲ್ಲಾ ಒಟ್ಟಾಗಿ ಪೂಜಿಸುವುದು ಈ ಊರಿನ ವೈಶಿಷ್ಟವಾಗಿದೆ. ನಂದಿಕಂಬ ಕುಣಿತ, ಪಟದ ಕುಣಿತ, ಹುಲಿ ವಾಹನ, ವೀರಭದ್ರನ ಕುಣಿತ, ವೀರಮಕ್ಕಳ ಕುಣಿತ, ಕೋಲಾಟಗಳು, ಕೊಂಬು ಕಹಳೆ, ತಮಟೆ, ನಗಾರಿ, ನಾದಸ್ವರ ಮುಂತಾದ ಜನಪದ ವಾದ್ಯಗಳು ನಾದ ಹೊಮ್ಮಿಸುತ್ತವೆ. ದಾಸಯ್ಯ, ಜೋಗಯ್ಯ, ಗೊರವರು ತಂಬೂರಿಯವರು, ನೀಲಗಾರರು, ಬುಡಬುಡಿಕೆಯವರು, ಭಜನೆಯವರು, ಮರಗಾಲು ವೇಷದವರು, ಕಂಸಾಳೆಯವರು, ಕರಗದವರು ಮುಂತಾದ ಜನಪದ ಕಲೆಗಾರರು ಹರ್ಷದ ಹೊನಲನ್ನು ಭಕ್ತಿಪೂರ್ವಕವಾಗಿ ಸುಂದರ ಪ್ರಕೃತಿಯ ಮಡಿಲಲ್ಲಿ ತಮ್ಮನ್ನು ತಾವೇ ಕಲಾಸೇವೆಯಲ್ಲಿ ಸಮರ್ಪಿಸಿಕೊಳ್ಳುತ್ತಾರೆ. ಒಟ್ಟಾರೆ ಹೇಳುವುದಾದರೆ ದೈವಸ್ವರೂಪದಲ್ಲಿ ಪ್ರಕೃತಿಯನ್ನು ಆರಾಧಿಸಿ ನಡೆಯುವುದನ್ನು ಇಲ್ಲಿ ನೋಡಬಹುದು. ಇವೆಲ್ಲವೂ ಸುತ್ತೂರಿನ ಸಂಸ್ಕೃತಿಯ ಪ್ರತಿಬಿಂಬಗಳಾಗಿವೆ.

ಅಡಿಟಿಪ್ಪಣಿಗಳು

೧. ಎ.ಕ. ಸಂ. III ನಂ.ಗೂ.೨೧೩ ಪುಟ ೩೧೦

೨. ಎ.ಕ. ಸಂ. III ನಂ.ಗೂ.೨೧೫ ಪುಟಗಳು ೩೧೧-೩೧೨

೩. ಎ.ಕ. ಸಂ. III ನಂ.ಗೂ.೨೨೪-೨೩೧ ಪುಟಗಳು ೩೧೬-೩೨೧

೪. ಎ.ಕ. ಸಂ. III ನಂ.ಗೂ.೨೩೬ ಪುಟ ೩೨೫

೫. ಎ.ಕ. ಸಂ. III ನಂ.ಗೂ.೩೯೫-೩೯೬ ಪುಟಗಳು ೪೨೮-೪೩೦

೬. ಎ.ಕ. ಸಂ. III ನಂ.ಗೂ.೪೦೧ ಪುಟಗಳು ೫೪೬-೫೪೭

೭. ಮಲೆಯೂರು ಗುರುಸ್ವಾಮಿ, ಶ್ರೀ ಸುತ್ತೂರು ಮಠದ ಗುರುಪರಂಪರೆ, ಸಿದ್ಧಗಂಗಾ ಪ್ರಕಾಶನ, ಪುಟಗಳು ೧೮-೧೯, ೨೦೦೮

೮. ನಾನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗ್ರಾಮದ ಜನರಿಂದ ಕೇಳಿ ದಾಖಲು ಮಾಡಿಕೊಂಡದ್ದು

ಅಧ್ಯಾಯ ೫

ಕಲೆ ಮತ್ತು ವಾಸ್ತುಶಿಲ್ಪ

ಭಾರತದಲ್ಲಿ ಶಿಲ್ಪಕಲಾ ಸಂಪತ್ತು ಅಸಾಮಾನ್ಯವಾದದ್ದು ಹಾಗೂ ಅಸದೃಶವಾದದ್ದು. ಕಲೆ ಮತ್ತು ವಾಸ್ತುಶಿಲ್ಪ ತಯಾರಿಕೆಯಲ್ಲಿ ಅಥಾವಾ ಕಂಡರಣೆ(ಕೆತ್ತುವಿಕೆ)ಯಲ್ಲಿ ಭಾರತೀಯರು ತೋರಿಸುವಷ್ಟು ಉತ್ಸಾಹ, ಕಾಳಜಿಯ ಪ್ರಯತ್ನ, ವಿಚಾರ ನಿಜಕ್ಕೂ ಆಶ್ಚರ್ಯಕರವಾದ ಸಂಗತಿಯಾಗಿದೆ. ಈ ಹಿನ್ನೆಲೆಯಿಂದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಬಹಳ ಮಹತ್ವದ ಸ್ಥಾನವಿದೆ. ಇಂತಹ ಉನ್ನತವಾದ ಮಹಿಮೆಯುಳ್ಳ ಸ್ಥಾನವನ್ನು ಪಡೆಯುವುದಕ್ಕೆ ಸುತ್ತೂರು ಪ್ರಾಂತ್ಯ ಸಹ ಒಂದು ಎಂದು ಹೇಳಬಹುದು.

ಈ ಸುತ್ತೂರಿನಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಆಳ್ವಿಕೆ ನಡೆಸಿದ ವಿವಿಧ ರಾಜ ಸಂತತಿಗಳ ಕಲಾಭಿಜ್ಞತೆ, ಕಲಾಪೋಷಣೆಗಳೇ ಈ ಇರುವ ಕಲೆಯನ್ನು ವಾಸ್ತುಶಿಲ್ಪ ಪರಂಪರೆಯನ್ನು ನೋಡುವುದಕ್ಕೆ ಕಾರಣವಾಗಿದೆ. ಇಂತಹ ಕಲಾಪೋಷಕ ರಾಜವಂಶಗಳಲ್ಲಿ ಆಗ್ನೇಯ ಕರ್ನಾಟಕವನ್ನು ಸಹ ಆಳಿದ ತಲಕಾಡಿನ ಗಂಗರು, ತಂಜಾವೂರಿನ ಚೋಳರು, ದೋರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ಹಾಗೂ ಸ್ಥಳೀಯ ಅರಸರು ಸುತ್ತೂರಿನಲ್ಲೂ ಸಹ ಆಳ್ವಿಕೆ ನಡೆಸಿ ಕಲಾಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅಲ್ಲದೆ ಅಲ್ಲಲ್ಲಿ ಬಿಡಿಶಿಲ್ಪಗಳೂ ಸಹ ಕಂಡುಬರುತ್ತವೆ. ಈ ದೇವಾಲಯಗಳು ಮತ್ತು ಬಿಡಿಶಿಲ್ಪಗಳು ವಾಸ್ತು ಸಂಪ್ರದಾಯದ ದೃಷ್ಟಿಯಿಂದ ತಮ್ಮದೇ ಆದ ವೈಶಿಷ್ಟತೆಯನ್ನು ಪಡೆದಿದೆ. ಇವುಗಳ ವಸ್ತುಸ್ಥಿತಿ, ವಾಸ್ತುಅಧ್ಯಯನ, ಅಲಂಕರಣೆಗಳು, ಸೌಂದರ್ಯ ಹಾಗೂ ಚಾರಿತ್ರಿಕ ಮಹತ್ವ ಮುಂತಾದುವುಗಳನ್ನು ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ತಿಳಿಸಲಾಗಿದೆ.

<u>ಸ್ಮಾರಕಗಳು</u>

ಸುತ್ತೂರಿನಲ್ಲಿ ಧಾರ್ಮಿಕ ಮತ್ತು ಲೌಕಿಕ ವಿಚಾರಕ್ಕೆ ಸಂಬಂಧಿಸಿದಂತೆ ದೇವಾಲಯಗಳಿವೆ. ಇವುಗಳಿಂದ ವಾಸ್ತುಶಿಲ್ಪ ರಚನಾ ನೋಟವನ್ನು ಕಾಣಬಹುದಾಗಿದೆ. ಪ್ರಾಯಶಃ ಸುತ್ತೂರಿನಲ್ಲಿ ಕೆಲವು ದೇವಾಲಯಗಳು ಧಾರ್ಮಿಕವಾದರೂ ಇದರಲ್ಲಿ ಅನೇಕ ಶಿಲ್ಪಗಳು 'ದುಷ್ಟನಿಗ್ರಹ ಶಿಷ್ಟಪರಿಪಾಲನೆ' ಅಜ್ಞಾನಂಧಕಾರಗಳನ್ನು ತೊಡೆದು ಹಾಕುವಿಕೆ, ಜ್ಞಾನೋದಯ, ಇಂದ್ರಿಯ ನಿಗ್ರಹ, ಏಕಾಗ್ರತೆ, ವಿದ್ಯೆ ಸಂಪತ್ತಿನ ಮಹತ್ವ ಮುಂತಾದುವುಗಳನ್ನು ವಾಸ್ತುಶಿಲ್ಪ ರಚನಾ ಶೈಲಿಯಲ್ಲಿ ಕಾಣಬಹುದಾಗಿದೆ. ಸುತ್ತೂರು ಶ್ರೀಕ್ಷೇತ್ರದ ಪರಂಪರೆಯನ್ನು ಗಮನಿಸಿದರೆ ಇದೊಂದು ವೀರಶೈವ ಧರ್ಮದ ಪ್ರಮುಖ ನೆಲೆಯೆಂದೂ, ಆದರೆ ಸುತ್ತೂರಿನ ಪರಿಸರದಲ್ಲಿರುವ ದೇವಾಲಯಗಳು ಬೇರೆ ಬೇರೆ ಪಂಥಗಳಿಗೆ ಸೇರಿದ್ದಾಗಿದ್ದರೂ ಕೂಡ ಇಲ್ಲಿ ಧಾರ್ಮಿಕ ಸಹಿಷ್ಣುತೆ ಮತ್ತು ಹರಿಹರ ಸಮನ್ವಯದ ನೆಲೆಯಾಗಿದ್ದಿತು. ಇಲ್ಲಿರುವ ದೇವಾಲಯಗಳೆಂದರೆ,

೧. ಸೋಮೇಶ್ವರ ದೇವಾಲಯ

೨. ನಾರಾಯಣಸ್ವಾಮಿ ದೇವಾಲಯ

೩. ವೀರಭದ್ರೇಶ್ವರ ದೇವಾಲಯ

೪. ಸುತ್ತೂರಮ್ಮನ ದೇವಾಲಯ

೫. ದೊಡ್ಡಮ್ಮತಾಯಿ ದೇವಾಲಯ

೬. ಶ್ರೀ ಶಿವರಾತ್ರೀಶ್ವರ ಗದ್ದಿಗೆ (ದೇವಾಲಯ)

೭. ಮಾರಮ್ಮನ ದೇವಾಲಯ

೮. ಜಿನ ದೇವಾಲಯದ ಅವಶೇಷಗಳು

೯. ಮಹದೇಶ್ವರ ಗದ್ದಿಗೆ, ಇತ್ಯಾದಿ.

ಸೋಮೇಶ್ವರ ದೇವಾಲಯ

ಇದೊಂದು ಶೈವ ದೇವಾಲಯ. ಮೊದಲು ಈ ಧರ್ಮದ ಬಗ್ಗೆ ಒಂದೆರಡು ವಿಷಯಗಳನ್ನು ತಿಳಿಸಿ ನಂತರ ಸೋಮೇಶ್ವರ ದೇವಾಲಯದ ವಾಸ್ತುಶಿಲ್ಪದ ಬಗ್ಗೆ ವಿವರಣೆಯನ್ನು ನೀಡಲಾಗಿದೆ.

ಶೈವಧರ್ಮ ಪ್ರಾಚೀನ ಕಾಲದಿಂದಲೂ ಶಿವನ ಆರಾಧನೆಯನ್ನು ಮಾಡುತ್ತಾ ಭಾರತದಲ್ಲಿ ಜನಪ್ರಿಯವಾಗಿದೆ. ಈ ಧರ್ಮವನ್ನು ವೈದಿಕಪೂರ್ವಕಾಲದ್ದೆಂದೂ, ಆರ್ಯೇತರವೆಂದೂ ಕೆಲವು ವಿದ್ವಾಂಸರು ಪ್ರತಿಪಾದಿಸಿದ್ದಾರೆ. ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಶಿವನನ್ನು "ತ್ರಿಮೂರ್ತಿ"ಗಳಲ್ಲಿ ಪ್ರಮುಖ ದೇವರಂದು ಪರಿಗಣಿಸಲಾಗಿದೆ. ಸಿಂಧೂಬಯಲಿನ ನಾಗರೀಕತೆಯ ಕಾಲದಲ್ಲಿಯೇ ಅಂದರೆ ಆರ್ಯಪೂರ್ವ ಕಾಲದಲ್ಲಿಯೇ ಶಿವನ ಆರಾಧನೆ ಆರಂಭವಾಗಿರುವುದುಂಟು. ಶಿವನನ್ನು ರುದ್ರ, ಮಹಾದೇವ, ಮಹೇಶ್ವರ, ತ್ರಿನೇತ್ರ, ಅರ್ಕೇಶ್ವರ, ದೇಸೇಶ್ವರ, ಮಹಾಲಿಂಗೇಶ್ವರ, ಮಂಜುನಾಥ, ಶ್ರೀಕಂಠೇಶ್ವರ, ಸೋಮೇಶ್ವರ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಶಿವನನ್ನು ಇನ್ನಿತರ ಸ್ವರೂಪಗಳಾದ ಲಿಂಗೋದ್ಭವಮೂರ್ತಿ, ಚಂದ್ರಶೇಖರ, ಉಮಾಮಹೇಶ್ವರ, ಭೈರವ, ವೀರಭದ್ರ, ಜಾಲಂದರಹರ ಎಂಬ ಇನ್ನೂ ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಹೀಗೆ ನೋಡುವುದಾದರೆ ಸುತ್ತೂರಿನಲ್ಲಿಯೂ ಈ ಒಂದು ಬೆಳವಣಿಗೆಯನ್ನು ಶೈವಪರಂಪರೆಯಲ್ಲಿ ಕಾಣಬಹುದಾಗಿದೆ.

ಸುತ್ತೂರು ಒಂದು ಪ್ರಾಚೀನ ಗ್ರಾಮವಾಗಿದ್ದು ಈ ಊರಿನ ಮಧ್ಯಭಾಗದಲ್ಲಿ ಲಿಂಗಾಯಿತರ ಬೀದಿಯಲ್ಲಿ ಸೋಮೇಶ್ವರ ದೇವಾಲಯವಿದೆ. ದೇವಾಲಯದ ಉತ್ತರ ಮತ್ತು ಪಶ್ಚಿಮ ದಿಕ್ಕಿಗೆ ಅರ್ಧ ಕಿಲೋಮೀಟರ್ ದೂರದಲ್ಲಿ ಕಬಿನಿ (ಕಪಿಲಾ) ನದಿ ಹರಿಯುತ್ತದೆ. ಈಗ ಇರುವ ಸೋಮೇಶ್ವರ ದೇವಾಲಯವೇ ಹಿಂದೆ ಇದ್ದ ಮೂಲಸ್ಥಾನೇಶ್ವರ ದೇವಸ್ಥಾನವೆಂದು ಚೋಳರ ಶಾಸನಗಳಿಂದ[೧] ತಿಳಿದುಬರುತ್ತದೆ. ಈ ದೇವಾಲಯ ಹಲವಾರು ಬಾರಿ ಜೀರ್ಣೋದ್ಧಾರಗೊಂಡಿದೆ. ಕ್ರಿ.ಶ. ೧೫೦೮ರಲ್ಲಿ[೨] ೨೦.೦೨.೧೯೯೩ರಲ್ಲಿ ಮತ್ತು ೧೧.೦೨.೨೦೦೫ರಲ್ಲಿ ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯವು ಚೋಳರ ಮತ್ತು ಹೊಯ್ಸಳರ ಕಲೆಸಮ್ಮಿಲನ ಎಂದು ಹೇಳಬಹುದಾಗಿದೆ. ಮು.ರಾ.ಶ್ರೀ ನರಸಿಂಹಾಚಾರ್ಯರು ೧೯೧೮ನೇ ಇಸವಿಯಲ್ಲಿ ಪುರಾತತ್ವ ಸಂಶೋಧನೆಯಲ್ಲಿ ಈ ದೇವಾಲಯದ ಬಗ್ಗೆ ವರ್ಣನೆ ಮಾಡಿದ್ದಾರೆ. ಈ ದೇವಾಲಯ ಪೂರ್ವಾಭಿಮುಖವಾಗಿ ಇದ್ದು ಹಿಂದೆ ತ್ರಿಕೂಟ ದೇವಾಲಯವಾಗಿತ್ತು. ಪ್ರಸ್ತುತ ಏಕಕೂಟ ದೇವಾಲಯವಾಗಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ವರಾಂಡಗಳಿದ್ದು ದೇವಾಲಯದ ಮುಂದೆ ಒಂದು ನಂದಿಕಂಬ ಮತ್ತು ಒಂದು ಬಲಿಪೀಠವು ಕಂಡುಬರುತ್ತದೆ. ಈ ದೇವಾಲಯವನ್ನು ಗ್ರಾನೈಟ್ ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ಸೋಮೇಶ್ವರ ದೇವಾಲಯದ ಹಜಾರವನ್ನು ೧೨೬೪ರಲ್ಲಿ ಕಟ್ಟಿಸಿರುವುದಾಗಿ ಶಾಸನದಿಂದ ತಿಳಿದುಬರುತ್ತದೆ.

ಗರ್ಭಗೃಹ

ಗರ್ಭಗೃಹ ಚೌಕಾಕಾರವಾಗಿದ್ದು ೮X೮ ಅಡಿ ಉದ್ದ-ಅಗಲಗಳಿಂದ ಕೂಡಿದ್ದು ಗರ್ಭಗೃಹದ ಮಧ್ಯದಲ್ಲಿ ಕಲ್ಲುಪೀಠದ ಮೇಲೆ ೩ ಅಡಿ ಎತ್ತರವಿರುವ ಮಧ್ಯಮಗಾತ್ರದ ಸೋಮೇಶ್ವರ ಲಿಂಗವನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಗರ್ಭಗೃಹದ ಪ್ರವೇಶದ್ವಾರದ ನಿಲುವುಗಂಬ ಹಲವು ಪಟ್ಟಿಕೆಗಳಿಂದ ಕೂಡಿದ್ದು ಶಿಲ್ಪಗಳಿಂದ ಮಾತ್ರ ದೋರವಾಗಿದೆ. ಒಟ್ಟಿನಲ್ಲಿ ಗರ್ಭಗೃಹದ ಮಧ್ಯದ ಮೇಲ್ಚಾವಣಿಯಲ್ಲಿ ಅರಳಿದ ಕಮಲದ ಪುಷ್ಪದ ಕೆತ್ತನೆಯನ್ನು ಕಡೆಯಲಾಗಿದೆ.

ಸುಖನಾಸಿ (ಶುಕನಾಸಿ)

ಸುಖನಾಸಿಯು ಸಹ ಚೌಕಾಕಾರವಾಗಿದ್ದು ಗರ್ಭಗೃಹಕ್ಕಿಂತ ಸ್ವಲ್ಪ ಅಗಲವಾಗಿದೆ. ಇದರಲ್ಲಿ ಯಾವುದೇ ಶಿಲ್ಪಗಳು ಕಂಡುಬರುವುದಿಲ್ಲ. ಆದರೆ ಒಂದು ಬಸವನ ವಿಗ್ರಹ ಇಲ್ಲಿದೆ. ನಾಲ್ಕೂ ಮೂಲೆಗಳಲ್ಲಿ ಗೋಡೆಗೆ ಸೇರಿದಂತೆ ನಾಲ್ಕು ಕಂಬಗಳು ಕಂಡುಬರುತ್ತವೆ.

ನವರಂಗ

ನವರಂಗವು ಸುಖನಾಸಿಗೆ ಹೊಂದಿಕೊಂಡತಿದ್ದು ಸುಮಾರು ೨೫X೨೫ ಅಡಿ ಚೌಕದ ಸುತ್ತಳತೆಗಳಷ್ಟು ವಿಶಾಲವಾಗಿದೆ. ನವರಂಗದಲ್ಲಿ ಚೋಳರ ಮತ್ತು ಹೊಯ್ಸಳರ ಶೈಲಿಯ ಮಾದರಿಗಳುಳ್ಳ ನಾಲ್ಕು ಕಂಬಗಳಿವೆ. ಇಲ್ಲಿರುವ ನಾಲ್ಕು ಕಂಬಗಳು ಹೆಚ್ಚಾಗಿ ಹೊಯ್ಸಳರ ಕಾಲದ

ಕಂಬದ ಮಾದರಿಯನ್ನು ಹೊಂದಿದೆ ಎಂದು ತಿಳಿಯಬಹುದಾಗಿದೆ. ಆದಕಾರಣ ಈ ದೇವಾಲಯವು ಚೋಳರ ಮತ್ತು ಹೊಯ್ಸಳರ ಕಾಲದ ಸಮ್ಮಿಲನ ಎಂದು ತಿಳಿಯಬಹುದಾಗಿದೆ. ನವರಂಗದ ಮೇಲ್ಛಾವಣಿಯ ಮಧ್ಯಭಾಗದಲ್ಲಿ ಅರಳಿದ ಸುಂದರವಾದ ಕಮಲವನ್ನು ಕೆತ್ತಲಾಗಿದೆ. ನವರಂಗದಲ್ಲಿ ದಕ್ಷಿಣ ದಿಕ್ಕಿಗೆ ಶಂಕರನಾರಾಯಣ ವಿಗ್ರಹವಿದೆ. ಇದು ೫ ಅಡಿ ಎತ್ತರವಿದೆ. ಅದೇ ಕಲ್ಲಿನಲ್ಲಿ ಕೆತ್ತಲ್ಪಟ್ಟಿರುವ ಒಂದು ತೋರಣವನ್ನು ಒಳಗೊಂಡಿದೆ. ಇದರ ಬಲಭಾಗದಲ್ಲಿ ಶಿವನಾಕೃತಿಯಾಗಿ ಜಟಾಮುಕುಟುವನ್ನು, ತ್ರಿಶೂಲವನ್ನು, ಅಕ್ಷ ಮಾಲೆಯನ್ನು ಮತ್ತು ಎಡಭಾಗದಲ್ಲಿ ವಿಷ್ಣು ಆಕೃತಿಯಾಗಿ ಕಿರೀಟ, ಮುಕುಟವನ್ನು, ಶಂಖ ಮತ್ತು ಚಕ್ರವನ್ನು ಹೊಂದಿದೆ. ವೃಷಭ, ಪಕ್ಷಿ ಗರುಡ ಎರಡೂ ಇರುವ ಗದ್ದಿಗೆಯ ಒಂದು ಕಲ್ಲು ಇದರ ಕೆಳಭಾಗದಲ್ಲಿದೆ. ಈ ದೇವಾಲಯದಲ್ಲಿ ಸಪ್ತ ಮಾತೃಕೆಯರ ಶಿಲ್ಪವಿದೆ. ಒಂದೇ ಚಪ್ಪಡಿಯಲ್ಲಿ ಏಳು ಶಿಲ್ಪಗಳನ್ನು ಕಾಣಬಹುದಾಗಿದೆ. ನವರಂಗದ ಮಧ್ಯಭಾಗದಲ್ಲಿ, ಮೇಲ್ಭಾಗದಲ್ಲಿ ಭುವನೇಶ್ವರಿ ದೇವಿಯ ಬಿಡಿಶಿಲ್ಪವಿದೆ. ನವರಂಗದ ಪ್ರವೇಶದ್ವಾರದ ನಿಲುವುಕಂಬದ ಪಕ್ಕದಲ್ಲಿ ಎರಡೂ ಕಡೆಗೂ ಇಕ್ಕೆಲಗಳಲ್ಲಿ ಶೈವದ್ವಾರಪಾಲಕರ ಶಿಲ್ಪಗಳಿವೆ, ಅಲ್ಲದೆ ಇಲ್ಲಿ ಗಣಪತಿ, ಪಾರ್ವತಿ ಶಿಲ್ಪ, ವೀರಭದ್ರೇಶ್ವರನ ಶಿಲ್ಪಗಳು ಇವೆ. ಈ ಎರಡೂ ಶಿಲ್ಪಗಳು ಒಂದೇ ರೀತಿಯ ಎತ್ತರವನ್ನು ಹೊಂದಿದ್ದು ವೀರಭದ್ರೇಶ್ವರನ ಕೈಯಲ್ಲಿ ಕತ್ತಿ, ಬಿಲ್ಲು, ಬಾಣ, ಖಡ್ಗವಿರುವುದು ಕಂಡುಬರುತ್ತದೆ.

ವರಾಂಡ

ವರಾಂಡವು ನವರಂಗದ ಮುಂಭಾಗದಲ್ಲಿದ್ದು ಕಂಬಗಳ ಮೇಲೆ ಮೇಲ್ಛಾವಣಿಯನ್ನು ಕೂರಿಸಲಾಗಿದೆ. ಮುಖ್ಯಪ್ರವೇಶದ್ವಾರದ ಬಾಗಿಲಿನ ಲಲಾಟಬಿಂಬದಲ್ಲಿ ಮೂಲನರಸಿಂಹ ರೂಪವಿರುವ ಶಿಲ್ಪವಿದೆ. ದಶಾವತಾರ ಮತ್ತು ಶಿಲಾಬಾಲಕಿಯರ ಉಬ್ಬುಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ. ಜೊತೆಗೆ ಶ್ರೀದೇವಿ, ಭೂದೇವಿ, ಕಾಳಿಯ ವಿಗ್ರಹಗಳೂ ಸಹ ಕಂಡುಬರುತ್ತವೆ. ಈ ದೇವಾಲಯದ ಮುಂದೆ ಸುಮಾರು ೫ ಅಡಿ ಚೌಕಾಕಾರದ ಪೀಠದ ಮೇಲ್ಭಾಗದ ಮಧ್ಯದಲ್ಲಿ ಸುಮಾರು ೨೦ ಅಡಿ ಎತ್ತರದ ಮರದ ಒಂದು ನಂದಿಕಂಬವಿದೆ. ಈ ನಂದಿಕಂಬದ ಮುಂದೆ ಒಂದು ಮಂಟಪವಿದ್ದು ಈ ಮಂಟಪ ೧೦X೧೦ ಅಡಿ ಚದುರದ ಅಳತೆಯಲ್ಲಿದ್ದು ನಾಲ್ಕೂ ಕಂಬಗಳು ಒಂದೇ ರೀತಿಯ ಮಾದರಿಯ ವಾಸ್ತುಶೈಲಿಯನ್ನು ಹೊಂದಿದೆ. ಈ ಮಂಟಪದ ಮುಂಭಾಗ ನಂದಿ ವಿಗ್ರಹವೂ, ಮೇಲ್ಭಾಗದಲ್ಲಿ ಭುವನೇಶ್ವರಿಯೂ ಇದೆ.

ಅಧಿಷ್ಠಾನ

ಸೋಮೇಶ್ವರ ದೇವಾಲಯದ ಅಧಿಷ್ಠಾನಕ್ಕೆ ಚೌಕಾಕಾರ ಮತ್ತು ಆಯತಾಕಾರ ನಕಾಶೆಯನ್ನು ಹೊಂದಿದೆ. ಅಧಿಷ್ಠಾನವು ನಾಲ್ಕು ಪಟ್ಟಿಕೆಗಳಿಂದ ಕೂಡಿದ್ದು, ಇನ್ಸರಿತ ಮತ್ತು ಮುನ್ಸರಿತ ಹೊಂದಿದ್ದು ಸಾಳವಾದ ಗ್ರಾನೈಟ್ ಕಲ್ಲಿನಿಂದ ಜೋಡಿಸಲ್ಪಟ್ಟಿವೆ.

ಭಿತ್ತಿ

ಭಿತ್ತಿಯ ಹೊರಭಾಗದಲ್ಲಿ ಯಾವುದೇ ರೀತಿಯ ಶಿಲ್ಪವಾಗಲೀ ಅಥವಾ ಅಡಿಗಂಭವಾಗಲಿ, ಆಳವಿಲ್ಲದ ಮಂಟಪವಾಗಲೀ ಕಂಡುಬರುವುದಿಲ್ಲ. ಇದು ಸರಳವಾದ ದೇವಾಲಯವಾಗಿದೆ. ಕಾರಣವೇನೆಂದರೆ ಈ ದೇವಾಲಯವು ದುಸ್ಥಿತಿ ಹೊಂದಿದ ಕಾರಣ ಈಗ ಸುತ್ತೂರಿನ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಈ ದೇವಾಲಯವನ್ನು ಕಲ್ಲುಗಳಿಂದ ಕಟ್ಟಿಸಿರುತ್ತಾರೆ.

ಕಪೋತ

ಕಪೋತವು ಸರಳವಾಗಿದ್ದು ಮಳೆಯ ನೀರು ಕೆಳಗೆ ಬೀಳುವುದಕ್ಕೆ ಇಂಗ್ಲಿಷ್‌ನಲ್ಲಿ ಎಳೆದ ಎಸ್ ಅರ್ಧ (S) ಅಕ್ಷರದ ರೀತಿಯಲ್ಲಿ ಇಳಿಜಾರನ್ನು ಹೊಂದಿದೆ.

ಶಿಖರ

ಗರ್ಭಗೃಹದ ಮೇಲ್ಭಾಗದಲ್ಲಿ ಶಿಖರವು ಕಂಡುಬರುತ್ತದೆ. ಈ ಶಿಖರವು ಸುಮಾರು ೧೦ ಅಡಿ ಎತ್ತರ ಹೊಂದಿದ್ದು ಚೌಕಾಕಾರವಾಗಿ ನಾಲ್ಕು ಅಂತಸ್ತುಗಳನ್ನು ಹೊಂದಿದೆ. ಈ ದೇವಾಲಯದ ಸುತ್ತಲೂ ಪ್ರಾಕಾರ ಗೋಡೆಯನ್ನು ಕಟ್ಟಲಾಗಿದೆ.

ನಾರಾಯಣಸ್ವಾಮಿ ದೇವಾಲಯ

ಈ ದೇವಾಲಯವು ಸುತ್ತೂರಿನಲ್ಲಿರುವ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದೆ. ಚೋಳ-ದ್ರಾವಿಡ ಶೈಲಿಯನ್ನು ಹೊಂದಿರುವ ದೇವಾಲಯವಾಗಿದೆ. ಈ ದೇವಾಲಯವನ್ನು ಹೊಯ್ಸಳ ದೊರೆ ೧ನೇ ನರಸಿಂಹನ ದಂಡನಾಯಕನಾದ ಲಕ್ಷ್ಮಯ್ಯನು ಕ್ರಿ.ಶ. ೧೧೯೯ರಲ್ಲಿ[೩] ಕಟ್ಟಿಸಿದನೆಂದು ತಿಳಿದುಬರುತ್ತದೆ. ಅಂದರೆ ಚೋಳರ ಕಾಲದ ನಂತರ ಲಕ್ಷ್ಮಯ್ಯ ಎಂಬುವವನು ಈ ಭಾಗದ ಆಡಳಿತ ನಿರ್ವಹಿಸುತ್ತಿದ್ದನೆಂದು ತಿಳಿದುಬರುತ್ತದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದ್ರಾವಿಡ ಶೈಲಿಯ ಏಕಕೂಟ ದೇವಾಲಯವಾಗಿದೆ. ಈ ದೇವಾಲಯವನ್ನು ಗ್ರಾನೈಟ್‌ಕಲ್ಲುಗಳಿಂದ ಕಟ್ಟಲಾಗಿದೆ. ಈ ದೇವಾಲಯವು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಮೂಲಗರ್ಭಗೃಹವು ಚೌಕಾಕಾರವಾಗಿದ್ದು ಮಧ್ಯದಲ್ಲಿ ಕಲ್ಲುಪೀಠದ ಮೇಲೆ ನಾರಾಯಣಸ್ವಾಮಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಈ ಮೂರ್ತಿಯು ೪ ಅಡಿ ಎತ್ತರವಾಗಿದ್ದು, ಪಂಚಪಾತ್ರೆಯ ಅಕಾರವುಳ್ಳ ತುದಿಯಲ್ಲಿ ಚಪ್ಪಟೆಯಾಗಿ ಒಮ್ಮುಖವಾಗಿ ಮಾಡಲ್ಪಟ್ಟ ಪಕ್ಷಿಗಳುಳ್ಳ ಕಿರೀಟವನ್ನು ಧರಿಸಿದೆ. ಅಭಯಹಸ್ತ, ಚರಕ, ಶಂಖ ಮತ್ತು ಧಾನಗಳುಳ್ಳ ಕೈಗಳನ್ನು ಹೊಂದಿದೆ. ದಂಡವು ಬಲಗೈಯ ಹಿಂಭಾಗದಲ್ಲಿದೆ. ಒಂದು ಕಂಠಾಭರಣವನ್ನು, ಯಜ್ಞೋಪವೀತವನ್ನು, ನಡುಪಟ್ಟಿಯನ್ನು, ಕಂಕಣಗಳನ್ನು ಧರಿಸಿದೆ. ಒಟ್ಟಾರೆ ಮೂರ್ತಿಯು ನಿರಾಡಂಬರವಾಗಿದ್ದು ತಲಕಾಡಿನ ಶ್ರೀನಿವಾಸ ವಿಗ್ರಹದ ನೆನಪನ್ನು ತರುತ್ತದೆ.

ಈ ವಿಗ್ರಹಕ್ಕೂ ಮುಂಚೆ ಇಲ್ಲಿ ವರದರಾಜ ದೇವರ ಅಥವಾ ನಾಗಕೇಶವಮೂರ್ತಿ ಇದಾಗಿತ್ತೆಂದು ಶಾಸನಗಳಿಂದ[೪] ತಿಳಿದುಬರುತ್ತದೆ. ಗರ್ಭಗೃಹದ ನಾಲ್ಕು ಮೂಲೆಯಲ್ಲಿ ಗೋಡೆಗೆ ಸೇರಿದಂತೆ ನಾಲ್ಕು ಕಂಬಗಳಿವೆ. ಮೇಲ್ಭಾಗದಲ್ಲಿ ಭುವನೇಶ್ವರಿ ಇದೆ. ಈ ಭುವನೇಶ್ವರಿಯನ್ನು ನಕ್ಷತ್ರಾಕಾರವಾಗಿ ಮತ್ತು ಚೌಕಾಕಾರವಾಗಿ ಜೋಡಿಸಿದ್ದು ಇದರ ಮಧ್ಯಭಾಗದಲ್ಲಿ ಅರಳಿದ ಕಮಲದ ಕೆತ್ತನೆ ಇದೆ. ಸುಖನಾಸಿ ೧.೭೫X೧.೭೫ ಮೀಟರ್ ಚದುರ ಸುತ್ತಳತೆಯನ್ನು ಹೊಂದಿದ್ದು ನಾಲ್ಕು ಮೂಲೆಗೂ ಸೇರಿದಂತೆ ನಾಲ್ಕು ಕಂಬಗಳಿವೆ. ಆದರೆ ಯಾವುದೇ ಶಿಲ್ಪವಾಗಲೀ ಇಲ್ಲ. ಗರ್ಭಗೃಹದ ಮಾದರಿಯಲ್ಲಿಯೇ ಇಲ್ಲಿಯೂ ಸಹ ಭುವನೇಶ್ವರಿ ಇದೆ. ಆದರೆ ಇಲ್ಲಿಯ ವಿಶೇಷತೆ ಏನೆಂದರೆ ನಕ್ಷತ್ರಾಕಾರದ ಕಲ್ಲು ಚಪ್ಪಡಿಯ ಮೇಲೆ ಸುತ್ತಲೂ ನಾಲ್ಕು ದೊಡ್ಡ ಕಮಲದ ಕೆತ್ತನೆ ಹಾಗೂ ಎಂಟು ಚಿಕ್ಕ ಕಮಲದ ಕೆತ್ತನೆ ಇದೆ. ಇದು ಚೌಕಾಕಾರದ ಚಪ್ಪಡಿ ಮೇಲೆ ಕಂಡುಬರುತ್ತದೆ. ಮಧ್ಯದಲ್ಲಿ ನಾಭೀಶ್ಚಂದ್ರವಿದ್ದು ಕೆಳಭಾಗದಲ್ಲಿ ಬಾಳೇಹೂವಿನ ಮೊತೆ (ಮಾಲೆಯು) ಸಹ ಇದೆ. ಇದು ಇಲ್ಲಿಯ ಒಂದು ವಿಶೇಷತೆ.

ನವರಂಗವು ೬X೬ ಮೀಟರ್ ವಿಸ್ತೀರ್ಣ ಹೊಂದಿದ್ದು ಇಲ್ಲಿ ಸುತ್ತಲೂ ೧೬ ಕಂಬಗಳಿವೆ. ಮಧ್ಯದಲ್ಲಿರುವ ನಾಲ್ಕು ಕಂಬಗಳು ಸುಂದರವಾಗಿದ್ದು ಮತ್ತು ಆಕಾರದಲ್ಲಿ ದಪ್ಪವಾಗಿರುವುದನ್ನು ಇಲ್ಲಿ ಕಾಣುತ್ತೇವೆ. ಇಲ್ಲಿಯೂ ಕೂಡ ಮೇಲ್ಭಾಗದ ಗರ್ಭಗೃಹ, ಸುಕನಾಸಿಯಂತೆ ಭುವನೇಶ್ವರಿ ಇದೆ. ಈ ದೇವಾಲಯವನ್ನು ಸಹ ಈಗಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಊರಿನ ಪಶ್ಚಿಮ ಭಾಗಕ್ಕೆ ಸ್ಥಳಾಂತರಗೊಳಿಸಿ ಪುನರ್‌ನಿರ್ಮಾಣ ಮಾಡಿಸಿದ್ದಾರೆ.

ವೀರಭದ್ರೇಶ್ವರ ದೇವಾಲಯ

ಈ ದೇವಾಲಯವು ಊರಿನ ಹೊರಭಾಗದಲ್ಲಿರುವ ವೀರೇಶ್ವರ ಗುಡ್ಡದ ಮೇಲಿದೆ. ಈ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗುಡಿ ಮತ್ತು ನವರಂಗವನ್ನು ಹೊಂದಿದೆ. ಪ್ರಾಯಶಃ ಈ ದೇವಸ್ಥಾನ ಪ್ರಾಚೀನತೆಯನ್ನು ಹೊಂದಿದ್ದರೂ ಕೂಡ ಈಗ ಮತ್ತೆ ಜೀರ್ಣೋದ್ಧಾರಗೊಂಡಿದೆ. ಮೂಲಗರ್ಭಗುಡಿಯಲ್ಲಿ ಕಲ್ಲುಪೀಠದ ಮೇಲೆ ವೀರಭದ್ರನ ಶಿಲ್ಪವಿದೆ. ಈ ಶಿಲ್ಪವು ಚತುರ್ಭುಜವನ್ನು ಹೊಂದಿದ್ದು ಖಡ್ಗ, ಢಮರು, ಭಿಕ್ಷಾ ಪಾತ್ರೆ ಮತ್ತು ನಂದಿಯನ್ನು ಹಿಡಿದಿರುವುದು ಕಂಡುಬರುತ್ತದೆ. ತಲೆಯ ಮೇಲೆ ಕಿರೀಟಧಾರನಾಗಿರುತ್ತಾನೆ. ಕಂಠದಲ್ಲಿ ಮಣಿಸರವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಮುಂಭಾಗದಲ್ಲಿ ನಾಲ್ಕು ಕಂಬಗಳಿದ್ದು ಇವು ಚೌಕಾಕಾರ ಮತ್ತು ಹದಿನಾರು ಮೂಲೆಯನ್ನು ಹೊಂದಿರುವ ರೀತಿಯಲ್ಲಿ ಕಡೆಯಲಾಗಿದೆ. ದೇವಾಲಯದ ಮೇಲ್ಭಾಗದಲ್ಲಿ ಕೈಪಿಡಿ ಗೋಡೆಗಳಿದ್ದು ಮಧ್ಯಮಧ್ಯದಲ್ಲಿ ಕೋಷ್ಠಗಳನ್ನು ಕಾಣಬಹುದಾಗಿದೆ. ಅಲ್ಲದೆ ಗರ್ಭಗೃಹದ ಮೇಲ್ಭಾಗದಲ್ಲಿ ವಿಮಾನವನ್ನು ಕಾಣಬಹುದು.

ಸುತ್ತೂರಮ್ಮ ದೇವಾಲಯ

ಈ ದೇವಾಲಯವು ಸುಮಾರು ೮-೯ನೇ ಶತಮಾನದಲ್ಲಿ ಅಂದರೆ ಗಂಗರ ಕಾಲದಲ್ಲಿ ರಚನೆಯಾಗಿರುವ ಅತ್ಯಂತ ಪ್ರಾಚೀನ ದೇವಾಲಯವಾಗಿದೆ. ಇದನ್ನು ಇತ್ತೀಚೆಗೆ ಜೀರ್ಣೋದ್ಧಾರಗೊಳಿಸಲಾಗಿದೆ (೨೦೦೫-೦೬). ಈ ದೇವಾಲಯದಲ್ಲಿ ಸ್ಥಳೀಯ ಹಾಗೂ ಊರಿನ ಸ್ತ್ರೀ ದೇವತೆಯಾದ ಸುತ್ತೂರಮ್ಮನನ್ನು ಪೂಜಿಸಲಾಗುತ್ತದೆ. ಇದು ಈ ಊರಿನ ಪೂರ್ವಭಾಗದಲ್ಲಿ ಒಂದು ಫರ್ಲಾಂಗ್ ದೂರದಲ್ಲಿದೆ. ಭತ್ತದ ಗದ್ದೆಗಳು ಮತ್ತು ಕಾಲುವೆಗೂ ಮಧ್ಯದಲ್ಲಿದೆ. ಗಂಗರ ಕಾಲದ ಶಾಸನ ಸ್ಥಂಭಗಳುಳ್ಳ ಒಂದು ಸಣ್ಣ ದೇವಾಲಯವಾಗಿದೆ ಎಂದಿದೆ. ಇದರಲ್ಲಿ ಒಂಭತ್ತು ಸಪ್ತಮಾತೃಕೆಯ ಮೂರ್ತಿಗಳಿವೆ. ಪ್ರತಿಯೊಂದು ಮೂರ್ತಿಯೂ ಎರಡೂವರೆ ಅಡಿ ಎತ್ತರವಾಗಿದ್ದು ಪ್ರತ್ಯೇಕವಾಗಿ ಅಷ್ಟಕೋನದ ಕಂಭಗಳು ನವರಂಗದಲ್ಲಿ ಒಂದು ಗಣೇಶ ವಿಗ್ರಹವಿದೆ. ಈ ದೇವಾಲಯದ ಹತ್ತಿರ ಭೈರವನ ವಿಗ್ರಹ ಹಾಗೂ ವೀರಗಲ್ಲುಗಳಿವೆ. ಚೋಳರ ಮತ್ತು ಹೊಯ್ಸಳರ ಶಾಸನಗಳಲ್ಲಿ ಈ ದೇವತೆಯ ಹೆಸರಿನ ಪ್ರಸ್ತಾಪವಿದೆ[೫].

ಈ ಸುತ್ತೂರಮ್ಮನಿಗೆ ಈ ಗ್ರಾಮದಲ್ಲಿ ವಿಶೇಷವಾದ ಪ್ರಾಮುಖ್ಯತೆ ಇದೆ. ಈ ದೇವತೆ ಗ್ರಾಮದೇವತೆಯಾಗಿ ಊರಿನ ರಕ್ಷಣೆ ಮಾಡುತ್ತಿದ್ದಾಳೆ ಎಂಬ ನಂಬಿಕೆ ಈ ಭಾಗದ ಜನರಲ್ಲಿ ಇದೆ. ಅಲ್ಲದೆ 'ಹತ್ತೂರು ಮುಳುಗಿದರೂ ಸುತ್ತೂರು ಮುಳುಗುವುದಿಲ್ಲ' ಎಂದು ಹೇಳಿ ದೇವತೆಯಾದಳು ಎಂಬ ಐತಿಹ್ಯ ಹಾಗೂ ಮೌಖಿಕ ಆಕರಗಳಲ್ಲಿವೆ. ಇವಳಿಂದಾಗಿ ಈ ಗ್ರಾಮಕ್ಕೆ ಸುತ್ತೂರು ಎಂಬ ಹೆಸರು ಬಂದಿದೆ ಎಂದು ಶಾಸನಗಳಿಂದ ತಿಳಿದುಬರುತ್ತದೆ.

ದೊಡ್ಡಮ್ಮತಾಯಿ ಮತ್ತು ಮಾರಮ್ಮ ದೇವಾಲಯಗಳು ಸಹ ಈ ಗ್ರಾಮದಲ್ಲಿದ್ದು ಈ ಗ್ರಾಮದ ಜನರ ಸಮಾಜದ ಮೇಲೆ ತಮ್ಮದೇ ಆದ ಮಹತ್ವವನ್ನು ಬೀರಿವೆ. ದೊಡ್ಡಮ್ಮತಾಯಿ ಉತ್ಸವವನ್ನು ಈ ಗ್ರಾಮದ ಜನರು ಶ್ರದ್ಧೆ-ಭಯ-ಭಕ್ತಿಗಳಿಂದ ಆಚರಿಸುತ್ತಾರೆ. ಅದೇ ರೀತಿಯಲ್ಲಿ ಮಾರಮ್ಮನ ಪೂಜೆಯೂ ಸಹ ಈ ಊರಿನ ವೈಶಿಷ್ಟ್ಯವಾಗಿದೆ. ಸುತ್ತೂರಮ್ಮ, ದೊಡ್ಡಮ್ಮತಾಯಿ, ಮಾರಮ್ಮ ಹೀಗೆ ಅನೇಕ ಸ್ತ್ರೀ ದೇವತೆಗಳನ್ನು ಈ ಊರಿನ ಜನ ಪೂಜಿಸಿಕೊಂಡು ಬರುತ್ತಿದ್ದಾರೆ. ದೊಡ್ಡಮ್ಮ ತಾಯಿ ದೇವಾಲಯ ಗ್ರಾಮದ ಮದ್ಯದಲ್ಲಿದ್ದು ಅದನ್ನು ಚಾವಡಿ ಎಂದು ಕರೆಯಲಾಗುತ್ತದೆ. ಇದನ್ನು ಇಟ್ಟಿಗೆ, ಗಾರೆ, ಮರ, ಹೆಂಚುಗಳನ್ನು ಮಾಡಿ ನಿರ್ಮಿಸಲಾಗಿದೆ. ವಾರದ ಎಲ್ಲಾ ದಿನಗಳಲ್ಲಿ ಈ ದೇವತೆಗಳಿಗೆ ಪೂಜೆ ಇರುತ್ತದೆ. ಮಾರಮ್ಮನ ದೇವಾಲಯ ಊರಿನ ಹೊರಗೆ ಇದ್ದು ಹಿಂದುಳಿದ ವರ್ಗಗಳ ಆರಾಧ್ಯದೈವವಾಗಿ ಪೂಜಿತಳಾಗುತ್ತಿದ್ದಾಳೆ.

ಶ್ರೀ ಶಿವರಾತ್ರೀಶ್ವರ ಗದ್ದಿಗೆ

ಪ್ರಾಚೀನ ಪರಂಪರೆಯನ್ನು ನೋಡಿದರೆ ಈ ಗದ್ದಿಗೆಯಿಂದಲೇ (ದೇವಾಲಯ) ಸುತ್ತೂರಿನ ಇತಿಹಾಸವು ಪ್ರಾರಂಭವಾಗುತ್ತದೆ. ಸುಮಾರು ಕ್ರಿ.ಶ. ೧೦ನೇ ಶತಮಾನಕ್ಕಿಂತ ಹಿಂದೆಯೇ ಈ ಮಠವಿತ್ತೆಂದು ಹಲವಾರು ದಾಖಲೆಗಳಲ್ಲಿ ಮಾಹಿತಿ ಸಿಗುತ್ತದೆ. ಈ ಗದ್ದಿಗೆಯ ಪರಂಪರೆಯನ್ನು

ಹೊಂದಿರುವುದೇ ಶ್ರೀ ಸುತ್ತೂರು ವೀರಸಿಂಹಾಸನ ಮಠ. (ಪೂರ್ವದಲ್ಲಿ ಉದಯವಾದ ಜೈನಧರ್ಮಕ್ಕೆ ಹಾಗೂ ಇಲ್ಲಿನ ಗುರುಪರಂಪರೆಗೂ ಒಂದು ಸಾಮ್ಯತೆ ಇದೆ. ಜೈನಧರ್ಮದಲ್ಲಿ ೨೪ ತೀರ್ಥಂಕರರು ಆಗಿ ಹೋಗಿದ್ದಾರೆ. ಅವರಂತೆಯೇ ಈಗ ಇರುವ ಸುತ್ತೂರು ಶ್ರೀಗಳು ೨೪ನೇ ಸ್ವಾಮೀಜಿಗಳಾಗಿರುತ್ತಾರೆ). ಇಲ್ಲಿ ಬಂದು ಹೋಗಿರುವ ಪ್ರತಿ ಸ್ವಾಮೀಜಿ ಕೂಡ ಈ ಪ್ರಾಚೀನ ಮಠದಲ್ಲಿ ಪೂಜೆ, ಕೈಂಕರ್ಯ ಮಾಡಿರುತ್ತಾರೆ. ಈ ಹಿನ್ನೆಲೆಯಿಂದ ಇದಕ್ಕೆ ತನ್ನದೇ ಆದ ಮಹತ್ವವಿದೆ ಎಂದು ಹೇಳಬಹುದು.

ಈ ದೇವಾಲಯ ಮುಂಭಾಗದಲ್ಲಿ ಮಹಾದ್ವಾರ ಗೋಪುರ ಇದೆ. ಈ ದ್ವಾರಗೋಪುರದಲ್ಲಿ ದ್ರಾವಿಡ ಶೈಲಿಯನ್ನು ಹೊಂದಿದ್ದು ಕೋಷ್ಠ ಮಂಟಪ ಮತ್ತು ಅರೆ ಕಂಬಗಳಿಂದ ಆವೃತವಾಗಿದೆ. ಮೇಲ್ಭಾಗದಲ್ಲಿ ಕಮಾನಿನಂತೆ ಇಳಿಜಾರನ್ನು ಹೊಂದಿದ್ದು ಕಳಸಗಳನ್ನು ಹೊಂದಿದೆ. ಈ ಪ್ರವೇಶದ್ವಾರವನ್ನು ದಾಟಿ ಮುಂದೆ ಹೋದರೆ ಪ್ರಾಚೀನ (ಕಾಡು) ಮಠವಿದೆ. ಈ ಪ್ರಾಚೀನ ಗದ್ದಿಗೆಯ ಮುಂಭಾಗದಲ್ಲಿ ಗೋಪುರವಿದೆ. ಮೂಲ ಗರ್ಭಗುಡಿಗೆ ಹೊಂದಿಕೊಂಡಂತೆ ಮೇಲ್ಭಾಗದಲ್ಲಿ ಸಹ ಒಂದು ವಿಮಾನವಿದೆ. ಗರ್ಭಗುಡಿಯಲ್ಲಿ ಬಸವವಿದೆ. ಈ ಬಸವನ ಪೀಠದಲ್ಲಿ ಒಂದು ಶಾಸನವಿದ್ದು ಲಿಂಗರಾಜ ಒಡೆಯರು ಇದನ್ನು ಪ್ರತಿಷ್ಠಾಪಿಸಿದರು ಎಂದು ತಿಳಿದುಬರುತ್ತದೆ. ಈ ಗರ್ಭಗುಡಿಯ ಅಕ್ಕಪಕ್ಕದಲ್ಲಿ ಶ್ರೀಮಠದ ಕೆಲವು ಗುರುಗಳ ಗದ್ದಿಗೆಗಳು ಇವೆ. ಅಲ್ಲದೆ ಇಲ್ಲಿ ಒಂದು ಶಿವಲಿಂಗವೂ ಸಹ ಇದೆ. ಈ ಗದ್ದಿಗೆ ಪ್ರಾಂಗಣಗಳಿಂದ ಸುತ್ತುವರಿಯಲ್ಪಟ್ಟಿದೆ.

ಜಿನ ದೇವಾಲಯದ ಅವಶೇಷಗಳು

ಈ ಊರಿನಲ್ಲಿ ಪ್ರಾಚೀನ ಕಾಲದಿಂದಲೂ ಸಹ ಜೈನಧರ್ಮ ಅಸ್ತಿತ್ವದಲ್ಲಿದ್ದು ಅನೇಕ ದಾಖಲೆಗಳಿಂದ ತಿಳಿದುಬರುತ್ತದೆ ಹಾಗೂ ಅಲ್ಲಿ ಸಿಕ್ಕಿರುವ ಜೈನ ಬಸದಿಗಳ ಅವಶೇಷ ಹಾಗೂ ಜೈನತೀರ್ಥಂಕರರ ಮತ್ತು ಯಕ್ಷಿಯವರ ಶಿಲ್ಪಗಳು ಆಗಿನ ಕಾಲದ ಕಲೆಯನ್ನು ತಿಳಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇಲ್ಲಿನ ಅನೇಕ ಜೈನಮೂರ್ತಿಗಳು ಭಗ್ನಾವಶೇಷವಾಗಿದ್ದು ಅವುಗಳಲ್ಲಿ ಕೆಲವನ್ನು ಸುತ್ತೂರಿನ ನೆರೆಯ ಗ್ರಾಮವಾದ ಬಿಳುಗಲಿಯಲ್ಲಿಡಲಾಗಿದೆ.

ಮಹದೇಶ್ವರ ಗದ್ದಿಗೆ

ಇದು ಸುತ್ತೂರಿನ ಶ್ರೀಮಠದ ಆವರಣದಲ್ಲಿದ್ದು ಸುಮಾರು ೨ ಅಡಿ ಪೀಠದ ಮೇಲೆ ಶಿವಲಿಂಗವಿದ್ದು ಅದನ್ನು ನಾಗಾಭರಣದಿಂದ ಅಲಂಕೃತಗೊಳಿಸಲಾಗಿದೆ. ಮಹದೇಶ್ವರರು ಸುತ್ತೂರಿಗೆ ಬಂದು ಕಾಯಕದೀಕ್ಷೆಯನ್ನು ತೊಟ್ಟು ರಾಗಿಬೀಸಿದ ಕಲ್ಲು ಸಹ ಇದ್ದು ಮಹದೇಶ್ವರರು ಸುತ್ತೂರಿನಲ್ಲಿ ನೆಲೆಸಿದ್ದುದನ್ನು ಹೇಳುತ್ತಿವೆ. ಅಲ್ಲದೆ ಜನಪದ ಹಾಗೂ ಮೌಖಿಕ ಆಕರಗಳಲ್ಲೂ ಸಹ ಇದರ ಬಗ್ಗೆ ಮಾಹಿತಿ ದೊರಕುತ್ತದೆ.

ಶಿಲ್ಪಗಳು

ಸುತ್ತೂರಿನ ಪರಿಸರದಲ್ಲಿ ಅನೇಕ ಶಿಲ್ಪಗಳು ಸಿಕ್ಕಿವೆ. ಅವುಗಳಲ್ಲಿ ರಾಕಸಮ್ಮನ ಶಿಲ್ಪ, ಮಾರಮ್ಮ, ಯಕ್ಷಿ, ಸ್ತ್ರೀದೇವತೆ, ಕಾಲಭೈರವ, ಭೈರವ, ಸಪ್ತಮಾತೃಕೆಯರು, ಗಣಪತಿ, ಸೂರ್ಯ ಹಾಗೂ ಇತರ ಬಿಡಿಶಿಲ್ಪಗಳಾದ ಸೂರ್ಯ, ರಾಜನ, ರಾಣಿಯ ಬಲಿ, ಸರ್ಪಕಲ್ಲುಗಳನ್ನು ನೋಡಬಹುದಾಗಿದೆ.

ರಾಕಸಮ್ಮನ ಶಿಲ್ಪವೊಂದು ಸುತ್ತೂರಿನಲ್ಲಿ ಕಂಡುಬರುತ್ತದೆ. ಈ ಶಿಲ್ಪವನ್ನು ನೋಡಿದರೆ ಪುರುಷ ಮತ್ತು ಸ್ತ್ರೀಯರ ಹೋಲಿಕೆಯನ್ನು ಕಾಣಬಹುದು. ಮುಖವನ್ನು ಮಾತ್ರ ನೋಡಿದರೆ ಗಂಡಸಿನ ರೀತಿ ಕಾಣುತ್ತದೆ. ದೇಹವನ್ನು ಮಾತ್ರ ನೋಡಿದರೆ ಸ್ತ್ರೀಸ್ವರೂಪವಾಗಿದೆ. ಈ ಶಿಲ್ಪ ಬಹುಶಃ ೧೩-೧೪ನೇ ಶತಮಾನಕ್ಕೆ ಸೇರಿದ್ದಾಗಿದೆ ಎನ್ನಬಹುದು. ರಾಕಸಮ್ಮನ ಸಂಸ್ಕೃತಿ ಹೇರಳವಾಗಿ ಮೈಸೂರು, ಮಂಡ್ಯ, ಚಾಮರಾಜನಗರಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ. ಈ ದೇವತೆಯ ಆಲಯಗಳು ಈ ಸಂಸ್ಕೃತಿಯ ಜನರು ಈ ಪ್ರಾಂತ್ಯದಲ್ಲಿ ಕಂಡುಬರುತ್ತಾರೆ. ಈ ಹಿನ್ನೆಲೆಯಿಂದ ಸುತ್ತೂರಿನಲ್ಲೂ ಸಹ ಈ ಶಿಲ್ಪ ದೊರೆತಿದೆ. ಶಿಲ್ಪ ಕಲೆಯನ್ನು ನೋಡಿದರೆ ರಾಕಸಮ್ಮನ ಸಂಸ್ಕೃತಿ ಇಲ್ಲಿಯೂ ಇದೆ ಎಂಬುದು ಗೋಚರವಾಗುತ್ತದೆ.

ಈ ಶಿಲ್ಪವು ಕುಳಿತ ಭಂಗಿಯಲ್ಲಿದ್ದು ಚತುರ್ಭುಜವನ್ನು ಹೊಂದಿದ್ದು ತಲೆಯ ಮೇಲೆ ಕಿರೀಟವಿದೆ. ಕಂಠದಲ್ಲಿ ಸುಂದರವಾದ ಕಂಠಹಾರ ವಿಶೇಷವಾಗಿದೆ. ತುಂಬಿದ ಎದೆ, ಪೀಠ ಮತ್ತು ಕಂಬಗಳು ಹೊಯ್ಸಳ ಮಾದರಿಯ ಶಿಲ್ಪಕಲೆಯನ್ನು ಹೊಂದಿದೆ. ಈ ಭಾಗದ ಸಂಶೋಧನಾ ದೃಷ್ಟಿಯಿಂದ ನೋಡಿದಾಗ ರಾಕಸಮ್ಮನ ಸಾಂಸ್ಕೃತಿಕ ನೆಲೆ. ಗಂಗರ, ಚೋಳರ ರಾಜರ ಕಾಲದಲ್ಲಿ ವೈದಿಕ ಸಂಪ್ರದಾಯದಿಂದ ಈ ಶಿಲ್ಪಗಳು ಪ್ರಾಂತೀಯ ಮನೋಭಾವದಿಂದ ಈ ಸಂಸ್ಕೃತಿ ಬೆಳೆದಿರುವಂತೆ ಕಾಣುತ್ತದೆ. ಈ ಶಿಲ್ಪವನ್ನು ನೋಡಿದರೆ ಶಿಲ್ಪಕಥಾ ಆಧಾರದ ಮೇಲೆ ಜಾನಪದ ಇತಿಹಾಸವನ್ನು ರಾಕಸಮ್ಮನ ಬಗ್ಗೆ ರಚಿಸಬಹುದಾಗಿದೆ.

ಮಾರಮ್ಮನ ಶಿಲ್ಪವೂ ಸುತ್ತೂರಿನಲ್ಲಿದೆ. ಕಲ್ಲುಪೀಠದ ಮೇಲೆ ಈ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಇದು ಕುಳಿತ ಭಂಗಿಯಲ್ಲಿದ್ದು ಎರಡು ಕೈಯನ್ನು, ಎರಡು ಕಾಲುಗಳನ್ನು ಹೊಂದಿದೆ. ಒಂದು ಕೈಯಲ್ಲಿ ಪಾತ್ರೆ, ಮತ್ತೊಂದು ಕೈಯಲ್ಲಿ ಮೊಗ್ಗಿನ ಕಮಲ ಹಿಡಿದಿರುವುದು ಮಾರಮ್ಮ ಸೀರೆ ಧರಿಸಿದ್ದು ನೆರಿಗೆಯನ್ನು ಸುಂದರವಾಗಿ ಕೆತ್ತಲಾಗಿದೆ. ಕಂಠದಲ್ಲಿ ಕಂಠಹಾರವಿದ್ದು ಜಾನಪದೀಯ ದೃಷ್ಟಿಯಲ್ಲಿ ಪೂಜೆ ನಡೆಯುತ್ತದೆ.

ಕಾಲಭೈರವಿಯ ಮತ್ತೊಂದು ಶಿಲ್ಪ ಸುತ್ತೂರಿನಲ್ಲಿದ್ದು ಎರಡು ಕಾಲು, ನಾಲ್ಕು ಕೈಗಳನ್ನು ಹೊಂದಿದೆ. ಒಂದು ಕೈಯಲ್ಲಿ ತ್ರಿಶೂಲವನ್ನು, ಮತ್ತೊಂದು ಕೈಯಲ್ಲಿ ಢಮರುಗ ಹಾಗೂ ಹಾವನ್ನು, ಇನ್ನೊಂದು ಕೈಯಲ್ಲಿ ಭಿಕ್ಷಾ ಪಾತ್ರೆಯನ್ನು, ಮಗದೊಂದು ಕೈಯಲ್ಲಿ ತುಂಡುಕತ್ತಿಯನ್ನು ಹೊಂದಿದ್ದು, ಒಂದು ಕಾಲನ್ನು ಬಿಟ್ಟು ಪೀಠದಲ್ಲಿ ಕುಳಿತಿದ್ದಾಳೆ. ಅಲ್ಲದೆ ದೇವತೆಯ ಹಿಂದೆ ಪ್ರಭಾವಳಿ ಇದ್ದು

ಸುಂದರವಾಗಿದೆ. ಈ ದೇವತೆ ಆಭರಣಗಳಿಂದ ಅಲಂಕೃತಳಾಗಿದ್ದಾಳೆ. ಇದು ಬಹುಶಃ ಗಂಗರ ಕಾಲದ ಶಿಲ್ಪವಾಗಿರಬಹುದೆಂದು ಹೇಳಬಹುದು.

ಯಕ್ಷಿ ಶಿಲ್ಪಗಳು ಸಹ ಸುತ್ತೂರಿನಲ್ಲಿ ದೊರೆತಿವೆ. ಪ್ರಾಯಶಃ ಜೈನ ಧರ್ಮದಲ್ಲಿ ಯಕ್ಷ ಯಕ್ಷಿ ಶಿಲ್ಪಗಳು ಮೂಡಿಬಂದಿವೆ. ಈ ಹಿನ್ನೆಲೆಯಿಂದ ಈ ಶಿಲ್ಪವನ್ನು ಯಕ್ಷಿಗೆ ಹೋಲಿಸಬಹುದಾಗಿದೆ. ಶಿಲ್ಪಕಲಾ ದೃಷ್ಟಿಯಿಂದ ಕುಳಿತಿದ್ದು ಎರಡು ಕೈಗಳನ್ನು ಹೊಂದಿದೆ. ಒಂದು ಕೈಯಲ್ಲಿ ಪಾತ್ರೆ, ಒಂದು ಕೈಯಲ್ಲಿ ದಂಡವಿದೆ. ಕಿವಿಯಲ್ಲಿ ಕರ್ಣಕುಂಡಲ, ತಲೆಯ ಮೇಲೆ ಕಿರೀಟವಿದೆ ಮತ್ತು ಐದು ಹೆಡೆ ತೆಗೆದಿರುವ ಸರ್ಪಗಳನ್ನು ಸಹ ಕಡೆಯಲಾಗಿದೆ.

ಸುತ್ತೂರಿನಲ್ಲಿ ಮತ್ತೊಂದು ಯಕ್ಷಿ ಶಿಲ್ಪ ದೊರಕಿದ್ದು ಈ ಶಿಲ್ಪವನ್ನು ನೋಡಿದರೆ ಕುಳಿತ ಭಂಗಿಯಲ್ಲಿದ್ದು ಎರಡು ಕಾಲು, ಎರಡು ಕೈಗಳನ್ನು ಹೊಂದಿದೆ. ತುಂಬಿದ ಎದೆ, ಕಂಠದಲ್ಲಿ ಮಣಿಸರ, ಕಂಠಾಭರಣ, ಕಿವಿಯಲ್ಲಿ ಕರ್ಣಕುಂಡಲ, ಮುಖವನ್ನು ನೋಡಿದರೆ ಬೌದ್ಧ ಮತ್ತು ಜೈನ ಧರ್ಮದಲ್ಲಿ ಕಂಡುಬರುವ ಬುದ್ಧ, ಮಹಾವೀರನ ನೋಟವನ್ನು ಕಾಣಬಹುದು. ಈ ಒಂದು ಶಿಲ್ಪವನ್ನು ಜೈನಧರ್ಮಕ್ಕೆ ಸೇರಿಸಬಹುದಾಗಿದೆ.

ಬಿಡಿಶಿಲ್ಪಗಳು

ಸುತ್ತೂರಿನಲ್ಲಿ ಬಿಡಿಶಿಲ್ಪಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆತಿವೆ. ಪ್ರಾಯಶಃ ಈ ಶಿಲ್ಪಗಳನ್ನು ನೋಡಿದರೆ ಕ್ರಿಶ. ೧೦-೧೧ನೇ ಶತಮಾನಕ್ಕೆ ಸೇರಿಸಬಹುದಾಗಿದೆ. ಕಾರಣವೇನೆಂದರೆ ಹೊಯ್ಸಳರ ಕಾಲದಲ್ಲಿ ಮೂಡಿಬಂದಿರುವ ಶಿಲ್ಪಕಲೆಯನ್ನು ಈ ಶಿಲ್ಪಗಳನ್ನು ಕಾಣಬಹುದಾಗಿದೆ. ಈ ಶಿಲ್ಪಗಳು ಶೈವ, ವೈಷ್ಣವ ಧರ್ಮಕ್ಕೆ ಪೂರಕವಾದ ಶಿಲ್ಪಕಲೆಗಳಿಂದ ಕೂಡಿವೆ.

ಕಾಲಭೈರವ ಮತ್ತು ಭೈರವ ಶಿಲ್ಪಗಳು

ಈ ಶಿಲ್ಪಗಳು ಸಹ ಸುತ್ತೂರಿನಲ್ಲಿ ದೊರೆತಿದ್ದು ಕಾಲಭೈರವನ ಶಿಲ್ಪ ಸುಂದರವಾಗಿದೆ. ಈ ಶಿಲ್ಪವನ್ನು ನೋಡಿದರೆ ಮೈಸೂರು ಒಡೆಯರ ಕಾಲದ ಶೈಲಿಯಂತೆ ಕಾಣುತ್ತದೆ. ಈ ಶಿಲ್ಪವು ಚತುರ್ಭುಜಗಳನ್ನು ಹೊಂದಿದ್ದು ತಲೆಯ ಮೇಲೆ ನಿಗರಿದ ಕೂದಲು, ಕಿವಿಯಲ್ಲಿ ದಪ್ಪನಾದ ಕರ್ಣಕುಂಡಲ, ಕೈಯಲ್ಲಿ ಶಂಖ, ಖಡ್ಗ, ದಂಡ, ಮತ್ತೊಂದು ಕೈಯನ್ನು ಇಳಿಬಿಟ್ಟಿರುವುದು, ಹಣೆಯಲ್ಲಿ ವಿಭೂತಿಧಾರಣೆ ಇದೆ. ಈತನು ನಿಂತ ಭಂಗಿಯಲ್ಲಿದ್ದು ಇಕ್ಕೆಲಗಳಲ್ಲಿ ನಾಯಿಹಂದಿಯ ಉಬ್ಬು ಶಿಲ್ಪಗಳು ಮೂಡಿಬಂದಿವೆ.

ಭೈರವ ಶಿಲ್ಪವೂ ಸಹ ಕಾಲಭೈರವನ ಶಿಲ್ಪದ ಪಕ್ಕದಲ್ಲಿಯೇ ಇದೆ. ಈ ಶಿಲ್ಪವನ್ನು ಕಾಲಭೈರವನಿಗೆ ಹೋಲಿಸಬಹುದಾಗಿದೆ. ಈ ಶಿಲ್ಪ ಚತುರ್ಭುಜಧಾರಿಯಾಗಿ ತ್ರಿಶೂಲ, ಢಮರು, ವೀರಖಡ್ಗ, ಕಪಾಲಪಾತ್ರೆಯನ್ನು ಕಾಣಬಹುದಾಗಿದೆ. ಇಕ್ಕೆಲಗಳಲ್ಲಿ ಸೇವಕರುಗಳನ್ನು ಕಾಣಬಹುದಾಗಿದೆ. ಈ ಶಿಲ್ಪವನ್ನು ಸಾಮಾನ್ಯ ಸ್ವರೂಪದಲ್ಲಿ ಕೆತ್ತಲಾಗಿದೆ.

ಸಪ್ತಮಾತೃಕೆಯರ ಶಿಲ್ಪಗಳು

ಸುತ್ತೂರಿನಲ್ಲಿ ಸಪ್ತಮಾತೃಕೆಯರ ಶಿಲ್ಪಗಳು ಸಹ ಕಂಡುಬರುತ್ತವೆ. ಅದರಲ್ಲೂ ಎರಡು ಕಡೆ ಈ ರೀತಿಯ ಸಪ್ತಮಾತೃಕೆಯರ ಶಿಲ್ಪಗಳು ಕಾಣಬರುತ್ತವೆ. ಒಂದು ಸೋಮೇಶ್ವರ ದೇವಾಲಯದಲ್ಲೂ, ಮತ್ತೊಂದು ಸುತ್ತೂರಮ್ಮನ ದೇವಾಲಯದಲ್ಲೂ ಕಂಡುಬರುತ್ತದೆ. ಸೋಮೇಶ್ವರ ದೇವಾಲಯದ ಒಳಗೆ ಇರುವ ಚಪ್ಪಡಿಯಲ್ಲಿ ವರಾಹಿ, ಇಂದ್ರಾಣಿ, ಚಾಮುಂಡ, ಸರಸ್ವತಿ, ಬ್ರಾಹ್ಮಿ ಮಹೇಶ್ವರಿ, ಕೌಮಾರಿ ಮತ್ತು ವೈಷ್ಣವ ಶಿಲ್ಪಗಳು ಕಂಡುಬರುತ್ತವೆ. ಇದೇ ರೀತಿಯಲ್ಲಿ ಸುತ್ತೂರಮ್ಮ ದೇವಾಲಯದಲ್ಲಿ ಸಪ್ತಮಾತೃಕೆಯರ ವಿಗ್ರಹಗಳು ಕಂಡುಬಂದಿವೆ. ಈ ಎಲ್ಲಾ ಶಿಲ್ಪಗಳು ಸ್ತ್ರೀಯರ ಶಿಲ್ಪಗಳಾಗಿದ್ದು, ಸ್ತ್ರೀಯರು ಸಹ ಹಿಂದೂ ಸಮಾಜದಲ್ಲಿ ಹಿಂದೂ ದೇವಾಲಯಗಳಲ್ಲಿ ಶಕ್ತಿಯುತವಾದ ದೇವತೆಗಳು ಎಂಬ ಉದ್ದೇಶದಿಂದ ಈ ರೀತಿಯ ಶಿಲ್ಪಕಲೆಯನ್ನು ಶೈವಪರಂಪರೆಯಲ್ಲಿ ಕಾಣಬಹುದಾಗಿದೆ.

ಬ್ರಾಹ್ಮೀ ಮಾಹೇಶ್ವರೀ, ಚೈವ, ಕೌಮರೀ, ವೈಷ್ಣವೀ ತಥಾ!

ವಾರಾಹೀ, ಚೈವ ಚೇಂದ್ರಾಣೀ, ಚಾಮುಂಡಾ ಸಪ್ತಮಾತರಾ!!

ಗಣಪತಿ

ಸೋಮೇಶ್ವರ ದೇವಾಲಯದಲ್ಲಿ ಸವೆದುಹೋಗಿರುವ ಒಂದು ಗಣಪತಿ ಶಿಲ್ಪವನ್ನು ಹೊರಗಿನ ಕಂಬದಲ್ಲಿ ಕೆತ್ತಲಾಗಿದೆ. ಇದು ಕುಳಿತ ಭಂಗಿಯಲ್ಲಿದೆ.

ಗಣಪತಿ ಶಿಲ್ಪಗಳು

ಈ ಶಿಲ್ಪಗಳು ಸುಮಾರು ಎರಡೂವರೆ ಅಡಿ ಎತ್ತರ ಇವೆ. ಗಣಪತಿಯ ಎರಡು ವಿಗ್ರಹಗಳಿದ್ದು ಕುಳಿತಿರುವ ಭಂಗಿಯ ಚತುರ್ಭುಜ ಮೂರ್ತಿಗಳಾಗಿವೆ. ಶಂಖ, ಅಭಯಮುದ್ರೆ, ಚಕ್ರ, ಮೋದಕ ಇವೆ. ತಲೆಯ ಮೇಲೆ ಕಿರೀಟ, ಕಿವಿಗಳಲ್ಲಿ ಕರ್ಣಕುಂಡಲ, ಕುತ್ತಿಗೆಯಲ್ಲಿ ಕಂಠಹಾರ, ಕೈ ಮತ್ತು ಕಾಲುಗಳಲ್ಲಿ ಕಡಗಗಳು, ಯಜ್ಞೋಪವೀತ ಇದೆ ಮತ್ತು ಗಣೇಶನ ವಾಹನವಾದ ಇಲಿಯೂ ಸಹ ಇದೆ. ಪ್ರಭಾವಳಿಯನ್ನು ಬಳ್ಳಿ ಸುರುಳಿ ಕೆತ್ತನೆಯಿಂದ ಕೆತ್ತಲ್ಪಟ್ಟಿದೆ. ಭಾರೀ ದೇಹ, ದೊಡ್ಡ ಹೊಟ್ಟೆ ಇತ್ಯಾದಿ ಲಕ್ಷಣದಿಂದ ಕೂಡಿರುವ ಈ ಗಣಪತಿಯ ಮೂರ್ತಿಗಳು ಸಂಶೋಧಕರ ಆಕರ್ಷಣೆಗೆ ಕಾರಣವಾಗಿವೆ.

ಸೂರ್ಯಶಿಲ್ಪ

ಈ ಶಿಲ್ಪವೂ ಸಹ ಸುತ್ತೂರಿನಲ್ಲಿದ್ದು ನವಗ್ರಹಗಳಲ್ಲಿ ಸೂರ್ಯನೂ ಪ್ರಮುಖವಾದ ದೇವತೆ ಮತ್ತು ಶಕ್ತಿಯುತವಾದ ದೇವತೆ ಎಂದು ಹೇಳಬಹುದು. ಈ ಶಿಲ್ಪವು ಸುಮಾರು ೨ ಅಡಿ ಎತ್ತರವಿದ್ದು ಎರಡು ಕೈಗಳನ್ನು ಮಾತ್ರ ಹೊಂದಿದೆ. ಎರಡೂ ಕೈಗಳಲ್ಲಿಯೂ ಕಮಲವನ್ನು ಕಾಣಬಹುದಾಗಿದೆ. ತಲೆಯ ಮೇಲೆ ಕಿರೀಟವಿದೆ.

ರಾಜನ ಶಿಲ್ಪ

ಈ ಗ್ರಾಮದಲ್ಲಿ ರಾಜನ ಶಿಲ್ಪವೊಂದನ್ನು ಕಾಣಬಹುದಾಗಿದೆ. ಕ್ರಿ.ಶ.೧೦ನೇ ಶತಮಾನದಲ್ಲಿ ಚೋಳರ ಕರ್ನಾಟಕದ ಆಗ್ನೇಯ ಭಾಗದ ಮೇಲೆ ಆಳ್ವಿಕೆ ನಡೆಸಿ ಈ ಪ್ರಾಂತ್ಯವನ್ನು ತನ್ನ ಕೈಗೆ ತೆಗೆದುಕೊಳ್ಳುವ ಮೊದಲು ರಾಜೇಂದ್ರ ಚೋಳನು ಸುತ್ತೂರಿಗೆ ಬಂದು ಸುತ್ತೂರುಶ್ರೀಗಳಿಂದ ಪ್ರಭಾವಿತನಾಗಿ ಅವರ ಶಿಷ್ಯರಾದುದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಈ ಶಿಲ್ಪ ಸುಮಾರು ೨ ೧/೨ ಅಡಿಯಿಂದ ೩ ಅಡಿ ಎತ್ತರವಿದೆ. ಸಮಭಂಗಿಯಲ್ಲಿ ಅಂಜಲಿಬದ್ಧನಾಗಿ ನಿಂತ ಭಂಗಿ, ಶಿರದಲ್ಲಿ ಹಾರವಿದೆ, ಕರ್ಣಕುಂಡಲ, ಕಂಠೀಹಾರ, ಕೈಯಲ್ಲಿ ಕಡಗಗಳು, ತಲೆಯಲ್ಲಿ ಕಿರೀಟ, ಇಕ್ಕೆಲಗಳಲ್ಲಿ ಎರಡು ಕಂಬಗಳನ್ನು ಕಾಣಬಹುದಾಗಿದೆ. ರಾಜನ ಉಡುಪು ಧರಿಸಿರುವುದು ಕಂಡುಬರುತ್ತದೆ. ಈ ಶಿಲ್ಪವು ರಾಜೇಂದ್ರಚೋಳನ ಶಿಲ್ಪವಾಗಿರಬಹುದು.

ರಾಣಿ ಶಿಲ್ಪ

ಇಲ್ಲಿ ಮತ್ತೊಂದು ಶಿಲ್ಪವು ಸಿಕ್ಕಿದ್ದು ಈ ಶಿಲ್ಪದ ಶೈಲಿಯಿಂದ ಇದೊಂದು ಸ್ತ್ರೀಶಿಲ್ಪ ಎಂದು ಹೇಳಬಹುದು. ಮುಖ ನೋಡಿದರೆ ಪುರುಷರಂತೆ, ದೇಹನೋಡಿದರೆ ಸ್ತ್ರೀಯರಂತೆ ಕಾಣಬರುತ್ತದೆ. ಈ ಶಿಲ್ಪ ದೃಷ್ಟಿಯಿಂದ ಇದೂ ಸಹ ಕ್ರಿ.ಶ. ೧೦ನೇ ಶತಮಾನದ್ದಾಗಿದೆ ಎಂದು ಹೇಳಬಹುದಾಗಿದೆ. ಸ್ತ್ರೀಗೆ ತುಂಬಿದ ಎದೆ, ಸ್ತ್ರೀ ಉಡುಪು, ಸೀರೆಯ ನೆರಿಗೆಗಳು, ಮಣಿಸರ ಮತ್ತು ಕಂಠಹಾರಗಳು ಸುಂದರವಾಗಿ ಮೂಡಿಬಂದಿವೆ. ತಲೆಯ ಮೇಲೆ ಕಿರೀಟ, ಕರ್ಣಕುಂಡಲ, ಕೈಬಳೆಗಳನ್ನು ಕಾಣಬಹುದಾಗಿದೆ. ಇದು ರಾಣಿ ಶಿಲ್ಪವೆಂದು ಭಾವಿಸಲಾಗಿದೆ.

ಬಲಿಪಾದ ಶಿಲ್ಪ

ಸರ್ವೇಸಾಮಾನ್ಯವಾಗಿ ಭಾರತದ ಹಿಂದೂ ಧರ್ಮದಲ್ಲಿ ಕಂಡುಬಂದ ಪ್ರಾಚೀನ ಕಾಲದಲ್ಲಿ ಮತ್ತು ಇತ್ತೀಚಿನ ದಿನಗಳಲ್ಲೂ ಪ್ರಾಣಿಗಳನ್ನು ಶಕ್ತಿಪ್ರಧಾನ ದೇವತೆಗಳಿಗೆ ಬಲಿ ಕೊಡುತ್ತಿದ್ದಾರೆ. ಆ ಹಿನ್ನೆಲೆಯಿಂದ ದೇವರ ಹೆಸರಿಗೆ ಪಾದದ ಸಾಕ್ಷಿಯಾಗಿ ಕುರಿಯನ್ನು ಬಲಿಕೊಡುತ್ತಿದ್ದರು. ಆದ ಕಾರಣ ಬಲಿ ಕೊಟ್ಟ ಕುರಿಯ ತಲೆ ಕೆಳಗೆ ಬಿದ್ದಿದೆ. ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಒಂದು ನಾಯಿ ಸಹ ಕಾದಿರುವ ಶಿಲ್ಪಕಲೆಯನ್ನು ಕಾಣಬಹುದಾಗಿದೆ.

ನಾಗರ ಶಿಲ್ಪಗಳು (ನಾಗರಕಲ್ಲುಗಳು)

ಪ್ರಾಚೀನ ಕಾಲದಿಂದಲೂ ಹಿಂದೂ ಸಂಸ್ಕೃತಿಯಲ್ಲಿ ನಾಗರಹಾವಿನ ಪೂಜೆ ಮಾಡುವ ಪದ್ಧತಿ ರೂಢಿಯಲ್ಲಿ ಇದೆ. ಒಂದು ವೇಳೆ ಸರ್ಪದೋಷವಾದರೆ ದೇವರ ಹೆಸರಿನಲ್ಲಿ ಸರ್ಪಕಲ್ಲುಗಳನ್ನು ಮಾಡಿಸಿ ದೇವಸ್ಥಾನಗಳಲ್ಲಿ ಮತ್ತು ಅರಳಿಕಟ್ಟೆಗಳಲ್ಲಿ ಪ್ರತಿಷ್ಠಾಪಿಸುತ್ತಾರೆ. ಸುತ್ತೂರಿನಲ್ಲಿಯೂ ನಾಗರಕಲ್ಲುಗಳನ್ನು ವಿಭಿನ್ನ ಕಾಲಘಟ್ಟದಲ್ಲಿ ಪ್ರತಿಷ್ಠಾಪಿಸಲಾಗಿದೆ.

ವೀರಗಲ್ಲು ಮತ್ತು ಮಹಾಸತಿಕಲ್ಲುಗಳು

ವೀರಗಲ್ಲುಗಳು ಕನ್ನಡನಾಡಿನ ಶಾಸನಗಳ ಒಂದು ವೈಶಿಷ್ಟ್ಯವಾಗಿದೆ[೭]. ಕರ್ನಾಟಕದಲ್ಲಿ ವೀರಗಲ್ಲುಗಳ ಸಂಖ್ಯೆ ಅಧಿಕವಾಗಿದ್ದು ಇವುಗಳ ಶಿಲ್ಪವನ್ನು ಶಾಸನಶಿಲ್ಪ ಮತ್ತು ಶಾಸನರಹಿತ ಶಿಲ್ಪವೆಂದು ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ. ವೀರಗಲ್ಲುಗಳ ವಿಷಯ ಮತ್ತು ಅವುಗಳ ಮೇಲಿರುವ ಶಿಲ್ಪದ ಆಧಾರದಿಂದ ಹಲವು ವಿಧವಾಗಿ ವಿಂಗಡಿಸಿ ಅಧ್ಯಯನ ಮಾಡಬಹುದಾಗಿದೆ[೮]. ಕನ್ನಡನಾಡಿನ ಜನಸಾಮಾನ್ಯರು ಶೂರರಾಗಿದ್ದರು ಎಂಬುದಕ್ಕೆ ಈ ವೀರಗಲ್ಲುಗಳೇ ಸಾಕ್ಷೀಭೂತವಾಗಿದೆ. ಕಲ್ಲಿನ ಮೇಲಿರುವ ಶಿಲ್ಪವು ಪರಾಕ್ರಮದ ಸಂಕೇತದಂತೆ ತೋರುತ್ತದೆ. ಹೋರಾಟ ನಡೆದು ಅದರಲ್ಲಿ ನಾಯಕನು ಬಿದ್ದಂತೆಯೂ, ಸ್ವರ್ಗದಿಂದ ಅಪ್ಸರೆಯರು ಬಂದು ಅವನನ್ನು ವಿಮಾನದಲ್ಲಿಟ್ಟು ಕೊಂಡೊಯ್ಯುತ್ತಿರುವಂತೆಯೂ ಇರುವ ವೀರಗಲ್ಲುಗಳು ಅಲಂಕೃತವಾಗಿರುತ್ತವೆ[೯].

ಮೈಸೂರು ಪ್ರಾಂತ್ಯದಲ್ಲಿ ಅಂದರೆ ಮಹಿಷಮಂಡಲ ಪ್ರಾಂತ್ಯದಲ್ಲಿ ಹಲವಾರು ಸಂಖ್ಯೆಯಲ್ಲಿ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು ಕಂಡುಬರುತ್ತವೆ. ಅದೇ ರೀತಿ ಸುತ್ತೂರಿನಲ್ಲೂ ವಿವಿಧ ರೀತಿಯ ವಿವಿಧ ವಿನ್ಯಾಸಗಳನ್ನು ಹೊಂದಿರುವ ವೀರಗಲ್ಲುಗಳು ಮತ್ತು ಮಹಾಸತಿ ಕಲ್ಲುಗಳು ಕಂಡುಬರುತ್ತವೆ. ಗಂಗ, ಚೋಳ, ಹೊಯ್ಸಳ, ವಿಜಯನಗರ, ಮೈಸೂರು ಅರಸರ ಕಾಲದ ರಾಜಕೀಯದ ಮತ್ತು ಸಾಂಸ್ಕೃತಿಕ ಇತಿಹಾಸ ವೈವಿಧ್ಯಮಯವಾಗಿದೆ. ಇವರುಗಳ ಕಾಲಘಟ್ಟದಲ್ಲಿ ಅನೇಕ ಏಳುಬೀಳುಗಳು ಮಧ್ಯ ಕಲೆ ಅಭಿವೃದ್ಧಿ ಹೊಂದಿದೆ. ಇಂತಹ ಸ್ಥಳದಲ್ಲಿ ಸ್ಮಾರಕ ಶಿಲ್ಪಗಳಿಗೆ. ಅಲ್ಲದೆ ಸ್ಮಾರಕಗಳಾದ ವೀರಗಲ್ಲು, ಸತಿಕಲ್ಲು, ಗರುಡಸ್ಥಂಭಗಳು, ಮಹಾಸತಿ ಗುಡಿಗಳು, ವೀರರ ಗುಡಿಗಳು ಕರ್ನಾಟಕದ ನಾನಾ ಭಾಗಗಳಲ್ಲಿ ಕಂಡುಬರುತ್ತವೆ.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಗಮನಿಸಿದರೆ ಹಲವಾರು ಶತಮಾನಗಳಿಂದ ಅರಸರು ತಮ್ಮ ಹಿರಿಮೆ ಗರಿಮೆಗಳಿಂದ ಬೆಳೆದಿದ್ದಾರೆ. ಅದಕ್ಕೆ ಕಾರಣವೇನೆಂದರೆ ಅವರ ಅಧಿಕಾರ ವರ್ಗ, ಸೇವಕ ವರ್ಗದವರುಗಳ ಪ್ರಾಮಾಣಿಕತೆ, ಸ್ವಾಮಿನಿಷ್ಠೆಗಳ ಪ್ರತಿರೂಪವಾಗಿದ್ದು ರಾಜ್ಯದ ಪ್ರಗತಿಗೆ, ಯಶಸ್ಸಿಗೆ ಕಾರಣರಾಗಿದ್ದಾರೆ. ವಿಶೇಷವಾಗಿ ತನು-ಮನ-ಧರ್ಮಗಳನ್ನು ತ್ಯಾಗ ಮಾಡಿ ರಾಜರಿಗಾಗಿ ಹೋರಾಡಿ ಮಡಿದವರ ನೆನಪಿಗಾಗಿ ಮತ್ತು ವೀರನೊಂದಿಗೆ ಆತ್ಮಾಹುತಿಗೆ ಸಿದ್ಧಳಾಗಿ ಸಹಗಮನ ಮಾಡಿರುವ ಗಂಡರೊಂದಿಗೆ ದೀಕ್ಷೆ ವಹಿಸಿ ಮರಣ ಎದುರಿಸಿದ ವೀರವನಿತಯರನ್ನು ಸಹ ಕಾಣುತ್ತೇವೆ. ಇಂತಹ ಸನ್ನಿವೇಶಕ್ಕೆ ಸಂದರ್ಭಕ್ಕೆ ಪೂರಕವಾಗಿ ವೀರಗಲ್ಲು ಮತ್ತು ಮಾಸ್ತಿಕಲ್ಲು ಮತ್ತು ಶಾಸನ ಕಲ್ಲುಗಳನ್ನು ಕಾಣುತ್ತೇವೆ. ಈ ಹಿನ್ನೆಲೆಯಿಂದ ಅಂದಿನ ಕಾಲಕ್ಕೆ ಪೂರಕವಾಗಿ ಸುತ್ತೂರು ಗ್ರಾಮದಲ್ಲೂ ಸಹ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಅವಶೇಷಗಳು ಕಂಡುಬರುತ್ತಿವೆ.

ಮಾಸ್ತಿಕಲ್ಲು ಅಥವಾ ಒಕ್ಕೈ ಮಾಸ್ತಿಕಲ್ಲು

ಪತಿಯು ಕಾರಣಾಂತರಗಳಿಂದ ಮಡಿದಾಗ ಅವನ ಸತಿಯೂ ಕೂಡ ಬೆಂಕಿಗೆ ಬಿದ್ದು ಪ್ರಾಣವನ್ನು ಅರ್ಪಿಸುತ್ತಿದ್ದಳು. ಇದನ್ನೇ ಸಹಗಮನೆಚಿದು ಕರೆಯಲಾಗುತ್ತದೆ. "ಸಹಗಮನವನ್ನು

ಮಾಡಿ ಮಹಾಸತಿಯರಾದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ" ಮಾಸ್ತಿಕಲ್ಲುಗಳು[೧೦]. ಸಾಮಾನ್ಯವಾಗಿ ಮಾಸ್ತಿಕಲ್ಲುಗಳ ಮೇಲೆ ಎತ್ತಿದ ತೋಳಿನ ಸ್ತ್ರೀಯ ಚಿತ್ರವಿರುತ್ತದೆ. ಸ್ತ್ರೀಯ ತಲೆಯ ಹಿಂದೆ ಬೆಂಕಿಯ ಜ್ವಾಲೆಗಳನ್ನು ಕೊರೆದಿರುವುದುಂಟು. ಮಾಸ್ತಿಕಲ್ಲುಗಳ ಮೇಲಿನ ತೋಳುಗಳು ಸಹಗಮನವನ್ನು ಮಾಡಿದ ಸ್ತ್ರೀಯರ ಬೆರಳುಗಳ ಪಡಿಯಚ್ಚಾಗಿದ್ದರೂ ಇರಬಹುದು. ಮಹಾಸತಿಯ ಬಲಗೈ ಶುಭದ, ಸೌಭಾಗ್ಯದ, ಧನ್ಯಜೀವನದ ಸಂಕೇತ ಎಂದು ಖ್ಯಾತ ಸಂಶೋಧಕರಾದ ಡಾ. ಎಂ.ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸುತ್ತೂರಿನಲ್ಲಿರುವ ಒಕ್ಕೈ ಮಾಸ್ತಿಕಲ್ಲನ್ನು ವಿಶ್ಲೇಷಣೆಗೆ ಒಳಪಡಿಸಬೇಕು.

ಮಹಾಸತಿಕಲ್ಲು ಅಥವಾ ಮಾಸ್ತಿಕಲ್ಲು ಸುತ್ತೂರಿನಲ್ಲಿ ದೊರೆತಿದ್ದು ಇದು ವೀರ (ಗಂಡ) ಯುದ್ಧದಲ್ಲಿ ಮಡಿದ ನಂತರ ಅವನ ಹೆಂಡತಿಯು ಸಹ ಮರಣ ಹೊಂದಿರುವುದು ಇದರಿಂದ ತಿಳಿದುಬರುತ್ತದೆ.

ಸುತ್ತೂರಿನಲ್ಲಿ ಒಕ್ಕೈ ಮಾಸ್ತಿಕಲ್ಲು ಇದ್ದು ಈ ಮಾಸ್ತಿ ಕಲ್ಲಿನಲ್ಲಿ ಕಂಬವನ್ನು ತೋರಿಸಿ ಒಂದು ಭಾಗದಲ್ಲಿ ಸತಿ ಕೈಯ್ಯನ್ನು ಮೇಲೆ ಎತ್ತಿ ಹಸ್ತವನ್ನು ತೋರಿಸುತ್ತಿರುವುದು ಮತ್ತು ಹಸ್ತದ ಮಧ್ಯದಲ್ಲಿ ಹಣ್ಣು ಇರುವಂತೆ ಕೆತ್ತಲಾಗಿದೆ. ಪ್ರಾಯಶಃ ಮಾದಲದ ಹಣ್ಣು ಇರಬಹುದು. ಮಹಾಸತಿಯ ಕೈಯ್ಯಲ್ಲಿ ಎರಡು ಬಳೆಗಳು ಇವೆ. ಕಂಬದ ಮೇಲೆ ಅರಳಿ ಎಲೆಯನ್ನು ಕೆತ್ತಿದ್ದು ಅದರ ಮಧ್ಯದಲ್ಲಿ ಕಮಲದ ಕೆತ್ತನೆಯೂ ಸಹ ಇದೆ. ಇನ್ನೊಂದು ಕಡೆಯೂ ಕೂಡ ಅರಳಿ ಎಲೆ ಅಥವಾ ಹೃದಯದ ಮಾದರಿಯ ಚಿತ್ರವಿರುವುದರಿಂದ ಇದು ಪ್ರೀತಿಯನ್ನು ವ್ಯಕ್ತಪಡಿಸುತ್ತದೆ ಮತ್ತು ಮತ್ತೊಂದು ಕಡೆಯಲ್ಲಿ ವೀರ ಮತ್ತು ವೀರನ ಹೆಂಡತಿಯನ್ನು ಕಾಣಬಹುದು. ಈ ಒಕ್ಕೈಮಾಸ್ತಿಕಲ್ಲನ್ನು ನೋಡಿದರೆ ಸೂರ್ಯ-ಚಂದ್ರರನ್ನು ಸಾಕ್ಷೀಕರಿಸಿರುವುದು ಕಂಡುಬರುತ್ತದೆ.

<u>೧. ವೀರಗಲ್ಲುಗಳು:</u> ಈ ವೀರಗಲ್ಲಿನಲ್ಲಿ ಮೂರು ಅಂತಸ್ತುಗಳನ್ನು ಕಾಣುತ್ತೇವೆ. ಮೊದಲನೆಯ ಅಂತಸ್ತಿನಲ್ಲಿ ಇಬ್ಬರು ಹೋರಾಟ ಮಾಡುತ್ತಿರುವಂತೆ ಕಂಡುಬರುತ್ತದೆ. ಈ ವೀರಗಲ್ಲಿನ ವಿಶೇಷತೆ ಏನೆಂದರೆ ಯುದ್ಧ ಮಾಡುತ್ತಿರುವವರು ಹೆಂಗಸರು, ಒಂದು ಕಡೆ ರಾಣಿ ಕತ್ತಿ ಹಿಡಿದು ಹೋರಾಡುತ್ತಿರುವಂತೆ ಇದೆ. ಕಂಠದಲ್ಲಿ ಸರವನ್ನು ಧರಿಸಿದ್ದಾಳೆ. ಸೊಂಟದಲ್ಲಿ ಕತ್ತಿಯನ್ನು ಸಿಕ್ಕಿಸಿಕೊಂಡಿರುವುದು ಮತ್ತು ಉಡುಪುಸುಂದರವಾಗಿ ಧರಿಸಿ ಕೊಂಡಿರುವುದರಿಂದ ಇವಳು ರಾಣಿ ಆಳರಸರ ಕುಟುಂಬಕ್ಕೆ ಸೇರಿರಬಹುದು ಎಂದು ಹೇಳಬಹುದು.

ಎರಡನೇ ಅಂತಸ್ತಿನಲ್ಲಿ ದೇವಸೂರರು ದೇವಲೋಕಕ್ಕೆ ಕರೆದುಕೊಂಡು ಹೋಗುವ ಸನ್ನಿವೇಶವಿದೆ. ಮೂರನೇ ಅಂತಸ್ತಿನಲ್ಲಿ ಅಂಜಲಿಬದ್ಧರಾಗಿ ಶಿವನ ಆರಾಧನೆ ಮಾಡುತ್ತಿರುವುದಲ್ಲದೆ ಶಿವಲಿಂಗ ಮತ್ತು ನಂದಿಯು ಸುಂದರವಾಗಿ ಮೂಡಿಬಂದಿದೆ. ಈ ಸ್ಥಳದಲ್ಲಿ ಸೇವಕನು ಕೂಡ ಕೈಮುಗಿದು ನಿಂತಿರುವುದು ಕಂಡುಬರುತ್ತದೆ. ಈ ಶಿಲ್ಪಕಲಾದೃಷ್ಟಿಯಿಂದ ಇದೊಂದು ವೀರಗಲ್ಲು ಆಗಿದ್ದರೂ ಸಹ ಮಾಸ್ತಿಕಲ್ಲು ಎಂದು ಹೇಳಬಹುದು.

೨. ಈ ವೀರಗಲ್ಲನ್ನು ನೋಡಿದಾಗ ಮಾಸ್ತಿಕಲ್ಲಿನಂತೆ ಕಂಡುಬರುತ್ತದೆ. ಏಕೆಂದರೆ ಯುದ್ಧ ಮಾಡುತ್ತಿರುವ ಸನ್ನಿವೇಶ ಕಂಡುಬರುವುದಿಲ್ಲ. ಮಹಿಳೆಯರು ಕೈಮುಗಿದು ನಿಂತಿರುವುದು ಕಂಡುಬರುತ್ತದೆ. ಅದರಿಂದ ಇದನ್ನು ಮಾಸ್ತಿಕಲ್ಲು ಎಂದು ಹೇಳಬಹುದಾಗಿದೆ. ಅಂದರೆ ಪ್ರಾಯಶಃ ಈ ರಾಣಿಯರ ಗಂಡ ಯುದ್ಧದಲ್ಲಿ ಮಡಿದಿರಬಹುದು. ಅದಕ್ಕೆ ತಾನೂ ಸಹ ಪ್ರಾಣ ಕಳೆದುಕೊಂಡಿದ್ದಾಳೆ. ಇವಳ ನೆನಪಿಗೋಸ್ಕರ ಅಂದು ಈ ಮಾಸ್ತಿಕಲ್ಲನ್ನು ನಿಲ್ಲಿಸಿರುತ್ತಾರೆ. ಮೇಲ್ಭಾಗದಲ್ಲಿ ಶಿವಲಿಂಗ, ನಂದಿ, ಸೇವಕ ಮತ್ತು ಸ್ತ್ರೀಯೊಬ್ಬಳು ಲಿಂಗಪೂಜೆ ಮಾಡುವ ಉಬ್ಬುಶಿಲ್ಪ ಈ ಕಲ್ಲಿನಲ್ಲಿ ಮೂಡಿಬಂದಿದೆ.

೩. ಈ ವೀರಗಲ್ಲು ಮೂರು ಅಂತಸ್ತುಗಳನ್ನು ಹೊಂದಿದ್ದು ಕೆಳಭಾಗದಲ್ಲಿ ಇಬ್ಬರು ವೀರರು ಹೋರಾಡುತ್ತಿರುವ ಉಬ್ಬುಶಿಲ್ಪ ಇದೆ. ಅದರಲ್ಲಿ ಒಬ್ಬ ವೀರ ಸುಂದರವಾದ ವಸ್ತ್ರಗಳನ್ನು ಧರಿಸಿದ್ದು ವೀರನಂತೆ ಆಥವಾ ರಾಜನಂತೆ ಕಂಡುಬರುತ್ತಾನೆ. ಮತ್ತೊಬ್ಬ ಸರಳವಾಗಿದ್ದಾನೆ. ಅದರಿಂದ ಎದುರಾಳಿಯು ಸಾಮಾನ್ಯ ಎಂದು ಹೇಳಬಹುದು. ಇವರು ಒಬ್ಬರಿಗೊಬ್ಬರು ಕೈಹಿಡಿದು ಹೋರಾಟ ಮಾಡುತ್ತಿದ್ದಾರೆ. ಇವರಲ್ಲಿ ಒಬ್ಬ ಹೋರಾಟದಲ್ಲಿ ಮರಣ ಹೊಂದಿದ ವೀರನನ್ನು ಸುಂದರಿಯರು ಆತನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ಸನ್ನಿವೇಶವನ್ನು ಕಾಣಬಹುದಾಗಿದೆ. ಮೂರನೇ ಅಂತಸ್ತಿನಲ್ಲಿ ಅಂಜಲಿಬದ್ಧನಾಗಿ ಶಿವಲಿಂಗಕ್ಕೆ ಮತ್ತು ನಂದಿಗೆ ಪೂಜೆ ಮಾಡುತ್ತಿರುವ ದೃಶ್ಯವನ್ನು ಚಿತ್ರ ಕಲಾವಿದ ಈ ವೀರಗಲ್ಲಿನಲ್ಲಿ ಸುಂದರವಾಗಿ ಕೆತ್ತಿದ್ದಾನೆ.

೪. ಇದೊಂದು ಸುಂದರವಾದ ವೀರಗಲ್ಲು, ಏಕೆಂದರೆ ಇಬ್ಬರು ವೀರರೂ ಸಹ ಯುದ್ಧದಲ್ಲಿ ತೊಡಗಿರುವುದು ಕಂಡುಬರುತ್ತದೆ. ಈ ಚಿತ್ರಕಲೆಯನ್ನು ಗಮನಿಸಿದರೆ ಇವರಿಬ್ಬರು ವೀರರೇ ಹೊರತು ರಾಜರಲ್ಲ ಎಂಬುದು ಗೊತ್ತಾಗುತ್ತದೆ. ಏಕೆಂದರೆ ರಾಜನಿಗೆ ಇರಬೇಕಾಹ ಲಕ್ಷಣಗಳು ಈ ವೀರಗಲ್ಲಿನಲ್ಲಿ ಕಾಣಬರುವುದಿಲ್ಲ. ಒಟ್ಟಾರೆಯಾಗಿ ಯೋಚನೆ ಮಾಡಿದರೆ ರಾಜರುಗಳ ಪರವಾಗಿ ಇಬ್ಬರು ಹೋರಾಟವನ್ನು ಮಾಡುತ್ತಿರುವುದು ಸತ್ಯವೆಂದು ಹೇಳಬಹುದು. ಎರಡನೇ ಅಂತಸ್ತಿನಲ್ಲಿ ಒಬ್ಬ ವೀರ ಮಡಿದ ನಂತರ ಸ್ವರ್ಗಕ್ಕೆ ಇಬ್ಬರು ಕರೆದುಕೊಂಡು ಹೋಗುತ್ತಿರುವಂತೆ ಕಂಡುಬರುತ್ತಿದೆ. ಮೂರನೇ ಅಂತಸ್ತಿನಲ್ಲಿ ಅಂಜಲಿಬದ್ಧನಾಗಿ ಶಿವನಿಗೆ ಪೂಜೆ ಸಲ್ಲಿಸುತ್ತಿರುವುದು ಕಂಡುಬರುತ್ತಿದೆ. ಒಟ್ಟಾರೆಯಾಗಿ ಶಿಲ್ಪಕಲಾ ದೃಷ್ಟಿಯಿಂದ ನೋಡುವುದಾದರೆ ಸೂರ್ಯ-ಚಂದ್ರರ ಸಾಕ್ಷಿಯಾಗಿ ಯುದ್ಧದಲ್ಲಿ ಮರಣ ಹೊಂದಿದ ಪ್ರಯುಕ್ತ ಈ ವೀರಗಲ್ಲನ್ನು ಸುತ್ತೂರಿನಲ್ಲಿ ಸ್ಥಾಪಿಸಿದ್ದಾರೆಂದು ತಿಳಿಯಬಹುದಾಗಿದೆ.

<u>ಅಡಿಟಿಪ್ಪಣಿಗಳು</u>

೧. ಎ.ಕ.ಸಂ. III , ನಂ.ಗೂ.೨೧೫ ಪುಟಗಳು ೩೧೧,-೩೧೨

೨. ಎ.ಕ.ಸಂ. III, ನಂ.ಗೂ.೨೧೭ ಪುಟ ೩೧೪

೩. ಎ.ಕ.ಸಂ. III, ನಂ.ಗೂ.೨೩೫ ಪುಟಗಳು ೩೨೩-೩೨೪

೪. ಅದೇ

೫. ಎ.ಕ.ಸಂ. III, ನಂ.ಗೂ.೨೧೫ ಮತ್ತು ೨೩೫, ಪುಟಗಳು ೩೧೧-೩೧೨ ಮತ್ತು ೩೨೩-೩೨೪

೬. ಎ.ಕ.ಸಂ. III, ನಂ.ಗೂ.೨೩೬ ಪುಟಗಳು ೩೨೫

೭. ಡಾ.ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ ೨೪೩, ೧೯೯೭

೮. ಡಾ. ಡಿ.ವಿ.ಪರಶಿವಮೂರ್ತಿ, ಕನ್ನಡ ಶಾಸನಶಿಲ್ಪ, ಪುಟ ೭೭, ೧೯೯೯

೯. ಡಾ.ಎಚ್.ತಿಪ್ಪೇರುದ್ರಸ್ವಾಮಿ, ಪೂರ್ವೋಕ್ತ, ಪುಟ ೨೪೪, ೧೯೯೭

೧೦. ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಶಾಸನದ ಸಾಂಸ್ಕೃತಿಕ ಅಧ್ಯಯನ, ಪುಟ ೩೧೮, ೧೯೬೬

೧೧. ಡಾ.ಎಂ.ಚಿದಾನಂದಮೂರ್ತಿ, ಅದೇ, ಪುಟ ೩೧೮, ೧೯೬೬

ಅಧ್ಯಾಯ ೬

ಸುತ್ತೂರಿನ ವಸ್ತುಸಂಗ್ರಹಾಲಯ

ಒಂದು ನಾಡಿನ ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ಪರಂಪರೆಯನ್ನು ಬಿಂಬಿಸುವಲ್ಲಿ ವಸ್ತುಸಂಗ್ರಹಾಲಯ(ಮ್ಯೂಸಿಯಂ)ಗಳ ಪಾತ್ರ ಮಹತ್ತರವಾದದ್ದು.

ಸುತ್ತೂರು ಶ್ರೀಮಠದ ಲಿಂಗೈಕ್ಯ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಆಶಯದಂತೆ ೦೨.೦೨.೨೦೦೦ರಂದು ಈಗಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾಂಸ್ಕೃತಿಕ ಆಶಯದ ಫಲವಾಗಿ ಸ್ಥಾಪನೆಗೊಂಡಿತು.

ವಸ್ತುಸಂಗ್ರಹಾಲಯಕ್ಕೆ ಜೀವಕಳೆ ಬರುವುದೇ ವಸ್ತುಗಳಿಂದ, ಅವುಗಳು ಹಳೆಯದಾದಷ್ಟೂ ಅಮೂಲ್ಯವೆನಿಸುತ್ತದೆ. ಗತಕಾಲದ ಬದುಕನ್ನು ಬಿಂಬಿಸುತ್ತಿವೆ. ನಮ್ಮ ಪೂರ್ವಿಕರ ಆಚಾರ-ವಿಚಾರಗಳು, ರೂಢಿ-ಸಂಪ್ರದಾಯಗಳು, ದುಃಖ-ದುಮ್ಮಾನಗಳು ಒಂದೊಂದು ವಸ್ತುವಿನಲ್ಲಿಯೂ ಅಡಗಿಕೊಂಡಿರುತ್ತವೆ. ಅವುಗಳು ಹೇಳುವಂತೆ ವೀರಗಾಥೆಗಳು ನಮ್ಮ ನರನಾಡಿಗಳಲ್ಲಿ ವಿದ್ಯುತ್ ಸಂಚಾರ ಉಂಟುಮಾಡದಿರವು. ಅವುಗಳಲ್ಲೆ ಕೆಲವು ಮೌನವಾಗಿ ಮಾತನಾಡುತ್ತವೆ, ನಗಿಸುತ್ತವೆ, ನಲಿಸುತ್ತವೆ.

೧೯೯೫ರಿಂದ ಸುತ್ತೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಸ್ತು ಸಂಗ್ರಹಣಾ ಕಾರ್ಯ ನಡೆಯಿತು. ಈ ಕಾರ್ಯದಲ್ಲಿ ಶ್ರೀ ಮ.ಗು. ಬಸವಣ್ಣ ಮತ್ತು ಶ್ರೀ ಎಸ್. ನಂಜುಂಡಸ್ವಾಮಿಯವರ ಪಾತ್ರ ಅಮೋಘವಾದುದು. ಇವರಿಂದ ಸಂಗ್ರಹಿಸಲ್ಪಟ್ಟ ವಸ್ತುಗಳನ್ನು ವಿಂಗಡಿಸಿ, ವ್ಯವಸ್ಥಿತವಾಗಿ ಪ್ರದರ್ಶಿಸುವ ಕಾರ್ಯಕ್ಕೆ ಚಿತ್ರ ಕಲಾವಿದ ಪಿ.ಆರ್. ತಿಪ್ಪೇಸ್ವಾಮಿಯವರ ಮಾರ್ಗದರ್ಶನ ದೊರೆಯಿತು. ಮೊದಲು ಶ್ರೀ ಶಿವರಾತ್ರೀಶ್ವರ ಗದ್ದಿಗೆಯ ನೆಲಮಾಳಿಗೆಯಲ್ಲಿದ್ದ ವಸ್ತು ಸಂಗ್ರಹಾಲಯ ಸ್ಥಳಾಂತರಗೊಂಡು ಊರಿನ ಒಳಗೆ ಹಳೆಮಠದ ಹತ್ತಿರದ ದಾಸೋಹ ಭವನದಲ್ಲಿ ಇದೆ.

ವಸ್ತು ಸಂಗ್ರಹಾಲಯಕ್ಕೆ ಪ್ರವೇಶಿಸುತ್ತಿದ್ದಂತೆಯೇ ಶ್ರೀಮಠದ ಆದಿಜಗದ್ಗುರುಗಳ ಮೂರ್ತಿಯ ದರ್ಶನವಾಗುತ್ತದೆ. ಮೂರ್ತಿಯ ಎಡಭಾಗದ ಕಪಾಟಿನಲ್ಲಿ ಶ್ರೀಮಠದ ೨೨ನೇ ಗುರುಗಳಾಗಿದ್ದ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳವರು ಧರಿಸುತ್ತಿದ್ದ ಉಡುಪುಗಳು, ಪಾದುಕೆಗಳು, ಚರ್ಮದ ಹಾವುಗೆಗಳು, ಪೂಜಾಪೆಟ್ಟಿಗೆ, ಇವೆಲ್ಲಕ್ಕಿಂತ ಮಿಗಿಲಾಗಿ ಶ್ರೀಗಳು ಬರೆದಿರುವ ಪ್ರಣವ ಪಂಚಾಕ್ಷರಿ ಮಂತ್ರದ ಪ್ರತಿಗಳನ್ನು ನೋಡಬಹುದು.

ಶ್ರೀ ಶಿವರಾತ್ರೀಶ್ವರರ ಬಲಭಾಗದ ಗಾಜಿನ ಕಪಾಟಿನಲ್ಲಿ ಶ್ರೀಮಠದ ೨೩ನೇ ಜಗದ್ಗುರುಗಳಾಗಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಬಳಸುತ್ತಿದ್ದ ವಸ್ತು ವಿಶೇಷಗಳು, ಧರಿಸುತ್ತಿದ್ದ ವಸ್ತುಗಳಾದ ಬೆಳ್ಳಿ ಬೆತ್ತ, ಕರಕಮಲ, ಹಾವುಗೆಗಳು, ದಿನಚರಿ ಪುಸ್ತಕಗಳು, ಕನ್ನಡಕ, ಶ್ರೀಗಳಿಗೆ ಮೈಸೂರು ವಿಶ್ವವಿದ್ಯಾಲಯ ಪ್ರಧಾನಿಸಿರುವ ಗೌರವ ಡಾಕ್ಟರೇಟ್ ಪ್ರಮಾಣಪತ್ರ

ಮೊದಲಾದವುಗಳನ್ನು ನೋಡಬಹುದು. ಹಾಗೆಯೇ ಮುಂದೆಹೋದರೆ ಶ್ರೀಮಠದ ಹಿಂದಿನ ಗುರುಗಳು ಉಪಯೋಗಿಸುತ್ತಿದ್ದ ಪೀಠಗಳು, ಪಲ್ಲಂಗಗಳು, ಕುರ್ಚಿ–ಮೇಜುಗಳು, ಬೀಟೆ ಮರದಿಂದ ಮಾಡಿದ ಕುಸರಿ ಕೆತ್ತನೆಯ ಸೋಫಾ ಕುರ್ಚಿಗಳು ಇವೆ.

ಕಪಾಟೊಂದರಲ್ಲಿ ನೂರಾರು ಓಲೆಗರಿಗಳ ಕಟ್ಟುಗಳು ಒಪ್ಪಓರಣವಾಗಿ ಪ್ರದರ್ಶಿಸಲ್ಪಟ್ಟಿವೆ. ಜ್ಯೋತಿಷ್ಯ, ಆಯುರ್ವೇದ, ಗೋವೈದ್ಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಓಲೆಗರಿಗಳಲ್ಲದೇ ಜೈಮಿನಿ ಭಾರತ, ನಳಚರಿತ್ರೆ, ಗಿರಿಜಾಕಲ್ಯಾಣ, ನೇಮಿಚಂದ್ರ ಪುರಾಣ ಮೊದಲಾದ ಕೃತಿಗಳ ಹಸ್ತಪ್ರತಿಗಳಿವೆ. ವಿವಿಧ ರೀತಿಯ ಬರಹ, ಚಿತ್ರ ವಿಶೇಷಗಳಿಂದ ರಚಿಸಲ್ಪಟ್ಟಿರುವ ಓಲೆಗರಿಗಳು, ಲಿಪಿಕಾರರ ಕಲಾಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಸಂಗ್ರಹಿಸಲ್ಪಟ್ಟಿರುವ ನೂರಾರು ಓಲೆಗರಿಗಳನ್ನು ಸಂಶೋಧಕರಿಂದ ಅಧ್ಯಯನ ಮಾಡಿಸಿ ಅಪ್ರಕಟಿತ ಕೃತಿಗಳೇನಾದರೂ ಲಭ್ಯವಾದರೆ ಅಂತಹ ಕೃತಿಗಳನ್ನು ಪ್ರಕಟಿಸಬೇಕಾದ ಅವಶ್ಯಕತೆ ಇದೆ.

ಓಲೆಗರಿಗಳನ್ನು ನೋಡಿ ಮುಂದೆ ಹೋದರೆ ಹತ್ತಾರು ಹಸ್ತಪ್ರತಿಗಳಿರುವ ಕಪಾಟು ಎದುರಾಗುತ್ತದೆ. ಓಲೆಗರಿಗಳ ನಂತರದ ಬರವಣಿಗೆ ಹೇಗೆ ಮುಂದುವರೆಯಿತು ಎಂಬುದನ್ನು ನಾವಿಲ್ಲಿ ಗಮನಿಸಬಹುದು. ನೂರಾರು ವರ್ಷಗಳಷ್ಟು ಹಳೆಯದಾದ ಕಾಗದ, ಬರವಣಿಗೆಯ ಲಿಪಿಗಳು, ಶೈಲಿ, ಬರೆಯಲು ಬಳಸಿದ್ದ ಮಸಿ ಇವೆಲ್ಲ ಅಚ್ಚರಿ ಮೂಡಿಸಿವೆ. ಬಳಿಯ ಬಟ್ಟೆಗೆ ಕಪ್ಪನೆಯ ಕಷಾಯವನ್ನು ಲೇಪಿಸಿ ಕಪ್ಪುಹಾಳೆಗಳ ಮಡಿಕೆಗಳಲ್ಲಿ ಹಿಂದಿನ ಜನ ತಮ್ಮ ದಿನನಿತ್ಯದ ವ್ಯಾಪಾರ ಕ್ರಮ ವ್ಯವಹಾರ ಅಥವಾ ಯಾವುದೇ ವಿಷಯಗಳನ್ನು ದಾಖಲಿಸಲು ಸ್ವತಃ ತಯಾರು ಮಾಡಿಕೊಳ್ಳುತ್ತಿದ್ದ ಕಡತಗಳನ್ನು ನಾವಿಲ್ಲಿ ಕಾಣಬಹುದು. ಅಲ್ಲದೇ ಕೃತಿಗಳನ್ನು ವಾಚನ ಮಾಡುವಾಗ ಬಳಸುತ್ತಿದ್ದ ವ್ಯಾಸಪೀಠಗಳು, ಓಲೆಗರಿಗಳಲ್ಲಿ ಲಿಪಿಗಳನ್ನು ಕೊರೆಯಲು ಉಪಯೋಗಿಸುತ್ತಿದ್ದ ಕಂಠಗಳನ್ನು ನೋಡಬಹುದು.

ಮುಂದಿನ ಕಪಾಟಿನಲ್ಲಿ ಪೂಜಾಪರಿಕರಗಳನ್ನು ಹೊತ್ತು ನಿಂತಿರುವ ಕಪಾಟು ತನ್ನಲ್ಲಿರುವ ಮರದ ಪೂಜಾ ತಟ್ಟೆ, ಗಂಧದ ಕರಡಿಗೆ, ಮಯೂರಾರತಿ, ತೂಗುದೀಪ, ವಿವಿಧ ಗಾತ್ರದ ಗಂಟೆಗಳು, ಪಂಚಪತ್ರೆಗಳು, ನೀರಿನ ಮಿಳ್ಳೆಗಳು, ವಿಭೂತಿ ಕರಂಡಕ, ಕುಂತಿ ಕಲ್ಲುಗಳು, ಕುಂಕುಮದ ಭರಣಿ, ಮರದ ಗಾಲಿ, ಕರಂಡಕಗಳು, ಒಂದೇ ಮರದಿಂದ ತಯಾರಿಸಲ್ಪಟ್ಟಿರುವ ಚಿತ್ತಾಕರ್ಷಕ ತೆವಟಿಗೆ, ಅಕ್ಷತೆ ಬಟ್ಟಲು ಮೊದಲಾದವುಗಳು ಇಲ್ಲಿವೆ.

ಮುಂದಿನ ಕಪಾಟಿನಲ್ಲಿ ನಿತ್ಯಬಳಕೆಯ ವಸ್ತುಗಳಿವೆ. ವಿವಿಧ ಮರದ ಕಂಚಿನ ದೀಪಗಳು, ಹಾಲು ಕರೆಯುವ ಹಿತ್ತಾಳೆ ಹಂಡೆ, ಲೋಟಗಳು, ಪೀಕುದಾನಿಗಳು, ವಿವಿಧ ಗಾತ್ರದ ಕಂಚಿನ ತಪ್ಪಲೆಗಳು, ಮದುವೆ ಮನೆಗಳಲ್ಲಿ ಸಾಂಬಾರು ಬಡಿಸಲು ಬಳಸುತ್ತಿದ್ದ ಗೋಮುಖ, ಕಂಚಿನ ಹರಿವಾಣ, ತಾಂಬಾಣ ಮೊದಲಾದ ವಸ್ತುಗಳೆಲ್ಲಾ ಅಲ್ಲಿ ಅಡಕವಾಗಿವೆ. ಹಿಂದಿನ ಕಾಲದ ವಸ್ತುಗಳ ಗುಣಮಟ್ಟ ಮತ್ತು ಗಟ್ಟಿಮುಟ್ಟುತನವನ್ನು ಅವು ಎತ್ತಿ ಹಿಡಿಯುತ್ತವೆ.

ಮುಂದಿನ ಕಪಾಟಿನಲ್ಲಿ ೧೯೩೫ನೇ ಇಸವಿಯ ಲೋಹದ ಸೌಟೊಂದು ಕಂಡುಬರುತ್ತವೆ. ವಿವಿಧ ಮಾದರಿಯ ಮರದ ಸೌಟುಗಳು ಅಲ್ಲಿವೆ. ಚಕ್ಕುಲಿ ಒರಳು, ಶಾವಿಗೆ ಒರಳು, ದೀಪ ಇಡಲು ಬಳಸುತ್ತಿದ್ದ ತಿರುಗುಣಿಗಳು, ಹಪ್ಪಳದ ಗುಂಡುಗಳು ಅಲ್ಲಿ ಜಾಗ ಗಿಟ್ಟಿಸಿಕೊಂಡಿವೆ.

ಹಾಗೆ ಮುಂದೆಹೋದರೆ ಅಲ್ಲಿನ ಕಪಾಟಿನಲ್ಲಿ ಮಕ್ಕಳ ಆಟಿಕೆಗಳದೇ ಮೇಲಾಟ. ಮಕ್ಕಳಿಗೆ ಮನರಂಜನೆ ಜೊತೆಗೆ ಅವರ ಬುದ್ಧಿಗೆ ಕಸರತ್ತು ನೀಡುವ ವಿವಿಧ ಕಲಾಕೌಶಲಗಳನ್ನು ಬೆಳೆಸುವಂಥ ವಿವಿಧ ಮಾದರಿಯ ಹರಳು ಗುಳಿಮಣೆಗಳು, ಗಿಲಕಿಗಳು, ಗಾಳಿಬಸವ, ಆನೆ, ಕುದುರೆ ಸವಾರ, ಮರದಿಂದ ಮಾಡಿದ ರಾಗಿಕಲ್ಲು, ದೇವತಾಮೂರ್ತಿಗಳು, ಸಂದೂಕುಗಳು ಮೊದಲಾದ ವಸ್ತುಗಳನ್ನು ಗಮನಿಸಿದರೆ ನಮ್ಮ ಪೂರ್ವಿಕರು ಎಳೆಯ ಮಕ್ಕಳಿಗೆ ಆಟಗಳ ಮೂಲಕವೇ ಜೀವನ ಪಾಠವನ್ನು ಕಲಿಸುತ್ತಿದ್ದ ವಿಧಾನಗಳನ್ನು ಕೇಳಿದರೆ ಅವರ ಬಗ್ಗೆ ಮತ್ತಷ್ಟು ಗೌರವ ಭಾವನೆ ಮೂಡದಿರದು.

ಚಾಕು, ಬಾಕು, ಗುದ್ದುಬಾಕು, ಮರಗತ್ತಿ, ವೀರಗತ್ತಿ, ಗುರಾಣಿ, ಸಾಣೆಯುಂಗುರ, ಭರ್ಜಿ, ಪರಶು, ನಾಡಬಂದೂಕು, ಬಲಿಮಚ್ಚು ಮೊದಲಾದ ನಾನಾ ಬಗೆಯ ಆಯುಧಗಳು ಕಪಾಟೊಂದರಲ್ಲಿವೆ. ಸೂತ್ರದ ಗೊಂಬೆಗಳು ಬದುಕಿನ ಮರ್ಮವನ್ನೇ ತೆರೆದಿಡುತ್ತವೆ. ಅಂತೆಯೇ ಯಕ್ಷಗಾನದ ವಿವಿಧ ಪಾತ್ರಧಾರಿಗಳು ಧರಿಸುವ ಕಿರೀಟಗಳು ಭುಜಕೀರ್ತಿ, ಎದೆಪದಕ, ಕಂಠಿಹಾರ, ನಡುಪಟ್ಟಿ, ಸ್ತ್ರೀಪಾತ್ರಧಾರಿಗಳು ಬಳಸುತ್ತಿದ್ದ ಜಡೆಬಿಲ್ಲೆ ಮೊದಲಾದ ವಸ್ತುಗಳು ಆಕರ್ಷಣೀಯವಾಗಿವೆ.

ಕೃಷಿ ಸಲಕರಣೆಗಳು ಮತ್ತು ಅಳತೆಯ ಸಾಧನಗಳು ಮುಂದಿನ ಕಪಾಟಿನಲ್ಲಿವೆ. ದನಕರುಗಳಿಗೆ ಔಷಧ ಕುಡಿಸಲು ಬಳಸುತ್ತಿದ್ದ ಕೊಟ್ಟೆ, ಕಡೆಗುಂಟೆ, ನೊಗ, ವಿರನಳಿ ಮೊದಲಾದ ವಸ್ತುಗಳೊಂದಿಗೆ ಸೇರು ಪಾವು, ಚಟಾಕು, ಬಳ್ಳ, ಕೊಳಗ ಮೊದಲಾದ ಮಾಪನಗಳಿವೆ.

ತೊಗಲುಗೊಂಬೆಗಳನ್ನು ಪ್ರದರ್ಶಿಸಿರುವ ದೊಡ್ಡಗಾತ್ರದ ಪಟ್ಟಿಕೆಗಳು ಮುಂದಿನವು. ಅದರ ನಂತರದ ವಸ್ತುಗಳೇ ಧರ್ಮಸ್ಥಳದ ಧರ್ಮಾಧಿಕಾರಿಗಳಾದ, ಮಂಜೂಷಾ ವಸ್ತುಸಂಗ್ರಹಾಲಯದ ರೂವಾರಿಗಳಾದ ಶ್ರೀ ಡಿ.ವೀರೇಂದ್ರ ಹೆಗ್ಗಡೆಯವರು ನೀಡಿರುವ ಕ್ಯಾಮರಾಗಳೂ ಅಲ್ಲದೆ ಭೂತಾರಾಧನೆಗೆ ಸಂಬಂಧಿಸಿದ ವಿವಿಧ ಮೂರ್ತಿಗಳಿವೆ.

ದೇಶೀಯ ಮತ್ತು ವಿದೇಶೀಯ ನೋಟು-ನಾಣ್ಯಗಳ ಸಂಗ್ರಹ ಮತ್ತು ಹಣ ಪ್ರಪಂಚವನ್ನೇ ತೆರೆದಿಡುತ್ತದೆ. ಮುಂದೆ ಹೋದರೆ ಚುಕ್ಕೆ ಚಿತ್ರಗಳು, ಕಾಗಡಿಗಳು, ವಿವಿಧ ಮಾದರಿಯ ಚರಕಗಳು, ಬಡಗಿ ಸಲಕರಣೆಗಳು, ಊರುಗೋಲುಗಳು, ದಿವಾನಗಿರಿಗಳು, ಗಂಜೀಫಾ ಚಿತ್ರಗಳು ಹೀಗೆ ಅನೇಕ ವಸ್ತುಗಳು ಈ ಸಂಗ್ರಹಾಲಯದಲ್ಲಿವೆ.

ಒಟ್ಟಾರೆ ಈ ವಸ್ತುಸಂಗ್ರಹಾಲಯ ಸುತ್ತೂರು ಹಾಗೂ ಶ್ರೀಮಠದ ಸಾಂಸ್ಕೃತಿಕ ಕೊಡುಗೆಯನ್ನು ಹಾಗೂ ಇಲ್ಲಿನ ಗ್ರಾಮೀಣ ಬದುಕಿನ ಸಂಸ್ಕೃತಿಯನ್ನು ಜಗತ್ತಿಗೆ ಸಾರುತ್ತಿದೆ.

ಅಧ್ಯಾಯ ೭

ಉಪಸಂಹಾರ

"ಸುತ್ತೂರು: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯವನ್ನು ಈ ನಿಬಂಧದಲ್ಲಿ ಚರ್ಚಿಸಲಾಗಿದೆ. ಸುತ್ತೂರು ಇಂದು ಹಳ್ಳಿಯಾಗಿ ಕಂಡುಬಂದರೂ ಕೂಡ ಪ್ರಾಚೀನ ಕಾಲದಲ್ಲಿ ಒಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿತ್ತು ಎಂಬುದು ಆಧಾರಗಳಿಂದ ತಿಳಿದುಬರುತ್ತದೆ. ಆ ಹಿನ್ನೆಲೆಯಲ್ಲಿ ಸುತ್ತೂರನ್ನು ಸಂಶೋಧನೆಗೆ ಒಳಪಡಿಸಿ ಸಾಂಸ್ಕೃತಿಕ ಆಯಾಮಗಳನ್ನು ಪತ್ತೆಹಚ್ಚುವುದು ಈ ನಿಬಂಧದ ಉದ್ದೇಶವಾಗಿದೆ.

ಈ ನಿಬಂಧದಲ್ಲಿ ಚರ್ಚಿಸಿರುವ ವಿಷಯಗಳಿಗೆ ಶಿಲಾಶಾಸನಗಳು, ತಾಮ್ರ ಶಾಸನಗಳು, ಗ್ರಂಥ ಮತ್ತು ಲೇಖನಗಳು, ಮೈಸೂರು ಪ್ರಾಚ್ಯವಸ್ತು ಇಲಾಖೆಯ ವರದಿಗಳು, ಸ್ಥಳನಾಮಗಳು, ಸನ್ನದುಗಳು, ಧಾರ್ಮಿಕ ಗ್ರಂಥಗಳು, ಕಾವ್ಯಗಳು, ಕಾಗದಪತ್ರಗಳು ಹೀಗೆ ವಿಭಿನ್ನ ಮೂಲಗಳಿಂದ ಮಾಹಿತಿಗಳನ್ನು ಕಲೆಹಾಕಲಾಗಿದೆ. ಈ ಸಂದರ್ಭದಲ್ಲಿ ವಿಭಿನ್ನ ಕಾಲಘಟ್ಟದಲ್ಲಿ ಸುತ್ತೂರನ್ನು ಆಳಿದ ಗಂಗ, ಚೋಳ, ಹೊಯ್ಸಳ, ವಿಜಯನಗರ, ಮೈಸೂರಿನ ಒಡೆಯರು, ಸ್ಥಳೀಯ ಪಾಳೇಗಾರರುಗಳಾದ ಉಮ್ಮತ್ತೂರು ಮತ್ತು ಹದಿನಾರು ಹೀಗೆ ಅನೇಕ ರಾಜರು ಹಾಗೂ ರಾಜವಂಶಗಳು ನಡೆಸಿದ ಆಳ್ವಿಕೆಯನ್ನು ಇಲ್ಲಿ ತಿಳಿಸುವ ಪ್ರಯತ್ನ ಮಾಡಲಾಗಿದೆ. ಮೇಲಿನ ವಿಚಾರದ ಬಗ್ಗೆ ಸಂಶೋಧನಾ ವರದಿಯನ್ನು ತಯಾರಿಸಲು, ಕ್ಷೇತ್ರಕಾರ್ಯ ಮಾಡಿ ಮೌಖಿಕವಾಗಿರುವ ವಿಚಾರ, ಜನಪದ ಸಾಹಿತ್ಯ, ಛಾಯಾಚಿತ್ರಗಳ ಸಂಗ್ರಹ ಮುಂತಾದ ಕಾರ್ಯಗಳ ಮೂಲಕ ಈ ನಿಬಂಧವನ್ನು ರಚಿಸಲಾಗಿದೆ.

ಈ ಅಧ್ಯಯನದ ವಿಷಯಗಳನ್ನು ಒಟ್ಟು ಏಳು ಅಧ್ಯಾಯಗಳನ್ನು ಮಾಡಿಕೊಂಡು ಸಂಶೋಧನಾ ನಿಬಂಧವನ್ನು ರಚಿಸಲಾಗಿದೆ. ಮೊದಲನೇ ಅಧ್ಯಾಯದಲ್ಲಿ ಪೀಠಿಕೆ, ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನಗಳನ್ನು ಹಾಗೂ ಸುತ್ತೂರಿನ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆಗಳನ್ನು ಆಧಾರಸಹಿತವಾಗಿ ಚರ್ಚಿಸಲಾಗಿದೆ. ಸುತ್ತೂರು ಬಹಳ ಹಿಂದಿನಿಂದಲೂ ಒಂದು ಸಾಂಸ್ಕೃತಿಕ ಕೇಂದ್ರವಾಗಿತ್ತು ಎಂಬುದು ಮೇಲಿನ ಅಧ್ಯಯನಗಳಿಂದ ತಿಳಿದುಬರುತ್ತದೆ. ಅಲ್ಲದೆ ಈ ಅಧ್ಯಾಯದಲ್ಲಿ ಶ್ರೀ ಶಿವರಾತ್ರೀಶ್ವರ ಮಠ ಹಾಗೂ ಅದರ ಬೆಳವಣಿಗೆ ಹಾಗೂ ಮಠದ ಪೀಠಾಧ್ಯಕ್ಷರುಗಳ ಬಗ್ಗೆ ಚರ್ಚಿಸಲಾಗಿದೆ. ಅಲ್ಲದೆ ಅವರು ಸಮಾಜಕ್ಕೆ ನೀಡಿರುವ ಕೊಡುಗೆಗಳನ್ನು (ಸಾಹಿತ್ಯ, ಶಿಕ್ಷಣ, ಧರ್ಮ, ಆಧ್ಯಾತ್ಮಿಕತೆ ಇತ್ಯಾದಿ) ಇದರಲ್ಲಿ ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸುತ್ತೂರಿನಲ್ಲಿ ದೊರೆತಿರುವ ಶಾಸನಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಸುತ್ತೂರಿನಲ್ಲಿ ದೊರೆತಿರುವ ಸುಮಾರು ೨೫ ಶಾಸನಗಳನ್ನು ಇಲ್ಲಿ ಅವಲೋಕಿಸುವ ಕೆಲಸವನ್ನು ಮಾಡಲಾಗಿದೆ. ಹೀಗೆ ಶಾಸನಗಳನ್ನು ಕುರಿತು ಅಧ್ಯಯನ ಮಾಡುವಾಗ ಸಾಂಸ್ಕೃತಿಕ

ಅಂಶಗಳಿಗೆ ಹೆಚ್ಚು ಒತ್ತನ್ನು ನೀಡಿ ಅಧ್ಯಯನ ಮಾಡಲಾಗಿದೆ. ಈ ಶಾಸನಗಳಿಂದ ಊರಿನ ಹೆಸರು, ದೇವಾಲಯ, ಜನಸಾಮಾನ್ಯರ ಆಚರಣೆ, ನೀಡಿದ ದಾನದ ಸಂಪ್ರದಾಯಗಳನ್ನು ತಿಳಿದುಕೊಳ್ಳುವ ಒಂದು ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದೆ. ಸಾಮಾಜಿಕ ಸ್ಥಿತಿ-ಗತಿಯಲ್ಲಿ ಊರಿನ ಜಾತಿ ವ್ಯವಸ್ಥೆ, ಕುಟುಂಬ ಪದ್ಧತಿ, ಸ್ತ್ರೀಯರ ಸ್ಥಿತಿಗತಿ, ವಿವಾಹ ಪದ್ಧತಿ, ಉಡುಗೆ-ತೊಡುಗೆ, ಆಭರಣಗಳು, ಆಹಾರ ಪದ್ಧತಿ, ಮನರಂಜನೆ ಕಾರ್ಯಕ್ರಮಗಳು ಹೀಗೆ ಸುತ್ತೂರು ಗ್ರಾಮದ ಜನರ ಜೀವನದ ರೀತಿ-ನೀತಿಗಳ ಬಗ್ಗೆ ಹಾಗೂ ಅವರು ತಲೆತಲಾಂತರದಿಂದ ಆಚರಿಸಿಕೊಂಡು ಬರುತ್ತಿರುವ ಹಬ್ಬಗಳು ಮತ್ತು ಉತ್ಸವಗಳನ್ನು ಕುರಿತು ಚರ್ಚಿಸಲಾಗಿದೆ. ಅಲ್ಲದೆ ಸುತ್ತೂರಿನಲ್ಲಿ ಶಿಕ್ಷಣ ಹಾಗೂ ಸಾಹಿತ್ಯದ ಬೆಳವಣಿಗೆಯನ್ನು ಕುರಿತು ಸಹ ಇದರಲ್ಲಿ ಚರ್ಚಿಸಲಾಗಿದೆ. ಸುತ್ತೂರು ಪ್ರಾಚೀನ ಕಾಲದಿಂದಲೂ ಸಹ ಒಂದು ಪ್ರಮುಖ ಶಿಕ್ಷಣ ಕ್ಷೇತ್ರವಾಗಿದ್ದು ಸಾಹಿತ್ಯದ ಬೆಳವಣಿಗೆಗೆ ಅಪಾರ ಪ್ರೋತ್ಸಾಹವನ್ನು ನೀಡಿದೆ.

ಇದೇ ಅಧ್ಯಾಯದಲ್ಲಿ ಸುತ್ತೂರಿನ ಕೃಷಿ ವ್ಯವಸ್ಥೆ ಮತ್ತು ನೀರಾವರಿ ವ್ಯವಸ್ಥೆಯನ್ನು ಕುರಿತು ಚರ್ಚಿಸುತ್ತಾ, ಇಲ್ಲಿಯ ಜನರು ಬೆಳೆಯುವ ಆಹಾರ, ವಾಣಿಜ್ಯ, ತೋಟ, ಎಣ್ಣೆಯ ಬೆಳೆಗಳನ್ನು ಕುರಿತು ಚರ್ಚಿಸಲಾಗಿದೆ. ಕೈಗಾರಿಕೆ, ಪಶುಪಾಲನೆ, ಸಲಕರಣೆಗಳು, ಅಲ್ಲದೆ ಒಂದು ಊರಿನ ಆರ್ಥಿಕ ಸ್ಥಿತಿಯ ಮೇಲೆ ನೀರಾವರಿ ಮತ್ತು ಕೃಷಿ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಕುರಿತು ಇದರಲ್ಲಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಸುತ್ತೂರಿನ ಧಾರ್ಮಿಕ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದೆ. ಜೈನ, ವೈಷ್ಣವ, ಶೈವ, ವೀರಶೈವ ಪಂಥಗಳ ಆಚರಣೆಗಳು, ಕಲ್ಯಾಣದ ನಂತರ ಸುತ್ತೂರು ಶರಣರ ತಾಣವಾದದ್ದು, ಮಹದೇಶ್ವರರು ಸುತ್ತೂರಿಗೆ ಬಂದು ರಾಗಿ ಬೀಸಿದ್ದು ಹಾಗೂ ಸುತ್ತೂರಿನ ಜನತೆ ಅನುಸರಿಸಿಕೊಂಡು ಬರುತ್ತಿದ್ದ ಧಾರ್ಮಿಕ ಸಂಪ್ರದಾಯಗಳನ್ನು ಕುರಿತು ಇದರಲ್ಲಿ ಚರ್ಚಿಸಲಾಗಿದೆ. ಜೊತೆಗೆ ಧಾರ್ಮಿಕ ಸಮನ್ವಯ ಕೇಂದ್ರವಾಗಿ ಹೇಗೆ ಸುತ್ತೂರು ಬೆಳವಣಿಗೆ ಹೊಂದಿತು ಎಂಬುದನ್ನು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಸುತ್ತೂರಿನ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಅಲ್ಲಿಯ ದೇವಾಲಯಗಳು, ವೀರಗಲ್ಲು, ಮಹಾಸತಿ ಕಲ್ಲು, ಬಿಡಿಶಿಲ್ಪಗಳು, ಶಿಲ್ಪಗಳು ಮುಂತಾದುವುಗಳನ್ನು ಕುರಿತು ಇದರಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಜೊತೆಗೆ ಸಪ್ತಮಾತೃಕೆಯರ ವಿಗ್ರಹಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಸುತ್ತೂರಿನ ಹಾಗೂ ಸುತ್ತಲಿನ ಗ್ರಾಮೀಣ ಸಂಸ್ಕೃತಿಯನ್ನು ಬಿಂಬಿಸುವಂತಹ ವಸ್ತು ಸಂಗ್ರಹಾಲಯವನ್ನು ಕುರಿತು ಚರ್ಚಿಸುತ್ತಾ ಅಲ್ಲಿರುವ ಓಲೆಗರಿಗಳು,

ಆಯುಧಗಳು, ಜನಪದೀಯ ತೊಗಲುಗೊಂಬೆ, ಆಟದ ಸಾಮಾನುಗಳು, ಗೃಹ ಹಾಗೂ ಕೃಷಿ ಉಪಯೋಗಿ ವಸ್ತು ಮುಂತಾದುವುಗಳನ್ನು ಕುರಿತು ಚರ್ಚಿಸಲಾಗಿದೆ.

ಒಟ್ಟಾರೆ ಮೇಲಿನ ಒಟ್ಟು ಆರು ಅಧ್ಯಾಯಗಳಲ್ಲೂ ಸಹ ಸುತ್ತೂರಿನ ಸಾಂಸ್ಕೃತಿಕ ಇತಿಹಾಸಕ್ಕೆ ಒತ್ತನ್ನು ನೀಡಿ ಸಂಶೋಧನಾ ನಿಬಂಧವನ್ನು ರಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಸುತ್ತೂರು : ಒಂದು ಸಾಂಸ್ಕೃತಿಕ ಅಧ್ಯಯನವನ್ನು ಮಾಡಿ ಸುತ್ತೂರಿನ ಪ್ರಾಚೀನತೆಯನ್ನು ಸ್ಪಷ್ಟಗೊಳಿಸುವ ಪ್ರಯತ್ನವನ್ನು ಇದರಲ್ಲಿ ಮಾಡಲಾಗಿದೆ. ಆ ನಿಟ್ಟಿನಲ್ಲಿ ಸುತ್ತೂರಿನ ಭೌಗೋಳಿಕ ಮತ್ತು ಐತಿಹಾಸಿಕ ಅಧ್ಯಯನವನ್ನು ಶಾಸನಗಳ ಹಾಗೂ ಇತರ ಆಧಾರಗಳಿಂದ ದೃಢಪಡಿಸುವ ಪ್ರಯತ್ನ ಇದರಲ್ಲಿ ಆಗಿದೆ. ಉದಾಹರಣೆ ಸುತ್ತೂರು ಎಂಬ ಹೆಸರು ಹೇಗೆ ಬಂತೆಂಬುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಈ ಸಂಶೋಧನೆಯನ್ನು ಕೈಗೊಂಡಿದ್ದ ಸುತ್ತೂರಿನ ಪ್ರಾಚೀನತೆ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಸುತ್ತೂರು ಶ್ರೀಮಠದ ಪ್ರಾಚೀನ ಗುರುಪರಂಪರೆ, ಸುತ್ತೂರಿನ ಶಾಸನಗಳು, ವಿಭಿನ್ನ ಕಾಲದಲ್ಲಿ ಸುತ್ತೂರಿನ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಸ್ಥಿತಿಗತಿ, ಶಿಕ್ಷಣ, ಸಾಹಿತ್ಯ, ಕೃಷಿ, ಹಬ್ಬ-ಉತ್ಸವಗಳು, ಧಾರ್ಮಿಕ ಸ್ಥಿತಿ-ಗತಿ, ಕಲೆ ಮತ್ತು ವಾಸ್ತುಶಿಲ್ಪ ಇವುಗಳನ್ನು ಕುರಿತು ಬೆಳಕು ಚೆಲ್ಲುವುದು ಈ ಅಧ್ಯಯನದ ಉದ್ದೇಶವಾಗಿದೆ. ಅಂದರೆ ಸುತ್ತೂರು ಒಂದು ಸಾಂಸ್ಕೃತಿಕ ಕ್ಷೇತ್ರವಾಗಿತ್ತು ಎಂಬುದನ್ನು ಜಗತ್ತಿಗೆ ತೋರಿಸುವುದು ಈ ಅಧ್ಯಯನದ ಉದ್ದೇಶವಾಗಿತ್ತು. ಅದನ್ನು ಈ ಸಂಶೋಧನಾ ನಿಬಂಧದಲ್ಲಿ ಪ್ರಯತ್ನಿಸಲಾಗಿದೆ. ನನ್ನ ಅಧ್ಯಯನ ಸೀಮಿತವಾಗಿರುವುದರಿಂದ ಸಂಶೋಧನಾಕಾರರು ಸುತ್ತೂರಿನ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಗಳನ್ನು ಕೈಗೊಂಡು ಇನ್ನೂ ಹಲವಾರು ವಿಷಯಗಳನ್ನು ಹೆಕ್ಕಿ ತೆಗೆಯುವ ಅವಕಾಶವಿದೆ.

ಈ ನಿಟ್ಟಿನಲ್ಲಿ ಪುರಾತತ್ವ ಇಲಾಖೆಯು ಭೂಸಂಶೋಧನೆ ಕೈಗೊಂಡರೆ ಅಥವಾ ಇನ್ನಷ್ಟು ಕ್ಷೇತ್ರ ಕಾರ್ಯ ಮಾಡಿದರೆ ಭೂಮಿಯ ಒಳಗಡೆ ಅಡಗಿರುವ ಹಾಗೂ ಕಳಚಿದ ಕೊಂಡಿಯಾಗಿರುವ ಸುತ್ತೂರಿನ ಇತಿಹಾಸಕ್ಕೆ ಒಂದು ತಿರುವನ್ನು ನೀಡಿ ಸುತ್ತೂರು ಗಂಗ, ಚೋಳ ಹಾಗೂ ಹೊಯ್ಸಳ ರಾಜಮನೆತನಗಳ ಕಾಲದಲ್ಲಿ ಪ್ರಾಂತೀಯ ಉಪರಾಜಧಾನಿಯಾಗಿತ್ತು, ಇಲ್ಲಿನ ಸಂಸ್ಕೃತಿಯು ಹೇಗೆ ಬೆಳವಣಿಗೆ ಹೊಂದಿತ್ತು ಎಂಬುದನ್ನು ಪತ್ತೆಹಚ್ಚಬಹುದಾಗಿದೆ.

ಅನುಬಂಧ – ಸುತ್ತೂರಿನ ಶಾಸನಗಳು

೧) ಎ.ಕ.ಸಂ. III ನಂ.ಗೂಡು – ೨೨೨ ಪುಟ ೩೧೭

ಸೋಮೇಶ್ವರ ದೇವಸ್ಥಾನದ ಉತ್ತರಕ್ಕೆ ನಿಂತಿರುವ ತುಂಡುಕಲ್ಲು

ಕಾಲ : ೧೦ನೇ ಶತಮಾನ
ರಾಜವಂಶ : ಗಂಗರು
ದೊರೆ : ಗಂಗದೊರೆ

೧ ದುಣ್ಣಯೋ
೨ ರಾಮ್ಬದಿಯುರ
೩ ಣೆಱರಾಟ್ಟು
೪ ದಿಕ್ಕದಾಯಥ
೫ ಇದಾಕ್ಕ ಈ ದುಗ್ಗ
೬ ಬರವಿಟ್ಟಕ್ಕೆ
೭ ನಟುದಪಂ
೮ ರದ ಧು ರೋ
೯ ...ಗ್ಗದ

೨) ಎ.ಕ.ಸಂ. III ನಂ.ಗೂಡು – ೨೧೯ ಪುಟ ೩೧೬

ಸೋಮೇಶ್ವರ ದೇವಸ್ಥಾನದ ಉತ್ತರಕ್ಕೆ ನಿಂತಿರುವ
ಇನ್ನೊಂದು ತುಂಡುಕಲ್ಲು

ಕಾಲ : ೧೦ನೇ ಶತಮಾನ
ರಾಜವಂಶ : ಗಂಗರು

೧ ಸ್ವದತ್ತಂ ತನ್ನಿತ್ತುದಕ್ಕೆ ಪರದತ್ತಂ ವಾ ಪೆ
೨ ಱಿತ್ತುದಕ್ಕೆ ಓ ಹರೇತು ಅಟುವೊ ವಸುನ್ಧ
೩ ರಿ ಭೂಮಿ ಷಷ್ಟಿವರ್ಷ ಸಹಸ್ರಾಣಿ ಅ
೪ ರವತ್ತು ಸಾಸಿರವರ್ಷ ವಿಷ್ಟಾಯಾಂ ಜಾಯ
೫ ತೆ ಕ್ರಿಮಿ ಪೇಲಪುಟುವಾಗಿ ಪುಟ್ಟುಗೆ

3) ಎ.ಕ.ಸಂ. III ನಂ.ಗೂಡು - 213 ಪುಟ 310
ಈಗ ಶಿವರಾತ್ರೀಶ್ವರ ಮಠದ ಎದುರುಗಡೆ ಇರುವ ಕಲ್ಲು

ಕಾಲ : ಕ್ರಿ.ಶ. ೧೦೧೫-೧೬
ಅದಿರಾಜವಂಶ : ಚೋಳರು
ದೊರೆ : ೧ನೇ ರಾಜೇಂದ್ರಚೋಳ

ಮುಂಭಾಗ

೧ ಒಡೈಯಾರ್ ಶ್ರೀ ಚೋಟಿ ಗಂಗದೇವರ್ಕ್ಕು ಯಾಣ್ಡು ನಾಲವತು
ಮುಡಿಗೊಣ್ಡಚೋಳಮಣ್ಡಲತ್ತುಗೊ . .
೨ ಣ್ಡಚೋಟಿವಳನಾಟ್ಟು ಇಡೈನಾಟ್ಟು ಬ್ರಹ್ಮದೇಯ ಸೊತ್ತಿಯೂರ್ಸ್ಸ್ತೂರೂರ್
೩ ಉಡೈಯಾರ್ ಶ್ರೀ ರಾಜೇನ್ದ್ರಚೋಳದೇವರ್ಗುಳದೆ ವೀರಪ್ಪಗಡಿ ಯಾನ ತಾವನಾ
೪ ಡುವೇಲಾನುಂ ಮುಞ್ಜಡಿ ಅರಿಯಂ [ಚಿ]ಮ್ಮ [ನುಕ್ಕು] ಸೋತ್ತಿಯೂರ [ಸ್ತ] ವಿಣ್ಣರ್ಕ್ಕುಳ್ಳಿಯ
೫ ಟುನ್ತರುಳಿ ಇರುಕ್ಕುಂ ದುರ್ಗ್ಗೆಯಾರ್ಕ್ಕುಂ ತಿರುವಮುತ್ತುಕ್ಕು ವಿಪನ ಚೆಯ್ಯ ಇವ
೬ ರ್ಕ್ಕಳುಕ್ಕು ನಾಂಗಳ್ಕೊಡುತ್ತ ನಿಲಮೂವತು ಇವ್ವೂರ್ಸ್ಸರ್ವ್ವದೇವ ಸೆರೆಕಿಕ್ಕು
೭ ಕಿಟಿಕ್ಕುಂಡಿಣಿಯ ಕಣ್ಡತ್ತುಕ್ಕು ಮೇರ್ಕ್ಕುಂ ವೆಲಕಲುಕ್ಕು ವಡಕ್ಕುಂ ಕಣ್ಡಿ
೮ ಕೈ ಕಾಲುಕ್ಕು ಕಿಟಕ್ಕು ಕೀಱುಂಡಿಣಿಯ ಗಣ್ಡತ್ತುಕ್ಕು ತೆರ್ಕ್ಕು ನಡುವುಳ್ವ
೯ ಟ್ಟ ನಿಲಂ ಇರಣ್ಡು ಮಾಕಾಣಿ ಇನ್ನೆಲ ಕಣ್ಡುಗಪ್ಪಡಿ ಇರು ಕಣ್ಡು
೧೦ ಗತ್ತು ಪತ್ತು ಬಳ್ಳ ಋಣ್ಣು ಇದ್ವಿರುವರ್ಕ್ಕು ನಾಂಗಳ್ವಿಟ್ಟುಕುಡುತ್ತು ಕೊ
೧೧ ಣ್ಡವಿಲೈಪ್ಪೊರುಳ ಪೊನ್ನಿರು ಕಟಿಂಜುಂ ಇಪ್ಪೊನ್ನಿರುಕಟಿಂಜುಕ್ಕುಂ ಇ
೧೨ ಮ್ಮಣ್ಣರುಗಣ್ಡುಗತ್ತು ಪತ್ತು ಬಳ್ಳ ಮಣ್ಣು ವಿಲೈಕೆಟುಟ್ರು ಪೊನ್ನಱಕೊ
೧೩ ಣ್ಡು ಇತುಕ್ಕು ವಿಲೈಪ್ರಮಾಣಮಾಕ ಕಲ್ವೆಟ್ಟಿ ವಿಟ್ಟು ಕುಡುತ್ತೋಂ ತೇವನಾ
೧೪ ಡವೇಲಾನು ಅರಿಯ ಚಿಮ್ಮನುಕ್ಕು ಮಾರಯಂ ವೀರಯನುಂ ತೇವಯಂ ಸೋ
೧೫ ಮಯನ್ನುಂ ನಾರಾಯಣಂ ನರಸಿಂಗನುಂ ಶ್ರೀಯೂರ ಚಾವುಣ್ಡಯನುಂ ಉಳ್ಳಿಟ್ಟ
೧೬ ಸಭೆಯೋಂ ಇನ್ನಿಲತ್ತುಕ್ಕು ಇಱಕೈಯ ಎವ್ವೋಱುಂ ಉಳ್ಳಿಟ್ಟ ಇಱಯಾತಾ

ಹಿಂಭಾಗ

೧೭ ....
೧೮ ಸಂ ಮೊಂಣ್ಡು ಇಱ್ಯೈ ಇನ್ನಿಲ .... ಲಂ ಇನ್ನಿಲ
೧೯ ತ್ತಿಲ ವರ್ಷತ್ತೊಣ್ಡು ವಿಟ್ಟೋಂ ಜ ..... ತ್ತುರ್ಗ್ಯೆಯಾರ್ಕ್ಕು ಪೋ
೨೦ ಣ್ರ (ವ) ರ್ಕ್ಕು. ಕ್ಕ ..ಣ್ನತ್ತಿರುವಮುದುಂ ತಿರುವಳಕ್ಕುಕ್ಕುಂ
೨೧ ನಿಪನ್ತಂ ಚೆಯವುಣ್ಡ . ರಿನುಂ ನಿಲವುಂ ವಿ
೨೨ ಟ್ಟುಕುಡುತ್ತು ಕಲ್ಲುಂ ವೆಟ್ಟು ವಿ [ಟ್ಟು] ಕಲ್ವೆ [ಟ್ಟುಪ್ಪ] ಡಿ ಕ
೨೩ ಲ್ನಾಟ್ಟಿ .... ಇಪ್ಪೊತ್ತಿ ....
೨೪ ....ರಕ್ಷಿ .... ತೆ ಅಟಿಪ್ಪೊಡಂ ಕೈ ....
೨೫ .... ತಾನ್ಚೆಯ್ದ ಪಾಪತ್ತು ....
೨೬ .... ಯಿರ ಬ್ರಾಹ್ಮಣರ ....
೨೭ .... ಟಿದನಂ ಸನ್ತತಿ ....

೨೮ .... ತಿರುವಮುತು ತಿರುವಿಳಕ್ಕು ಎಡಯರ್
೨೯ .... ಮುಖ್ಯರು ಪೇಳನೆಯ ನರಕಕ್ಕಿಱಿವರ್ ಸಭ್ಯೆಯಾರ್
೩೦ ...... ಸಲ್ವೆರಡಕಂ ಅಚ್ಚಭೆಯಾರೊಪ್ಪ ಅಣುಗುಚಾರಿ ಇವೆನ್ನಕರಂ ಈ ಮ
೩೧ ರ್ಯ್ಯಾದೆಯಱಿವಂ ಕದಂಬಳಿಗೆನಾಡ ಕೆಱೆಯೂರೊಡೆಯ ಬ್ರಾಹ್ಮ
೩೨ ಣ ಅಯ್ಯಮಯ್ಯ ಚಾಮಣ್ಡಯ್ಯ ನಾಡ ನಾನಾದೇಸಿಯ ಅಯ್ಯಾಪೊಱಿಲ
೩೩ ಹ್ಮಸೆಟ್ಟಿಗಳು .... ಈ ಧರ್ಮ್ಮರಕ್ಷೆ ಅಯ್ಯೂರ್ನ್ನರ್ವ್ವರ್

೪) ಎ.ಕ.ಸಂ. III ನಂ.ಗೂಡು – ೨೧೫ ಪುಟ ೩೧೨

ಈಗ ಶಿವರಾತ್ರೀಶ್ವರ ಮಠದ ಎದುರುಗಡೆ ಇರುವ ಎರಡನೆಯ ಕಲ್ಲು

ಕಾಲ : ಕ್ರಿ.ಶ. ೧೦೩೨
ರಾಜವಂಶ : ಚೋಳರು
ದೊರೆ : ೧ನೇ ರಾಜೇಂದ್ರಚೋಳ

ಮುಂಭಾಗ

೧ ಪೂರ್ವ್ವದೇಶಮುಂ ಗಂಗೆಯುಂ ಕೊಣ್ಡ ಕೊಪ್ಪರಕೇಸರಿವರ್ಮ್ಮನಾರಾನ ಒಡೆಯಾರ್
೨ ಶ್ರೀ ರಾಜೇನ್ದ್ರಚೋಱದೇವ[ಕ್ಕು] ಯಾಣ್ಡು ೩೧ ಅವದು ಸ್ವಸ್ತಿ
೩ ಸಕವೊರ್ಷ ೯[೫]೫ನೆಯ ಅಂಗಿರಸಂವತ್ಸರದ
೪ ಕಾರ್ತ್ತಿಕಮಾಸ[ದ ಪು]ಣ್ಣಮೆ ತಲೆದೆವಸಮಾಗೆ ಬಿದಿ
೫ ಗೆ ಸೋಮವಾರಂ ರೋಹಿಣನಕ್ಷತ್ರದಲ್ ಒಡೆಯಾರ್ ಶ್ರೀ ರಾಜೇನ್ದ್ರಚೋ
೬ ಱದೇವಗುರುಕ್ಕಳ್ ಅರುಳಿಚ್ಚೆಯ್ಯದದಾವದು ಕೆಱೆಗೆ ಬಿತ್ತುವ
೭ ಟ್ಟಮುಂ ದೇವರ್ಗ್ಗೆ ತಿರುವ ಮುದಿಜ್ಗೆ ಬಿಟ್ಟ ಭೂಮಿಯುಮಂ ಕಲ್ವೆಟ್ಟಿಕೊಡುವುದಕ್ಕೆ ತಿರು
೮ ವಾಯಿಮೊಱಿ ಪಡಿಯಿನಾಲ್ ಒಡೆಯಾ[ರ್ಕ್ಕರ್ಮ್ಮ] ಧಾರಾವರ್ಷಕಕ್ಕುಮಂ ॥ ಶ್ರೋತ್ರಿಯಗ್ರಾಮದ
೯ ಮಹಾಜನಮುಂ ಸ್ವಸ್ತಿ ಶ್ರೀಮತ್ ಪ್ರಸಸ್ತಿಸಹಿತಂ ಸಮೆಯಮುಮಿಟ್ಟು ಬಿಟ್ಟ ಧರ್ಮಸ್ತಿತಿ
೧೦ ಕ್ರಮಮೆನ್ತನ್ದಡೆ ಈಶಾನಈಶ್ವರಮೊಡೆ[ಯಾರ್] ದೇಗುಲದ ಮೂಡಣ ದೆಸೆಯ ಮಠದ ಪೂವಿನಸೆಟ್ಟಿ ಯಿವರುವೆರಡು ದೇ
೧೧ ವರ್ ಈಶಾನಈಶ್ವರಮೊಡೆಯ[ರ್ಗ್ಗಂ] ಮೂಲಸ್ಥಾನಮುಡೆಯರ್ಗ್ಗಂ ತಿರುವಮುದಿಂಗೆ ಕೊಟ್ಟುದು
೧೨ ಶ್ರೀಯೂರ ಚಾವುಣ್ಡಯ್ಯನ ಭೂಮಿಯಲು ಪತ್ತು ಕೊಳಗೆ ಬೆದೆ[ಗ]ಱಿದ್ದಿಯುಂ
೧೩ ಗಾಣಕ್ಕೊನ್ದು ನನ್ದಾದೀವಿಗೆಯಾಗಲ್ ಈಶಾನಈಶ್ವರಮುಡೆಯಾರ್ಗ್ಗೆ ಕೊಟ್ಟುದು ಒಡೆಯ
೧೪ ರ ಕರ್ಮ್ಮಧಾರಾವರ್ಷಕಕ್ಕುವಂ ಈಶಾನಈಶ್ವರಮೊಡೆಯರ್ಗ್ಗೆ ೯ ಕೊಟ್ಟ ತಿವಳಿ ೧ ದಟ್ಟೆ ೩
೧೫ ಖಣ್ಡಿಕೆ ೩ ಪಲಂ ೬ ಜಯಗಣ್ಟೆ ೧ ಪಲ .... ಕಾಳೆ ೩ ಪಲ ೧೫ ಆಗಲೀ ಪಞ್ಚಮಹಾ

೧೬ ಶಬ್ದವಂ ತ್ರಿಕಾಳಂ ಬಾಜಿಸುವುದಕ್ಕೆ ತ್ರಿಕಾಳಂ ದೇವತಾರ್ಚ್ಚನೆಂ ಗೆಯ್ವುದರ್ಕ್ಕಂ ದೇವ

೧೭ ರ್ಗ್ಗೆ ನನ್ದನವನಂ ಮಾಟ್ಪುದರ್ಕಂ ಮಹಾದೇವರ ದೇವಡುವಿನಲ್ ಪತ್ತರಲೊಂದು ಕೊರು[ಲ]

೧೮ ಊರಲೊಕ್ಕಲಲ್ಲೊನ್ದು ಪೊಱೆಯುಂ ಪತ್ತು ಕೊಳಗ ಭತ್ತಮುಂ ಒನ್ದು ಕಂತೆಯು ಬಣ್ಣಿ

೧೯ ಗೆ ಮೂಗುಳವುಂ ಕಪ್ಪಡಕ್ಕೆ ಪಱಿತ್ತಿಯುಂ ಬ್ರಹ್ಮಲಿಂಗಿಭಟರರ್ಗ್ಗೆ ಕೊಟ್ಟುದು ಶ್ರೋತ್ರಿ

೨೦ ಯೂರ ಮಾರಯ್ಯಸೆಟ್ಟಿಯ ಪೆಣ್ಡತಿ ಗುಣ್ಡಬ್ಬೆ ಮೂಲಸ್ಥಾನದೇವರ್ಗ್ಗೆ ದೇಗುಲಮಂ ಮಾ

೨೧ ಡಿಸಿ ದೇವರ್ಗ್ಗೆ ದೇವಡುವಿನ ಮೂಡಣಮೆಯ ತೋಱ್ ಪಟ್ಟಪಾಳಿಯು ಪೊನ್ನರಕೊಟ್ಟು ಮ

೨೨ ಣ್ಣರ ಕೊಣ್ಡು ಬಿಡಿಸಿದಳ್ ಶ್ರೋತ್ರಿಯೂರ ಮಾರಯ್ಯಸೆಟ್ಟಿಯ ಮಗಂ ದೊರೆಯ್ಯಸೆಟ್ಟಿ ಮೂ

೨೩ ಲಸ್ಥಾನದೇವರ್ಗ್ಗೆ ಗಱುಕೆಗಾಲ ಕಕ್ಕುವಗಟ್ಟಿಯ ಮೂಡಣ ದೆಸೆಯಲ್ ಪತ್ತು ಕೊಳ

೨೪ ಗ ಬೆದೆ ಗಟ್ಟಿಯ ಪೊನ್ನ ಕೊಟ್ಟು ಮಣ್ಣಱ ಕೊಣ್ಡು ಬಿಡಿಸಿದಂ ಸೊತ್ತಿಯೂರವ್ವೆಗೆ ದೇವ[ಗೆ]

೨೫ ಱ ಒಳಾಣ ಆಡು ಒನ್ದು ಗಱುಕೆಗಾಲ ಬಡಗದೆಸೆಯ ಕಕ್ಕುವ ಬಾಯ್ಕಾಲೊನ್ದು ಪಡುವ

೨೬ ಣದೆಸೆ ಇರ್ಪ್ಪಣ್ಡುಗ ಬೆದೆ ನೀರ್ಮಣ್ಣುಂ ಬಿಟ್ಟುದು ಕೆಱೆಗೆ ಬಿತ್ತುವಟ್ಟಮು ಪ್ರಾ[ಚ್ಚ]ಕ್ಕೆ

ಹಿಂಭಾಗ

೨೭ ತ್ತುಕೃಚ್ಚಕರ್ಮಕ್ಕೆ ಆ ಸ್ಸಮೂಹಕ್ಕೆ ಕೊಟ್ಟ ಒಡ

೨೮ ವೆಯುಂ ತಮ್ಮಪ ದೇವಸ್ಥಾನ ಪೂಜೆಯುಮಂ ಸಭೆ

೨೯ ಯಾರ್ ಕೆಱೆಗೆ ಕೊಟ್ಟರ್ ಸ್ವಸ್ತಿ ಸಮಸ್ತಪ್ರಸ

೩೦ ಸ್ತಿಸಹಿತಂ ಶ್ರೀಮತ್ ನಾನಾದೇಸಗರುಮು

೩೧ ಳ್ಳಿಟ್ಟ ಸಮೆಯಮುವಿಟ್ಟು ಶ್ರೋತ್ರಿಯೂರಲಿ ಕೂಡಿದ

೩೨ ಪುದು ಧನಮುಂ ಪಸೆ ವುಟ್ಟಿಗೆಯುಂ ಅಱಿವೆಗಟ್ಟಿಯು

೩೩ ಮಂ ಕೆಱೆಗೆ ಗೊಟ್ಟರ್ .... ನರ ..... ಗಣಕ್ಕೆ ನಿಚ್ಚಂ ಒರ್ಮ್ಮಾನ

೩೪ . ಣ್ಣೆಯಲೊಕ್ಕಲ .... ನನ್ದಾದೀವಿಗೆಯಾಗಲಾ ಎ

೩೫ ನಿತು ಗಾಣಂ ನಟ್ಟಾ .... ಅ .. ತಿ [ನನ್ದಾದೀ]ವಿಗೆಯಂ ಶ್ರೋ

೩೬ ತ್ರಿಯೂರ ಸಭೆಯಾರ್ ಈಶಾನಈಶ್ವರಮುಡೆಯರ್ಗ್ಗೆ ಕೊ

೩೭ ಟ್ಟರ್ ಈ ಧರ್ಮ್ಮವನಾವನೋರ್ವ್ವ ಅನುಕೂಲನಾಗಿ ನಡೆಯಿ

೩೮ ಸದೆ ಕೆಡಿಸಿದಾತಂ ವಾರಣಾಸಿಯುಂ ಕವಿಲೆಯುಮ

೩೯ ನಱುದಂ ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುನ್ದರಿ ಷಷ್ಟಿ

೪೦ ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕೃಮಿ

೪೧ ನ ವಿಷಂ ವಿಷಮಿತ್ಯಾಹುರ್ದೇವಸ್ವಂ ವಿಷಮುಚ್ಯತೇ ವಿಷ

೪೨ ಮೇಕಾಕಿನಂ ಹನ್ತಿ ದೇವಸ್ವಂ ಪುತ್ರಪೌತ್ರಿಕಂ

೫) ಎ.ಕ.ಸಂ. III ನಂ.ಗೂಡು – ೨೩೪ ಪುಟ ೩.೨೨

ನಾರಾಯಣಸ್ವಾಮಿ ದೇವಸ್ಥಾನದ ಹಿಂಭಾಗ ದಕ್ಷಿಣಪಾರ್ಶ್ವದ ಗೋಡೆಯ ಮೇಲೆ

ಕಾಲ : ಕ್ರಿ.ಶ. ೧೧೮೯
ರಾಜವಂಶ : ಹೊಯ್ಸಳ
ದೊರೆ : ೧ನೇ ನರಸಿಂಹ

೧ ಶ್ರೀಮತ್ತ್ರೈಲೋಕ್ಯಪೂಜ್ಯಾಯ ಸರ್ವ್ವಕವಮ್ಮಂಗ್ ಸಾಕ್ಷಿಣೇ ಫಳದಾಯ ನಮೋ ನಿತ್ಯಂ ಕೇಶವಾಯ
೨ ಶಿವಾಯ ಚ ।। ತತೋ ದ್ವಾರವತಿ[ೀ]ನಾಥ ಹೊಯ್ಸಳಾದ್ವೀಪೀಲಾಂಚ್ಛನಂ । ಜಾತಾ ಶಶಪುರೇ
೩ ತೇಶಾಂ ವಿನೆಯಾದಿತ್ಯಭೂಪತಿ[ಃ] ।। ಆ ವಿನೆಯಾದಿತ್ಯಂಗಂ ಪಾವನಚಾರಿತ್ರೆ ಕೆ
೪ ಳೆಯಬರಸಿಗಮುಖಿಳೋರ್ವ್ವೀವರನುದೆಯಂಗೆಯ್ದಂ ಶೈವರಪದ್ಮಭೃಂಗನಾ
೫ ಯೆಱೆಯಂಗ[ಂ ।। ಉ]ಭಯಕುಲಶುದ್ಧೆಯೆನಿಪಾ ಶುಭಲಕ್ಷಣೆ ಏಚಬರಸಿ ಯೆಱೆಗ
೬ [ನೃ]ಪಂ[ಗಂ]ಪ್ರ[ಭು]ಗಳ್ಮೂವರ್ಪ್ಪುಟ್ಟಿದರಭಿನುತ ಬಲ್ಲಾಳವಿಷ್ಣುವುದೆಯಾದಿತ್ಯರು ।। ಅನ್ತಾ
೭ ಮೂವರೊಳ .... [ಗು]ಂ ಸೌರ್ಯ್ಯಧನಂಜಯನುವೆನಿಸಿದ ವಿಷ್ಣುವರ್ದ್ಧ
೮ ನದೇವನ[ಮ್ರಿ]ತಾ ... [ಳ್ವಡೆ] ।। ಮುದ್ರಿಸಲಾದಿರಾಜಚರಿತಂಗಳನಾತ್ಮಚರಿತ್ರಮಾ
೯ ವಗಂ ಮುದ್ರಿಸಲಾಜ್ಞೆ ಭೂತಳದೊಳುದ್ಧತರಪ್ಪರ ಗಂಡಗರ್ವ್ವವಂ ಮುದ್ರಿಸೆ ತೋಳಬಾ
೧೦ ಳಬಳಮುಜ್ವಳಕೀರ್ತ್ತಿ ಜಗಂಗಳೆಲ್ಲಮಂ ಮುದ್ರಿಸೆ ಪೆಂಪು ಮುದ್ರೆ ತನಗಾಗಿರೆ ವಿಷ್ಣು ಸಮು
೧೧ ದ್ರನೊಪ್ಪುದಂ ।। ಜಳನಿಧಿಯಂ ಕೆಸರ್ಮ್ಮಸಗೆ ಕೂಡೆ ಕಲಂಕುವ ಬಾಡವಾಗ್ನಿಯಂ ತಳದೊ
೧೨ ಳಗಿರ್ದ್ದಲಾನಿಪಾಳ . . . ಶೇಷನ ಕಂಠನಾಳಸಂ ವದನಬೆ ನಿಂನ ನಂಜನು ಮುಳಿಂದು ಮುಳಿ
೧೩ ಪ್ಪ [ಡೆ] ಪೊಡ . . . . . ಮುಳಿದಡೆ ತೋಱುಗಂ ವಿಜಯವರ್ದ್ಧನನಾ ಕಲಿಜಿಷ್ಣುವರ್ದ್ಧನ ।। ಚೋಳನ ಜೂ
೧೪ ಬು ಮಾಳ [ವಂ] ... . ಚೇರನನಿಟ್ಟಿ ತಿಂ . . . . . . ಮಾಕಾಳಿ ವರಾಳನಂ ತಿಳಿವ ಗಂಧಗಜಂ ಖಚನಃ
೧೫ ಳ್ಗೆಯಂ . . . . ಳನ ಬೆಂನ ಚಮ್ಮಟಿಗೆಯಿನಡೆ ತಂದನೆ ವಿ[ೀ]ರವಿಷ್ಣುಭೂಪಾಳಕನೆಂಬ ಸಂಭ್ರಮ
೧೬ . . . . ಮಂಡಳಂಗಳೊಳು ।। ಆತನ ತನಯನ ಪೆರ್ಮ್ಮೆಯೆಂತೆಂದಡೆ ।। ಕುಲಜನೆ ಯಾ
೧೭ ದವಾನ್ವಯಸಿರೋಮಣಿ ಬೇಳ್ಪವರ್ಗೀವ ಕಾವ ಸಚ್ಚರಿತೆಯೆನಿಪ್ಪ ಲಕ್ಷ್ಮಿಯ ಮಗಂ ಕಡುಚೆಲ್ವನೆ ಲೋ
೧೮ ಕವೆಲ್ಲಮಂ ಸಲೆನಿಲೆ ಕಾವ ವಿಷ್ಣುವಿನ ಪುತ್ರಕನೆಂದಡೆ ಬಣ್ಣಿಸಲ್ಕೆ ಭೂವಳಯದೊಳಾ

೧೯ ರ್ಪ್ಪತಾ . . . . . . ಸಿಂಹನೃಪಾಳಕನಂ ನಿರಂತರಂ ॥ ತರಳವಿಳೋಚನಾಂಚಳ[ಕೆ] ಕೆಂಪಿನಿಸುಂ

೨೦ [೭]ಗಳಂತರಿನರಪಾಳಸಂಕು. . . . .ಪಣ್ದಲೆ ಕಯ್ಗೆ ತುರಂಗರಾಜಿ ಮಂದುರಕೆ ಗಜಾಳಿ ಶಾಲೆ

೨೧ ಗೆ ಧನಂ . . . . ವಿ ಗೃಹಾಂತರಕ್ಕೆ ತ . . . ಕಡಿತಕ್ಕೆ ವುಂಡಿಗೆಗವೋಲೆಗವಾ ನರಸಿಂಗಭೂಪನ ॥

೨೨ ಅರಿಭೂಪರ್ಬ್ಬಂದು ಮೆಯ್ದೋಱಿ[ದ]ಡವಯವದಿಂ ತೋಱಿನೇ ಕ್ರೂರದೈತ್ಯೇಶ್ವರವಕ್ಷ ಕ್ಷೇತ್ರನಿರ್ದ್ದಾರುಣ

೨೩ ನಖನಿ[ಶಿತೋ[ಚ್ಚಳ ದೋರ್ದ್ದ[ರ್ಪ್ಪ]ಮಂ . . . . . .ಕೀರ್ಣ್ನಗೀರ್ಣ್ನನನಮನೊಗೆದ ಕೂರ್ದ್ದಾಡೆಯಂ ಸಂ

೨೪ ಚಳ . . . . ಘನರವಮು [ಮನಾ] ನಾರಸಿಂಹಕ್ಷಿತೀಶಂ ॥ ಸ್ವಸ್ತಿ ಶ್ರೀ

೨೫ ಮನ್ಮಹಾಮಣ್ಡಳೇಶ್ವರ ತ್ರಿಭುವನಮಲ್ಲ ತಳಕಾಡುಗಂಗವಾಡಿನೊಣಂಬವಾಡಿಬನವಸೆ

೨೬ ಹಾನುಂಗಲು . . . . ಲ್ಗೊಂಡ ಭುಜಬಳವೀರಗಂಗ ಪ್ರತಾಪಹೊಯ್ಸಳ ನಾರಸಿಂಹದೇವನ ತತ್ಪಾದ

೨೭ ಪದ್ಮೋಪಜೀವಿ ಶ್ರೀಮನ್ಮಹಾಪ್ರಧಾನಂ ಸರ್ವ್ವಾಧಿಕಾರಿ ಸೇನಾಧಿಪತಿ ದಂಡನಾಯಕ ಲಕ್ಷ್ಮಯ್ಯನುಂ ದಂಡನಾ

೨೮ ಯಕ ಆ . . . . .. ಯ್ಯ . . . . .ಯೆಂತೆಂಡೆದೆ ॥ ಧುರದೊಳೆ ನಿಂನ ನಾಮಕಹಳಾರವ

೨೯ ಮುಗ್ರ . . . . ದಮಂ ಡಿವಿಜಚಾಪಮನಾ ದಿವಿಜೇಂದ್ರನೀಲಮಂ ವಿರಚಿಪುದಾ

೩೦ ವಗಂ ಹ . . . . ಪೇಳ್ದರೆಯೊಳೆ ಚಿತ್ರವಾಯ್ತೆಸೆವ ನಿಂನ ಪರಾಕ್ರಮವೆಂತು ನೋ

೩೧ ಳ್ಪೊಡಂ . . . . ನಿಂನ ಭುಜಾಸಿವೇಶ್ಯೆ ಸಂಗರದೊಳರಾತಿನಾಯಕರನಾದರದಿಂ

೩೨ ದಮರ್ದ್ದೆ . . . . .ಯ್ಪು ಕೊರಳೆಂಬಿನಿವನೋವದೆ ಸೀಳ್ದು ನಲ್ಮೆಯಿಂ ನೆರೆದು ಮಹಾ

೩೩ . . . . ದಿಂ ಸಮರದೊಳಾಡುವೋಗರದ ಪಂದೆಯೆ ನೀಂ

೩೪ ತೊಲಗರ್ತ್ತಿ . . . . ಯದತಿಲೋಬನೆ ನೀಂ ತೊಲಗಂನ್ಯನಾರಿಗಶ್ರಮದೊಳೆ

೩೫ . . . . _ . ದು ಬಗ್ಗಿಪಂತಮರನ ನಾಮ ಕಾಹಳರವಂ ನೆ

೩೬ . . . . ರುಂ ಮಹಾಮಾತ್ಯ ಪದವಿಯೊಳು ಜೀವಿಸುತ್ತವಿ

೩೭ ರೆ ಶ್ರೀಮ . . . . ನೊಳು ಶ್ರಿ ನಾರಸಿಂಹದೇವರು ರಾಜ್ಯಂಗೆಯ್ಯುತ್ತವಿರೆ ದಂ

೩೮ ಡನಾಯಕ . . . . ನದೀತೀರದ ಸೊತ್ತಿಯೂರ ರಾಜಧಾನಿಯಲು ಸಕವರ್ಷ

೩೯ ೧೦೯೧ನೆ . . . . ಖ ಸು ೧೩ ಸೋಮವಾರದಲು ಶ್ರಿ ನಾಗಕೇಶವದೇವರಂ ಸು

೪೦ . . . . ಖಂಡಸ್ಪುಟಿತಜೀರ್ಣೋದ್ಧಾರಕಂ ಬೆಳ್ಗಲಿಯಂ ಶ್ರ ನಾರಸಿಂ

೪೧ . . . . ಯನಾಡ ಸಮಸ್ತ ಪ್ರಭುಗಾವುಣ್ಡುಗಳ ಕ

೪೨ ಯ್ಯ . . . . .ಡು ಮತ್ತಂ ಸೊತ್ತಿಯೂರ ಮೂಲಿಗ ಮಹಾಜನಂಗ
೪೩ . . . . .ವದ ಕೆಱೆಯ . . . . ಬಿನ ಮೊದಲಲೆರಡು ಸಲಗೆ ಗದ್ದೆಯಂ ವೊಂದು ಬೇಲಿ ಬೆದ್ದಲೆ
೪೪ ಯಂ ಧಾರಾಪೂರ್ವ್ವಕಂ . . . . .ಬಿಟ್ಟರು ಯೀ ಧರ್ಮಮಂ ಪ್ರತಿಪಾಳಿಸುವ ಮಃಹಾಪು
೪೫ . . . . ಯಿರ ಕವಿಲೆಯಂ ಕೋಡುಂ ಕೊಳಗುಮಂ ಸುವರ್ಣ್ಣದೊ
೪೬ . . . . ಕಟ್ಟಿಸಿ ಚತುರ್ವ್ವೇದಪಾರಗರಪ್ಪ . . . . . .ರ್ಗ್ಗ ಧಾರಾಪೂರ್ವ್ವಕಂ ಮಾಡಿ ಕೊಟ್ಟ ಮಹಾಫಲವಕ್ಕು ಯಿ
೪೭ . . . . ತಕಂಗಾ ಪುಣ್ಯಕ್ಷೇತ್ರದಲಾ ಬ್ರಾಹ್ಮಣರುಮಂ
೪೮ . . . . ಪಮನೆಯುಗುವದೆಂತೆನೆ ॥ ಸ್ವದತ್ತಾಂ ಪರದತ್ತಾಂ ವಾ ಯೋ
೪೯ ಹರೇತ ವಸುನ್ಧರಾಂ . । ಷಷ್ಟಿವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿ ॥ ನ ವಿಷಂ ವಿಷಮಿತ್ಯಾಹುಃ
೫೦ ದೇವಸ್ವಂ ವಿಷಮುಚ್ಯತೇ । ವಿಷಮೇಕಾಕಿನಂ ಹನ್ತಿ ದೇವಸ್ವಂ ಪುತ್ರಪೌತ್ರಕಂ ॥ ಸಾಮಾನ್ಯೋಯಂ ಧರ್ಮ್ಮ
೫೧ ಸೇತುನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ ॥ ಸರ್ವ್ವಾನೇತಾನ್ಭಾವಿನಃ ಪಾರ್ತ್ಥಿವೇನ್ದ್ರಾನ್ ಭೂ
೫೨ ಯೋ ಭೂಯೋ ಯಾಚತೇ ರಾಮಚಂದ್ರಃ ॥. . . . . . . : ಇದಂಮಾ . . . . ಂ ನಳಸುವ . . . .

೬) ಎ.ಕ.ಸಂ. III ನಂ.ಗೂಡು – ೨೩೫ ಪುಟ ೩.೨೩, ೩.೨೪

ಕಾಲ : ಕ್ರಿ.ಶ. ೧೧೯೬–೯೭
ರಾಜವಂಶ : ಹೊಯ್ಸಳ
ದೊರೆ : ೧ನೇ ನರಸಿಂಹ

ಸೋಮೇಶ್ವರ ದೇವಸ್ಥಾನದ ಉತ್ತರದ ಗೋಡೆ ಸಮೀಪದಲ್ಲಿ ನಿಂತಿರುವ ವೀರಗಲ್ಲು

೧ . . . . . . ನೂರ ನೆಲೆ
೨ ವೀಡಿನಲು ಪ್ರಿಥುವೀರಾಜ್ಯಂ ಗೆಯ್ಯುತ್ತಮಿರಲು ತತ್ಪಾದಪದ್ಮೋಪಜೀವಿ ಶ್ರೀಮತ್ಸುಮಾ
೩ ರ ಲಕ್ಷ್ಮೀದೇವದಂಡನಾಯಕರು ಮೂರು . . . .ರ ಸಾತಿಸಿದ ಕಾಳಗದೊ
೪ ಸಕ[ವ]ರಿಷ ೧೧೧೮ನೆಯ ರಾಕ್ಷಸಸಂವತ್ಸರದ ಹಿರಿಯ
೫ ನಾಡೆಡನಾಡ ಸೊತ್ತಿಯೂರ ಶತ್ರು ಗಂಡಕ್ಕಳಿಸೆ ಯಭರಸಾ
೬ ಲೆಯನ ತಂಮ್ಮಂ ಮಂಚೆಯಣಂ ಹಲಬರಂ ಕೊಂದು . . . .

೭) ಎ.ಕ.ಸಂ. III ನಂ.ಗೂಡು – ೨೨೦ ಪುಟ ೩೧೬

ಕಾಲ : ಕ್ರಿ.ಶ. ೧೧–೧೨ನೇ ಶತಮಾನ
ರಾಜವಂಶ : ಚೋಳರು
ದೊರೆ : ಕುಲೋತ್ತುಂಗಚೋಳ

ನಾರಾಯಣಸ್ವಾಮಿ ದೇವಸ್ಥಾನದ ಹಿಂದೆ ದಕ್ಷಿಣ ಪಾರ್ಶ್ವದ ಗೋಡೆಯ ಮೇಲೆ

೧ ಸ್ವಸ್ತಿ ಶ್ರೀ ಶಕವ . . . .
೨ ಆಯಿರತ್ತು ನ[ಂ] . . .
೩ . . . . ಕಾರ್ತಿಕ ಮಾಶ . . ..
೪ . . . . ಸಥ

೮) ಎ.ಕ.ಸಂ. III ನಂ.ಗೂಡು – ೨೨೯ ಪುಟ ೩೨೦

ಕಾಲ : ಕ್ರಿ.ಶ. ೧೩ನೇ ಶತಮಾನ
ರಾಜವಂಶ : ಹೊಯ್ಸಳ

ಸೋಮೇಶ್ವರ ದೇವಸ್ಥಾನದ ಮೊದಲನೆಯ ಮಂಟಪದಲ್ಲಿ ಒಂದನೆಯ ಕಂಬ

೧ ಸ್ವಸ್ತಿ ಶ್ರೀ ರಕ್ಟಾಕ್ಷಿ
೨ ಸಂ । ಆಷಾಢ ಸಂ ೨
೩ ಸೋ । ಶ್ರೀ ಸೋಮನಾ
೪ ಥದೇವ . . . .

೯) ಎ.ಕ.ಸಂ. III ನಂ.ಗೂಡು – ೨೩೨ ಪುಟ ೩.೨೧

ಸೋಮೇಶ್ವರ ದೇವಸ್ಥಾನದ ಮೊದಲನೆಯ ಮಂಟಪದಲ್ಲಿ ಎರಡನೆಯ ಕಂಬ

ಕಾಲ : ಕ್ರಿ.ಶ. ೧೩ನೇ ಶತಮಾನ
ರಾಜವಂಶ : ಹೊಯ್ಸಳ

೧ ಸ್ವಸ್ತಿ ಶ್ರೀಜಯಾ
೨ ಭ್ಯುದಯಶ್ಯ ಸ
೩ ಕವರ್ಷ ಸಾಸಿ
೪ ರದನೂಱಯೆಂ
೫ ಭತ್ತುಆಱನೆಯ ರಕ್ತಾ
೬ ಕ್ಷಿಪಂ । ಆಷಾಢ ಸು ೨
೭ ಸೋ । ಸೋಮನಾಥದೇವರ ಮ
೮ ಂಟಪ ಕಟ್ಸಿ ಕ . . . .
೯ ಯ ಮಗ ಚ . . . . . ಚಾರಿ
೧೦ ಯ ಕಂ . . . . ಮಾರಿ
೧೧ ನಾಥ ॥

೧೦) ಎ.ಕ.ಸಂ. III ನಂ.ಗೂಡು – ೨೩೧ ಪುಟ ೩.೨೧

ಸೋಮೇಶ್ವರ ದೇವಸ್ಥಾನದ ಮೊದಲನೆಯ ಮಂಟಪದಲ್ಲಿ ಮೂರನೆಯ ಕಂಬ

ಕಾಲ : ಕ್ರಿ.ಶ. ೧೨೬೪
ರಾಜವಂಶ : ಹೊಯ್ಸಳ

೧ ಸ್ವಸ್ತಿ ಶ್ರೀಜಯಾಭ್ಯು
೨ ದಶ್ಯ ಸಕವರಿಷ ಸಾವಿರ
೩ ದನೂಱ ಎಂಭತ್ತಾಱ
೪ ನೆಯ ರಕ್ತಾಕ್ಷಿಸಂವತ್ಸ
೫ ರದ ಆಷಾಡ ಸು ೧
೬ ಸೋ ಶ್ರೀ ಸೋಮನಾ
೭ ಥದೇವರ ನೃತ್ಯ
೮ ಮಂಟಪಕ್ಕೆ ದಾಸಾಚಾ

೯ ರಿಯ ಮಗ ನಾ
೧೦ ರಣಾಚಾರಿ ಮಾಡ್ಡಿದ
೧೧ ಕಂಭ .

೧೧) ಎ.ಕ.ಸಂ. III ನಂ.ಗೂಡು – ೨೩೦ ಪುಟ ೩೨೦

ಸೋಮೇಶ್ವರ ದೇವಸ್ಥಾನದ ಮೊದಲನೆಯ ಮಂಟಪದಲ್ಲಿ ನಾಲ್ಕನೆಯ ಕಂಬ

ಕಾಲ : **ಕ್ರಿ.ಶ. ೧೨೬೪**
ರಾಜವಂಶ : **ಹೊಯ್ಸಳ**

೧ ಸ್ವಸ್ತಿ ಶ್ರೀಜಯಾ
೨ ಭ್ಯುದಶ್ಯ ಸಕವರಿಷ ೧
೩ ೧೮೬ನೆಯ ರಕ್ತಾ
೪ ಕ್ಷಿ ಸಂವತ್ಸರದ ಆಷಾಢ
೫ ಸು ೨. ಸೋಮವಾರದಂದು
೬ ಶ್ರೀ ಸೋಮನಾಥದೇವರ
೭ ನೃತ್ಯಮಂಟಪದ ರಾ
೮ ಜಾಚಾರಿ ಮಗ ಳುಳವ
೯ ಜಗೋಮ ಕಾಳಾಚಾರಿ
೧೦ ಮಾಡ್ಡಿದ ಕಂಭ ॥

೧೨) ಎ.ಕ.ಸಂ. III ನಂ.ಗೂಡು – ೨೨೭ ಪುಟ ೩೧೯

ಸೋಮೇಶ್ವರ ದೇವಸ್ಥಾನದ ಮೊದಲನೆಯ ಮಂಟಪದಲ್ಲಿ ಐದನೆಯ ಕಂಬ

ಕಾಲ : **ಕ್ರಿ.ಶ. ೧೨೬೪**
ರಾಜವಂಶ : **ಹೊಯ್ಸಳ**
ದೊರೆ : **೩ನೇ ನರಸಿಂಹ**

೧ ಸ್ವಸ್ತಿ ಶ್ರೀ ಜಯಾ
೨ ಭ್ಯುದಶ್ಯ ಸಕವರಿಷ
೩ ೧೧೮೬ನೆಯ ರಕ್ತಾ
೪ ಕ್ಷಿಸಂವತ್ಸರದ ಆಷಾ
೫ ಢ ಸು ೧ ಸೋ ಶ್ರೀ ಸೋಮನಾ
೬ ಥ ದೇವರ ಮಂಟಪಕೆ

೧೩) ಎ.ಕ.ಸಂ. III ನಂ.ಗೂಡು – ೨೨೬ ಪುಟ ೩೧೯

ಸೋಮೇಶ್ವರ ದೇವಸ್ಥಾನದ ಮೊದಲನೆಯ ಮಂಟಪದಲ್ಲಿ ಆರನೆಯ ಕಂಬ

ಕಾಲ : ಕ್ರಿಶ. ೧೨೬೪
ರಾಜವಂಶ : ಹೊಯ್ಸಳ
ದೊರೆ : ೩ನೇ ನರಸಿಂಹ

೧ ಸ್ವಸ್ತಿ ಶ್ರೀ ರಕ್ತಾಕ್ಷಿಸಂವ
೨ ತ್ಸರದ ಅಶ್ವಇಜ ಸು[೨]ಸೋ
೩ ಶ್ರೀ ಸೋಮನಾಥದೇವರ ಶ್ರೀ
೪ ಮಂಡಪಕೆ ಕವುಸಿಕ
೫ ಗೋತ್ರದ ಬಸವೆಯನ
೬ ಮಗ ಅಡವೆಯ ಬ
೭ ಪೈಯನು ಮಾಡಿಸಿ
೮ ದ ಕಂಬ ಮಂಗ
೯ ಳಮಹಾ ಶ್ರೀ ಶ್ರೀ ಶ್ರೀ

೧೪) ಎ.ಕ.ಸಂ. III ನಂ.ಗೂಡು – ೨೨೫ ಪುಟ ೩೧೮

ಸೋಮೇಶ್ವರ ದೇವಸ್ಥಾನದ ಮೊದಲನೆಯ ಮಂಟಪದಲ್ಲಿ ಏಳನೆಯ ಕಂಬ

ಕಾಲ : ಕ್ರಿಶ. ೧೨೬೪
ರಾಜವಂಶ : ಹೊಯ್ಸಳ
ದೊರೆ : ೩ನೇ ನರಸಿಂಹ

೧ ಸ್ವಸ್ತಿ ಶ್ರೀ ರಕ್ತಾ
೨ ಕ್ಷಿಸಂವತ್ಸರದ ಆಷಾ
೩ ಢ ಸು. ೨ ಸೋ ಶ್ರಿ ಸೋ
೪ ಮನಾಥದೇವರ ಮಂ
೫ ಟಪಕ್ಕೆ ಕಾಥಪ್ಪನ ಮ
೬ ಗ ಭಕ್ತರ ಜಾ
೭ ಕಿಸೆಟ್ಟಿ ಮಾಡ್ಡಿದ
೮ ಕಂಭ ||

೧೫) ಎ.ಕ.ಸಂ. III ನಂ.ಗೂಡು – ೨೨೮ ಪುಟ ೩೧೯, ೩೨೦

ಬಿಲ್ವ ಪತ್ರೆ ತೋಪಿನ ಹಿಂಭಾಗದಲ್ಲಿರುವ ಕಂಬ

ಕಾಲ : ಕ್ರಿಶ. ೧೨೬೪
ರಾಜವಂಶ : ಹೊಯ್ಸಳ
ದೊರೆ : ೩ನೇ ನರಸಿಂಹ

೧ ಸ್ವಸ್ತಿ ಶ್ರೀಜಯಾ
೨ ಭ್ಯುದಶ್ಚ ಸಕವರಿಷ
೩ ೧೧೮೬ನೆ ವೊ ರಕ್ತಾ
೪ ಕ್ಷಿ ಸಂವತ್ಸರದ ಆಷಾ
೫ ಢ ಸು ೨ ಸೋ ಶ್ರೀ ಸೋಮನಾ
೬ ಥ ದೇವರ ಮಂಟಪಕ್ಕೆ ಮಲಿ
೭ ನಾಯ . . . . ತಳ
೮ ಲಕಲೆಯರ ಕಂಬ

೧೬) ಎ.ಕ.ಸಂ. III ನಂ.ಗೂಡು – ೨೨೪ ಪುಟ ೩೧೬

ಸೋಮೇಶ್ವರ ದೇವಸ್ಥಾನದ ಮೊದಲನೆಯ ಮಂಟಪದಲ್ಲಿ ಎಂಟನೆಯ ಕಂಬ

೧ ಸ್ವಸ್ತಿಶ್ರೀ ಯಿಸ್ವರಸಂವ
೨ ತ್ಸರದ ಭಾದ್ರಪದ ಸು
೩ ೭ನೆ ಶ್ರೀ ಸೋಮನಾಥ
೪ ದೇವರ ಶ್ರೀ ಮಂಟಪ
೫ ಕೆ ನಾಗಣ್ಣನ ಅಳಿಯ
೬ ರಾಘವದೇವ ಮಾಡಿ
೭ ಸಿಕೊಟ್ಟ ಕಂಭ ಮಂಗ
೮ ಳಮಹಾ ಶ್ರೀ ಶ್ರೀ ಶ್ರೀ

೧೭) ಎ.ಕ.ಸಂ. III ನಂ.ಗೂಡು – ೨೨೩ ಪುಟ ೩೧೭, ೩೧೮

ಸೋಮೇಶ್ವರ ದೇವಸ್ಥಾನದ ಎರಡನೆಯ ಮುಖಮಂಟಪದ ಕಂಬ

೧ ಸ್ವಸ್ತಿಶ್ರೀ ಕಾಶ್ಯಪಗೋತ್ರದ ಸೊ
೨ ತ್ರಿಯೂರೂರೊಡೆಯ
೩ ಗಂಗಗೌಂಡಮಾರಾಯ

೪ ರ ಮಗ ಜಗದೇವಮಾರಾ
೫ ಯ ಜಗದೇವಮಾರಾ
೬ ಯರ ಮಗ ಬಿಟ್ಟಿಮಾರಾ
೭ ಯ ನಿಲಿಸಿದ ಮೊದಲರ
೮ , ದ ಕಂಭ ಶ್ರೀ ಶ್ರೀ ಶ್ರೀ

೧೮) ಎ.ಕ.ಸಂ. III ನಂ.ಗೂಡು – ೨೨೧ ಪುಟ ೩೧೭

ಸೋಮೇಶ್ವರ ದೇವಸ್ಥಾನದ ಉತ್ತರದ ಗೋಡೆ ಸಮೀಪದಲ್ಲಿ ನಿಂತಿರುವ ಎರಡನೆಯ ವೀರಗಲ್ಲು

ಒಂದನೆಯ ಪಟ್ಟಿ
೧ . . . .
೨ ಯುತ್ತಿರಲು ಶ್ರೀಮನ್ಮಹಾಪ್ರಧಾನ ಹಿರಿಯ
೩ ನಯಕ ಮಂಚ್ಚಯ್ಯಂಗಳ ಬೆಸದಿಂ ಮಲಿಸೆಟ್ಟಿ

ಎರಡನೆಯ ಪಟ್ಟಿ
೪ ಮಗನೆಕ್ಕಟಿಗ ಚಿಕಣ ಕಣಿಯಲ ಬವರದೊಳು ಮೂ
೫ ದಲಿಸಿ ಹುಕು ಹಲಬರಂ ತಿವಿದು ಸುರಲೋಕಪ್ರಾಪ್ತ

೧೯) ಎ.ಕ.ಸಂ. III ನಂ.ಗೂಡು – ೨೩೬ ಪುಟ ೩೨೫

ವೀರಸಿಂಹಾಸನಮಠದ ಶಿವರಾತ್ರಿ ಸ್ವಾಮಿಗಳ ಗದ್ದಿಗೆಯ ನಂದಿಯ ಪೀಠದಲ್ಲಿ

ಕಾಲ	:	೧೫೦೩
ರಾಜವಂಶ	:	ವಿಜಯನಗರ ಆಡಳಿತ ಕಾಲ
ದೊರೆ	:	೨ನೇ ನರಸನಾಯಕ

೧ ದುಂದುಭಿಸಂವತ್ಸರದ ಮಾಖ ಶು ೧೦ ಸನಿವಾರದಲೂ ಸಜನಸುದ್ಧಶಿವಾಚಾರಸಂಪಂ
೨ ನರಾದಂತ ಶಿವರಾತ್ರೆದೇವರ ನಿರೂಪದಿಂದ ಲಿಂಗಣಒಡೆಯ ಬಸವಪ್ರತಿಷ್ಟೆ ಮಾಡಿದ ಪುಣ್ಯದ ಸೇವೆ

೨೦) ಎ.ಕ.ಸಂ. III ನಂ.ಗೂಡು – ೨೧೭ ಪುಟ ೩೨೪, ೩೨೫

ಈಗ ಶಿವರಾತ್ರೀಶ್ವರ ಮಠದ ಎದುರುಗಡೆ ಇರುವ ಮೂರನೆಯ ಕಲ್ಲು

ಕಾಲ : ೧೫೧೪
ರಾಜವಂಶ : ವಿಜಯನಗರ ಆಡಳಿತ ಕಾಲ
ದೊರೆ : ಕೃಷ್ಣದೇವರಾಯ

೧ ಸ್ವಸ್ತಿ ಶ್ರೀಜಯಾದ್ಭುದಯ ಶಾಲಿವಾಹನಶಕವರುಷ
೨ ೧೪೬೬ ಸಂದು ವರ್ತ್ತಮಾನ ಭಾವಸಂವತ್ಸರದ ಕಾರ್ತ್ತಿ
೩ ಕ ಶು ೫ ಲೂ ಸುತ್ತೂರ ಸಿಂಹಾಸನದ ಪರ್ವತಒಡೆಯರ
೪ ಸಿಶ್ಯರು ಭಂಡಾರಿ ಬಸವಪ್ಪ ಒಡೆಯರೂ ನಂಜಲುಗೂ
೫ ಡು ಕಪಿಲಾಕವುಂಡಿನೀಸಂಗಮದ ತೆಂಕಣತಡಿಯಲಿ
೬ ತಾವು ನೂತನಪ್ರತಿಷ್ಟೆಯಾಗಿ ಮಾಡಿದ ಸಂಗಮೇಶ್ವರ
೭ ದೇವರ ಶ್ರೀಕಾರ್ಯಕ್ಕೂ ಅಲ್ಲಿ ವಾಸವಾಗಿಯಿಹ ಸಿರಿ
೮ ಗಿರಿದೇವ ಒಡೆಯರು ದೇವರಿಗೂ ಅವರ ಕೂಡಿ ಸಹ
೯ ವಾಸವಾಗಿ ಯಿಹ ಹಿರಿಯರುಗಳಿಗೂ ಅವರ ನಯಿವೇ
೧೦ ದ್ಯ ಮೇಲುವೆಚ ಸಿತಪರಿಹಾರಗಳು ನಡೆಪಿದಕ್ಕೆ ಕೊಟ್ಟ ಗ್ರಾ
೧೧ ಮ ಯೆತ್ತುಗದ ಮುಳೂರ ಹೆಡೆಯಾಲಸ್ತಳದಲ್ಲಿ
೧೨ ಆ ಮುಳೂರು ಪ್ರಭು ವಿರುಪಂಣಯೊಡಯರ ಮಕ್ಕಳು ನಂ
೧೩ ಜಿನಾತಬಂದಿಯಪ್ಪ, ಚಿಕ್ಕನಂಜಯ್ಯನವರು ನಂಮ ಕಯ್ಯ
೧೪ ಲ್ಲಿ ಕ್ರಯವನು ತೆಗೆದುಕೊಂಡು ಆ ಗ್ರಾಮದ ಚತುಸೀಮೆ
೧೫ ಗೆ ಲಿಂಗಮುದ್ರೆಯ ಕಲ್ಲನು ನಟ್ಟಿಕೊಟ್ಟು ನಮಗೆ ಸರ್ವ್ವಮಾ
೧೬ ನ್ಯವಾಗಿ ಕೊಡಗಿಯಾಗಿ ನಡೆದುಬಹ ಚೆಲ್ಲಹಳಿ
೧೭ ಯ ಗ್ರಾಮ ಒಂದನೂ ಅದಕೆ ಸಲುವ ಸರ್ವ್ವಸ್ವಾಮ್ಯ ಸಹವಾ
೧೮ ಗಿ ಆ ಸಂಗಮೇಶ್ವರದೇವರಿಗೂ ಅಲ್ಲಿ ವಾಸವಾಗಿ ಯಿಹ ಸಿರಿ
೧೯ ಗಿರಿದೇವ ಒಡೆಯರು ದೇವರಿಗೂ ಸಮಭಾಗಿಯಾಗಿ ಆ ಪಿ
೨೦ ಲ್ಲಹಳಿಯ ಗ್ರಾಮ ಒಂದನು ಸಮರ್ಪ್ಪಿಸಿದೆವು ಯೆಂದು ಬ
೨೧ ರಸಿದ ಧರ್ಮ್ಮಸಾಶನ ಯೀ ಗ್ರಾಮವನೂ ಆ ಮುಳೂರು ಪ್ರಬು
೨೨ ಗಳು ನಂಜುನಾಥಬಂದಿಯಪ್ಪ ಚಿಕ್ಕನಂಜಯ್ಯನವರು
೨೩ ತಂಮಿಂ^ದ ಮತಾರಿಂದಲೂ ವುಪಹತಿ ಬಾರದಹಾಗೆ ತಾವು
೨೪ ಕೊಟ್ಟಂತಹ ದರ್ಮವು ತಂಮ ವಂಸಪಾರಂಪಾರಿಯಾಗಿ
೨೫ ಅಚಂದ್ರಾರ್ಕ್ಕಸ್ಥಾಯಿಯಾಗಿ ಸರ್ವ್ವಮಾಂನ್ಯವಾಗಿ ನ
೨೬ ಡಸಿಬಹರು ಯಿದಕ್ಕೆ ತಪ್ಪಿದವರು ವಾರಣಾಸಿಯಲ್ಲಿ
೨೭ ಗೋವನೂ ಬ್ರಾಂಹ್ಮಣರನೂ ಕೊಂದ ಪಾಪಕ್ಕೆ ಹೋಹ
೨೮ ರೂ ॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾ

೨೯ ೦ ಷಷ್ಟಿರ್ವ್ವರುಷಸಹಸ್ರಾಣಿ ವಿಷ್ಟಾಯಾಂ ಚಾಯ
೩೦ ತೇ ಕ್ರಿಮಿಃ ||

೨೧) ಎ.ಕ.ಸಂ. III ನಂ.ಗೂಡು – ೨೧೪ ಪುಟ ೩೧೧
ಈಗ ಶಿವರಾತ್ರೀಶ್ವರ ಮಠದ ಎದುರುಗಡೆ ಇರುವ ನಾಲ್ಕನೆಯ ಕಲ್ಲು

ಕಾಲ : ೧೫೩೦
ರಾಜವಂಶ : ವಿಜಯನಗರ ಆಡಳಿತ ಕಾಲ
ದೊರೆ : ಮಹಾಮಂಡಲೇಶ್ವರ ರಾಮರಾಜ ತಿರುಮಲರಾಜಯ್ಯ ದೊರೆ

೧ ಶ್ರೀ ಸೋಮೇಸ್ವರನೇ ಗತಿ || ವಿರೋಧಿ ಸಂವತ್ಸರದ ಮಘ ಬ ೨ ಲೂ ಶ್ರೀ
೨ ಶ್ರೀ ಮಹಾದೇವದೇವೋತ್ತಮ ಸುತ್ತೂರ ಸೋಮೇಸ್ವರದೇವರ ನಿರೂಪದಿಂದ ಶ್ರೀಮನು
೩ ಮಹಾಮಂಡಳೇಶ್ವರ ರಾಮರಾಜತಿರುಮಲರಾಜೈಯ್ಯದೇವಮಹಾ
೪ ರಸುಗಳಯ್ಯನವರ ಕಾರ್‍ಯ್ಯಕ್ಕೆ ಕರ್ತ್ತರಾದ ಭದ್ರಯ್ಯನವರು ಸುತ್ತುರ ಮ
೫ ಟದ ಹಿರಿಯರುಗಳಿಗೆ ಕೊಟ್ಟ ಸುತ್ರಯದ ಪಟ್ಟೆಯ ಕ್ರಮವೆಂತೆಂ
೬ ದರೆ ಸುತ್ತುರ ಸೋಮೇಸ್ವರದೇವರ ಅಂಗರಂಗಭೋಗಕ್ಕೆ ಸಲುವ ಮೂಗೂ
೭ ರಸೀಮೆಯ ತಾಯೂರಸ್ಥಳದ ಹೊಳೆಯಸುತ್ತುರ ಗ್ರಮವೊಂದ
೮ ಅಲ್ಲಿ ಸೋಮೇಸ್ವರದೇವರಿಗೆ ಪೂರ್ವ್ವಮೊದಲಾಗಿ ಸಲುವ ಭೂಮಿಯ
೯ ನೂ ನಾಲು ನಿಮಗೆ ಗುತ್ತಿಗಗೆ ಕೊಟ್ಟೆವಾಗಿ ಆ ಚತುಶೀಮೆವೊಳಗ
೧೦ ಣ ಗದೆ ಬೆದಲು ತೋಟ ತುಡಿಕೆ ಆಡು ಮಗ್ಗ ಮನೆವಣ ಸುವ
೧೧ ರ್ಣ್ನಾದಾಯ ಕಾಡಾರಂಭ ನೀರಾರಂಭ ಕಾಣಿಕೆ ಬೆಡಿಗೆ ಯೇನು
೧೨ ಂಟಾದ ಸರ್ವ್ವಸ್ವಾಮ್ಯವನು ಆಗುಮಾಡಿ ಅನುಭವಿಸಿಕೊಂ
೧೩ ಡು ನೀಉ ತೆಱುವ ಸ್ತುತ್ರಿಯದ ಗುತ್ತಿಗೆ ಪ್ರಾಕು ಪ್ರಮಾ
೧೪ ಣನು ವಿಕ್ರುತುಸಂವತ್ಸರದ ಆಷಾಡ ಶು ೧ ಆರಭ್ಯ
೧೫ ವಾಗಿ ಖರಸಂವತ್ಸರದ ಜೇಷ್ಟ ಬ ೩೦ರವರೆಗೆ ತಿಂಗಳು
೧೬ ೧೯ ಹಂ ಕ್ಕೆ ಆ ವರ್ಷ ೧ ಕ್ಕೆ ತೆಱುವ ಗುತ್ತಿಗೆ ಪ್ರ
೧೭ ಕು ಪ್ರಮಾಣು ಗಟಿ ಗ ೪೦ ಅಕ್ಷರದಲು ಗಟ್ಟಿ ನಾಲ್ವ
೧೮ ತ್ತು ವರಹಂನೂ ಸೋಮೇಸ್ವರದೇವರ ಭಂಡಾರಕ್ಕೆ ಮಾಸ ಪ
೧೯ . ದಿಯಾಗಿ ಸಲಿಸುವಿರಿ ಆಲಿ ಯಿದ್ದ ದೇವಸ್ತನವನು ಪೂ
೨೦ ರ್ವ್ವಮರ್‍ಯ್ಯಾದಲಿ ನಡಸಿ ಬಹರಿ ದಾನಮಾನ್ಯಾ ಪೂರ್ವ್ವ
೨೧ ಮರಿರ್‍ಯ್ಯದಿಯೆಂದು ಕೊಟ್ಟ ಶೋತ್ರಿಯರ ಕಲ್ಲಪಟ್ಟೆ
೨೨ ಶ್ರೀ ಗೋಪಾಲ

೨೨) ಎ.ಕ.ಸಂ. III ನಂ.ಗೂಡು – ೨೧೮ ಪುಟ ೩೧೫, ೩೧೬
ಈಗ ಶಿವರಾತ್ರೀಶ್ವರ ಮಠದ ಎದುರುಗಡೆ ಇರುವ ಐದನೆಯ ಕಲ್ಲು

ಕಾಲ : ೧೫೩೦
ರಾಜವಂಶ : ವಿಜಯನಗರ ಆಡಳಿತ ಕಾಲ
ದೊರೆ : ೨ನೇ ಹರಿಹರ

೧ ಶ್ರೀ ಸ್ವಸ್ತಿ ಶ್ರೀಜಯಾಭ್ಯುದ
೨ ಯ ಕಲಿಯುಗ ಶಾಲಿವಾಹನ
೩ ಶಕವರುಶ ೪೬೯೦ನೆಯ ವ
೪ ರ್ತನಕೆ ಸಲುವ ವಿರೋಧಿಸ
೫ ಂವತ್ಸರದ ಚೇಷ್ಟ ಶು ೧೦
೬ ಸೌಮ್ಯವಾಶರದಲು ಸುತ್ತೂರ ಸಿ
೭ ಂಹಾಶನದ ಮಹತ್ತಿನಕೆಱೆಗೆ
೮ ನಂಜನಗೂಡ ೫೦ ಹೊಂನಗದ ಶಿವಪೂ
೯ ಜೆಯ ದೇವರ ಶಿಷ್ಯರು ಉ . . . . . .
೧೦ ವದೇವರ ಭಕ್ತ ಮಾಡಿದ ವಿವರ ದಕೆ
೧೧ ಗ ೩೩ ಮೌಲ್ಯ ಗ ೨೦೦ಕ್ಕೆ ಗ ೧೦ಕ್ಕೆ . . ಬ
೧೨ ಡ್ಡಿಯು ವರುಶ ೧ಕ್ಕೆ ೬೯ ವರ
೧೩ . . . . . ಭಂಡಾರದ . . . .

೨೩) ಎ.ಕ.ಸಂ. III ನಂ.ಗೂಡು – ೨೧೬ ಪುಟ ೩೧೩, ೩೧೪

ಈಗ ಶಿವರಾತ್ರೀಶ್ವರ ಮಠದ ಎದುರುಗಡೆ ಇರುವ ಆರನೆಯ ಕಲ್ಲು

ಕಾಲ : ೧೫೯೩
ರಾಜವಂಶ : ವಿಜಯನಗರ ಆಡಳಿತ ಕಾಲ
ದೊರೆ : ಇಮ್ಮಡಿ ರಾಮರಾಜನಾಯಕ

೧ ಶುಭಮಸ್ತು ಶ್ರೀ ಸ್ವಸ್ತಿ ವಿಜೆಯಾಭ್ಯು
೨ ದೆಯ ಶಾಲಿವಾಹನ ಶಕವರುಷ ೧೫೧೫
೩ (೦೫) ಸಂದ ವರ್ತಂಮಾನವಾದ ವಿಜೆಯ
೪ ಸಂವತ್ಸರದ ಭಾದ್ರಪದ ಬ ೧೦ ಸೋ
೫ ಮವಾರದಲ್ಲು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವ
೬ ರ ಶ್ರೀ ವೀರಪ್ರತಾಪ ವೆಂಕಟಪತ್ತಿ ಮಹಾರಾಯರು ಪು

೭ ಥ್ವಿರಾಜ್ಯಂ ಗೆಯಿಉತ್ತಿರಲು ಹದಿನಾಡಸೀಮೆಯ ಪ್ರಭು ದೇವಪ್ಪ
೮ ಗೆ ಉಡರ ಮಖಳು ಯಿಮಡಿ ರಾಮರಾಜನಾಯಕರು । ಸಜ್ಜನಶುದ್ಧ ಸಿವಾಚಾರಸಂ
೯ ಪಂನರಾದ ದೆವಾಪ್ರಥ್ವಿಮಹಾಮಹತ್ತಿನೊಳಗಾದ ಸುತ್ತೂರ ಸಿಂಹಾಸನಕ್ಕೆ ಕರ್ತ
೧೦ ರಾದ ಸಿವರಾತ್ರೆಯದೇವರ ಸಿಷ್ಯರು ಚೆಂನಬಸವರಾಜದೇವರಿಗೆ ಕೊಟ್ಟ ಸಿಲಾಶಾ
೧೧ ಶನದ ಕ್ರಮವೆಂತ್ತೆಂದರೆ ನಂಮ ಹದಿನಾಡಸೀಮೆಯೊಳಗಣ ಹೊಂಗನೂರ ಸ್ತಳ
೧೨ ದ ಹರುರಹಳ್ಳಿ ಗ್ರಾಮ ೧ ನು ನಾಉ ನಂಮ ದೇವಪ್ಪಗಉಡನವರು । ನಂಮ ತಾಯಿ ಚೆಂ
೧೩ ನಾಜಿಯಂಮನವರಿಗೆ ಪುಂಣ್ಯವಾಗಬೇಕೆಂದು ಸಿವಾರ್ಪ್ಪಿತವಾಗಿ ಕೊಟ್ಟೆವಾಗಿ ಆ
೧೪ ಹಸುರಹಳ್ಳಿ ಗ್ರಾಮಕ್ಕೆ ಸಲುವ ಗದ್ದೆ ಬೆದ್ದಲು ತೋಟ ತುಡಿಕೆ ಆಡು ಮಗ್ಗ ಮನೆ
೧೫ ವಣ ಕಾಡಾರಂಭ । ನೀರಾರಂಭ । ನಿಧಿನಿಕ್ಷೇಪಜಲಪಾಶಾಣಆಕ್ಷಿಣಿಆಗಾ
೧೬ ಮಿಸಿಧಿಸಾಧ್ಯಂಗಳೆಂಬ ಅಷ್ಟಭೋಗತ್ತೇಜಸ್ವಾಂಮ್ಯಗಳನು ಆಗು ಮಾಡಿ ಅನು
೧೭ ವಿಸಿಕೊಂಡು ನಿಂಮ ಸುತ್ತೂರ ಸಿಂಹಾಸನಕ್ಕೆ ಅಚಂದ್ರಾರ್ಕ್ಕಸ್ಥಾಯಿಗ
೧೮ ಳಾಗಿ ಅನುಭವಿಸಿಕೊಂಡು ಬಹೆರಿ ಯೆಂದು ಕೊಟ್ಟ ಸಿಲಾಶಾ
೧೯ ಸನ ॥ ಫಲಗ್ರಂಥಾ ॥ ದಾನಪಾಲನೆಯೋರ್ಮ್ಮಧ್ಯೆ । ದಾನಾಚ್ರೇಯೋ
೨೦ ನುಪಾಲನಂ । ದಾನಾತ್ವರ್ಗ್ಗಮವಾಪ್ನೋತಿ । [ಪಾ]ಲನಾದೈಸ್ವರಂ ಪದಂ ॥

೨೪) ಎ.ಕ.ಸಂ. III ನಂ.ಗೂಡು – ೨೩೩ ಪುಟ ೩.೨೧

ಈಗ ಶಿವರಾತ್ರೀಶ್ವರ ಮಠದ ಎದುರುಗಡೆ ಇರುವ ಏಳನೆಯ ಕಲ್ಲು

ಕಾಲ : ೧೬ನೇ ಶತಮಾನ
ರಾಜವಂಶ : ವಿಜಯನಗರ ಆಡಳಿತ ಕಾಲ
ದೊರೆ : ಕೃಷ್ಣದೇವರಾಯ

೧ . . . . ತಗಂ . .
೨ . ... ೧೦ ಮಾಬ
೩ . . . . ಗೋತ್ರದ ಆಶ್ಲಾಯನಸೂತ್ರದ . . ..
೪ ಯ್ಯನವರ ಮಕ್ಕಳು ರಾಮಪ್ಪಗಳು ತಥಾ[ತಿಥಿ] . . ಪುಂಣ್ಯಕಾಲದಲು ಕೃಷ್ಣರಾ . .
೫ ಹಾರಾಯರಿಗೆ ಧರ್ಮ್ಮವಾಗಬೇಕೆಂದು ಸಹಿರಣ್ಯೋದಕದಾನದಾರಾಪೂರ್ವಕವಾಗಿ ಸ
೬ ಮರ್ಪ್ಪಿರ್ಪಿಸಿದೆವಾಗಿ . ಆಚಂದ್ರಾರ್ಕ್ಕಸ್ಥಾಯಿಯಾಗಿ ಆ ಸೋಮೇಶ್ವರದೇವರ ಅಮ್ರುತಪಡಿಗೆ
೭ ಭಂಡಾರಕೆ ಸಲುವುದು ಯೆಂದು ವಶಿಷ್ಟಗೋತ್ರದ ಆಶ್ಲಾಯನಸೂತ್ರದ ವುಂಮತು
೮ ರ ನರಸಪ್ಪಯ್ಯನವರ ಮಕ್ಕಳು ರಾಮಪ್ಪಗಳು ಕೊಟ್ಟ ಕ್ರಯಭೂದಾನ ಧಂರ್ಮ್ಮದ
೯ ಶಿಲಾಶಾಸನ ॥ ದಾನಪಾಲನಯೋರ್ಮಧ್ಯೇ। ದಾನಾಚ್ಛ್ರೇಯೋನು ಪಾಲನಂ ದಾ
೧೦ ನಾತ್ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ॥ ಸ್ವದತ್ತಾ ದ್ವಿಗುಣಂ ಪುಣ್ಯಂ

೧೧ ಪರದತ್ತಾನುಪಾಲನಂ। ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್॥ ಸ್ವದತ್ತಂ
೧೨ ವಾ ಪರದತ್ತಂ ವಾ ಯೋ ಹರೇತ ವಸುಂದರಂ॥ ಷಷ್ಟಿವರುಷಸಹಸ್ರಾಣಿ
೧೩ ವಿಷ್ಟಾಯಾಂ ಜಾಯತೇ ಕ್ರಿಮಿ॥ ಇ ಧಂರ್ಮವ ಅಳುಪಿದರೆ ಗಂಗೆಯ ತಡಿಯಲು ಕೋ
೧೪ ಟಿಕವಿಲೆಯಂ ಕೊಂದ ಪಾಪಕ್ಕೆ ಹೋಹರು
೧೫ ಅವನೊಬ್ಬನು ಈ ದರ್ಮ್ಮವ ಆಳುವಿದನ ಹೆಡತಿಯ

೨೫) ಎ.ಕ.ಸಂ. III ನಂ.ಗೂಡು – ೨೩೭ ಪುಟ ೩೧೧, ೩೧೨

ದೇಪಯ್ಯನ ಮಂಟಪದಲ್ಲಿ ಪಶ್ಚಿಮದ ಎರಡನೆಯ ಕಂಬದಲ್ಲಿ

ಕಾಲ : ೧೬೭೧
ರಾಜವಂಶ : ಮೈಸೂರು ಅರಸರು
ದೊರೆ : ದೊಡ್ಡದೇವರಾಜ ಒಡೆಯರು

೧ ಸ್ವಸ್ತಿ ಶ್ರೀ ವಿಜಯಾಭ್ಯುದಯ ಕಲಿಯುಗ
೨ ಪ್ರಮಾಣಲ ೪೨೨೦೦೦ಕ್ಕೆ ಸಂದ ಕಲಿವರು
೩ ಷ ೪೭೭೮ ಶಾಲಿವಾಹನ ಶಕವರು
೪ ಷ ೧೯೫೩ ಸಂದಾ ವಿರೋಧಿಕೃತು
೫ ಸಂವತ್ಸರದ ಶ್ರಾವಣ ಶು ೧೦ ಶುಕ್ರು
೬ ವಾರ ಶ್ರೀ ಸ್ವಾಮೇಶ್ವರಸ್ವಾಮಿಯವರ
೭ ನಿರೂಪದಿಂದಲು ಸ್ಥಾನಿಕ ನಿಜಲಿಂಗ
೮ ವಡೆಯರ ಮಗ ಗಂಗೊಡೆರು ಗಂಗೊ
೯ ಡೆಯರ ಮಗ ಚಂದಯ್ಯನ ತಮ್ಮ ದೇಪ್ಪೈ
೧೦ ಯನು ಮಾಡಿಸಿದ ಮಂಟಪದ ಸೇವೆಗೆ ಮ
೧೧ ಉಲ್ಯ ಕಂ ಗ ೧೦ಕೆ ಬಡಿ ಗ ೧೯೦ ಗ । ಮಸರಲಿ
೧೨ ನ್ನ ಸೇವ್ಗೆ ದೇವಸ್ಥಾನಕ್ಕೆ ಕೊಟ್ಟ ಮಉಲ್ಯಕೆ
೧೩ ಶುಭಮಸ್ತು ॥ ಸ್ವದತ್ತಾ ದ್ವಿಗು
೧೪ ಣಂ ಪುಣ್ಯಂ ಪರದತ್ತಾನುಪಾಲಂ । ಪರದ
೧೫ ತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತ್ ॥

೨೬) ಎ.ಕ.ಸಂ. III ನಂ.ಗೂಡು – ೪೦೧ ಪುಟ ೫೪೬, ೫೪೭

ವಸ್ತುಸಂಗ್ರಹಾಲಯದಲ್ಲಿ ಇರುವ ತಾಮ್ರಶಾಸನ

ಕಾಲ : ೧೭೭೧
ರಾಜವಂಶ : ಮೈಸೂರು ಅರಸರು

ಮುಂಭಾಗ

೧ ಶ್ರೀ ರಾಮಾ
೨ ಸ್ವಸ್ತಿ ಶ್ರೀವಿಜಯಾಭ್ಯುದಯ । ಶಾಲಿ
೩ ವಾಹನಸಕವರುಷಂಗಳು ೧೮೯೩
೪ ನೆ ಖರಸಂವತ್ಸ[ರ]ದ ಶ್ರಾವಣ ಶು ೧೦
೫ ಲ್ಲು । ದೆವನಗರದ ಪೆಟೆಶೆಟ್ಟಿ ಪಟಣ
೬ ಶ್ವಾಮಿ ಮುಂತಾದ ಉಭಯ್ಯ ನಾನಾ
೭ ದೇಶದ ಮಹಾನಾಡಿನವರ್‍ರು । ಕಾಳಂಗರಿಡಿ
೮ ಮಟಕ್ಕೆ ಬರೆಸಿಕೊಟ್ಟ ಧರ್ಮಶಾಶಾನ
೯ ದ ಕ್ರಮವೆಂತೆಂದರ್‍ರೆ ಅದಾಗಿ । ಯಡದೊ
೧೦ ರ್‍ರೆ ಕೋಟೆ ಮಾರ್ಗದಲ್ಲಿ । ಮೂಲೆ ಹೇರ್‍ರಿಗೆ ಕಾಸು
೧೧ ೧ ಜವಳಿನಡೆಗೆ ಕಾಸು ೨ । ಹೊಗೆಸೊಂಪಿನ
೧೨ ನಡೆಗೆ ಕಾಸು ೨ ಯಲೆನಡೆಗೆ ಯೆಲೆಕಂಱು ೧
೧೩ ತಲೆಹೊರೆಗೆ ಚಲುಕ । ಅರ್‍ರಿಸಿಣ ಮೆ
೧೪ ಣ್ಸು ಮುಂತಾದ ಕವಾಡಸರಕಿನ ಹೆ
೧೫ ರಿಗೆಲ್ಲಾ ಕಾಸು ೨ ಡರ ಮೆರ್‍ರೈಯಲ್ಲು । ಕೊ
೧೬ ಟು ನಡಶಿಕೊಂಡು ಬರಲುಳವರ್‍ರು ಯಂ
೧೭ ದು ಭರ್‍ರೆಸಿಕೊಂಟ ದರ್ಮಶಾಶನ
೧೮ ಯಿ ದರ್ಮಕ್ಕೆ ಯಾರರುದರು ಯಿಂಗ
೧೯ ಲ್ಲಾಯಂದವರ್‍ರಿಗೆ ಕಾಸಿಯಲ್ಲಿ


ಹಿಂಭಾಗ

೨೦ ಗೋಹ ತ್ಯ ಮಾಡಿದ ಪಾಪ ಮಾತ್ರು
೨೧ ಗಮನ ಮಾಡಿದ ಪಾಪ ಶಿಶುಹ
೨೨ ತ್ಯ ಗೋಹತ್ಯ ಮಾಡಿದ ಪಾಪಕ್ಕೆ
೨೩ ವಳಗಾಗುವರು ಯೆಂನುದಾಗಿ
೨೪ ನಾನಾದೇಸದವರು ಐವತಾರ್‍ರು
೨೫ ದೇಸದವರ್‍ರು ಬರಸಿಕೊಂಟ ದ
೨೬ ರ್ಮ ಶಾಸನವರ್ತನೆಪಂಟ್ಟೆ
೨೭ ಶ್ರೀ ಬಸವೆಸ್ವರಸ್ವಮಿ
೨೮ ಯವರು ॥

ಛಾಯಾಚಿತ್ರಗಳು

ಸುತ್ತೂರು ಗ್ರಾಮ ಮತ್ತು ಶ್ರೀಮಠಕ್ಕೆ ಸಂಬಂಧಿಸಿದ ಚಿತ್ರಗಳು


ಸುತ್ತೂರಿನ ಕಪಿಲಾ ನದಿ


ಸುತ್ತೂರು ಗ್ರಾಮ


ಶ್ರೀಮಠ


ಶ್ರೀಮಠ


ಜಗದ್ಗುರುದ್ವಯರ ನಡುವೆ ಮೈಸೂರಿನ
ಜಯಚಾಮರಾಜ ಒಡೆಯರು


ಶ್ರೀಮಠದ
ಬೆಳ್ಳಿ ಸಿಂಹಾಸನ


ಬೆಳ್ಳಿ ಪಲ್ಲಕ್ಕಿ ಮತ್ತು ಬಿರುದು ಬಾವಲಿ


ಶ್ರೀಮಠದ ಮೇನೆ

ಸುತ್ತೂರು ಜಾತ್ರೆಗೆ ಸಂಬಂಧಿಸಿದ ಚಿತ್ರಗಳು


ಶ್ರೀ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವ


ಕಂಸಾಳೆ ನೃತ್ಯ


ನಂದಿ ಕಂಬ ಕುಣಿತ


ವೀರಗಾಸೆ



ತಾಳ ಮದ್ದಳೆ



ಶ್ರೀಮಠದ ಚಾಮರಗಳು



ಶ್ರೀ ಶಿವರಾತ್ರೀಶ್ವರ ತೆಪ್ಪೋತ್ಸವ



ದನಗಳ ಪರಿಷೆ



ಕುಸ್ತಿ ಪಂದ್ಯಾವಳಿ



ಕೊಂಡೋತ್ಸವ



ಶ್ರೀ ಸೋಮೇಶ್ವರ ಉತ್ಸವ



ಜಾನಪದ ಕಲಾ ಪ್ರದರ್ಶನ



ನಾಟಕವೊಂದರ ದೃಶ್ಯ



ಸಾಮೂಹಿಕ ವಿವಾಹ

ಸುತ್ತೂರಿನಲ್ಲಿರುವ ಶಿಕ್ಷಣ ಸಂಸ್ಥೆಗಳು



ಜೆಎಸ್‌ಎಸ್ ಉಚಿತ ಶಾಲೆ



ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ

ಸುತ್ತೂರಿನಲ್ಲಿರುವ ದೇವಾಲಯಗಳು, ಶಾಸನಗಳು, ವೀರಗಲ್ಲು-ಮಾಸ್ತಿಗಲ್ಲುಗಳು, ಶಿಲ್ಪಗಳು, ಇತ್ಯಾದಿ







ಸೋಮೇಶ್ವರ ದೇವಾಲಯ



ಮಂತ್ರಮಹರ್ಷಿಗಳು
ರಚಿಸಿದ ಮಂತ್ರ



ನಾರಾಯಣಸ್ವಾಮಿ
ದೇವಾಲಯ



ವೀರಭದ್ರೇಶ್ವರ ದೇವಸ್ಥಾನ





ಶ್ರೀ ಶಿವರಾತ್ರೀಶ್ವರ ಗದ್ದಿಗೆ



ಶ್ರೀ ಮಹದೇಶ್ವರ ಗದ್ದಿಗೆ



ಮಲೆಮಹದೇಶ್ವರರು ಬೀಸುತ್ತಿದ್ದ ರಾಗಿಕಲ್ಲು




ರಾಕಸಮ್ಮನ ಶಿಲ್ಪ



ಕಾಲಭೈರವಿ ಶಿಲ್ಪ



ಯಕ್ಷಿಯರ ಶಿಲ್ಪಗಳು



ಭೈರವನ ಶಿಲ್ಪ




ಕಾಲಭೈರವನ ಶಿಲ್ಪ



ಗಣಪತಿ ಶಿಲ್ಪಗಳು



ಸೂರ್ಯ ಶಿಲ್ಪ



ಸುತ್ತೂರಮ್ಮನ ದೇವಾಲಯದಲ್ಲಿರುವ ಸಪ್ತಮಾತೃಕೆಯರ ಶಿಲ್ಪಗಳು



ಸೋಮೇಶ್ವರ ದೇವಾಲಯದಲ್ಲಿರುವ ಸಪ್ತಮಾತೃಕೆಯರ ಶಿಲ್ಪ



ಗಣಪತಿಯ ಉಬ್ಬುಶಿಲ್ಪ



ರಾಜನ ಶಿಲ್ಪ



ರಾಣಿಯ ಶಿಲ್ಪ



ಬಲಿ ಪೀಠ



ನಾಗರ ಕಲ್ಲುಗಳು




ಕಾಳಿ ವಿಗ್ರಹ




ಶಂಕರನಾರಾಯಣ
ವಿಗ್ರಹ




ಬಿಡಿ ಶಿಲ್ಪಗಳು




ಮಾಸ್ತಿ ಕಲ್ಲು







ವೀರಗಲ್ಲುಗಳು







ಕಂಬದಲ್ಲಿರುವ ಶಾಸನ

ಶಾಸನಗಳು

ಸುತ್ತೂರಿನ ವಸ್ತು ಸಂಗ್ರಹಾಲಯದಲ್ಲಿರುವ ಪ್ರಾಚೀನ ವಸ್ತುಗಳು



ವಾದ್ಯಮೇಳಗಳು



ತಾಳೆಗರಿಗಳು



ಯುದ್ಧಾಸ್ತ್ರಗಳು

ಗ್ರಂಥಸೂಚಿ

ಶಾಸನ ಸಂಪುಟಗಳು

- ಎಫಿಗ್ರಾಫಿಯಾ ಕರ್ನಾಟಕ, ಸಂಪುಟ III , ನಂಜನಗೂಡು ತಾಲ್ಲೂಕು
- ಎಫಿಗ್ರಾಫಿಯಾ ಕರ್ನಾಟಕ, ಸಂಪುಟ XIV, ಸಪ್ಲಿಮೆಂಟರಿ ಇನ್‌ಸ್ಕ್ರಿಪ್‌ಷನ್ ಇನ್ ಮೈಸೂರ್ ಅಂಡ್ ಮಂಡ್ಯ ಡಿಸ್ಟ್ರಿಕ್ಸ್
- ಮೈಸೂರು ಜಿಲ್ಲೆಯ ಶಾಸನಗಳು (ಬಿ.ಎಲ್ ರೈಸ್, ಭಾಗ ೧ ಮತ್ತು ೨)

ವರದಿಗಳು

- ಮೈಸೂರು ಪ್ರಾಚ್ಯವಸ್ತು ಇಲಾಖೆಯ ವರದಿಗಳು
- ಕರ್ನಾಟಕ ರಾಜ್ಯ ಗೆಜೆಟಿಯರ್‌ಗಳು
- ಮೈಸೂರು ಗೆಜೆಟಿಯರ್, ಸಂಪುಟ ೨, ಭಾಗ ೨, ಪುಟ ೯೯೯–೧೦೦೦ ಮತ್ತು ೧೦೩೫

ನಿಯತಕಾಲಿಕಗಳು

- ಪ್ರಸಾದ
- ಸುತ್ತೂರು ಶ್ರೀಕ್ಷೇತ್ರ ಆಧ್ಯಾತ್ಮಿಕ ಆನಂದನೆಲೆ
- ಸುತ್ತೂರು ಶ್ರೀಮಠದ ಭವ್ಯಪರಂಪರೆ
- Touching the Lives of Millions, JSS Mahavidyapeeta

ಸಂಶೋಧನಾ ಪತ್ರಿಕೆಗಳು

- ಸೆಕ್ರೆಡ್ ಜಿಯೋಗ್ರಫಿ ಆಫ್ ಕಾವೇರಿ ಬೇಸಿನ್ ಇನ್ ಕರ್ನಾಟಕ – ಎ ಸ್ಟಡಿ ಆಫ್ ಸುತ್ತೂರು. ಜರ್ಮನಿಯ ಹೈಡೆಲ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ನಡೆದ ೧೭ನೇ ಯುರೋಪಿಯನ್ ಕಾನ್‌ಫರೆನ್ಸ್‌ನಲ್ಲಿ ಪ್ರೊ. ನಾಗರಾಜಪ್ಪನವರು ಮಂಡಿಸಿದ ಲೇಖನ.
- ನಂಜನಗೂಡು: ಒಂದು ಸಾಂಸ್ಕೃತಿಕ ಅಧ್ಯಯನ – ಡಾ. ಹೆಚ್.ಪಿ. ಮಂಜುಳಾ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
- ಥೋಪೋಶೀಟ್ಸ್, ನಂ. ೫೭ ಡಿ/ಮೈಸೂರು, ಕರ್ನಾಟಕ–ಹಾಸನ ಮತ್ತು ಕೊಡಗು ಜಿಲ್ಲೆ, ಎಸ್.ಜಿ.ಪಿ. ೧೯೮೧ ಭಾರತ ಸರ್ಕಾರ
- ನಾನು ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಕಲೆಹಾಕಿದ ಮಾಹಿತಿಗಳು
- ಕನ್ನಡ ವಿಷಯ ವಿಶ್ವಕೋಶ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕೃತಿಗಳು

- ಡಾ. ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೬
- ಕುಂತೂರು ಸಂಗಪ್ಪಶಾಸ್ತ್ರಿ, ಶ್ರೀ ಸುತ್ತೂರು ವೀರಸಿಂಹಾಸನ ಗುರುಪರಂಪರೆ, ಜ. ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೩೩
- ಎಂ.ಜಿ.ನಂಜುಂಡಾರಾಧ್ಯ, ಶಿವರಾತ್ರಿ ಶಿವಚಾರ್ಯ, ಜ. ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೬೧
- ಡಾ. ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೯೭
- ಡಾ. ಡಿ.ವಿ.ಪರಶಿವಮೂರ್ತಿ, ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೯
- ಡಾ. ಕೆ. ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಗೀತಾ ಬುಕ್ ಹೌಸ್, ಮೈಸೂರು, ೧೯೮೩
- ಮಲ್ಲೇಪುರಂ ಜಿ. ವೆಂಕಟೇಶ್, ಶಂಭಾ ಸಂಸ್ಕೃತಿ ಚಿಂತನೆ, ೧೯೯೮
- ಬಿ. ಶಿವಮೂರ್ತಿಶಾಸ್ತ್ರಿ, ಘನಲಿಂಗಿದೇವರ ವಚನ, ಜ. ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಊರು, ೧೯೫೦
- ಎಂ.ಜಿ.ನಾಗರಾಜು, ಸಾಂಸ್ಕೃತಿಕ ವೀರಶೈವ, ದೇಗುಲ ಪ್ರಕಾಶನ, ಕನಕಪುರ, ೨೦೦೫
- ಹೆಚ್.ಪಿ. ಮಲ್ಲೇದೇವರು, ಸಂಪಾದಕರು, ಅರ್ಚನ, ಜ.ಶ್ರೀ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪಟ್ಟಾಧಿಕಾರದ ಸುವರ್ಣ ಮಹೋತ್ಸವ ಅಭಿನಂದನಾ ಗ್ರಂಥ, ೧೯೮೪
- ಆರ್.ನರಸಿಂಹಾಚಾರ್ಯ, ಕನ್ನಡ ಕವಿ ಚರಿತ್ರೆ, ಭಾಗ ೧, ೨ ಮತ್ತು ೩, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೫
- ಡಾ. ಹೆಚ್.ಪಿ. ತಿಪ್ಪೇರುದ್ರಸ್ವಾಮಿ, ಸಂಪಾದಕರು, ಅಮುಗಿದೇವಯ್ಯಗಳ ಸಾಂಗತ್ಯ, ಜೆಎಸ್‌ಎಸ್ ಗ್ರಂಥಮಾಲೆ, ಮೈಸೂರು, ೧೯೮೦
- ಡಾ. ಎಚ್.ಎಂ.ಸದಾಶಿವಯ್ಯ, ಸಮಾಜಶಾಸ್ತ್ರ, ಭಾಗ ಮತ್ತು ೧ ಮತ್ತು ೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೮
- ಜ|| ಶ್ರೀ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, ಸಂಪಾದಕರು, ಘನಲಿಂಗಿ ದೇವರ ವಚನಗಳು, ಜೆಎಸ್‌ಎಸ್ ಗ್ರಂಥಮಾಲೆ, ಮೈಸೂರು, ೧೯೮೨
- ಎಂ.ಮಹದೇವಪ್ಪ, ಸುತ್ತೂರು, ಭೌಗೋಳಿಕ ಸಾದೃಶ್ಯ ಸಮೀಕ್ಷೆ, ಜೆಎಸ್‌ಎಸ್ ಗ್ರಂಥಮಾಲೆ, ಮೈಸೂರು, ೧೯೭೬

- ಮಲೆಯೂರು ಗುರುಸ್ವಾಮಿ, ಸಂಪಾದಕರು, ಜಂಗಮ, ಜಯಂತಿ ಮಹೋತ್ಸವ ಸಮಿತಿ, ನಂಜನಗೂಡು ತಾ., ೧೯೯೯-೨೦೦೦
- ಮಲೆಯೂರು ಗುರುಸ್ವಾಮಿ, ಶ್ರೀ ಸುತ್ತೂರು ಮಠದ ಗುರುಪರಂಪರೆ, ಶ್ರೀ ಸಿದ್ಧಗಂಗಾ ಪ್ರಕಾಶನ, ತುಮಕೂರು, ೨೦೦೮
- ಡಿ.ಎಸ್.ಸದಾಶಿವಮೂರ್ತಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಶ್ರೀ ಸಿದ್ಧಗಂಗಾ ಪ್ರಕಾಶನ, ತುಮಕೂರು, ೨೦೦೮
- ಡಾ. ಎಸ್. ಶಿವರಾಜಪ್ಪ, ಕಾಯಕಯೋಗಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾ ಪ್ರಕಾನ, ತುಮಕೂರು, ೮
- ಎಸ್.ನಂಜುಂಡಯ್ಯ, ಪ್ರ.ಸಂ. ಶಿವಪ್ರಭೆ, ಕ್ಯಾತನಹಳ್ಳಿ ಶ್ರೀಗಳವರ ವರ್ಧಂತಿ ಅಭಿನಂದನಾ ಗ್ರಂಥ, ಮೈಸೂರು, ೨೦೦೨
- ಡಾ. ಹೆಚ್.ಸಿ. ಮಲ್ಲೇದೇವರು, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ದಿವ್ಯಜೀವನ, ಸಾಧನೆ ಮತ್ತು ಸಿದ್ಧಿ, ಮೈಸೂರು, ೧೯೮೬
- ನಂ. ತಪಸ್ವಿ ಕುಮಾರ್, ಸಂಸ್ಕೃತಿ ವಿಕಾಸ, ಚೇತನಾ ಬುಕ್ ಹೌಸ್, ಮೈಸೂರು, ೨೦೦೦

* * *